ಅಧ್ಯಾಯ–II

2. ಇಲಾಖೆಗಳ ಮೇಲಿನ ಅನುಪಾಲನಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳು

ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

2.1 ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಿಂದ ನೀತಿಗಳ ತೊಡಗುವಿಕೆ (ಇನಿಷಿಯೇಟಿವ್)ಗಳ ಅನುಷ್ಠಾನ

ಪೀಠಿಕೆ

2.1.1. 1990 ರ ದಶಕದ ಮಧ್ಯಭಾಗದಿಂದ ಬೆಂಗಳೂರಿನಲ್ಲಿ ಮಾಹಿತಿ ತಂತ್ರಜ್ಞಾನ (ಐಟಿ)/ ಐಟಿಇಎಸ್[6] ಕ್ಷೇತ್ರದ ಅಸಾಧಾರಣ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು, ಕರ್ನಾಟಕ ಸರ್ಕಾರವು 1997 ರಲ್ಲಿ ಈ ಕ್ಷೇತ್ರದ ಬೆಳವಣಿಗೆಯನ್ನು ಹೆಚ್ಚಿಸಲು ದೇಶದ ಮೊದಲ ಮಾಹಿತಿ ತಂತ್ರಜ್ಞಾನ ನೀತಿಯನ್ನು ಹೊರತಂದಿತು. ಇದರ ನಂತರ ಹೊರತಂದಿದ್ದು 2000 ರಲ್ಲಿ' ಸಹಸ್ರಮಾನ ಮಾಹಿತಿ ತಂತ್ರಜ್ಞಾನ ನೀತಿ (ಮಿಲೇನಿಯಮ್ ಐಟಿ ಪಾಲಿಸಿ)' ಮತ್ತು ಮಾಹಿತಿ ಸಂವಹನ ಮತ್ತು ತಂತ್ರಜ್ಞಾನ (ಐಸಿಟಿ) ನೀತಿ 2011. ರಾಜ್ಯವು 2012 ರಲ್ಲಿ ಕರ್ನಾಟಕ ಅನಿಮೇಷನ್, ವಿಷ್ಯುಯಲ್ ಗ್ರಾಫಿಕ್ಸ್ ಮತ್ತು ಕಾಮಿಕ್ಸ್ (ಕೆಎವಿಜಿಸಿ) ನೀತಿ ಮತ್ತು ಕರ್ನಾಟಕ ವಿದ್ಯುನ್ಮಾನ ವ್ಯವಸ್ಥೆ ವಿನ್ಯಾಸ ಮತ್ತು ಉತ್ಪಾದನೆ (ಕೆಇಎಸ್‌ಡಿಎಮ್)ನೀತಿ 2013 ಗಳನ್ನು ಘೋಷಿಸಿತು.

2014 ರಲ್ಲಿ ಘೋಷಿಸಲಾದ i^4 ನೀತಿಯು ಪ್ರಾಥಮಿಕವಾಗಿ ಕೌಶಲ್ಯದ ಹೊರತಾಗಿ ವಲಯಗಳಾದ್ಯಂತ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಒದಗಿಸುವ ಉದ್ದೇಶವನ್ನು ಹೊಂದಿದೆ. ನಾವೀನ್ಯತೆಯನ್ನು ಉತ್ತೇಜಿಸಲು ಮತ್ತು ಸ್ಟಾರ್ಟ್‌ಅಪ್‌ಗಳನ್ನು ಉತ್ತೇಜಿಸಲು 2015 ರಲ್ಲಿ ಸ್ಟಾರ್ಟ್‌ಅಪ್ ನೀತಿಯನ್ನು i^4 ನೀತಿಯಿಂದ ವಿಭಜಿಸಲಾಗಿದೆ. ಕೆಎವಿಜಿಸಿ ಮತ್ತು ಕೆಇಎಸ್‌ಡಿಎಮ್ ನೀತಿಗಳನ್ನು 2017 ರಲ್ಲಿ ಪರಿಷ್ಕರಿಸಲಾಯಿತು. ಮೇಲೆ ತಿಳಿಸಿದ ನಾಲ್ಕು ನೀತಿಗಳ ಸಂಕ್ಷಿಪ್ತತೆಯನ್ನು ***ಅನುಬಂಧ–6ರಲ್ಲಿ*** ನೀಡಲಾಗಿದೆ.

ಸಾಂಸ್ಥಿಕ ವ್ಯವಸ್ಥೆ

ರೇಖಾಚಿತ್ರ ಸಂಖ್ಯೆ.2.1.1: ಸಾಂಸ್ಥಿಕ ವ್ಯವಸ್ಥೆಯನ್ನು ತೋರಿಸಲಾಗುತ್ತಿದೆ



2.1.2. ಇಲಾಖೆಯು ಕರ್ನಾಟಕ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ (ಎಸಿಎಸ್) ನೇತೃತ್ವದಲ್ಲಿದೆ, ಮತ್ತು ಇ, ಐಟಿ ಮತ್ತು ಬಿಟಿ ನಿರ್ದೇಶನಾಲಯವು ಅನುಷ್ಠಾನಗೊಳಿಸುವ ಏಜೆನ್ಸಿಗಳಿಗೆ

[6] ಮಾಹಿತಿ ತಂತ್ರಜ್ಞಾನದಿಂದ ಸಕ್ರಿಯಗೊಂಡ ಸೇವೆಗಳು.

ಅಂದರೆ ಕರ್ನಾಟಕ ಅವಿಷ್ಕಾರ ತಂತ್ರಜ್ಞಾನ ಸಂಸ್ಥೆ, ಬೆಂಗಳೂರು (ಕಿಟ್ಸ್)[7] ಗೆ ಮತ್ತು ಕರ್ನಾಟಕ ಸರ್ಕಾರದ ಒಡೆತನದ ಒಂದು ಕಂಪನಿಯಾದ ಕರ್ನಾಟಕ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯೋನಿಕ್ಸ್)ಕ್ಕೆ ಅನುದಾನವನ್ನು ಬಿಡುಗಡೆ ಮಾಡುವ ನಿರ್ದೇಶಕರ ನೇತೃತ್ವದಲ್ಲಿದೆ, ಅತ್ಯುನ್ನತ(ಅಪೆಕ್ಸ್) ಮಟ್ಟದಲ್ಲಿ, ಎಸಿಎಸ್ ಇಲಾಖೆಯ ಚಟುವಟಿಕೆಗಳ ಒಟ್ಟಾರೆ ಮೇಲ್ವಿಚಾರಣೆಯನ್ನು ನಡೆಸುತ್ತಾರೆ.

ಲೆಕ್ಕಪರಿಶೋಧನೆಯ ವ್ಯಾಪ್ತಿ, ಉದ್ದೇಶಗಳು ಮತ್ತು ಮಾನದಂಡಗಳು

2.1.3. ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕತಂತ್ರಜ್ಞಾನ ನಿರ್ದೇಶನಾಲಯದ ಅಡಿಯಲ್ಲಿ 2015–20 ರ ಅವಧಿಗೆ ಐಟಿ ಸಂಬಂಧಿತ ನೀತಿಗಳ ತೊಡಗುವಿಕೆಗಳ ಅನುಷ್ಠಾನದ ಅನುಸರಣಾ ಲೆಕ್ಕಪರಿಶೋಧನೆ (ಸಿಎ) ಯನ್ನು ನವೆಂಬರ್ 2019 ರಿಂದ ಡಿಸೆಂಬರ್ 2020 ರವರೆಗೆ ಕೈಗೊಳ್ಳಲಾಯಿತು ಮತ್ತು ಮಾಹಿತಿ ತಂತ್ರಜ್ಞಾನ ಮತ್ತು ಸಂಬಂಧಿತ ವಲಯಗಳಿಗೆ ಸಂಬಂಧಿಸಿದ ನಾಲ್ಕು ನೀತಿಗಳನ್ನು[8] ಒಳಪಡಿಸಲಾಗಿದೆ.

ಐಟಿಬಿಟಿಯ ಸಚಿವಾಲಯ ಮತ್ತು ನಿರ್ದೇಶನಾಲಯದಲ್ಲಿನ ದಾಖಲೆಗಳ ಪರಿಶೀಲನೆಯನ್ನು ಸಿಎ ಒಳಗೊಂಡಿತ್ತು. ಲೆಕ್ಕಪರಿಶೋಧನೆಯ ಉದ್ದೇಶಗಳು, ವ್ಯಾಪ್ತಿ ಮತ್ತು ವಿಧಾನಗಳ ಕುರಿತು ಚರ್ಚಿಸಲು ಜನವರಿ 2020 ರಲ್ಲಿ ಇ, ಐಟಿ, ಬಿಟಿ, ಎಸ್ & ಟಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯೊಂದಿಗೆ ಪ್ರವೇಶ ಸಮ್ಮೇಳನವನ್ನು ನಡೆಸಲಾಯಿತು. ಇ, ಐಟಿ, ಬಿಟಿ, ಎಸ್ & ಟಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯೊಂದಿಗೆ 12 ಆಗಸ್ಟ್ 2021 ರಂದು ನಿರ್ಗಮನ ಸಮ್ಮೇಳನವನ್ನು ನಡೆಸಲಾಯಿತು. ಇಲಾಖೆ ನೀಡಿದ ಉತ್ತರಗಳನ್ನು ಪರಿಗಣಿಸಿ ಲೆಕ್ಕಪರಿಶೋಧನೆಯ ತೀರ್ಮಾನಗಳನ್ನು ತೆಗೆದುಕೊಳ್ಳಲಾಗಿದೆ.

ಅನುಸರಣಾ ಲೆಕ್ಕಪರಿಶೋಧನೆಯು ನೀತಿಗಳಲ್ಲಿ ಕಲ್ಪಿಸಲಾದ ತೊಡಗುವಿಕೆಗಳನ್ನು ಕಾರ್ಯಗತಗೊಳಿಸಲಾಗಿದೆಯೇ ಮತ್ತು ಉದ್ದೇಶಿತ ಗುರಿಗಳನ್ನು ಈ ಕೆಳಗಿನವುಗಳ ವಿಷಯದಲ್ಲಿ ಸಾಧಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಂಡು ನಿರ್ಣಯಿಸುವುದು:

- ❖ ನೀತಿ ಗುರಿಗಳು/ತೊಡಗುವಿಕೆಗಳನ್ನು ಉಲ್ಲೇಖಿಸಿ ಯೋಜನೆಗಳನ್ನು ಸೂಕ್ತವಾಗಿ ಸಿದ್ಧಪಡಿಸಲಾಗಿದೆ ಮತ್ತು ಒದಗಿಸಿದ ನಿಧಿಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಗಿದೆ;
- ❖ ನೀತಿಗಳಲ್ಲಿ ನಮೂದಿಸಿದಂತೆ ಮೂಲಸೌಕರ್ಯ ಸೌಲಭ್ಯಗಳನ್ನು ಸ್ಥಾಪಿಸಲಾಗಿದೆ; ಮತ್ತು
- ❖ ಆಂತರಿಕ ನಿಯಂತ್ರಣ ಮತ್ತು ಮೇಲ್ವಿಚಾರಣಾ ಕಾರ್ಯವಿಧಾನಗಳು ಸಾಕಷ್ಟಿದ್ದವು ಮತ್ತು ಅವು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿದವು.

ಲೆಕ್ಕಪರಿಶೋಧನೆಯ ಫಲಿತಾಂಶಗಳನ್ನು ತಲುಪಲು ಲೆಕ್ಕಪರಿಶೋಧನಾ ಮಾನದಂಡಗಳ ಮುಖ್ಯ ಮೂಲಗಳು:

i) ಐಟಿ, ಐಟಿಇಎಸ್, ಅವಿಷ್ಕಾರ ವಿನಾಯಿತಿ (ಎ^4) ನೀತಿ – 2014, ಕರ್ನಾಟಕ ಅನಿಮೇಷನ್, ವಿಷ್ಯುಯಲ್ ಎಫೆಕ್ಟ್ಸ್, ಗೇಮಿಂಗ್ ಮತ್ತು ಕಾಮಿಕ್ಸ್ (ಕೆಎವಿಜಿಸಿ) ನೀತಿ 2012 ಮತ್ತು 2017, ಕರ್ನಾಟಕ ಸ್ಟಾರ್ಟ್‌ಅಪ್ ನೀತಿ 2015–2020, ಕರ್ನಾಟಕ ವಿದ್ಯುನ್ಮಾನ ವಿನ್ಯಾಸ ಮತ್ತು ಉತ್ಪಾದನೆ (ಕೆಇಎಸ್‌ಡಿಎಮ್) ನೀತಿ 2013 ಮತ್ತು 2017ರ ಅನುಷ್ಠಾನ ಮಾರ್ಗಸೂಚಿಗಳನ್ನು ಒಳಗೊಂಡಂತೆ;

ii) ಕರ್ನಾಟಕ ಆಯವ್ಯಯ ಕೈಪಿಡಿ ಮತ್ತು ಕರ್ನಾಟಕ ಹಣಕಾಸು ಸಂಹಿತೆ;

---

[7] ಕರ್ನಾಟಕ ಜೈವಿಕತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಸೇವೆಗಳು (ಕೆಬಿಐಟಿಎಸ್) 2001ರಲ್ಲಿ ಸ್ಥಾಪಿಸಲಾಯಿತು ಮತ್ತು ಏಪ್ರಿಲ್ 2018ರಲ್ಲಿ ಕರ್ನಾಟಕ ಅವಿಷ್ಕಾರ ತಂತ್ರಜ್ಞಾನ ಸಂಸ್ಥೆ, ಬೆಂಗಳೂರು (ಕಿಟ್ಸ್) ಎಂದು ಮರುನಾಮಕರಣ ಮಾಡಲಾಯಿತು.

[8] ಐಟಿ, ಐಟಿಇಎಸ್, ಅವಿಷ್ಕಾರ ವಿನಾಯಿತಿ (ಎ^4) ನೀತಿ–2014, ಅನಿಮೇಷನ್, ವಿಷ್ಯುಯಲ್ ಎಫೆಕ್ಟ್ಸ್, ಗೇಮಿಂಗ್ ಮತ್ತು ಕಾಮಿಕ್ಸ್ (ಎವಿಜಿಸಿ) ನೀತಿ 2012 ಮತ್ತು 2017, ಕರ್ನಾಟಕ ಸ್ಟಾರ್ಟ್‌ಅಪ್ ನೀತಿ 2015–20, ಕರ್ನಾಟಕ ವಿದ್ಯುನ್ಮಾನ ವ್ಯವಸ್ಥೆ ವಿನ್ಯಾಸ ಮತ್ತು ಉತ್ಪಾದನೆ (ಕೆಇಎಸ್‌ಡಿಎಮ್) ನೀತಿ 2013 ಮತ್ತು 2017.

iii) ಸರ್ಕಾರದ ಆದೇಶಗಳು/ ಸುತ್ತೋಲೆಗಳು/ದೂರ ದೃಷ್ಟಿ ದಾಖಲೆಗಳು (ವಿಷನ್ ಡಾಕ್ಯುಮೆಂಟ್ಸ್).

ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದ ಅಂಶಗಳನ್ನು ಯೋಜನೆ, ಹಣಕಾಸು ನಿರ್ವಹಣೆ, ನೀತಿ ಅನುಷ್ಠಾನ ಮತ್ತು ಮೇಲ್ವಿಚಾರಣೆ ಎಂಬ ನಾಲ್ಕು ಪ್ರಮುಖ ಶೀರ್ಷಿಕೆಗಳ ಅಡಿಯಲ್ಲಿ ಚರ್ಚಿಸಲಾಗಿದೆ.

ಯೋಜನೆ

ವಾರ್ಷಿಕ ಯೋಜನೆಗಳು ಸಮಗ್ರವಾಗಿರಲಿಲ್ಲ

2.1.4. ಲೆಕ್ಕಪರಿಶೋಧನೆಯಲ್ಲಿ ಒಳಗೊಂಡಿರುವ ನಾಲ್ಕು ನೀತಿಗಳ ಮೂಲಕ ಇಲಾಖೆಯು 36 ತೊಡಗುವಿಕೆಗಳ ಅನುಷ್ಠಾನಕ್ಕೆ ಮಾರ್ಗಸೂಚಿಯನ್ನು ಒದಗಿಸಿದೆ, ಅದರಲ್ಲಿ ಸುಮಾರು 22 ಉತ್ತೇಜನಗಳ[9] ಕಡೆಗೆ ನಿರ್ದೇಶಿಸಲಾಗಿದೆ ಮತ್ತು 14 ಕಾರ್ಯಕ್ರಮ[10] ಆಧಾರಿತವಾಗಿದೆ (ವಿವರಗಳನ್ನು ***ಅನುಬಂಧ-7ರಲ್ಲಿ*** ನೀಡಲಾಗಿದೆ). 20,000 ಸ್ಟಾರ್ಟ್‌ಅಪ್‌ಗಳನ್ನು ಉತ್ತೇಜಿಸುವುದು, 18 ಲಕ್ಷ ಜನರಿಗೆ ನೇರ ಮತ್ತು ಪರೋಕ್ಷ ಉದ್ಯೋಗ ಒದಗಿಸುವುದು, ಇತ್ಯಾದಿ ನಿರ್ದಿಷ್ಟ ಗುರಿಗಳನ್ನು ನೀತಿಗಳು ಸೂಚಿಸಿವೆ. ನೀತಿಗಳಲ್ಲಿ ನಿಗದಿಪಡಿಸಿದ ಗುರಿಗಳನ್ನು ಐದು ವರ್ಷಗಳ ಅವಧಿಯಲ್ಲಿ ಸಾಧಿಸಬೇಕಿತ್ತು.

ಎವಿಜಿಸಿ ಪಾರ್ಕ್‌ಗಳು, ವೆಂಚರ್ ಕ್ಯಾಪಿಟಲ್ ಫಂಡ್‌ಗಳು, ಬೃಹತ್ ಪ್ರಾಯೋಜನೆಗಳು (ಮೆಗಾ ಪ್ರಾಜೆಕ್ಟ್‌ಗಳು), ರಾಜ್ಯಕ್ಕೆ ಹೂಡಿಕೆಗಳನ್ನು ಆಹ್ವಾನಿಸಲು ವಿಶ್ವದ 50 ಉನ್ನತ ಇಎಸ್‌ಡಿಎಮ್ ಕಂಪನಿಗಳೊಂದಿಗೆ ತೊಡಗಿಸಿಕೊಳ್ಳುವುದು, ಇತ್ಯಾದಿ ತೊಡಗುವಿಕೆಗಳನ್ನು ಒಳಗೊಂಡಿರುವ ಯಾವುದೇ ಸಮಗ್ರ ವಾರ್ಷಿಕ ಯೋಜನೆಗಳನ್ನು (ಎಪಿಗಳು) ಇಲಾಖೆಯು ಮಾಡಿಲ್ಲ ಎಂದು ಲೆಕ್ಕಪರಿಶೋಧನೆಯ ಪರಿಶೀಲನೆಯಿಂದ ತಿಳಿದುಬಂದಿದೆ. ಸಮಗ್ರ ಕ್ರಿಯಾ ಯೋಜನೆಯನ್ನು ಹೊಂದಿರದಿದ್ದರೆ ನೀತಿಯ ತೊಡಗುವಿಕೆಗಳ ಅನುಷ್ಠಾನದಲ್ಲಿ ವಿಫಲತೆ ಕಾಣುವ ಸಾಧ್ಯತೆಯಿದೆ. ಅನುಷ್ಠಾನಗಳಲ್ಲಿನ ನ್ಯೂನತೆಗಳನ್ನು ***2.1.11 ರಿಂದ 2.1.18ರವರೆಗಿನ ಕಂಡಿಕೆಗಳಲ್ಲಿ*** ಚರ್ಚಿಸಲಾಗಿದೆ.

ಸರ್ಕಾರವು ಎಲ್ಲಾ ಯೋಜನೆಗಳನ್ನು ಸಮಗ್ರವಾಗಿ ಒಳಗೊಂಡಿರುವ ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಉತ್ತರಿಸಿದೆ (ಆಗಸ್ಟ್ 2021). ಗುರಿಗಳನ್ನು ಸಾಧಿಸಲು ಸಂಬಂಧಿಸಿದಂತೆ, ಗುರಿಗಳು ಕೇವಲ ಮಹತ್ವಾಕಾಂಕ್ಷೆ ಮತ್ತು ಒಟ್ಟಾರೆಯಾಗಿ ಉದ್ಯಮಕ್ಕೆ ಸಂಬಂಧಿತವಾಗಿವೆ ಮತ್ತು ಮೌಲ್ಯಮಾಪನಕ್ಕೆ ಗುರಿಯಾಗಿ ತೆಗೆದುಕೊಳ್ಳಲಾಗುವುದಿಲ್ಲ ಎಂದು ಹೇಳಲಾಗಿದೆ. ಉದ್ಯಮದಲ್ಲಿರುವ ಅಂತರಗಳು ಮತ್ತು ಅಗತ್ಯತೆಗಳನ್ನು ಪರಿಹರಿಸಲು ತೆಗೆದುಕೊಂಡ ಕ್ರಮಗಳು ಫಲಿತಾಂಶವನ್ನು ಅಳೆಯಲು ಪ್ರಮುಖ ಕಾರ್ಯಕ್ಷಮತೆ ಸೂಚಕಗಳನ್ನು (ಕೆಪಿಐಗಳು) ನಿಗದಿಪಡಿಸುವ ಅಗತ್ಯವಿರುವುದರಿಂದ ಉತ್ತರವು ಸಮರ್ಥನೀಯವಲ್ಲ. ಆದಾಗ್ಯೂ, ಇಲಾಖೆಯ ಪ್ರಯತ್ನಗಳ ಪರಿಣಾಮವನ್ನು ನಿರ್ಣಯಿಸಲು ಇಲಾಖೆಯು ಅಂತಹ ಯಾವುದೇ ಕೆಪಿಐಗಳನ್ನು ನಿಗದಿಪಡಿಸಲಿಲ್ಲ.

ಹಣಕಾಸು ನಿರ್ವಹಣೆ

ಆಯವ್ಯಯ ಮತ್ತು ಖರ್ಚು

2.1.5. ವೆಚ್ಚದ ಅಂದಾಜುಗಳನ್ನು ತಯಾರಿಸಲು ಹಣಕಾಸು ಇಲಾಖೆಯ ಮಾರ್ಗಸೂಚಿಗಳ ಸಂಖ್ಯೆ. ಎಫ್‌ಡಿ 11 ಬಿಪಿಇ 2014 ದಿನಾಂಕ 30 ಅಕ್ಟೋಬರ್ 2014ರ ಪ್ರಕಾರ, ಬಜೆಟ್ ಅಂದಾಜುಗಳನ್ನು ಸರಿಯಾದ ಕಾಳಜಿ ಮತ್ತು ಮುಂದಾಲೋಚನೆಯೊಂದಿಗೆ ಸಿದ್ಧಪಡಿಸಬೇಕು ಮತ್ತು ನಿಧಿಯ ನೈಜ ಅವಶ್ಯಕತೆಗಳನ್ನು ಆಧರಿಸಿರಬೇಕು. ಅಗತ್ಯವಿಲ್ಲದ ನಿರೀಕ್ಷಿತ ಉಳಿತಾಯವನ್ನು ಸರ್ಕಾರಕ್ಕೆ ಒಪ್ಪಿಸಬೇಕು.

[9] ಉತ್ತೇಜನ ಆಧಾರಿತ ತೊಡಗುವಿಕೆಗಳು ಮುದ್ರಾಂಕ ಶುಲ್ಕದಿಂದ ವಿನಾಯಿತಿ, ವಿದ್ಯುತ್ ಬಿಲ್‌ನಲ್ಲಿ ರಿಯಾಯಿತಿ, ಇತ್ಯಾದಿಗಳನ್ನು ಒಳಗೊಂಡಿದೆ.

[10] ಕಾರ್ಯಕ್ರಮ ಆಧಾರಿತ ತೊಡಗುವಿಕೆಗಳು ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳು ಮತ್ತು ಶ್ರೇಷ್ಠತೆ ಕೇಂದ್ರಗಳ (ಸೆಂಟರ್ ಆಫ್ ಎಕ್ಸಲೆನ್ಸ್) ಸ್ಥಾಪನೆ, ಇನ್‌ಕ್ಯುಬೇಶನ್ ಸೌಲಭ್ಯಗಳ ಒದಗಿಸುವಿಕೆ, ಪ್ರಾಥಮಿಕ ಹಂತದಲ್ಲಿರುವ ಸ್ಟಾರ್ಟ್‌ಅಪ್‌ಗಳಿಗೆ ಹಣಕಾಸನ್ನು ಒದಗಿಸುವುದು, ಇತ್ಯಾದಿಗಳನ್ನು ಒಳಗೊಂಡಿದೆ.

ನಾಲ್ಕು ನೀತಿಗಳ ಅಡಿಯಲ್ಲಿ 2015–20 ರ ಅವಧಿಗೆ ವಾರ್ಷಿಕ ಆಯವ್ಯಯ ಪ್ರಸ್ತಾವನೆಗಳು, ಅನುದಾನ ಮತ್ತು ವೆಚ್ಚಗಳ ಸಾರಾಂಶವನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ:

ಕೋಷ್ಟಕ ಸಂಖ್ಯೆ. 2.1.1: ಆಯವ್ಯಯ ಮತ್ತು ವೆಚ್ಚದ ವರ್ಷವಾರು ಸಾರಾಂಶ

(₹ ಕೋಟಿಯಲ್ಲಿ)

ವರ್ಷ	ಪ್ರಸ್ತಾವನೆಗಳು	ಆಯವ್ಯಯ	ಅನುಧಾನದ ಆರಂಭಿಕ ಶಿಲ್ಕು	ಬಿಡುಗಡೆಯಾದ ಅನುಧಾನ	ಒಟ್ಟು ಸ್ವೀಕೃತ ಅನುಧಾನ*	ಒಟ್ಟು ವೆಚ್ಚ#	ಅನುದಾನದ ಮುಕ್ತಾಯದ ಶಿಲ್ಕು
2015-16	276.96	80.24	69.36	73.73	73.73	34.65	89.47
2016-17	141.93	88.98	89.47	88.98	95.35	33.33	135.94
2017-18	178.40	147.76	135.94	140.76	162.72	137.91	144.12
2018-19	225.09	106.70	144.12	101.30	106.19	103.29	149.54
2019-20	97.68	87.28	149.54	52.59	58.36	99.93	94.58
ಒಟ್ಟು	**920.06**	**510.96**	**69.36**	**457.36**	**496.35**	**409.11**	

ಮೂಲ: ಲೆಕ್ಕಪರಿಶೋಧನೆಗೆ ಒದಗಿಸಿದ ಮಾಹಿತಿಯಿಂದ ಕ್ರೋಢೀಕರಿಸಲಾಗಿದೆ.

** ಇತರ ರಸೀದಿಗಳು/ವರ್ಗಾವಣೆಗಳನ್ನು ಒಳಗೊಂಡಿದೆ– ₹ 38.99 ಕೋಟಿ; # ವರ್ಗಾವಣೆ/ಮರುವಿನಿಯೋಗಗಳನ್ನು ಹೊರತುಪಡಿಸಿ– ₹ 66.61 ಕೋಟಿ.*

- ಸರ್ಕಾರವು ಬೇಡಿಕೆ ಸಲ್ಲಿಸಿದ ಹಣದಲ್ಲಿ (₹ 920.06 ಕೋಟಿ) ಸುಮಾರು ಐವತ್ತು ಪ್ರತಿಶತದಷ್ಟು (₹ 457.36 ಕೋಟಿ) ಬಿಡುಗಡೆ ಮಾಡಿದ್ದರೂ (2015–20), ಬಿಡುಗಡೆ ಮಾಡಿದ ಹಣವನ್ನು ಅನುಷ್ಠಾನ ಏಜೆನ್ಸಿಗಳು ಬಳಸಿಕೊಳ್ಳಲು ಸಾಧ್ಯವಾಗಲಿಲ್ಲ. ಅನುಷ್ಠಾನ ಏಜೆನ್ಸಿಗಳು ಐದು ವರ್ಷಗಳಲ್ಲಿ ನಾಲ್ಕು ವರ್ಷಗಳ ಆರಂಭಿಕ ಶಿಲ್ಕಿಗೆ (ಬ್ಯಾಲೆನ್ಸ್‌ಗೆ) ಸಮನಾದ ಮೊತ್ತವನ್ನು ಖರ್ಚು ಮಾಡಲು ಸಾಧ್ಯವಾಗಲಿಲ್ಲ. ತ್ರೈಮಾಸಿಕ ಆಧಾರದ ಮೇಲೆ ಹಣವನ್ನು ಬಿಡುಗಡೆ ಮಾಡಲಾಗಿದ್ದರೂ, ಬಳಕೆಯ ಪ್ರವೃತ್ತಿಯನ್ನು ಪರಿಗಣಿಸಿ ಅಗತ್ಯತೆಯನ್ನು ಖಚಿತಪಡಿಸಿಕೊಳ್ಳಲು ಇಲಾಖೆ ವಿಫಲವಾಗಿದೆ ಮತ್ತು ಇದರಿಂದ ಬ್ಯಾಂಕ್ ಠೇವಣಿಗಳಲ್ಲಿ ಹಣವನ್ನು ಇಡಲು ಕಾರಣವಾಗಿದೆ. ಉದಾಹರಣೆಗೆ, ಸ್ಟಾರ್ಟ್‌ಅಪ್ ನೀತಿಯ ಅಡಿಯಲ್ಲಿ 2017–18 ರ ಖರ್ಚು ಮಾಡದ ಬಾಕಿ ₹ 52.48 ಕೋಟಿಯಷ್ಟು ಇತ್ತು. 2018–19ನೇ ಸಾಲಿಗೆ ₹ 44.04 ಕೋಟಿ ಹಣಕಾಸಿನ ಹಂಚಿಕೆಯನ್ನು ವರ್ಷದಲ್ಲಿ ತಲಾ ₹ 11.01 ಕೋಟಿಯಂತೆ ನಾಲ್ಕು ಸಮಾನ ಕಂತುಗಳಲ್ಲಿ ಬಿಡುಗಡೆ ಮಾಡಲಾಗಿದೆ. ವರ್ಷಾಂತ್ಯದಲ್ಲಿ ಸಂಪೂರ್ಣ ಅನುದಾನ ಬಳಕೆಯಾಗದೆ ಉಳಿದಿದೆ.

- ಹಣಕಾಸು ಇಲಾಖೆಯು ಹೊರಡಿಸಿದ ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ 53:ಬಿಜಿ 2003 ದಿನಾಂಕ 03 ಜುಲೈ 2003 ರ ಪ್ರಕಾರ, ಬ್ಯಾಂಕ್ ಖಾತೆಗಳಲ್ಲಿ ಗಳಿಸಿದ ಬಡ್ಡಿಯನ್ನು ಸರ್ಕಾರಿ ಲೆಕ್ಕ ಶೀರ್ಷಿಕೆ 0049–04–110–0–01 ಗೆ ಪಾವತಿಸಬೇಕು. ಇಲಾಖೆಯು ಗಳಿಸಿದ ಬಡ್ಡಿಯಿಂದ ₹ 4.60 ಕೋಟಿಯನ್ನು ಬಳಸಿಕೊಂಡಿದೆ ಮತ್ತು ಹಣಕಾಸು ಇಲಾಖೆಯ ಸೂಚನೆಗಳನ್ನು ಉಲ್ಲಂಘಿಸಿ ಮಾರ್ಚ್ 2020 ರಂತೆ ₹ 22.05 ಕೋಟಿ ಬಡ್ಡಿ ಆದಾಯವನ್ನು ಉಳಿಸಿಕೊಂಡಿದೆ. ಇ, ಐಟಿ, ಬಿಟಿ ಮತ್ತು ಎಸ್ ಮತ್ತು ಟಿ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಅನುಮೋದನೆಯ ಆಧಾರದ ಮೇಲೆ ₹ 3.53 ಕೋಟಿ ಬಳಕೆಯಾಗಿದ್ದರೆ, ₹ 1.07 ಕೋಟಿಯಷ್ಟು ಬಡ್ಡಿಯ ಬಾಕಿ ಉಳಿದ ಮೊತ್ತವನ್ನು ಅನುಮೋದನೆಯಿಲ್ಲದೆ ಬಳಸಲಾಗಿದೆ.

- ಒಂದು ನೀತಿಯಿಂದ ಇನ್ನೊಂದು ನೀತಿಗೆ ₹ 66.61 ಕೋಟಿ ಹಣವನ್ನು ಮರುವಿನಿಯೋಗ ಮಾಡಿದ ಹಲವಾರು ನಿದರ್ಶನಗಳು ಕೂಡ ಗಮನಕ್ಕೆ ಬಂದವು, ಇದು ಯೋಜಿಸುವುದರಲ್ಲಿ ಲೋಪವನ್ನು ಸೂಚಿಸಿತಲ್ಲದೆ ಕೆಲವು ಸಂದರ್ಭಗಳಲ್ಲಿ ಅನಗತ್ಯವೂ ಆಗಿದೆ. ಉದಾಹರಣೆಗೆ, ₹ 8.85 ಕೋಟಿ ಮೊತ್ತವನ್ನು ಗ್ರಾಮೀಣ ವೈ–ಫೈನಿಂದ ಸ್ಟಾರ್ಟ್‌ಅಪ್ ನೀತಿಗೆ ಮರುವಿನಿಯೋಗಿಸಲಾಗಿದೆ(2018–19). ಸ್ಟಾರ್ಟ್‌ಅಪ್ ನೀತಿಗೆ ಸಂಬಂಧಿಸಿದಂತೆ 2017–18 ರ ಖರ್ಚು ಮಾಡದ ಬಾಕಿ ₹ 52.48 ಕೋಟಿಗಳಾಗಿದ್ದು, ₹ 67.10 ಕೋಟಿ ಅನುದಾನವು

ವರ್ಷಾಂತಕ್ಕೆ (2018–19) ಬಳಕೆಯಾಗದೆ ಉಳಿದಿದೆ ಮತ್ತು ಮುಂದಿನ ವರ್ಷಾಂತಕ್ಕೆ (2019–20) ₹ 35.60 ಕೋಟಿ ಬಳಕೆಯಾಗದೆ ಉಳಿದಿರುವುದರಿಂದ ಹಣ ಬಿಡುಗಡೆ ಅನಗತ್ಯವಾಗಿತ್ತು.

ಹೆಚ್ಚುವರಿಯಾಗಿ, ಕರ್ನಾಟಕ ಹಣಕಾಸು ಸಂಹಿತೆಯ ಕಂಡಿಕೆ 162, ಇನ್ನಿತರವುಗಳ ಜೊತೆಗೆ ಮಂಜೂರಾತಿ ಪ್ರಾಧಿಕಾರವು ಅನುದಾನದ ಬಳಕೆಯನ್ನು ಮೇಲ್ವಿಚಾರಣೆ ಮಾಡಲು ಮತ್ತು ಖರ್ಚು ಮಾಡದ ಮೊತ್ತವನ್ನು ಒಪ್ಪಿಸಲಾಗಿದೆಯೇ (ಸರೆಂಡರ್) ಎಂದು ಗಮನಿಸುವ ಸಲುವಾಗಿ ಅನುದಾನಗಳ ವಹಿ (ರಿಜಿಸ್ಟರ್ ಆಫ್ ಗ್ರ್ಯಾಂಟ್ಸ್) ನಿರ್ವಹಣೆ ಮಾಡಲು ಸೂಚಿಸುತ್ತದೆ. ಅನುದಾನವನ್ನು ಬಿಡುಗಡೆ ಮಾಡುವ ಡಿಐಟಿ, ಅನುದಾನದ ಬಳಕೆಯನ್ನು ವೀಕ್ಷಿಸಲು ಯಾವುದೇ ನಿಯಂತ್ರಣ ದಾಖಲೆಯನ್ನು ನಿರ್ವಹಿಸಿಲ್ಲ. ಮಾರ್ಚ್ 2020 ರ ಅಂತ್ಯದ ವೇಳೆಗೆ, ಕಿಟ್ಸ್‌ನಿಂದ ₹ 55.73 ಕೋಟಿ ಮತ್ತು ಕಿಯೋನಿಕ್ಸ್‌ನಿಂದ ₹ 3.05 ಕೋಟಿಗಳಷ್ಟು ಬಳಕೆಯ ಪ್ರಮಾಣಪತ್ರಗಳು ಬಾಕಿ ಉಳಿದಿವೆ. ವಿವರಗಳನ್ನು ***ಅನುಬಂಧ–8 ಮತ್ತು 8Aರಲ್ಲಿ*** ತೋರಿಸಲಾಗಿದೆ

ಕಿಟ್ಸ್ ನಿಯಂತ್ರಣಕ್ಕೆ ಮೀರಿದ ಕಾರಣಗಳಿಂದಾಗಿ ಅನುಷ್ಠಾನ ಏಜೆನ್ಸಿಗಳು ಹಣವನ್ನು ಬಳಸಿಕೊಳ್ಳಲು ಸಾಧ್ಯವಾಗದ ಕಾರಣ ಹಣವನ್ನು ಬ್ಯಾಂಕ್‌ಗಳಲ್ಲಿ ಇರಿಸಲಾಗಿತ್ತು ಎಂದು ಸರ್ಕಾರ ಉತ್ತರಿಸಿತು (ಆಗಸ್ಟ್ 2021). ಪ್ರತಿ ಹಣಕಾಸು ವರ್ಷದಲ್ಲಿ ಹಣದ ಕೊರತೆ ಇದ್ದ ಕಾರಣ ಸಕ್ಷಮ ಪ್ರಾಧಿಕಾರದ ಅನುಮೋದನೆಯ ನಂತರ ಬಡ್ಡಿಯನ್ನು ಬಳಸಿಕೊಳ್ಳಲಾಯಿತು. 31 ಮಾರ್ಚ್ 2021 ರವರೆಗೆ ಕಿಯೋನಿಕ್ಸ್ ಮತ್ತು ಕಿಟ್ಸ್ ಬಳಕೆ ಪ್ರಮಾಣಪತ್ರಗಳನ್ನು ಸಲ್ಲಿಸಿವೆ.

ಬಡ್ಡಿಯಿಂದ ಗಳಿಸಿದ ಆದಾಯವನ್ನು ಬಳಸಿಕೊಳ್ಳಲು ಸರ್ಕಾರವು ಅಧಿಕಾರವನ್ನು ನಿಯೋಜಿಸದ ಕಾರಣ ಉತ್ತರವು ಸ್ವೀಕಾರಾರ್ಹವಲ್ಲ. ಪ್ರತಿ ವರ್ಷ ಹೆಚ್ಚುವರಿ/ಬಳಕೆಯಾಗದ ನಿಧಿಗಳು ಇದ್ದುದರಿಂದ ಉತ್ತರದಲ್ಲಿ ಹೇಳಿರುವಂತೆ ಹಣದ ಕೊರತೆ ಇರಲಿಲ್ಲ.

ಇದಲ್ಲದೆ, ಸಲ್ಲಿಸಿದ ಬಳಕೆ ಪ್ರಮಾಣಪತ್ರಗಳು 2015 ರಿಂದ ಬಳಕೆಯಾಗದ ಬಾಕಿಗಳನ್ನು ಪ್ರತಿಬಿಂಬಿಸಿವೆ ಮತ್ತು ಅವನ್ನು ಅನುದಾನಗಳ ವಹಿ (ರಿಜಿಸ್ಟರ್) ಮೂಲಕ ಗಮನಿಸಲಾಗಿಲ್ಲ. ಅಂತಹ ಬಳಕೆಯಾಗದ ಬಾಕಿಗಳ ಸಂಚಿತ ಬಾಕಿಯನ್ನು ಇಲಾಖೆಯು ಇನ್ನೂ ಸಿದ್ಧಪಡಿಸಿಲ್ಲ (ನವೆಂಬರ್ 2021).

ದ್ವಿತೀಯ ಶ್ರೇಣಿ ನಗರಗಳಲ್ಲಿ ಐಟಿ ಪಾರ್ಕ್‌ಗಳ ಅಭಿವೃದ್ಧಿಯಲ್ಲಿ ವಿಳಂಬ

2.1.6. ಸರ್ಕಾರಿ ಆದೇಶ ಸಂಖ್ಯೆ ಎಮ್‌ಟಿಇ 38 ಎಮ್‌ಡಿಎ 2008, ಬೆಂಗಳೂರು, ದಿನಾಂಕ 25 ಫೆಬ್ರವರಿ 2009 ರ ಪ್ರಕಾರ, ಕಿಯೋನಿಕ್ಸ್‌ಗೆ ₹ 10 ಕೋಟಿಯ ಈಕ್ವಿಟಿ ಕೊಡುಗೆಯನ್ನು ನೀಡಲು ಈ ಷರತ್ತುಗಳಿಗೆ ಒಳಪಟ್ಟು ಕರ್ನಾಟಕ ಸರ್ಕಾರ ಒಪ್ಪಿಕೊಂಡಿತು.

- ಸ್ಪರ್ಧಾತ್ಮಕ ಮತ್ತು ಪಾರದರ್ಶಕ ಪ್ರಕ್ರಿಯೆಯ ಮೂಲಕ ಆಯ್ಕೆ ಮಾಡಲಾದ ಒಂದು ಖಾಸಗಿ ಪಾಲುದಾರರೊಂದಿಗೆ ರಚಿಸಲಾಗುವ ಜಂಟಿ ಉದ್ಯಮದಲ್ಲಿ ಕಿಯೋನಿಕ್ಸ್ ಈಕ್ವಿಟಿ ಪಾಲನ್ನು ತೆಗೆದುಕೊಳ್ಳಬೇಕು;

- ಕಿಯೋನಿಕ್ಸ್‌ಗೆ ಒದಗಿಸಲಾದ ಈಕ್ವಿಟಿ ಬೆಂಬಲವು ದೊಡ್ಡ ಮಾಹಿತಿ ತಂತ್ರಜ್ಞಾನ ಮೂಲಸೌಕರ್ಯ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಹೆಚ್ಚಿನ ಹಣವನ್ನು ಎರವಲು ಪಡೆಯಲು ಅನುವು ಮಾಡಿಕೊಡುವುದಕ್ಕೇ ಹೊರತು ಮಾಹಿತಿ ತಂತ್ರಜ್ಞಾನ ಘಟಕಗಳಿಗೆ ಸಬ್ಸಿಡಿ ನೀಡುವುದಕ್ಕಲ್ಲ; ಮತ್ತು

- ತೆರಿಗೆ–ಕವಚದ (ಟ್ಯಾಕ್ಸ್ ಶೀಲ್ಡ್) ಪ್ರಯೋಜನವನ್ನು ಪಡೆಯುವ ಮತ್ತು ಯೋಜನೆಯ ಕಾರ್ಯಸಾಧ್ಯತೆಯನ್ನು ಹೆಚ್ಚಿಸುವ ಸೂಕ್ತವಾದ ಸಾಲ ಮತ್ತು ಇಕ್ವಿಟಿ ಹಣಕಾಸು ಮಾದರಿಯನ್ನು ಪರಿಗಣಿಸಬೇಕು.

2008–09ರ ಸಾಲಿನ ಆಯವ್ಯಯದಲ್ಲಿ ಕರ್ನಾಟಕವು ಖಾಸಗಿ ಸಹಭಾಗಿತ್ವದೊಂದಿಗೆ ಜಂಟಿ ಉದ್ಯಮಗಳ ಮೂಲಕ ಕಿಯೋನಿಕ್ಸ್‌ನಿಂದ ಆರು ದ್ವಿತೀಯ ಶ್ರೇಣಿ ನಗರಗಳಲ್ಲಿ[11] ಐಟಿ ಪಾರ್ಕ್‌ಗಳನ್ನು ಸ್ಥಾಪಿಸಲು ಪ್ರಸ್ತಾಪಿಸಿತ್ತು.

ಲೆಕ್ಕಪರಿಶೋಧನೆಯ ಪರಿಶೀಲನೆಯು 2008–09 ಮತ್ತು 2019–2020 ರ ನಡುವೆ ದ್ವಿತೀಯ ಶ್ರೇಣಿ ನಗರಗಳಲ್ಲಿ ಮಾಹಿತಿ ತಂತ್ರಜ್ಞಾನ ಮೂಲಸೌಕರ್ಯಗಳ ಅಭಿವೃದ್ಧಿಗಾಗಿ ಈಕ್ವಿಟಿಗಾಗಿ ₹ 22.80 ಕೋಟಿಯನ್ನು[12] ಕರ್ನಾಟಕ ಸರ್ಕಾರ ಬಿಡುಗಡೆ ಮಾಡಿದೆ ಎಂದು ತೋರಿಸಿದೆ. ಆದಾಗ್ಯೂ, ಕಿಯೋನಿಕ್ಸ್ 1.27 ಲಕ್ಷ ಚದರ ಅಡಿಗಳ ನಿರ್ಮಿತ ಪ್ರದೇಶದೊಂದಿಗೆ ಎರಡು ದ್ವಿತೀಯ ಶ್ರೇಣಿ ನಗರಗಳಲ್ಲಿ (ಕಲಬುರಗಿ ಮತ್ತು ಶಿವಮೊಗ್ಗ) ಮಾತ್ರ ಮಾಹಿತಿ ತಂತ್ರಜ್ಞಾನ ಪಾರ್ಕ್‌ಗಳನ್ನು ಸ್ಥಾಪಿಸಿತು (2012) ಮತ್ತು ಅದು ಕೂಡ ಖಾಸಗಿ ವಲಯದ ಸಹಭಾಗಿತ್ವವಿಲ್ಲದೆ.

ದ್ವಿತೀಯ ಶ್ರೇಣಿ ನಗರಗಳಲ್ಲಿ ಮಾಹಿತಿ ತಂತ್ರಜ್ಞಾನ ಪಾರ್ಕ್‌ಗಳನ್ನು ಸ್ಥಾಪಿಸಲು ಕಿಯೋನಿಕ್ಸ್ ಪ್ರಸ್ತಾಪಿಸಿತ್ತಾದರೂ ಉದ್ದೇಶಕ್ಕಾಗಿ ಅಗತ್ಯವಿರುವ ಭೂಮಿಯನ್ನು ಕಂದಾಯ ಇಲಾಖೆಯಿಂದ ಮಂಜೂರು ಮಾಡದ ಕಾರಣ ಮತ್ತು ಹೆಚ್ಚುವರಿ ಆಯವ್ಯಯ ಬೆಂಬಲವನ್ನು ವಿಸ್ತರಿಸದ ಕಾರಣ ಪ್ರಸ್ತಾಪಗಳನ್ನು ಮುಂದಕ್ಕೆ ಕೊಂಡೊಯ್ಯಲು ಸಾಧ್ಯವಾಗಲಿಲ್ಲ ಎಂದು ಸರ್ಕಾರವು (ಆಗಸ್ಟ್ 2021) ಉತ್ತರಿಸಿದೆ. ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ವಿಧಾನದಲ್ಲಿ ಮೈಸೂರು ಮತ್ತು ಮಂಗಳೂರಿನಲ್ಲಿ ಮಾಹಿತಿ ತಂತ್ರಜ್ಞಾನ ಪಾರ್ಕ್‌ಗಳನ್ನು ಸ್ಥಾಪಿಸಲು ಕಂಪನಿಯು ಮೇ 2009 ರಿಂದ ಜುಲೈ 2011 ರವರೆಗೆ ಐದು ಬಾರಿ ಆಸಕ್ತಿಯ ಅಭಿವ್ಯಕ್ತಿ(ಎಕ್ಸ್‌ಪ್ರೆಷನ್ ಆಫ್ ಇಂಟರೆಸ್ಟ್)ಯನ್ನು ಆಹ್ವಾನಿಸಿತ್ತು, ಆದರೆ ಹೂಡಿಕೆದಾರರಿಂದ ನಿರೀಕ್ಷಿತ ಪ್ರತಿಕ್ರಿಯೆಯು ಲಭಿಸಲಿಲ್ಲ. ಕಂಪನಿಯು ಈಗ ಮಂಗಳೂರು ಮತ್ತು ಶಿವಮೊಗ್ಗದಲ್ಲಿ (ಎರಡನೇ ಹಂತ) ಐಟಿ ಪಾರ್ಕ್‌ಗಳನ್ನು ಕೈಗೆತ್ತಿಕೊಳ್ಳಲು (2021) ಪ್ರಸ್ತಾಪಿಸಿದೆ. ಐಟಿ ಪಾರ್ಕ್‌ಗಳಲ್ಲಿ ಹಿಡುವಳಿಕೆ (ಆಕ್ಯುಪೆನ್ಸಿ) ಉತ್ತೇಜನಕಾರಿಯಾಗಿಲ್ಲ ಎಂದು ಸಹ ಉತ್ತರಿಸಲಾಗಿದೆ.

ಕಾರ್ಯಕ್ರಮವನ್ನು ಮುಂದಕ್ಕೆ ಕೊಂಡೊಯ್ಯಲು ಪ್ರಾಥಮಿಕ ಅವಶ್ಯಕತೆಯಾದ ಭೂಮಿಯನ್ನು ಪಡೆಯುವಲ್ಲಿ ಕಿಯೋನಿಕ್ಸ್‌ಗೆ ಇಲಾಖೆಯ ಬೆಂಬಲದ ಕೊರತೆಯಿರುವುದರಿಂದ ಉತ್ತರವು ಸಮರ್ಥನೀಯವಲ್ಲ. ಇದಲ್ಲದೇ, ಇಕ್ವಿಟಿ ಬಿಡುಗಡೆಯ ಷರತ್ತುಗಳನ್ನು ಕಿಯೋನಿಕ್ಸ್ ಪಾಲನೆ ಮಾಡಿಲ್ಲ. ಕಿಯೋನಿಕ್ಸ್ ಯೋಜಿತ ಆರು ಮಾಹಿತಿ ತಂತ್ರಜ್ಞಾನ ಪಾರ್ಕ್‌ಗಳ ಬದಲಾಗಿ ಕೇವಲ ಎರಡು ಮಾಹಿತಿ ತಂತ್ರಜ್ಞಾನ ಪಾರ್ಕ್‌ಗಳನ್ನು ಸ್ಥಾಪಿಸಲು ಸಂಪೂರ್ಣ ಇಕ್ವಿಟಿ ಮೊತ್ತವನ್ನು ಬಳಸಿಕೊಂಡಿದೆ ಮತ್ತು ಖಾಸಗಿ ವಲಯದ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳಲು ಸಂಬಂಧಿಸಿದ ಷರತ್ತನ್ನು ಸಹ ಉಲ್ಲಂಘಿಸಲಾಗಿದೆ. ಆದ್ದರಿಂದ, ಈಕ್ವಿಟಿ ಮೊತ್ತದ ಬಳಕೆ ನಿಯಮಬಾಹಿರವಾಗಿತ್ತು. ಮಾರ್ಚ್ 2020 ರ ಅಂತ್ಯದ ವೇಳೆಗೆ ಕಲಬುರಗಿ ಮತ್ತು ಶಿವಮೊಗ್ಗದಲ್ಲಿನ ಮಾಹಿತಿ ತಂತ್ರಜ್ಞಾನ ಪಾರ್ಕ್‌ಗಳ ಸರಾಸರಿ ಹಿಡುವಳಿಕೆ ಶೇಕಡಾ 90 ರಷ್ಟಿತ್ತು, ಇದು ಈಗಾಗಲೇ ಸ್ಥಾಪಿಸಲಾದ ಮಾಹಿತಿ ತಂತ್ರಜ್ಞಾನ ಪಾರ್ಕ್‌ಗಳ ಹಿಡುವಳಿಕೆ ಉತ್ತೇಜನಕಾರಿಯಾಗಿಲ್ಲ ಎಂಬ ಸರ್ಕಾರದ ಉತ್ತರವನ್ನು ಬೆಂಬಲಿಸಲಿಲ್ಲ.

ಸ್ಟಾರ್ಟ್‌ಅಪ್‌ಗಳಿಗೆ ಆರ್ಥಿಕ ಬೆಂಬಲ

2.1.7. ಸ್ಟಾರ್ಟ್‌ಅಪ್‌ಗಳು ನಾವೀನ್ಯತೆಯಿಂದ ಕೂಡಿದ ಮತ್ತು ತಂತ್ರಜ್ಞಾನದ ಅನುಕೂಲತೆಯನ್ನು ಉಪಯೋಗಿಸುವ ಉತ್ಪನ್ನ ಅಥವಾ ಸೇವೆಯ ಮೇಲೆ ಕೇಂದ್ರೀಕೃತವಾಗಿರುವ ಕಂಪನಿಗಳು ಅಥವಾ ಉದ್ಯಮಗಳಾಗಿವೆ, ಅವುಗಳು ಸಂಪೂರ್ಣವಾಗಿ ಅಭಿವೃದ್ಧಿ ಹೊಂದಿದ ವ್ಯಾಪಾರ ಮಾದರಿಯನ್ನು ಹೊಂದಿರುವುದಿಲ್ಲ ಮತ್ತು ಹೆಚ್ಚು ಪ್ರಮುಖವಾಗಿ, ಮುಂದಿನ ಹಂತದ ವ್ಯವಹಾರಕ್ಕೆ ಹೋಗಲು ಸಾಕಷ್ಟು ಬಂಡವಾಳವನ್ನು ಹೊಂದಿರುವುದಿಲ್ಲ. ಪ್ರಾಸಂಗಿಕವಾಗಿ, ವೈಫಲ್ಯದ ಪ್ರಮಾಣವು ಹೆಚ್ಚಾಗಿರುತ್ತದೆ. ಇದು ಅಂತಹ ಉದ್ಯಮಗಳಿಗೆ ಸಂಬಂಧಿಸಿದ ಅಪಾಯಕಾರಿ ಅಂಶವಾಗಿದೆ. ಈ ಸ್ಟಾರ್ಟ್‌ಅಪ್‌ಗಳನ್ನು ಬೆಂಬಲಿಸಲು ಯೋಜಿಸುವ ಸರ್ಕಾರವು ಯೋಜನೆಯ ವ್ಯವಹಾರ ಮಾದರಿಗಳನ್ನು ವಿಮರ್ಶಾತ್ಮಕವಾಗಿ ಮೌಲ್ಯಮಾಪನ ಮಾಡುವಲ್ಲಿ ಹೆಚ್ಚು ವಸ್ತುನಿಷ್ಠವಾಗಿರಬೇಕು. ಏಕೆಂದರೆ ಈ ಸ್ಟಾರ್ಟ್‌ಅಪ್‌ಗಳ ಯಶಸ್ಸನ್ನು ನಿರ್ಧರಿಸುವಲ್ಲಿ ಅದು ನಿರ್ಣಾಯಕವಾಗಿರುತ್ತದೆ. ಹೀಗಾಗಿ, ಯಶಸ್ಸು ಹೆಚ್ಚಾಗಿ ಯೋಜನೆಯ ಪ್ರಸ್ತಾಪಗಳ

[11] ಹುಬ್ಬಳ್ಳಿ–ಧಾರವಾಡ, ಬೆಳಗಾವಿ, ಕಲಬುರ್ಗಿ, ಶಿವಮೊಗ್ಗ, ದಾವಣಗೆರೆ ಮತ್ತು ಮಂಗಳೂರು.

[12] ಶಿವಮೊಗ್ಗ ಮತ್ತು ಕಲಬುರ್ಗಿಯಲ್ಲಿ ಎರಡು ಮಾಹಿತಿ ತಂತ್ರಜ್ಞಾನ ಪಾರ್ಕ್‌ಗಳಿಗೆ ಕಿಯೋನಿಕ್ಸ್ ಹೂಡಿಕೆ ಮಾಡಿದ್ದ ₹ 28.00 ಕೋಟಿಗಳಿಗೆ ಎದುರಾಗಿ.

ನಿರ್ಣಾಯಕ ಮೌಲ್ಯಮಾಪನವನ್ನು ಅವಲಂಬಿಸಿದೆ. ಯೋಜನೆಯ ಪ್ರಸ್ತಾಪಗಳು ಹೆಚ್ಚಾಗಿ ಅತಿ ಆಶಾದಾಯಕ ಚಿತ್ರಣವನ್ನು ಪ್ರದರ್ಶಿಸುವುದರಿಂದ ಇದು ಪ್ರಮುಖ ಸವಾಲನ್ನು ಒಡ್ಡುತ್ತದೆ.

ಇಲಾಖೆಯು ಬೆಂಬಲ ನೀಡುವ ಉದ್ಯಮಗಳ ವಾಣಿಜ್ಯೀಕರಣದ ಸಾಮಾನ್ಯ ಮೂಲ ಉದ್ದೇಶದೊಂದಿಗೆ ಆರಂಭಿಕ-ಹಂತದ ಸ್ಟಾರ್ಟ್‌ಅಪ್‌ಗಳಿಗೆ ಸಹಾಯಧನ, ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ನೀಡುವ ಯೋಜನೆಗಳಿಗೆ ಧನಸಹಾಯ, ನ್ಯೂ ಏಜ್ ಇನ್‌ಕ್ಯುಬೇಶನ್, ಇತ್ಯಾದಿಗಳಂತಹ ವಿಭಿನ್ನ ಕಾರ್ಯತಂತ್ರಗಳನ್ನು ರೂಪಿಸಿತು.

ಪರಿಕಲ್ಪನೆಯ ಪುರಾವೆಯ ತೊಡಗುವಿಕೆ (ಐಡಿಯಾ 2 ಪಿಓಸಿ)

2.1.8. ತಮ್ಮ ಆವಿಷ್ಕಾರಗಳ ವಾಣಿಜ್ಯೀಕರಣವನ್ನು ಉತ್ತೇಜಿಸಲು ಮತ್ತು ಪರಿಕಲ್ಪನೆಯ ಪುರಾವೆಗಳನ್ನು ಮೌಲ್ಯೀಕರಿಸಲು ಸಹಾಯ ಮಾಡಲು ಆರಂಭಿಕ ಹಂತದ ನಿಧಿಯ ಅಗತ್ಯವಿರುವ ನವೋದ್ಯಮಿಗಳನ್ನು ಉತ್ತೇಜಿಸಲು ಐಡಿಯಾ 2 ಪಿಓಸಿ (ಪರಿಕಲ್ಪನೆಯ ಪುರಾವೆಯ ತೊಡಗುವಿಕೆ) ಎಂಬ ಬಹು-ವಲಯ ತೊಡಗುವಿಕೆಯನ್ನು ಪ್ರಾರಂಭಿಸಲಾಯಿತು (2016). ₹ 50 ಲಕ್ಷದವರೆಗಿನ ಅನುದಾನವನ್ನು ಆಯ್ದ ಸ್ಟಾರ್ಟ್‌ಅಪ್‌ಗಳಿಗೆ ಎರಡು ವರ್ಷಗಳಿಗೆ ಮೀರದ ಯೋಜನೆಯ ಅವಧಿಗೆ ನೀಡಲಾಗುವುದು.

ಮೆ. ಕೆಪಿಎಮ್‌ಜಿಯನ್ನು ಮೌಲ್ಯಮಾಪನ, ಆಯ್ಕೆಗಾಗಿ ಶಿಫಾರಸು ಮತ್ತು ಯೋಜನೆಯ ಮೇಲ್ವಿಚಾರಣೆಗಾಗಿ ಅನುಷ್ಠಾನ ಪಾಲುದಾರರಾಗಿ ತಿಂಗಳಿಗೆ ₹ 16.48 ಲಕ್ಷ ದರದಲ್ಲಿ ನೇಮಿಸಲಾಯಿತು (ಸೆಪ್ಟೆಂಬರ್ 2017) ಮತ್ತು ಈ ಪ್ರಕ್ರಿಯೆಯನ್ನು ಮಾರ್ಚ್ 2019 ರಿಂದ ಕಿಟ್ಸ್ ವಹಿಸಿಕೊಂಡಿದೆ. ಡಿಸೆಂಬರ್ 2019 ರ ಅಂತ್ಯದ ವೇಳೆಗೆ, 357 ಸ್ಟಾರ್ಟ್‌ಅಪ್‌ಗಳನ್ನು ಆರ್ಥಿಕ ಸಹಾಯಕ್ಕಾಗಿ (₹ 87.38 ಕೋಟಿ) ಆಯ್ಕೆ ಮಾಡಲಾಗಿದೆ ಮತ್ತು ₹ 73.62 ಕೋಟಿಯನ್ನು ಮೇ 2020 ರ ವೇಳೆಗೆ ಬಿಡುಗಡೆ ಮಾಡಲಾಗಿದೆ. ಕಿಟ್ಸ್ 2018, 2020 ಮತ್ತು 2021 ರ ಅವಧಿಯಲ್ಲಿ ಸಮೀಕ್ಷೆಗಳನ್ನು ನಡೆಸಿದೆ ಮತ್ತು ಇತ್ತೀಚಿನ ಸಮೀಕ್ಷೆಯ ವರದಿಯನ್ನು ಲೆಕ್ಕಪರಿಶೋಧನೆಯೊಂದಿಗೆ ಹಂಚಿಕೊಂಡಿದೆ.

ಲೆಕ್ಕಪರಿಶೋಧನೆಯ ಪರಿಶೀಲನೆಯು ಈ ಕೆಳಗಿನವುಗಳನ್ನು ಬಹಿರಂಗಪಡಿಸಿದೆ:

- ಅನುಷ್ಠಾನ ಪಾಲುದಾರರು ಪ್ರತಿ ಸ್ಟಾರ್ಟ್‌ಅಪ್‌ನ ಪ್ರಗತಿಯನ್ನು ತೋರಿಸದೆಯೇ ಬಿಡುಗಡೆಯಾದ ಮತ್ತು ಬಿಡುಗಡೆ ಮಾಡಬೇಕಾದ ಸಹಾಯಧನದ ವಿವರಗಳೊಂದಿಗೆ ನಿಯತಕಾಲಿಕ ವರದಿಗಳನ್ನು ಒದಗಿಸುತ್ತಿರುತ್ತಾರೆ. ಅನುಷ್ಠಾನ ಪಾಲುದಾರರು ಮೌಲ್ಯಮಾಪನ ವರದಿಗಳನ್ನು ಲಭ್ಯಗೊಳಿಸಲಿಲ್ಲವಾದ್ದರಿಂದ 28 ಸ್ಟಾರ್ಟಅಪ್‌ಗಳಿಗೆ ₹ 6.51 ಕೋಟಿಯ ಸಹಾಯಧನವನ್ನು ಕಿಟ್ಸ್ ಬಿಡುಗಡೆ ಮಾಡಬಾರದಾಗಿತ್ತು. ಹೀಗಾಗಿ ಹಣ ಬಿಡುಗಡೆ ನಿಯಮಬಾಹಿರವಾಗಿತ್ತು.

- ಆಗಸ್ಟ್ 2021 ರ ಸಮೀಕ್ಷೆಯ ವರದಿಯ ಪ್ರಕಾರ, 357 ಸ್ಟಾರ್ಟ್‌ಅಪ್‌ಗಳ ಪೈಕಿ 232 ಸ್ಟಾರ್ಟ್‌ಅಪ್‌ಗಳು ಆಗಸ್ಟ್ 2021 ರಲ್ಲಿ ಕಿಟ್ಸ್ ನಡೆಸಿದ ಸಮೀಕ್ಷೆಗೆ ಪ್ರತಿಕ್ರಿಯಿಸಿವೆ ಮತ್ತು 67 ಸ್ಟಾರ್ಟ್‌ಅಪ್‌ಗಳು ಹಣಕಾಸನ್ನು ಸಂಗ್ರಹಿಸಿವೆ. ಪ್ರತಿಕ್ರಿಯಿಸದ 125 ಸ್ಟಾರ್ಟಅಪ್‌ಗಳ ಬಗ್ಗೆ ಇಲಾಖೆಗೆ ಯಾವುದೇ ಮಾಹಿತಿ ಇರಲಿಲ್ಲ. ಸಮೀಕ್ಷೆಯ ಪ್ರಶ್ನಾವಳಿಯು ಯಾವ ಉತ್ಪನ್ನ/ಸೇವೆಗೆ ಅನುದಾನವನ್ನು ಮಂಜೂರು ಮಾಡಲಾಗಿದೆಯೆಂಬ ಪ್ರಮುಖ ಮಾಹಿತಿಯನ್ನು ಒಳಗೊಂಡಿರಲಿಲ್ಲ. ಪಟ್ಟಿಯಲ್ಲಿ ಮೈಲಿಗಲ್ಲುಗಳನ್ನು ಸಾಧಿಸಿರದ 54 ಸ್ಟಾರ್ಟಅಪ್‌ಗಳು ಇದ್ದವಾದರೂ ಅವು ವಾಣಿಜ್ಯೀಕರಣ/ಬೆಳವಣಿಗೆಯ ಹಂತದಲ್ಲಿವೆ ಎಂದು ತೋರಿಸಲಾಗಿತ್ತು.

ಇದಲ್ಲದೆ, ಸಮೀಕ್ಷೆಯ ವರದಿಯಲ್ಲಿ ಸಂಪರ್ಕ ವಿವರಗಳು (ಸ್ಟಾರ್ಟ್‌ಅಪ್‌ನ ವಿಳಾಸ, ಇಮೇಲ್ ವಿಳಾಸ, ವೆಬ್‌ಸೈಟ್ ವಿವರಗಳು, ನೋಂದಣಿ ಇತ್ಯಾದಿ) ಲಭ್ಯವಿಲ್ಲದ ಕಾರಣ ಒದಗಿಸಿದ ದತ್ತಾಂಶವನ್ನು ಮೌಲ್ಯೀಕರಿಸಲು ಲೆಕ್ಕಪರಿಶೋಧನೆಗೆ ಸಾಧ್ಯವಾಗಲಿಲ್ಲ. ಹೀಗಾಗಿ, ನಿಧಿಯ ಮೂಲಕ ತನ್ನ ಹಸ್ತಕ್ಷೇಪವು ಅಪೇಕ್ಷಿತ ಫಲಿತಾಂಶಗಳನ್ನು ನೀಡಿದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಇಲಾಖೆಗೆ ಯಾವುದೇ ಮಾಹಿತಿಗಳು ಇರಲಿಲ್ಲ.

ಸರ್ಕಾರವು ಈ ರೀತಿ ಉತ್ತರಿಸಿದೆ (ಆಗಸ್ಟ್ 2021),

- ಕೆಪಿಎಮ್‌ಜಿ ಸಲ್ಲಿಸಿದ ವರದಿಗಳಿಂದ 28 ಸ್ಟಾರ್ಟಪ್‌ಗಳ ವಿವರಗಳು ಲಭ್ಯವಿರಲಿಲ್ಲ.
- ಕಿಟ್ಸ್‌ನಲ್ಲಿನ ಸ್ಟಾರ್ಟ್‌ಅಪ್ ಕೋಶವು (ಸೆಲ್) ಸ್ಟಾರ್ಟ್‌ಅಪ್‌ಗಳ ನಿರಂತರ ಮೇಲ್ವಿಚಾರಣೆಗಾಗಿ ವ್ಯವಸ್ಥೆಯನ್ನು ಜಾರಿಗೆ ತಂದಿದೆ ಮತ್ತು ಸ್ಟಾರ್ಟ್‌ಅಪ್‌ಗಳಿಂದ ತಮ್ಮ ಯೋಜನೆಗಳ ಸ್ಥಿತಿಯನ್ನು ಖಚಿತಪಡಿಸಿಕೊಳ್ಳಲು ಪ್ರತಿಕ್ರಿಯೆಯನ್ನು ಪಡೆಯಲು ಮೂರು ಸಮೀಕ್ಷೆಗಳನ್ನು ನಡೆಸಿದೆ.

ಈ ಕೆಳಗಿನ ಕಾರಣಗಳಿಂದ ಉತ್ತರವು ಸ್ವೀಕಾರಾರ್ಹವಲ್ಲ:

- 28 ಸ್ಟಾರ್ಟ್‌ಅಪ್‌ಗಳಿಗೆ ನಿಯಮಬಾಹಿರವಾಗಿ ಹಣ ಬಿಡುಗಡೆ ಮಾಡಿದ್ದಕ್ಕೆ ಹೊಣೆಗಾರಿಕೆಯನ್ನು ನಿಗದಿಪಡಿಸಲಾಗಿಲ್ಲ.
- ಸ್ಟಾರ್ಟ್‌ಅಪ್‌ಗಳ ಲೆಕ್ಕಪರಿಶೋಧಿತ ವಾರ್ಷಿಕ ಖಾತೆಗಳು ಪರಿಶೀಲಿಸದ ಸಮೀಕ್ಷೆಯ ವರದಿಗಿಂತ ಹೆಚ್ಚಾಗಿ ಸ್ಟಾರ್ಟ್‌ಅಪ್‌ನ ನೈಜ ಕಾರ್ಯಕ್ಷಮತೆಯ ಬಗ್ಗೆ ಉತ್ತಮ ಒಳನೋಟವನ್ನು ನೀಡುತ್ತದೆ.

ಗ್ರ್ಯಾಂಡ್ ಚಾಲೆಂಜ್ ಇನಿಶಿಯೇಟಿವ್ (ಸ್ಪರ್ಧೆಗಳು–ಪರಿಹಾರಗಳ ಮೂಲಕ ಸಾಮಾಜಿಕ ಪ್ರಭಾವಕ್ಕಾಗಿ ಚಾನೆಲೈಸಿಂಗ್ ಇನ್ನೋವೇಶನ್ – ಯಶಸ್ವಿ ಉದ್ಯಮಗಳನ್ನು ಕಂಡುಕೊಳ್ಳುವುದರಲ್ಲಿ ಪರಿಹಾರಗಳು ವಿಫಲವಾಗಿವೆ).

2.1.9. ಇಲಾಖೆಯು ಆಗಸ್ಟ್ 2016 ರಲ್ಲಿ ಸಾಮಾಜಿಕ ಪ್ರಭಾವವನ್ನು ಹೊಂದಿರುವ ವಲಯಗಳಲ್ಲಿ ನವೀನ ಪರಿಹಾರಗಳನ್ನು ಹುಡುಕುವ "ಗ್ರ್ಯಾಂಡ್ ಚಾಲೆಂಜ್ ಇನಿಶಿಯೇಟಿವ್" ಅನ್ನು ಪ್ರಾರಂಭಿಸಿತು. ಪ್ರತಿ ಸವಾಲು ಆತಿಥೇಯ ಇಲಾಖೆಯನ್ನು ಗುರುತಿಸುವುದು, ಅದರ ಸುತ್ತಲೂ ಸವಾಲನ್ನು ರೂಪಿಸಬೇಕು ಮತ್ತು ಐದು ವರ್ಷಗಳ ಅವಧಿಯಲ್ಲಿ 25 ವಿಜೇತರನ್ನು ಬೆಂಬಲಿಸುವ ಗುರಿಯನ್ನು ಹೊಂದಿರಬೇಕು. ಮೆ. ಐಕೆಪಿಯನ್ನು ಅನುಷ್ಠಾನ ಪಾಲುದಾರರಾಗಿ ನೇಮಿಸಲಾಯಿತು.

ಹಂತ I ಆತಿಥೇಯ ಇಲಾಖೆಯಿಂದ ಹೊಂದಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರುವ ಸುಮಾರು ಐದು ನವೀನ ಯೋಜನೆಗಳ ಗುರುತಿಸುವಿಕೆಯನ್ನು ಒಳಗೊಂಡಿತ್ತು ಮತ್ತು ಹಂತ II ರ ಅಡಿಯಲ್ಲಿ ಈ ಐದರ ಪೈಕಿ ಆಯ್ಕೆಯಾದ ಒಂದು (ಶಾರ್ಟ್‌ಲಿಸ್ಟ್ ಆದ) ನಾವೀನ್ಯತೆಯು ಪ್ರಾಯೋಗಿಕ ಅನುಷ್ಠಾನಕ್ಕಾಗಿ 12–15 ತಿಂಗಳ ಅವಧಿಯಲ್ಲಿ ಗರಿಷ್ಠ ₹ 50 ಲಕ್ಷದವರೆಗೆ ಹಣವನ್ನು ಪಡೆಯುವುದು. ಆಗಸ್ಟ್ 2016 ಮತ್ತು ಆಗಸ್ಟ್ 2017 ರ ನಡುವೆ, ಆರು ಕರೆಗಳನ್ನು ಆಹ್ವಾನಿಸಲಾಗಿತ್ತು. ಕಿಟ್ಸ್ ಆರು ಪರಿಹಾರಗಳನ್ನು ಶಾರ್ಟ್‌ಲಿಸ್ಟ್ ಮಾಡಿದ್ದು ₹ 3.13 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ.

ಹಂತ IIರ ಅಡಿಯಲ್ಲಿ ಆರು ಸ್ಟಾರ್ಟ್‌ಅಪ್‌ಗಳಿಗೆ ₹ 1.37 ಕೋಟಿಯ (₹ 2.45 ಕೋಟಿ ಬದ್ಧತೆ ಮೊತ್ತದ ವಿರುದ್ಧ ₹ 1.08 ಕೋಟಿ ಬಿಡುಗಡೆ) ಬಾಕಿ ಹಣವನ್ನು ಕಿಟ್ಸ್ ಬಿಡುಗಡೆ ಮಾಡಿಲ್ಲ ಎಂದು ಲೆಕ್ಕಪರಿಶೋಧನೆಯ ಪರಿಶೀಲನೆಯಿಂದ ತಿಳಿದುಬಂದಿದೆ. ಆತಿಥೇಯ ಇಲಾಖೆಯು ಯಾವುದೇ ನವೀನ ಪರಿಹಾರಗಳನ್ನು ಅಳವಡಿಸಿಕೊಳ್ಳದ ಕಾರಣ ಪ್ರಾಯೋಗಿಕ ಅನುಷ್ಠಾನದ ನಂತರ ಕಾರ್ಯಕ್ರಮವನ್ನು ಕೈಬಿಡಲಾಯಿತು. ಗ್ರ್ಯಾಂಡ್ ಚಾಲೆಂಜ್ ಇನಿಶಿಯೇಟಿವ್‌ಗೆ ₹ 4.13 ಕೋಟಿ[13] ವೆಚ್ಚ ಮಾಡಿರುವುದು ಉದ್ದೇಶಿತ ಫಲಿತಾಂಶಗಳನ್ನು ನೀಡಲಿಲ್ಲ. ಉತ್ಪನ್ನ/ಸೇವೆ, ಆತಿಥೇಯ ಇಲಾಖೆ ಮತ್ತು ಅವುಗಳ ಸ್ಥಿತಿಯ ವಿವರಗಳನ್ನು ***ಅನುಬಂಧ–9ರಲ್ಲಿ*** ತೋರಿಸಲಾಗಿದೆ.

[13] ಐಕೆಪಿಗೆ ₹ 100 ಲಕ್ಷ; ಹಂತ Iರ ಪುರಸ್ಕೃತರಿಗೆ ₹ 204.84 ಲಕ್ಷ ಮತ್ತು ಹಂತ IIರ ಪುರಸ್ಕೃತರಿಗೆ ₹ 108 ಲಕ್ಷ.

ಸ್ಟಾರ್ಟ್‌ಅಪ್‌ಗಳು ತಮ್ಮ ಪರಿಹಾರಗಳನ್ನು ಹೆಚ್ಚಿಸಿವೆ ಮತ್ತು ಬಾಹ್ಯ ನಿಧಿಯನ್ನು ಸಂಗ್ರಹಿಸಿವೆ ಮತ್ತು ಹೆಚ್ಚಿಸಿದ ಪರಿಹಾರಗಳನ್ನು ಸರ್ಕಾರಿ ಇಲಾಖೆಗಳ ಹೊರಗೆ ವಾಣಿಜ್ಯೀಕರಣಕ್ಕೆ ಬಳಸಬಹುದು ಎಂದು ಇಲಾಖೆಯು ಉತ್ತರಿಸಿದೆ (ಆಗಸ್ಟ್ 2021).

ಸಂಬಂಧಿತ ಇಲಾಖೆ(ಗಳು) ಅಳವಡಿಸಿಕೊಳ್ಳಬೇಕಾದ ಪರಿಹಾರವನ್ನು ಒದಗಿಸುವುದು ಕಾರ್ಯಕ್ರಮದ ಉದ್ದೇಶವಾಗಿರುವುದರಿಂದ ಮತ್ತು ಆಯ್ಕೆ ಮಾಡಿದ ಮತ್ತು ಧನಸಹಾಯ ಮಾಡಿದ ಆರು ಪರಿಹಾರಗಳನ್ನು ವಿಸರ್ಜಿಸಲಾಯಿತಾದ್ದರಿಂದ ಇಲಾಖೆಯ ಉತ್ತರವು ಸಮರ್ಪಕವಾಗಿರಲಿಲ್ಲ. ಹೀಗಾಗಿ ₹ 4.13 ಕೋಟಿ ಖರ್ಚು ಮಾಡಿದ್ದು ಫಲಪ್ರದವಾಗಲಿಲ್ಲ.

ನ್ಯೂ ಏಜ್ ಇನ್‌ಕ್ಯುಬೇಶನ್ ಸ್ಕೀಮ್ ನೆಟ್‌ವರ್ಕ್ (ಎನ್‌ಎಐಎನ್)

2.1.10. ನೀತಿಯ ಪ್ರಕಾರ, ಇಂಜಿನಿಯರಿಂಗ್ ಕಾಲೇಜುಗಳಲ್ಲಿ ನಾವೀನ್ಯತೆಯನ್ನು ಉತ್ತೇಜಿಸುವ ಪರಿಸರ ವ್ಯವಸ್ಥೆಯನ್ನು ರಚಿಸಲು ಎನ್‌ಎಐಎನ್ ಅನ್ನು ಅಳವಡಿಸಲಾಗಿದೆ. ವಿದ್ಯಾರ್ಥಿಗಳಿಗೆ ನಿಯೋಜಿಸಲಾದ ಮಾರ್ಗದರ್ಶಕರು ವಿದ್ಯಾರ್ಥಿಗಳು ವ್ಯವಹಾರ ಮಾದರಿಯನ್ನು ರೂಪಿಸಲು ಮತ್ತು ಉದ್ಯಮಿಗಳಂತೆ ಯೋಚಿಸುವುದನ್ನು ಪ್ರೋತ್ಸಾಹಿಸಲು ಸಹಾಯ ಮಾಡುತ್ತಾರೆ ಎಂದು ನಿರೀಕ್ಷಿಸಲಾಗಿತ್ತು. ನೀತಿಯು ಇಂಜಿನಿಯರಿಂಗ್ ಕಾಲೇಜುಗಳನ್ನು ಇನ್‌ಕ್ಯುಬೇಶನ್ ಕೇಂದ್ರಗಳನ್ನಾಗಿ ಆಯ್ಕೆ ಮಾಡಲು ಚಿಂತಿಸಿತ್ತು. ಪ್ರತಿ ಕೇಂದ್ರವು ಇನ್‌ಕ್ಯುಬೇಶನ್‌ಗಾಗಿ 10 ಯೋಜನೆಗಳನ್ನು ಆಯ್ಕೆ ಮಾಡುತ್ತದೆ. ಈ ಯೋಜನೆಯು ಉದ್ಯಮಶೀಲತೆಯನ್ನು[14] ಉತ್ತೇಜಿಸುವ ಮತ್ತು ಉದ್ಯಮ, ಶೈಕ್ಷಣಿಕ ಮತ್ತು ಸರ್ಕಾರದ ಸಕ್ರಿಯ ಬೆಂಬಲದೊಂದಿಗೆ ವ್ಯಾಪಾರ ಮಾದರಿಗಳನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಇಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮತ್ತು ಆರ್ಥಿಕ ಬೆಂಬಲವನ್ನು ವಿಸ್ತರಿಸುವ ಗುರಿಯನ್ನು ಹೊಂದಿದೆ. ಪ್ರತಿ ವರ್ಷ 50 ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಪ್ರಸ್ತಾಪಿಸಿದ ಹತ್ತು ಪ್ರಮುಖ ವಿಚಾರಗಳು/ಯೋಜನೆಗಳಿಗೆ ಪ್ರತಿ ಯೋಜನೆಗೆ ₹ 3 ಲಕ್ಷದವರೆಗೆ ಮೂಲಧನವನ್ನು (ಸೀಡ್ ಮನಿ) ಒದಗಿಸಬೇಕಿತ್ತು. ಪ್ರತಿ ಕಾಲೇಜಿನಲ್ಲಿ ಒಂದು ಇನ್‌ಕ್ಯುಬೇಶನ್ ಸೆಂಟರ್ (ಎನ್‌ಎಐಎನ್) ಸ್ಥಾಪಿಸಬೇಕಿತ್ತು ಮತ್ತು ಅದರ ಕಾರ್ಯಾಚರಣೆಯ ವೆಚ್ಚಕ್ಕಾಗಿ ವರ್ಷಕ್ಕೆ ₹ 10 ಲಕ್ಷ ಆರ್ಥಿಕ ಬೆಂಬಲವನ್ನು ಪಡೆಯಬೇಕಿತ್ತು.

ಐಟಿ, ಬಿಟಿ ಮತ್ತು ಎಸ್&ಟಿ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿತವಾದ (ಡಿಸೆಂಬರ್ 2014) ಕೇಂದ್ರೀಯ ಸ್ಟೀರಿಂಗ್ ಸಮಿತಿಯು ನಿಧಿಯನ್ನು ಒದಗಿಸುವುದಕ್ಕಾಗಿ ಯೋಜನೆಗಳನ್ನು ಪರಿಶೀಲಿಸುವ ಜವಾಬ್ದಾರಿಯನ್ನು ಹೊಂದಿದೆ. ಸ್ಟಾರ್ಟ್‌ಅಪ್ ನೀತಿ 2015 ರ ಕಾರ್ಯಾಚರಣಾ ಕಾರ್ಯವಿಧಾನ ಮತ್ತು ಮಾರ್ಗಸೂಚಿಗಳ ಪ್ರಕಾರ, ಪ್ರತಿ ಕೇಂದ್ರದ ಕಾರ್ಯಕ್ಷಮತೆಯು ನೋಂದಣಿಗೊಂಡ (ಇನ್ಕಾರ್ಪರೇಟೆಡ್) ಕಂಪನಿಗಳ ಸಂಖ್ಯೆ, ವಿದ್ಯಾರ್ಥಿ ನಾವೀನ್ಯಕಾರರ ತಂಡಗಳಿಂದ ವಾಸ್ತವಿಕ ವ್ಯವಹಾರದ ನಡವಳಿಕೆ, ಸ್ವೀಕರಿಸಿದ ಏಂಜೆಲ್/ವೆಂಚರ್ ಫಂಡಿಂಗ್ ಇತ್ಯಾದಿ ಕೆಪಿಐಗಳನ್ನು ಆಧರಿಸಿರುತ್ತದೆ.

ಕಿಟ್ಸ್ ಕಾರ್ಯಕ್ರಮದ ಮೊದಲ ಹಂತದಲ್ಲಿ 374 ಯೋಜನೆಗಳಿಗಾಗಿ ಒಂಬತ್ತು ಕಾಲೇಜುಗಳಿಗೆ ₹ 4.80 ಕೋಟಿ[15] ಬಿಡುಗಡೆ ಮಾಡಿತು (ಏಪ್ರಿಲ್ 2015 ರಿಂದ ಫೆಬ್ರವರಿ 2019 ರವರೆಗೆ) ಮತ್ತು ಈ ಪೈಕಿ ₹ 3.92 ಕೋಟಿ ಖರ್ಚು ಮಾಡಲಾಗಿದೆ. 374 ಯೋಜನೆಗಳ ಪೈಕಿ 151 ಯೋಜನೆಗಳು ಪೂರ್ಣಗೊಂಡಿವೆ ಎಂದು ವರದಿಯಾಗಿದೆ.

ಲೆಕ್ಕಪರಿಶೋಧನೆಯ ಪರಿಶೀಲನೆಯು ಈ ಕೆಳಗಿನವುಗಳನ್ನು ಬಹಿರಂಗಪಡಿಸಿದೆ.

- ಲೆಕ್ಕಪರಿಶೋಧನೆಗೆ ಒದಗಿಸಿದ ದತ್ತಾಂಶದ ಪ್ರಕಾರ, 18 ಕಂಪನಿಗಳನ್ನು ನೋಂದಾಯಿಸಲಾಗಿದೆ ಎಂದು ವರದಿಯಾಗಿದೆ. ಈ 18 ಕಂಪನಿಗಳು ಅಭಿವೃದ್ಧಿಪಡಿಸಿದ ಮತ್ತು ಮಾರಾಟ ಮಾಡಿದ ಉತ್ಪನ್ನಗಳ ವಿವರಗಳು ಇಲಾಖೆಯಲ್ಲಿ ಲಭ್ಯವಿಲ್ಲ.

[14] ಹೊಸ ವ್ಯಾಪಾರವನ್ನು ಅಭಿವೃದ್ಧಿ ಪಡಿಸಿ, ಸಂಘಟಿಸಿ ಮತ್ತು ಲಾಭದಾಯಕವಾಗಿ ನಡೆಸುವ ಸಾಮರ್ಥ್ಯ ಮತ್ತು ಸಿದ್ಧತೆ.

[15] ಸಿಎಪಿಇಎಕ್ಸ್‌ಗಾಗಿ ₹ 2.40 ಕೋಟಿ ಮತ್ತು ಒಪಿಇಎಕ್ಸ್‌ಗಾಗಿ ₹ 2.40 ಕೋಟಿ.

- ಪೂರ್ಣಗೊಂಡ ಯೋಜನೆಗಳ ವ್ಯಾಪಾರ ಸಾಮರ್ಥ್ಯವನ್ನು ನಿರ್ಣಯಿಸಲು ಮತ್ತು ಅಭಿವೃದ್ಧಿಪಡಿಸಿದ ಮೂಲಮಾದರಿಗಳನ್ನು ಅಳೆಯಲು ಇಲಾಖೆಯು ಯಾವುದೇ ಕಾರ್ಯವಿಧಾನವನ್ನು ಹೊಂದಿರಲಿಲ್ಲ.

- ಯೋಜನೆಗಳು ಕಾಲೇಜು ಯೋಜನೆಗಳಾಗಿರುವುದರಿಂದ, ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಕೋರ್ಸ್‌ಗಳನ್ನು ಪೂರ್ಣಗೊಳಿಸಿದ ನಂತರ ವ್ಯಾಪಾರ ಉದ್ಯಮಗಳೊಂದಿಗೆ ಮುಂದುವರಿಯುತ್ತಾರೆಯೇ ಎಂಬ ಸಾಧ್ಯತೆಯ ಅಂಶವು ಒಳಗೊಂಡಿರುತ್ತದೆ. ಈ ಸಾಧ್ಯತೆಯನ್ನು ಕಾರ್ಯಕ್ರಮದ ರಚನೆಯ ಹಂತದಲ್ಲಿ ಪರಿಗಣಿಸಿರಲಿಲ್ಲ. 61 ಯೋಜನೆಗಳನ್ನು ಕೈಬಿಟ್ಟಿರುವ ವಾಸ್ತವಾಂಶದಿಂದ ಇದು ಸ್ಪಷ್ಟವಾಗಿದೆ.

ಹೀಗಾಗಿ, ವಿದ್ಯಾರ್ಥಿಗಳನ್ನು ಉದ್ಯಮಿಗಳನ್ನಾಗಿ ಮಾಡುವತ್ತ ಗಮನಹರಿಸುವ ಯೋಜನೆಯು ತಪ್ಪುಗಳಿಂದ/ದೋಷದಿಂದ ಕೂಡಿದ್ದು, ಇದನ್ನು ನಿಯತಕಾಲಿಕವಾಗಿ ಪರಿಶೀಲಿಸುವ ಅಗತ್ಯವಿತ್ತು. ನಿರ್ಗಮನ ಸಭೆಯಲ್ಲಿ, ಕಾರ್ಯಕ್ರಮದ ಮೊದಲನೇ ಹಂತವು ಕಾಳಜಿಯ ವಿಷಯವಾಗಿದೆ ಮತ್ತು ಮುಂದಿನ ಹಂತಗಳಲ್ಲಿ ಸರಿಪಡಿಸುವ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ಇಲಾಖೆ ಒಪ್ಪಿಕೊಂಡಿತು. ಆದಾಗ್ಯೂ, ಆಲೋಚಿಸಿದ ಸರಿಪಡಿಸುವ ಕ್ರಮಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲಾಗಿಲ್ಲ.

ನೀತಿಯ ಅನುಷ್ಠಾನ

ಇನ್‌ಕ್ಯುಬೇಶನ್ ಕಾರ್ಯಕ್ರಮಗಳು

2.1.11. ಎಲ್ಲಾ ನೀತಿಗಳು ಸ್ಟಾರ್ಟ್‌ಅಪ್‌ಗಳ ಬೆಳವಣಿಗೆಯನ್ನು ಪೋಷಿಸಲು ಕ್ಷೇತ್ರಗಳಾದ್ಯಂತ ಇನ್‌ಕ್ಯುಬೇಶನ್ ಸೌಲಭ್ಯಗಳನ್ನು ಒದಗಿಸುವ ಉದ್ದೇಶವನ್ನು ಹೊಂದಿವೆ. ಇನ್‌ಕ್ಯುಬೇಶನ್ ಎನ್ನುವುದು ಮೂಲಸೌಕರ್ಯ ಮತ್ತು ಮಾರ್ಗದರ್ಶನವನ್ನು ಒಳಗೊಂಡಿರುವ ಒಂದು ವ್ಯಾಪಾರ ಅಭಿವೃದ್ಧಿ ಪ್ರಕ್ರಿಯೆಯಾಗಿದ್ದು, ಹೊಸ ಮತ್ತು ಸಣ್ಣ ವ್ಯವಹಾರಗಳ ಅಭಿವೃದ್ಧಿಯ ಆರಂಭಿಕ ಹಂತದಲ್ಲಿ ಅವುಗಳನ್ನು ಬೆಂಬಲಿಸುವ ಮೂಲಕ ಪೋಷಣೆ ಮತ್ತು ಬೆಳವಣಿಗೆಯಲ್ಲಿ ಬಹಳ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಸಮಾಜಕ್ಕೆ ಪ್ರಯೋಜನಕಾರಿಯಾಗುವ ಆಲೋಚನೆಗಳು ಮತ್ತು ಆವಿಷ್ಕಾರಗಳ ರಚನೆಯನ್ನು ಸುಲಭಗೊಳಿಸುವುದು ಮತ್ತು ಇನ್‌ಕ್ಯುಬೇಶನ್ ಕಾರ್ಯಕ್ರಮದ ಅಂತ್ಯದ ವೇಳೆಗೆ ಅವುಗಳನ್ನು ವಾಣಿಜ್ಯಿಕವಾಗಿ ಸಿದ್ಧಗೊಳಿಸುವುದು ಉದ್ದೇಶವಾಗಿದೆ ಮತ್ತು ಇದು ಕಾರ್ಯಕ್ರಮ/ಯೋಜನೆಯ ಸಕಾರಾತ್ಮಕ ಫಲಿತಾಂಶದ ಪ್ರಮುಖ ಸೂಚಕವಾಗಿದೆ. ಇನ್‌ಕ್ಯುಬೇಶನ್ ಸೌಲಭ್ಯಗಳ ಪ್ರಾಮುಖ್ಯತೆಯನ್ನು ಪರಿಗಣಿಸಿ, ನಾಲ್ಕು ನೀತಿಗಳು ಇನ್‌ಕ್ಯುಬೇಶನ್ ಕೇಂದ್ರಗಳನ್ನು ಒದಗಿಸುವ ಉದ್ದೇಶವನ್ನು ಹೊಂದಿವೆ.

ತಂತ್ರಜ್ಞಾನ ವ್ಯಾಪಾರ ಇನ್‌ಕ್ಯುಬೇಟರ್‌ಗಳು (ಟೆಕ್ನಾಲಜಿ ಬಿಸ್‌ನೆಸ್ ಇನ್‌ಕ್ಯುಬೇಟರ್ಸ್)

2.1.12. ಸ್ಟಾರ್ಟ್‌ಅಪ್ ನೀತಿ 2015, ಸಂಶೋಧನೆ ಮತ್ತು ಅಭಿವೃದ್ಧಿ (ಆರ್&ಡಿ) ಮತ್ತು ತಂತ್ರಜ್ಞಾನ/ಅವಿಷ್ಕಾರ ಆಧಾರಿತ ಸ್ಟಾರ್ಟ್‌ಅಪ್‌ಗಳು ಅಭಿವೃದ್ಧಿ ಪಡಿಸಿದ ತಂತ್ರಜ್ಞಾನಗಳ ವಾಣಿಜ್ಯೀಕರಣದ ನಡುವೆ ಬಲವಾದ ಕೊಂಡಿಗಳನ್ನು (ಲಿಂಕ್) ಬೆಳೆಸಲು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ತಂತ್ರಜ್ಞಾನ ವ್ಯವಹಾರ ಇನ್‌ಕ್ಯುಬೇಟರ್‌ಗಳ (ಟಿಬಿಐ)[16] ಸ್ಥಾಪನೆಯನ್ನು ಯೋಜಿಸಿತ್ತು. ಸ್ಟಾರ್ಟ್‌ಅಪ್ ನೀತಿಯ ಪ್ರಕಾರ, ಉಪಕರಣಗಳು ಮತ್ತು ಸೌಲಭ್ಯಗಳಿಗಾಗಿ ಆರಂಭಿಕ ಬಂಡವಾಳ ವೆಚ್ಚ ಮತ್ತು ಮೂರು ವರ್ಷಗಳ ಅವಧಿಗೆ ಟಿಬಿಐ ನಿರ್ವಹಣೆಯ ಮರುಕಳಿಸುವ ವೆಚ್ಚಗಳ ಕಡೆಗೆ ಸಹಾಯಧನವನ್ನು ಕರ್ನಾಟಕ ಸರ್ಕಾರ ಒದಗಿಸಬೇಕಿತ್ತು (ಇನ್ನೂ ಎರಡು ವರ್ಷಗಳಿಗೆ ವಿಸ್ತರಿಸಬಹುದು ಮತ್ತು ಈ ಅವಧಿಯ ಅಂತ್ಯಕ್ಕೆ ಅವು ಸ್ವಾವಲಂಬಿಗಳಾಗಬೇಕಿತ್ತು). ಆದರೆ ನಿರ್ಮಿಸಿದ ಜಾಗವನ್ನು ಆತಿಥೇಯ ಸಂಸ್ಥೆಗಳು (ಹೆಚ್‌ಐಗಳು) ಒದಗಿಸಬೇಕಿತ್ತು.

ಸಂಶೋಧನೆ ಮತ್ತು ಅಭಿವೃದ್ಧಿಯಡೆಗೆ ಬಲವಾಗಿ ಗಮನ ಹೊಂದಿರುವುದನ್ನು ಒಂದು ಮಾನದಂಡವಾಗಿ ಪರಿಗಣಿಸಿ ಸಂಸ್ಥೆಗಳಿಂದ ಕಿಟ್ಸ್ ಅರ್ಜಿಗಳನ್ನು ಆಹ್ವಾನಿಸಿ ಆಯ್ದ ಐದು ಅತಿಥೇಯ ಸಂಸ್ಥೆಗಳೊಂದಿಗೆ

[16] ಹೆಚ್‌ಐಗಳು ಸ್ಥಾಪಿಸಬೇಕಿದ್ದ ಟಿಬಿಐಗಳು ಸೊಸೈಟಿಗಳ ಕಾಯ್ದೆಯ ಅಡಿಯಲ್ಲಿ ನೋಂದಣಿಯಾಗಬೇಕಿತ್ತು.

(ಹೋಸ್ಟ್ ಇನ್ಸಿಟ್ಯೂಟ್) ಒಪ್ಪಂದದ ಜ್ಞಾಪನ ಪತ್ರ (ಎಮ್‌ಓಎ)ಗಳಿಗೆ ಸಹಿ ಮಾಡಿದೆ (ಜನವರಿ 2018). ಎಮ್‌ಓಎಯ ಷರತ್ತು 11.1.3 ರ ಪ್ರಕಾರ, ವಾರ್ಷಿಕ ಕಾರ್ಯಾಚರಣೆ ವೆಚ್ಚದ (ಒಪಿಇಎಕ್ಸ್) 70 ಪ್ರತಿಶತವನ್ನು ಕಿಟ್ಸ್ ಭರಿಸುತ್ತದೆ ಮತ್ತು ಆತಿಥೇಯ ಸಂಸ್ಥೆಯು 30 ಪ್ರತಿಶತವನ್ನು ಭರಿಸತಕ್ಕದ್ದು, ವರ್ಷಕ್ಕೆ ಗರಿಷ್ಠ ₹ 50 ಲಕ್ಷಕ್ಕೆ[17] ಒಳಪಟ್ಟಿರುತ್ತದೆ ಮತ್ತು ಹೆಚ್ಚುವರಿಯಿದ್ದರೆ ಹಚ್‌ಐ ಭರಿಸತಕ್ಕದ್ದು. ಎಮ್‌ಓಎ ಕಾರ್ಯಗತಗೊಳಿಸಿದ 120 ದಿನಗಳಲ್ಲಿ (*ಷರತ್ತು* 8.2) ಟಬಿಐಗಳನ್ನು ಕಾರ್ಯಗತಗೊಳಿಸಬೇಕಾಗಿತ್ತು. ಎಮ್‌ಓಎ ಗಳ ಪ್ರಕಾರ ಈ ಕೆಳಗಿನವುಗಳು ಪ್ರಮುಖ ಮೈಲಿಗಲ್ಲುಗಳಾಗಿವೆ (*ಷರತ್ತು* 11.1.4):

- ಪ್ರತಿ ವರ್ಷ ಕನಿಷ್ಠ ಐದು ಸ್ಟಾರ್ಟ್‌ಅಪ್‌ಗಳ ಆಯ್ಕೆ;
- ಪ್ರತಿ ವರ್ಷ ಕನಿಷ್ಠ ಎರಡು ಸ್ಟಾರ್ಟ್‌ಅಪ್‌ಗಳ ಯಶಸ್ವಿ ಇನ್‌ಕ್ಯುಬೇಶನ್ ಮತ್ತು ನಂತರದ ಅಭಿವೃದ್ಧಿ;
- ಕನಿಷ್ಠ ಒಂದು ಹೊಸ ಉತ್ಪನ್ನ, ತಂತ್ರಜ್ಞಾನ ಅಥವಾ ನಾವೀನ್ಯತೆಗಳ ವಾಣಿಜ್ಯೀಕರಣ.

ಎಮ್‌ಓಎ ಮೂರು ವರ್ಷಗಳ ಅವಧಿಯಲ್ಲಿ 75 ಸ್ಟಾರ್ಟಅಪ್‌ಗಳ ದಾಖಲಾತಿ ಮತ್ತು 15 ಹೊಸ ತಂತ್ರಜ್ಞಾನಗಳ ವಾಣಿಜ್ಯೀಕರಣದ ಗುರಿಯನ್ನು ನಿಗದಿಪಡಿಸಿದೆ. ಟಿಬಿಐ ನ ಕಾರ್ಯಕ್ಷಮತೆಯನ್ನು ರಾಜ್ಯ ತಜ್ಞರ ಸಲಹಾ ಸಮಿತಿಯು[18] ಗುಣಾತ್ಮಕ ಮತ್ತು ಪರಿಮಾಣಾತ್ಮಕ ಆಧಾರದ ಮೇಲೆ ಮೇಲ್ವಿಚಾರಣೆ ಮಾಡಬೇಕಿತ್ತು.

ಕಿಟ್ಸ್ ಕ್ಯಾಪೆಕ್ಸ್[19] ಕಡೆಗೆ ₹ 17.22 ಕೋಟಿ ಮತ್ತು ಒಪೆಕ್[20]ನ ಕಡೆಗೆ ₹ 3.15 ಕೋಟಿ ಬಿಡುಗಡೆ ಮಾಡಿದೆ (ಫೆಬ್ರವರಿ 2018 ಮತ್ತು ಮಾರ್ಚ್ 2021). ಅಕ್ಟೋಬರ್ 2020 ರ ಹೊತ್ತಿಗೆ, 42 ಸ್ಟಾರ್ಟ್‌ಅಪ್‌ಗಳು ಇನ್‌ಕ್ಯುಬೇಶನ್‌ಗೆ ದಾಖಲಾಗಿವೆ ಮತ್ತು ಯಾವುದೂ ವಾಣಿಜ್ಯೀಕರಣಗೊಂಡಿಲ್ಲವೆಂದು ವರದಿ ಮಾಡಿದೆ

ರೇಖಾ ಚಿತ್ರ ಸಂಖ್ಯೆ. 2.1.2: ತಂತ್ರಜ್ಞಾನ ವ್ಯಾಪಾರ ಇನ್‌ಕ್ಯುಬೇಟರ್‌ಗಳ ಗುರಿ ಮತ್ತು ಸಾಧನೆಗಳನ್ನು ತೋರಿಸಲಾಗುತ್ತಿದೆ



ಲೆಕ್ಕಪರಿಶೋಧನೆಯ ಪರಿಶೀಲನೆಯು ಈ ಕೆಳಗಿನವುಗಳನ್ನು ತೋರಿಸಿದೆ

[17] ಕಿಟ್ಸ್ ಪಾಲು ₹ 35 ಲಕ್ಷ ಮತ್ತು ಹೆಚ್‌ಐ ಪಾಲು ₹ 15 ಲಕ್ಷ.

[18] ರಾಜ್ಯ ತಜ್ಞರ ಸಲಹಾ ಸಮಿತಿಯನ್ನು ಜನವರಿ 2017ರಲ್ಲಿ ಸ್ಥಾಪಿಸಲಾಗಿತ್ತು. ಸಮಿತಿಯ ಅಧ್ಯಕ್ಷತೆಯನ್ನು ಪ್ರಧಾನ ಕಾರ್ಯದರ್ಶಿ, ಐಟಿ, ಬಿಟಿ ಮತ್ತು ಎಸ್&ಟಿ, ಕರ್ನಾಟಕ ಸರ್ಕಾರ ವಹಿಸಿರುತ್ತಾರೆ ಮತ್ತು ಟಿಬಿಐಗಳನ್ನು ಸ್ಥಾಪಿಸುವ ಸಂಸ್ಥೆಗಳನ್ನು ಪರೀಕ್ಷಿಸಿ ಆಯ್ಕೆ ಮಾಡುವ ಜವಾಬ್ದಾರಿಯನ್ನು ಸಮಿತಿಯು ಹೊಂದಿತ್ತು. ಎಸ್‌ಇಎಸಿ ಟಿಬಿಐಗಳ ಕಾರ್ಯಕ್ಷಮತೆಯನ್ನು ಸಹ ವಿಮರ್ಶಿಸುವ ಜವಾಬ್ದಾರಿ ಹೊಂದಿತ್ತು.

[19] ಕ್ಯಾಪೆಕ್ಸ್ – ಬಂಡವಾಳ ವೆಚ್ಚ.

[20] ಒಪೆಕ್ಸ್ – ಕಾರ್ಯಾಚರಣೆ ವೆಚ್ಚ.

- ಕಾರ್ಯಸಾಧ್ಯವಲ್ಲದ ಉದ್ಯಮಗಳಲ್ಲಿ ಸಂಪನ್ಮೂಲಗಳ ನಿಯೋಜನೆಯನ್ನು ತಪ್ಪಿಸುವುದು ಮುಖ್ಯವಾಗಿದ್ದರೂ ಈ 42 ಸ್ಟಾರ್ಟ್‌ಅಪ್‌ಗಳು ಅಭಿವೃದ್ಧಿಪಡಿಸಿದ ಹೊಸ ಉತ್ಪನ್ನಗಳು/ಆವಿಷ್ಕಾರಗಳು/ತಂತ್ರಜ್ಞಾನಗಳ ವಾಣಿಜ್ಯೀಕರಣದ[21] ಪ್ರಕ್ಷೇಪಗಳನ್ನು ಮಾಡಲಾಗಿಲ್ಲ.

- ಐದನೇ ವರ್ಷದ ಅಂತ್ಯದ ವೇಳೆಗೆ ಟಿಬಿಐಗಳು ಸ್ವಾವಲಂಬಿಯಾಗಬೇಕಿತ್ತು. ಕರ್ನಾಟಕ ಸರ್ಕಾರದ ಅನುದಾನಗಳ ಬೆಂಬಲದ ಅವಧಿ ಪೂರ್ಣಗೊಂಡ ನಂತರ ಟಿಬಿಐಗಳ ಸ್ವಯಂ–ಸುಸ್ಥಿರತೆಯ ಪ್ರಸ್ತಾಪಗಳನ್ನು ಇಲಾಖೆಯು ರೂಪಿಸಿರಲಿಲ್ಲ. ಮೇಲ್ವಿಚಾರಣೆಯು ಪ್ರತಿ ಸ್ಟಾರ್ಟ್‌ಅಪ್‌ನ ಯಶಸ್ವಿ ವಾಣಿಜ್ಯೀಕರಣದ ಕಡೆಗೆ ಆಧಾರಿತವಾಗಿರಬೇಕಿತ್ತಾದರೂ ಅದು ಹಣದ ಬಿಡುಗಡೆಗೆ ಮಾತ್ರ ಸೀಮಿತವಾಗಿತ್ತು.

ಹೀಗಾಗಿ, ಯಾವುದೇ ಇನ್‌ಕ್ಯುಬೇಟೆಡ್ ಸ್ಟಾರ್ಟ್‌ಅಪ್‌ಗಳು ಎಮ್‌ಓಎನಲ್ಲಿ ನಿಗದಿಪಡಿಸಿದ ಗುರಿಗಳ ಪ್ರಕಾರ ವಾಣಿಜ್ಯೀಕರಣಗೊಳ್ಳಲಿಲ್ಲವಾದ್ದರಿಂದ ಐದು ಟಿಬಿಐಗಳ ಸ್ಥಾಪನೆಗೆ ಮಾಡಿದ ₹ 20.37 ಕೋಟಿ ವೆಚ್ಚವು ಬಹುಮಟ್ಟಿಗೆ ಫಲಪ್ರದವಾಗಲಿಲ್ಲ.

ಯೋಜನಾ ಅವಧಿಯೊಳಗೆ ಗುರಿಯನ್ನು ಸಾಧಿಸಲು ಪ್ರಯತ್ನಗಳನ್ನು ಮಾಡಲಾಗುವುದು ಮತ್ತು ಬಾಡಿಗೆಗಳು ಮತ್ತು ಭಾರತ ಸರ್ಕಾರ ಮತ್ತು ಆತಿಥೇಯ ಸಂಸ್ಥೆಯ ಬೆಂಬಲದಿಂದ ಟಿಬಿಐ ಸ್ವಾವಲಂಬಿಯಾಗುತ್ತದೆ ಎಂದು ಸರ್ಕಾರವು ಉತ್ತರಿಸಿದೆ (ಆಗಸ್ಟ್ 2021). 2015–20ರ ನೀತಿಯ ಅವಧಿಯು ಈಗಾಗಲೇ ಕಳೆದು ಹೋಗಿರುವುದರಿಂದ ಮತ್ತು ಸ್ಟಾರ್ಟ್‌ಅಪ್‌ಗಳ ದಾಖಲಾತಿಗಳ ಸಂಖ್ಯೆ ಮತ್ತು ಸ್ಟಾರ್ಟ್‌ಅಪ್‌ಗಳ ವಾಣಿಜ್ಯೀಕರಣದಲ್ಲಿ 'ಶೂನ್ಯ' ಸಾಧನೆಯ ವಿಷಯದಲ್ಲಿ ಟಿಬಿಐಗಳ ಕಾರ್ಯಕ್ಷಮತೆಯಲ್ಲಿ ಗಮನಾರ್ಹ ಕೊರತೆ ಕಂಡುಬಂದಿರುವುದರಿಂದ ಉತ್ತರವು ಸಮರ್ಥನೀಯವಲ್ಲ. ಆದ್ದರಿಂದ, ಸುಸ್ಥಿರತೆಯ ಯೋಜನೆಯು ಭಾರತ ಸರ್ಕಾರ/ಆತಿಥೇಯ ಸಂಸ್ಥೆಗಳ ನಿಧಿಯಿಂದ ಸಹ ಬೆಂಬಲಿತವಾಗಿಲ್ಲ.

ಸ್ಟಾರ್ಟ್‌ಅಪ್ ನೀತಿಯಡಿಯಲ್ಲಿ ಸಾಮಾನ್ಯ ಉಪಕರಣ ಸೌಲಭ್ಯಗಳ (ಕಾಮನ್ ಇನ್ಸ್ಟುಮೆಂಟೇಷನ್ ಫೆಸಿಲಿಟೀಸ್) (ಸಿಐಎಫ್) ಸ್ಥಾಪನೆ

2.1.13. ಸ್ಟಾರ್ಟ್‌ಅಪ್ ನೀತಿ 2015–20 ಉದ್ಯಮ ಸಂಸ್ಥೆಗಳು, ವ್ಯಾಪಾರ ಸಂಘಗಳು, ಚಿಂತಕರ ಚಾವಡಿಗಳು (ಥಿಂಕ್ ಟ್ಯಾಂಕ್‌ಗಳು) ಅಥವಾ ಅಂತಹುದೇ ಲಾಭೋದ್ದೇಶವಿಲ್ಲದ ಸಂಸ್ಥೆಗಳ ಸಹಯೋಗದಲ್ಲಿ ಇನ್‌ಕ್ಯುಬೇಟರ್‌ಗಳ ಸ್ಥಾಪನೆಯನ್ನು ಕಲ್ಪಿಸಿದೆ. ಸರ್ಕಾರವು ಒಂದು ಲಾಭೋದ್ದೇಶವಿಲ್ಲದ ಸಂಸ್ಥೆ ಮೆ. ಐಕೆಪಿ ನಾಲೆಡ್ಜ್ ಪಾರ್ಕ್[22] (ಐಕೆಪಿ), ಸಹಯೋಗದಲ್ಲಿ ₹ 22.68 ಕೋಟಿ[23] ವೆಚ್ಚದಲ್ಲಿ ಯಂತ್ರಾಂಶ (ಹಾರ್ಡ್‌ವೇರ್) ಆಧಾರಿತ ಸ್ಟಾರ್ಟ್‌ಅಪ್‌ಗಳಿಗೆ ಅಗತ್ಯವಾದ ಉಪಕರಣಗಳು ಮತ್ತು ಸಲಕರಣೆಗಳನ್ನು ಹೊಂದಿದ ಐದು[24] ಸಿಐಎಫ್ ಗಳನ್ನು ಸ್ಥಾಪಿಸಲು ಅನುಮೋದನೆ ನೀಡಿದೆ (ಡಿಸೆಂಬರ್ 2016). ಈ ಯೋಜನೆಯು ಕರ್ನಾಟಕ ಸರ್ಕಾರದಿಂದ ಸಂಪೂರ್ಣವಾಗಿ ಹಣಕಾಸನ್ನು ಪಡೆದಿದೆ ಮತ್ತು ಈ ಸಿಐಎಫ್‌ಗಳು ಐದನೇ ವರ್ಷದ ನಂತರ ಇನ್‌ಕ್ಯುಬೇಟಿಗಳಿಂದ ಪಡೆವ ಬಾಡಿಗೆಯಿಂದ ಸ್ವಾವಲಂಬಿಯಾಗುತ್ತವೆ ಎಂದು ನಿರೀಕ್ಷಿಸಲಾಗಿತ್ತು. ಮೆ. ಐಕೆಪಿಯೊಂದಿಗೆ ಮಾಡಿಕೊಂಡ ಎಮ್‌ಓಎ (ಜುಲೈ 2017) ಸಂಬಂಧಿಸಿದ ಕೈಗಾರಿಕೆಗಳಿಗೆ ಸೂಕ್ತವಾದ ಸಲಕರಣೆ ಸೌಲಭ್ಯಗಳನ್ನು ಖರೀದಿ ಮಾಡುವುದನ್ನು ಮತ್ತು ಎಮ್‌ಓಎ ಅಧಿಕಾರಾವಧಿಯಲ್ಲಿ ಸಾಧಿಸಬೇಕಾದ ಮೈಲಿಗಲ್ಲುಗಳ ಪಟ್ಟಿ ಮಾಡುವುದನ್ನು ಸೂಚಿಸಿತ್ತು. ಜುಲೈ 2018 ಮತ್ತು ನವೆಂಬರ್ 2018ರ ನಡುವೆ ನಾಲ್ಕು ಸಿಐಎಫ್‌ಗಳು

[21] ವಾಣಿಜ್ಯ ಯಶಸ್ಸನ್ನು ಸಾಧಿಸಲು ಒಂದು ಹೊಸ ಉತ್ಪನ್ನ ಅಥವಾ ಸೇವೆಯನ್ನು ಮಾರುಕಟ್ಟೆಗೆ ತರುವ ಪ್ರಕ್ರಿಯೆ.

[22] ಐಕೆಪಿ ನಾಲೆಡ್ಜ್ ಪಾರ್ಕ್ (ಐಕೆಪಿ) ಒಂದು ಸೆಕ್ಷನ್ 8 ಕಂಪನಿಯಾಗಿದ್ದು ಲಾಭದ ಉದ್ದೇಶವಿಲ್ಲದ ವಿಜ್ಞಾನ ಪಾರ್ಕ್ ಮತ್ತು ತಂತ್ರಜ್ಞಾನ ವ್ಯಾಪಾರ ಇನ್ಕ್ಯುಬೇಟರ್ ಆಗಿದೆ (ಹೈದರಾಬಾದ್ ಮತ್ತು ಬೆಂಗಳೂರಿನಲ್ಲಿ ಕಾರ್ಯಾಚರಣೆಗಳನ್ನು ಹೊಂದಿದೆ). ಕರ್ನಾಟಕ ಸರ್ಕಾರವು 19 ಡಿಸೆಂಬರ್ 2016ರ ಆದೇಶದ ಮುಖಾಂತರ ₹ 22.68 ಕೋಟಿ ವೆಚ್ಚದಲ್ಲಿ ಐದು ಸಿಐಎಫ್‌ಗಳ ನೇರ ವಹಿಸುವಿಕೆಗೆ ಐಕೆಪಿಗೆ ಐದು ವರ್ಷಗಳಿಗೆ ಕೆಟಿಪಿಪಿ ಕಾಯ್ದೆಯಡಿ 4(ಜಿ) ವಿನಾಯಿತಿ ನೀಡಿತು.

[23] ಕ್ಯಾಪೆಕ್ಸ್ – ₹ 10.00 ಕೋಟಿ ಮತ್ತು ಒಪೆಕ್ಸ್ – ₹ 10.68 ಕೋಟಿ ಮತ್ತು ಹಬ್ ಸಹಾಯ ₹ 2.00 ಕೋಟಿ.

[24] ಜಾಲಹಳ್ಳಿ (ಬೆಂಗಳೂರು), ಮಂಗಳೂರು, ಬೆಳಗಾವಿ, ಮೈಸೂರು ಮತ್ತು ಶಿವಮೊಗ್ಗ.

ಕಾರ್ಯನಿರ್ವಹಿಸುತ್ತಿವೆ ಮತ್ತು ಐದನೇ ಸಿಐಎಫ್ ಶಿವಮೊಗ್ಗದಲ್ಲಿ ಜೂನ್ 2020ರಲ್ಲಿ ಪ್ರಾರಂಭವಾಯಿತು.

ಎಮ್‌ಒಎ ಪ್ರಕಾರ, ಐದನೇ ವರ್ಷದ ಅಂತ್ಯದ ವೇಳೆಗೆ (ಜುಲೈ 2022) ದಾಖಲಾತಿ ಮತ್ತು ಯಶಸ್ವಿ ನಿರ್ಗಮನದ ಸಂಚಿತ ಗುರಿ 55 ಸ್ಟಾರ್ಟ್‌ಅಪ್‌ಗಳಾಗಿತ್ತು. ಮೇ 2020 ರ ಅಂತ್ಯದವರೆಗಿನ ಪ್ರಗತಿ ವರದಿಯ ಪ್ರಕಾರ, ನಾಲ್ಕು ಸಿಐಎಫ್‌ಗಳು ಪ್ರಾರಂಭದಿಂದಲೂ 101 ಸ್ಟಾರ್ಟ್‌ಅಪ್‌ಗಳನ್ನು ನೋಂದಾಯಿಸಿಕೊಂಡಿವೆ ಮತ್ತು 49 ಸ್ಟಾರ್ಟ್‌ಅಪ್‌ಗಳು ಇನ್‌ಕ್ಯುಬೇಶನ್‌ನಲ್ಲಿದ್ದಿದ್ದರಿಂದ, 52 ಸ್ಟಾರ್ಟ್‌ಅಪ್‌ಗಳು ನಿರ್ಗಮಿಸಿವೆ ಎಂದು ತಿಳಿಯುತ್ತದೆ.

ರೇಖಾ ಚಿತ್ರ ಸಂಖ್ಯೆ. 2.1.3: ಸಿಐಎಫ್ ಕೇಂದ್ರಗಳ ಗುರಿ ಮತ್ತು ಸಾಧನೆಗಳನ್ನು ತೋರಿಸಲಾಗುತ್ತಿದೆ



ಲೆಕ್ಕಪರಿಶೋಧನೆಯ ಪರಿಶೀಲನೆಯು ಈ ಕೆಳಗಿನವುಗಳನ್ನು ಬಹಿರಂಗಪಡಿಸಿದೆ:

- 52 ಸ್ಟಾರ್ಟ್‌ಅಪ್‌ಗಳು ಯಶಸ್ವಿಯಾಗಿ ನಿರ್ಗಮಿಸಿವೆಯೇ ಎಂಬುದು ಸ್ಪಷ್ಟವಾಗಿಲ್ಲ ಏಕೆಂದರೆ ಈ ಸ್ಟಾರ್ಟ್‌ಅಪ್‌ಗಳಿಂದ ನಿಧಿಯನ್ನು ಸಂಗ್ರಹಿಸುವ ಕುರಿತು ಲೆಕ್ಕಪರಿಶೋಧನೆಗೆ ಯಾವುದೇ ವಿವರಗಳು ಲಭ್ಯವಾಗಲಿಲ್ಲ. ಆದ್ದರಿಂದ ಈ ಸ್ಟಾರ್ಟ್‌ಅಪ್‌ಗಳು ಯಶಸ್ವಿಯಾಗಿ ನಿರ್ಗಮಿಸಿಲ್ಲ ಎಂದು ಅರ್ಥೈಸಬಹುದು. ವಿಫಲವಾದ ಪ್ರಕರಣಗಳಿಗೆ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳುವ ಸಲುವಾಗಿ ಕಾರಣಗಳನ್ನು ಕಂಡುಹಿಡಿಯಲು ಕಿಟ್ಸ್ ಯಾವುದೇ ವಿಶ್ಲೇಷಣೆಯನ್ನು ನಡೆಸಲಿಲ್ಲ;

- ಲೆಕ್ಕಪರಿಶೋಧನೆಗೆ ಒದಗಿಸಲಾದ 98 ದಾಖಲಾತಿಗಳಿಗೆ ಸಂಬಂಧಿಸಿದಂತೆ ದತ್ತಾಂಶದಿಂದ ನೋಡಿದಂತೆ ಹಾರ್ಡ್‌ವೇರ್-ಆಧಾರಿತವಲ್ಲದ ಸ್ಟಾರ್ಟ್‌ಅಪ್‌ಗಳು (60 ಪ್ರಕರಣಗಳು) ಸಹ ದಾಖಲಾಗಿವೆ. ಮೈಸೂರಿನಲ್ಲಿ ಸಿಐಎಫ್‌ನ ತಪಾಸಣೆಯ ನಂತರ ವ್ಯವಸ್ಥಾಪಕ ನಿರ್ದೇಶಕರು, ಕಿಟ್ಸ್ ಕಡಿಮೆ ಉಪಕರಣಗಳ ಬಳಕೆಯಿಂದಾಗಿ ಸಿಐಎಫ್‌ನ ಮೂಲ ಕಲ್ಪನೆಯು ಸಾಕಾರಗೊಂಡಿಲ್ಲ, ಏಕೆಂದರೆ ದಾಖಲಾದ ಹೆಚ್ಚಿನ ಸ್ಟಾರ್ಟ್‌ಅಪ್‌ಗಳು ಹಾರ್ಡ್‌ವೇರ್-ಆಧಾರಿತವಲ್ಲದವು ಮತ್ತು ಸಿಐಎಫ್ ಅನ್ನು ಕೆಲಸದ ಸ್ಥಳಕ್ಕೆ ಪೂರಕವಾಗಿ ಹೆಚ್ಚು ಬಳಸಿದವು ಎಂದು ಅಭಿಪ್ರಾಯಪಟ್ಟಿದ್ದಾರೆ (ಸೆಪ್ಟೆಂಬರ್ 2019). ಹಾರ್ಡ್‌ವೇರ್-ಆಧಾರಿತ ಸ್ಟಾರ್ಟ್‌ಅಪ್‌ಗಳಿಗೆ ಮಾತ್ರ ದಾಖಲಾತಿಯ ಅವಕಾಶವಿದೆ ಎಂದು ಎಮ್‌ಒಎ ನಿರ್ದಿಷ್ಟವಾಗಿ ಷರತ್ತು ವಿಧಿಸದ ಕಾರಣ, ಇದು ಹಾರ್ಡ್‌ವೇರ್-ಆಧಾರಿತವಲ್ಲದ ಸ್ಟಾರ್ಟ್‌ಅಪ್‌ಗಳ ಪ್ರವೇಶಕ್ಕೂ ಕಾರಣವಾಯಿತು. ಇದು ಕ್ಷೇತ್ರ-ನಿರ್ದಿಷ್ಟ ಸಿಐಎಫ್ ಅನ್ನು ಸ್ಥಾಪಿಸುವ ಉದ್ದೇಶವನ್ನು ಸೋಲಿಸಿತು ಮಾತ್ರವಲ್ಲದೆ ₹ 13.26 ಕೋಟಿ ಹೂಡಿಕೆಯನ್ನು ನಿರ್ದಿಷ್ಟ ಉದ್ದೇಶಕ್ಕಾಗಿ ಸಂಪೂರ್ಣವಾಗಿ ಬಳಸಲಾಗಲಿಲ್ಲ. ಆಯ್ಕೆಯ ಮಾನದಂಡಗಳನ್ನು ರೂಪಿಸಲು ರಚಿಸಬೇಕಾಗಿದ್ದ ಸಲಹಾ ಸಮಿತಿಗೆ (ಹಿಂದಿನ ಕಾರ್ಯಕಾರಿ ಸಮಿತಿ) ಕಿಟ್ಸ್ ಯಾವುದೇ ಕ್ರಮಗಳನ್ನು ಸೂಚಿಸಲಿಲ್ಲ, ಇದರಿಂದ ಅನರ್ಹ ದಾಖಲಾತಿಗಳಿಗೆ ಕಾರಣವಾಯಿತು;

- ಬಿಡುಗಡೆಯಾದ ₹ 13.26 ಕೋಟಿಗಳಲ್ಲಿ, ಐಕೆಪಿಯು ಐಕೆಪಿ ಯುಎಸ್ ನೆರವು, ಐಕೆಪಿ ಬಿಗ್ ಪ್ರಾಜೆಕ್ಟ್, ಐಕೆಪಿ ಬಯೋ ನೆಸ್ಟ್ ಮುಂತಾದ ಇತರ ಯೋಜನೆಗಳಿಗೆ ₹ 3.52 ಕೋಟಿಯನ್ನು

ಮಾರ್ಗಾಂತರ ಗೊಳಿಸಿತು ಮತ್ತು ಇವುಗಳನ್ನು ಕರ್ನಾಟಕ ಸರ್ಕಾರ ಪ್ರಾಯೋಜಿಸಿರಲಿಲ್ಲ. ಆದರೆ, ಈ ರೀತಿಯ ಮಾರ್ಗಾಂತರಗಳ ಬಗ್ಗೆ ತಿಳಿದಿದ್ದರೂ ಕಿಟ್ಸ್ ಯಾವುದೇ ಕ್ರಮ ಕೈಗೊಂಡಿಲ್ಲ.

ಸರ್ಕಾರವು ಈ ರೀತಿ ಉತ್ತರಿಸಿದೆ (ಆಗಸ್ಟ್ 2021):

- ಎಮ್ಒಎ (ಷರತ್ತುಗಳು 3.1 ಮತ್ತು 3.2.3(ಎಫ್)) ಯನ್ನು ಹಾರ್ಡ್‌ವೇರ್ ಸ್ಟಾರ್ಟ್‌ಅಪ್‌ಗಳಿಗೆ ಒತ್ತು ನೀಡಲು ವಿನ್ಯಾಸಗೊಳಿಸಲಾಗಿತ್ತಾದರೂ ಸಿಐಎಫ್ ಗಳನ್ನು ಕಾರ್ಯಸಾಧ್ಯವಾಗುವಂತೆ ಮಾಡಲು ಇತರ ಡೊಮೇನ್‌ಗಳು ಮತ್ತು ಕ್ಷೇತ್ರಗಳ ಸ್ಟಾರ್ಟ್‌ಅಪ್‌ಗಳಿಗೆ ಕೂಡ ಅವಕಾಶ ಕಲ್ಪಿಸಲಾಗಿದೆ. ಸಿಐಎಫ್ ಸೌಲಭ್ಯಗಳ ಗರಿಷ್ಠ ಬಳಕೆಗಾಗಿ ಇಲಾಖೆಯು ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯೊಂದಿಗೆ ಮತ್ತು ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಜಿಟಿಟಿಸಿ) ದೊಂದಿಗೆ ಸಹ ತೊಡಗಿಸಿಕೊಳ್ಳಲಾಗುವುದು.

- ಭವಿಷ್ಯದ ವೆಚ್ಚವನ್ನು ಮೀಸಲಾದ ಬ್ಯಾಂಕ್ ಖಾತೆಯಿಂದ ಮಾತ್ರ ಭರಿಸಬೇಕು ಎಂದು ಮೆ. ಐಕೆಪಿಗೆ ಕಿಟ್ಸ್ ಸೂಚನೆ ನೀಡಿತ್ತು.

- ಇತ್ತೀಚಿನ ಪ್ರತಿಕ್ರಿಯೆಯ ಪ್ರಕಾರ, 52 ಸ್ಟಾರ್ಟ್‌ಅಪ್‌ಗಳು ನಿರ್ಗಮಿಸಿವೆ, 30 ಕಾರ್ಯನಿರ್ವಹಿಸುತ್ತಿವೆ ಮತ್ತು ಉಳಿದವುಗಳು ಇನ್ನೂ ಪರೀಕ್ಷೆ ಅಥವಾ ಅಭಿವೃದ್ಧಿ ಹಂತದಲ್ಲಿರುವ ಸಂಭಾವ್ಯ ಸ್ಟಾರ್ಟ್‌ಅಪ್‌ಗಳಾಗಿವೆ.

ಸರ್ಕಾರದ ಉತ್ತರವು ಸಮರ್ಥನೀಯವಲ್ಲ ಏಕೆಂದರೆ ಉತ್ತರವು ಹಾರ್ಡ್‌ವೇರ್ ಅಲ್ಲದ ಸ್ಟಾರ್ಟ್‌ಅಪ್‌ಗಳಿಗೆ ಅವಕಾಶ ಕಲ್ಪಿಸಲು ಯಾವುದೇ ಸ್ಪಷ್ಟವಾದ ನಿಬಂಧನೆಯನ್ನು ಒದಗಿಸಿಲ್ಲ. ಇದಲ್ಲದೆ, 52 ಸ್ಟಾರ್ಟಅಪ್‌ಗಳ ವಾಣಿಜ್ಯೀಕರಣದ ಸ್ಥಿತಿಯು ಸಿಐಎಫ್ ಗಳ ಯಶಸ್ಸನ್ನು ಖಚಿತಪಡಿಸಿಕೊಳ್ಳಲು ಅವರ ಉತ್ಪನ್ನಗಳ ವಿವರಗಳನ್ನು ಒದಗಿಸದೆ ಉಳಿದಿದೆ.

ಹುಬ್ಬಳ್ಳಿಯಲ್ಲಿ ಎರಡು ಒಂದೇ ರೀತಿಯ ಎಸ್‌ಡಿಎಮ್ ಸೌಲಭ್ಯಗಳ ಸ್ಥಾಪನೆ

2.1.14.1. ಹುಬ್ಬಳ್ಳಿಯ ದೇಶಪಾಂಡೆ ಫೌಂಡೇಶನ್‌ನಲ್ಲಿ (ಸಂಸ್ಥೆಯು ಪ್ಲಗ್ ಮತ್ತು ಪ್ಲೇ ಸೌಲಭ್ಯದೊಂದಿಗೆ 5000 ಚದರ ಅಡಿ ಕಚೇರಿ ಸ್ಥಳವನ್ನು ಒದಗಿಸಿದೆ) ₹ 4.00 ಕೋಟಿ[25] ವೆಚ್ಚವನ್ನು ಒಳಗೊಂಡಿರುವ ಸಾಮಾನ್ಯ ಸೌಲಭ್ಯ ಕೇಂದ್ರದೊಂದಿಗೆ ಎಂಎಸ್ಎಂಇಗಳಿಗೆ ಅನುಕೂಲವಾಗುವಂತೆ ಇಎಸ್‌ಡಿಎಮ್ ಕ್ಲಸ್ಟರ್ ಸ್ಥಾಪನೆಗೆ ಕಿಟ್ಸ್ ಮಾಡಿದ ಪ್ರಸ್ತಾವನೆಯನ್ನು ಕರ್ನಾಟಕ ಸರ್ಕಾರವು ಅನುಮೋದಿಸಿದೆ (ಜುಲೈ 2017). ಕಂದುಭೂಮಿ (ಬ್ರೌನ್‌ಫೀಲ್ಡ್) ಇಎಸ್‌ಡಿಎಮ್ ಕ್ಲಸ್ಟರ್ ಸ್ಥಾಪನೆಗೆ ಅನುಷ್ಠಾನದ ಪಾಲುದಾರರಾದ ಇಂಡಿಯಾ ಎಲೆಕ್ಟ್ರಾನಿಕ್ಸ್ ಮತ್ತು ಸೆಮಿಕಂಡಕ್ಟರ್ ಅಸೋಸಿಯೇಷನ್ (ಐಇಎಸ್ಎ)[26] ನೊಂದಿಗೆ ಮೂರು ವರ್ಷಗಳ ಅವಧಿಗೆ ಎಮ್ಒಎ ಗೆ ಸಹಿ ಹಾಕಲಾಯಿತು (ಜುಲೈ 2017). 5000 ಚದರ ಅಡಿಗಳಲ್ಲಿ, 1000 ಚದರ ಅಡಿಗಳು ಮೂಲಮಾದರಿಗಳ ಅಭಿವೃದ್ಧಿ ಮಾಡಲು ಸಾಮಾನ್ಯ ಉಪಕರಣ ಸೌಲಭ್ಯಗಳಿಗಾಗಿ ಮತ್ತು ಉಳಿದ 4000 ಚದರ ಅಡಿ ಜಾಗವು 75–100 ಕಾರ್ಯಸ್ಥಳಗಳಿಗೆ ಇನ್‌ಕ್ಯುಬೇಶನ್ ನೀಡುವ ಉದ್ದೇಶಕ್ಕಾಗಿ ಇರಿಸಲಾಗಿತ್ತು. ₹ 4.00 ಕೋಟಿ ಅನುದಾನವನ್ನು ಸಂಪೂರ್ಣವಾಗಿ ಬಿಡುಗಡೆ ಮಾಡಲಾಗಿತ್ತು (ಆಗಸ್ಟ್ 2017 ಮತ್ತು ಜುಲೈ 2018) ಮತ್ತು ಸೌಲಭ್ಯವು ಜುಲೈ 2018 ರಲ್ಲಿ ಪೂರ್ಣಗೊಂಡಿದೆ ಎಂದು ವರದಿಯಾಗಿತ್ತು.

---

[25] ಕ್ಯಾಪೆಕ್ಸ್ – ₹ 3.40 ಕೋಟಿ ಮತ್ತು ಒಪೆಕ್ಸ್ – ₹ 0.60 ಕೋಟಿ.

[26] ಐಇಎಸ್ಎ ಭಾರತದ ಇಎಸ್‌ಡಿಎಮ್ ಪರಿಸರ ವ್ಯವಸ್ಥೆಯ ಅಭಿವೃದ್ಧಿಗಾಗಿ ವಿವಿಧ ಮಟ್ಟದಲ್ಲಿ ಸರ್ಕಾರದ ಜೊತೆ ಕೆಲಸ ಮಾಡುವ ಒಂದು ಕೈಗಾರಿಕಾ ವ್ಯಾಪಾರ ಸಂಸ್ಥೆಯಾಗಿದೆ.

ಎಮ್‌ಒಎ ಪ್ರಕಾರ, ಮೊದಲ ವರ್ಷದ ಕಾರ್ಯಾಚರಣೆಯ ವೆಚ್ಚಗಳನ್ನು (₹ 60 ಲಕ್ಷ) ಕಿಟ್ಸ್ ಬಿಡುಗಡೆ ಮಾಡಬೇಕಾಗಿತ್ತು ಮತ್ತು ಎರಡನೇ ವರ್ಷದಿಂದ ಪಾವತಿ ಮತ್ತು ಬಳಕೆಯ ಮಾದರಿಯಿಂದ ಉತ್ಪತ್ತಿಯಾಗುವ ಆದಾಯದಿಂದ ಕೇಂದ್ರವು ಸ್ವಾವಲಂಬಿಯಾಗಬೇಕಿತ್ತು.

ಯೋಜನೆಯ ಅವಧಿಯ ಕೊನೆಯಲ್ಲಿ (ಜುಲೈ 2020), 35 ಕ್ಕೂ ಹೆಚ್ಚು ಸ್ಟಾರ್ಟ್‌ಅಪ್‌ಗಳು ಮತ್ತು ಎಮ್‌ಎಸ್‌ಎಮ್‌ಇಗಳು ಸೌಲಭ್ಯವನ್ನು ಬಳಸುತ್ತಿವೆ ಎಂದು ಹೇಳಲಾಗಿದೆ. ದೇಶಪಾಂಡೆ ಫೌಂಡೇಶನ್ ಇಎಸ್‌ಡಿಎಂ ಕೇಂದ್ರವನ್ನು ಸ್ವಾವಲಂಬಿಯಾಗಿಸಲು ಇನ್ನೂ ಒಂದು ವರ್ಷದವರೆಗೆ ಕಾರ್ಯಾಚರಣೆಯ ವೆಚ್ಚಗಳಿಗಾಗಿ ಸಹಾಯವನ್ನು ಕೋರಿತಾದರೂ (ಆಗಸ್ಟ್ 2020) ಯೋಜನೆಯ ಅವಧಿ ಮುಗಿದಿದೆ ಎಂಬ ಕಾರಣಕ್ಕಾಗಿ ವಿನಂತಿಯನ್ನು ಪರಿಗಣಿಸಲಾಗಿಲ್ಲ. ಯೋಜನೆಯ ಅನುಮೋದನೆಯನ್ನು ಪಡೆಯುವ ಮೊದಲು ಬೇಡಿಕೆಯ ಸಮೀಕ್ಷೆ ಅಥವಾ ಇಎಸ್‌ಡಿಎಮ್‌ಗಾಗಿ ಹಣಕಾಸಿನ ಕಾರ್ಯಸಾಧ್ಯತೆಯ ಪರಿಶೀಲನೆಯನ್ನು ನಡೆಸಲಾಗಿಲ್ಲ ಎಂದು ಲೆಕ್ಕಪರಿಶೋಧನೆಯ ಪರಿಶೀಲನೆಯು ಬಹಿರಂಗಪಡಿಸಿತು. ಆದ್ದರಿಂದ ಕಳಪೆ ಪ್ರತಿಕ್ರಿಯೆಯಿಂದಾಗಿ ಇಎಸ್‌ಡಿಎಮ್ ಕೇಂದ್ರದ ಸಮರ್ಥನೀಯ ಕಾರ್ಯಾಚರಣೆಗಳು ಅನುಮಾನಾಸ್ಪದವಾಗಿವೆ.

ಉತ್ತರದಲ್ಲಿ ಸೌಲಭ್ಯಗಳನ್ನು ಬಳಸಲು ಸುತ್ತಮುತ್ತಲಿನ ಪ್ರದೇಶದ ಇಎಸ್‌ಡಿಎಮ್ ಉದ್ಯಮಿಗಳು ಮತ್ತು ಎಮ್‌ಎಸ್‌ಎಮ್‌ಇಗಳನ್ನು ಬೆಂಬಲಿಸುವುದು ಉದ್ದೇಶವಾಗಿದೆ ಎಂದು ತಿಳಿಸಲಾಯಿತು. ಕೇಂದ್ರವು ಕೇವಲ 10 ಸ್ಟಾರ್ಟ್‌ಅಪ್‌ಗಳಿಗೆ (ಜುಲೈ 2018 ರಿಂದ ಜೂನ್ 2020) ಇನ್‌ಕ್ಯುಬೇಶನ್ ಕೊಡಲು ಸಾಧ್ಯವಾಯಿತು ಮತ್ತು ಕೇವಲ 22 ಇತರ ಸ್ಟಾರ್ಟ್‌ಅಪ್‌ಗಳು ಯೋಜನೆಯ ಅವಧಿಯೊಳಗೆ ಸೌಲಭ್ಯವನ್ನು ಬಳಸಿದ್ದರಿಂದ ಉತ್ತರವು ಸಮರ್ಥನೀಯವಲ್ಲ.

2.1.14.2. ಇನ್ನೊಂದು ಪ್ರಕರಣದಲ್ಲಿ, ಹುಬ್ಬಳ್ಳಿಯ ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ₹ 4.00 ಕೋಟಿ ಅಂದಾಜು ವೆಚ್ಚದಲ್ಲಿ ಇಎಸ್‌ಡಿಎಮ್ ಚಿಪ್ ವಿನ್ಯಾಸ ಪರಿಸರ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ ಕರ್ನಾಟಕ ಸರ್ಕಾರ ಏಕಕಾಲದಲ್ಲಿ ಅತಿ ದೊಡ್ಡ ಪ್ರಮಾಣದ ಏಕೀಕರಣ (ವಿಎಲ್‌ಎಸ್‌ಐ)[27] ಇನ್‌ಕ್ಯುಬೇಶನ್ ಸೆಂಟರ್ (ಐಸಿ) ಸ್ಥಾಪನೆಗೆ ಅನುಮೋದನೆ ನೀಡಿದೆ(ಜುಲೈ 2017). ಅದರಲ್ಲಿ ₹ 3.20 ಕೋಟಿ ಬಿಡುಗಡೆಯಾಗಿದೆ (ಸೆಪ್ಟೆಂಬರ್ 2017 ಮತ್ತು ನವೆಂಬರ್ 2018). ಡಿಪಿಆರ್ ಅನ್ನು ಸಿದ್ಧಪಡಿಸಿದ ಐಇಎಸ್‌ಎ ಯನ್ನು ಅನುಷ್ಠಾನದ ಪಾಲುದಾರರನ್ನಾಗಿ ಮಾಡಲಾಯಿತು. 10 ರಿಂದ 15 ವಿಎಲ್‌ಎಸ್‌ಐ/ ಇಎಸ್‌ಡಿಎಮ್ ಸ್ಟಾರ್ಟ್‌ಅಪ್‌ಗಳನ್ನು ದಾಖಲಿಸುವುದು ಮತ್ತು ಮೂರು ವರ್ಷಗಳ ಅವಧಿಯಲ್ಲಿ ಐದು ಅಥವಾ ಅದಕ್ಕಿಂತ ಹೆಚ್ಚಿನ ಸ್ಟಾರ್ಟ್‌ಅಪ್‌ಗಳ ಯಶಸ್ವಿ ನಿರ್ಗಮನವು ಗುರಿಯಾಗಿತ್ತು.

ಅಕ್ಟೋಬರ್ 2020 ರ ಅಂತ್ಯದ ವೇಳೆಗೆ ಕೇಂದ್ರವು ₹ 1.54 ಕೋಟಿಯನ್ನು ಮಾತ್ರ ಬಳಸಿಕೊಳ್ಳಲು ಸಾಧ್ಯವಾಯಿತು ಎಂದು ಲೆಕ್ಕಪರಿಶೋಧನೆಯ ಪರಿಶೀಲನೆಯು ಬಹಿರಂಗಪಡಿಸಿತು, ಅದರಲ್ಲಿ ₹ 0.33 ಕೋಟಿ ಕಾರ್ಯಾಚರಣೆಯ ವೆಚ್ಚವಾಗಿತ್ತು. 10–15 ದಾಖಲಾತಿಗಳ ಗುರಿಯ ಎದುರಾಗಿ ಕೇವಲ ಆರು ಸ್ಟಾರ್ಟ್‌ಅಪ್‌ಗಳನ್ನು ನೋಂದಾಯಿಸಿಕೊಳ್ಳಲಷ್ಟೆ ಸಾಧ್ಯವಾಯಿತು ಮತ್ತು ಯಾವೊಂದೂ ಯಶಸ್ವಿಯಾಗಿ ನಿರ್ಗಮಿಸಲಿಲ್ಲ (ಮಾರ್ಚ್ 2020). ಹುಬ್ಬಳ್ಳಿಯ ದೇಶಪಾಂಡೆ ಫೌಂಡೇಶನ್‌ನಲ್ಲಿ ಇದೇ ರೀತಿಯ ಸೌಲಭ್ಯ ಲಭ್ಯವಿರುವುದರಿಂದ ಸೌಲಭ್ಯಗಳ ಬಳಕೆಯಲ್ಲಿ ಕೊರತೆಗೆ ಕಾರಣವಾಗಿದೆ. ಹುಬ್ಬಳ್ಳಿಯ ದೇಶಪಾಂಡೆ ಫೌಂಡೇಶನ್‌ನಲ್ಲಿ ಆಗಲೇ ಲಭ್ಯವಿದ್ದ ಇನ್‌ಕ್ಯುಬೇಶನ್ ಮತ್ತು ಪ್ರಯೋಗಾಲಯ ಸೌಲಭ್ಯಗಳನ್ನು ಡಿಪಿಆರ್ ನಿರ್ಲಕ್ಷಿಸಿದ್ದರಿಂದ ಸೌಲಭ್ಯವು ಮತ್ತೊಮ್ಮೆ ಸೃಷ್ಟಿಸಿದಂತಾಗಿದ್ದು, ಅದನ್ನು ತಪ್ಪಿಸಬಹುದಾಗಿತ್ತು.

ಡಿಪಿಆರ್ ಸಲ್ಲಿಕೆ ಸಮಯದಲ್ಲಿ, ದೇಶಪಾಂಡೆ ಫೌಂಡೇಶನ್‌ನ ಹೊಸ ಸೌಲಭ್ಯವು ಅಸ್ತಿತ್ವದಲ್ಲಿರಲಿಲ್ಲ ಎಂದು ಸರ್ಕಾರವು ಉತ್ತರಿಸಿದೆ(ಆಗಸ್ಟ್ 2021). ಜುಲೈ 2017 ರ ಅವಧಿಯಲ್ಲಿ ಎರಡೂ ಕೇಂದ್ರಗಳನ್ನು

[27] ಅತಿ ದೊಡ್ಡ ಪ್ರಮಾಣದ ಏಕೀಕರಣ (ವಿಎಲ್‌ಎಸ್‌ಐ) ಎನ್ನುವುದು ದಶಲಕ್ಷಾಂತರ (ಮಿಲಿಯನ್ಸ್) ಎಮ್‌ಒಎಸ್ (ಮೆಟಲ್ ಆಕ್ಸೈಡ್ ಸಿಲಿಕಾನ್) ಟ್ರಾನ್ಸಿಸ್ಟರ್‌ಗಳನ್ನು ಒಂದೇ ಚಿಪ್‌ನಲ್ಲಿ ಸಂಯೋಜಿಸುವ ಮೂಲಕ ಸಮಗ್ರ ಸರ್ಕ್ಯೂಟ್ ಅನ್ನು ರಚಿಸುವ ಪ್ರಕ್ರಿಯೆಯಾಗಿದ್ದು, ಸಂಕೀರ್ಣವಾದ ಸೆಮಿಕಂಡಕ್ಟರ್ ಮತ್ತು ದೂರಸಂಪರ್ಕ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಲು ಅನುವು ಮಾಡಿಕೊಡುತ್ತದೆ.

ಏಕಕಾಲದಲ್ಲಿ ಕರ್ನಾಟಕ ಸರ್ಕಾರವು ಅನುಮೋದಿಸಿದ್ದರಿಂದ ಮತ್ತು ಡಿಎಫ್‌ನ ಪ್ರಸ್ತಾವನೆಯು ಅದಾಗಲೇ ಇಲಾಖೆಗೆ ತಿಳಿದಿದ್ದ ಕಾರಣ ಉತ್ತರವು ಸಮರ್ಥನೀಯವಲ್ಲ.

ಮೂಲಸೌಕರ್ಯ ಸೌಲಭ್ಯಗಳು

2.1.15. ಹಾರ್ಡ್‌ವೇರ್ ಆಧಾರಿತ ಎಮ್‌ಎಸ್‌ಎಮ್‌ಇ ಘಟಕಗಳಿಗೆ ಸಹಾಯ ಮಾಡಲು ಪರೀಕ್ಷಾ ಸಾಧನಗಳೊಂದಿಗೆ ಕೇಂದ್ರಗಳನ್ನು ಸಜ್ಜುಗೊಳಿಸಲು ಬೆಂಗಳೂರಿನ ಹೊರಗಿನ ಸ್ಥಳಗಳಲ್ಲಿ ಸಿಎಫ್‌ಸಿಗಳು, ಇಎಸ್‌ಡಿಎಮ್ ಕ್ಲಸ್ಟರ್, ಇತ್ಯಾದಿಗಳಂತಹ ತೊಡಗುವಿಕೆಗಳ ಅನುಷ್ಠಾನವನ್ನು ಕಿಟ್ಸ್ ಗೆ ವಹಿಸಲಾಗಿತ್ತು,

ಸಾಮಾನ್ಯ ಸೌಲಭ್ಯಗಳ ಕೇಂದ್ರಗಳ ಸ್ಥಾಪನೆ

2.1.15.1. 30 ಎಮ್‌ಎಸ್‌ಎಮ್‌ಇ ಘಟಕಗಳಿಗೆ ಅನುಕೂಲವಾಗುವಂತೆ ಮೈಸೂರಿನಲ್ಲಿ ₹ 29.53 ಕೋಟಿ ಅಂದಾಜು ವೆಚ್ಚದ (ಭಾರತ ಸರ್ಕಾರ – ₹ 21.31 ಕೋಟಿ, ಕರ್ನಾಟಕ ಸರ್ಕಾರ – ₹ 3.49 ಕೋಟಿ ಮತ್ತು ಏಳು ಕಂಪನಿಗಳನ್ನು ಒಳಗೊಂಡಿರುವ ವಿಶೇಷ ಉದ್ದೇಶ ವಾಹಕ (ಎಸ್‌ಪಿವಿ) – ₹ 4.73 ಕೋಟಿ) ಕಂದು ಭೂಮಿ (ಬ್ರೌನ್‌ಫೀಲ್ಡ್) ಯೋಜನೆಯನ್ನು ಸ್ಥಾಪಿಸಲು ಪ್ರಸ್ತಾಪಿಸಲಾಗಿತ್ತು. ಸೆಪ್ಟೆಂಬರ್ 2016 ರಲ್ಲಿ ಪೂರ್ಣಗೊಳ್ಳುವ ಮೂಲ ದಿನಾಂಕದ ಎದುರಾಗಿ ಪೂರ್ಣಗೊಳ್ಳುವ ಸನಿಹದಲ್ಲಿದೆ (ಆಗಸ್ಟ್ 2021 ರ ಹೊತ್ತಿಗೆ ನಿರೀಕ್ಷಿಸಲಾಗಿದೆ) ಎಂದು ವರದಿಯಾಗಿದೆ. ವಿಳಂಬವು ವೆಚ್ಚವನ್ನು ಹೆಚ್ಚಿಸಲು ಕಾರಣವಾಯಿತು, ಪರಿಷ್ಕೃತ ವೆಚ್ಚವನ್ನು ₹ 48.53 ಕೋಟಿಗೆ ನಿಗದಿಪಡಿಸಲಾಗಿದ್ದರೆ (ಭಾರತ ಸರ್ಕಾರ – ₹ 32.31 ಕೋಟಿ, ಕರ್ನಾಟಕ ಸರ್ಕಾರ – ₹ 8.49 ಕೋಟಿ ಮತ್ತು ಏಳು ಕಂಪನಿಗಳನ್ನು ಒಳಗೊಂಡ ಎಸ್‌ಪಿವಿ – ₹ 7.73 ಕೋಟಿ) ಬಿಡುಗಡೆಯಾದ ಅನುದಾನ ₹ 31.92 ಕೋಟಿಯಾಗಿತ್ತು[28].

ಲೆಕ್ಕಪರಿಶೋಧನೆಯ ಪರಿಶೀಲನೆಯು ಈ ಕೆಳಗಿನವುಗಳನ್ನು ಬಹಿರಂಗಪಡಿಸಿದೆ:

- ಭಾರತ ಸರ್ಕಾರದ ಮಾರ್ಗಸೂಚಿಗಳಲ್ಲಿ (ಏಪ್ರಿಲ್ 2013) ಕಲ್ಪಿಸಿದಂತೆ ಯೋಜನೆಯ ಕೊಡುಗೆಯ ಪಾಲನ್ನು ಪೂರೈಸಲು ಉದ್ಯಮ ಪಾಲುದಾರರ ಅಸಮರ್ಥತೆ, ಎಸ್ಕ್ರೊ ಖಾತೆಯನ್ನು ತೆರೆಯುವಲ್ಲಿ ವಿಳಂಬ, ಬ್ಯಾಂಕ್ ಗ್ಯಾರಂಟಿ ಒದಗಿಸುವುದರಲ್ಲಿ ವಿಳಂಬ, ಇತ್ಯಾದಿಗಳು ವಿಳಂಬಕ್ಕೆ ಮುಖ್ಯವಾಗಿ ಕಾರಣವಾಗಿವೆ.

- ಯೋಜನೆಯನ್ನು ಪೂರ್ಣಗೊಳಿಸಲು ₹ 16.61 ಕೋಟಿ ಕೊರತೆಯಿದೆ ಮತ್ತು ಅನುದಾನ ಬಿಡುಗಡೆ ಬಾಕಿಯಿದೆ (ಆಗಸ್ಟ್ 2021). ಉದ್ದೇಶಿತ ಪ್ರಯೋಜನಗಳನ್ನು ಸಾಧಿಸಲು ಯೋಜನಾ ನಿರ್ವಹಣೆಯಲ್ಲಿ ನಿರ್ಣಾಯಕ ಅಂಶವಾದ ಯೋಜನೆಯ ಪೂರ್ಣಗೊಳಿಸುವಿಕೆಯ ಅವಧಿಯನ್ನು ನಿಗದಿಪಡಿಸಲಾಗಿಲ್ಲ.

ಹೀಗಾಗಿ, ಆರು ವರ್ಷಗಳ ಹಿಂದೆ ಮಂಜೂರಾಗಿದ್ದರೂ ಇಎಸ್‌ಡಿಎಮ್ ಸೌಲಭ್ಯವು ಫಲಪ್ರದವಾಗಲಿಲ್ಲ (ಆಗಸ್ಟ್ 2021), ಇದು ಅಪೂರ್ಣ ಕಾಮಗಾರಿಯಲ್ಲಿ ₹ 31.92 ಕೋಟಿ ಹಣಕಾಸನ್ನು ನಿರ್ಬಂದಿಸುದಕ್ಕೆ ಕಾರಣವಾಯಿತು.

ಉತ್ತರವಾಗಿ ಸಾಂಕ್ರಾಮಿಕ ರೋಗ(ಪ್ಯಾಂಡಮಿಕ್)ದಿಂದಾಗಿ ಉಪಕರಣಗಳ ಸ್ಥಾಪನೆಯನ್ನು ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ ಮತ್ತು ಭಾರತ ಸರ್ಕಾರ/ಕರ್ನಾಟಕ ಸರ್ಕಾರದಿಂದ ಹೆಚ್ಚುವರಿ ಬೆಂಬಲದೊಂದಿಗೆ ಕ್ರಿಯಾತ್ಮಕಗೊಳಿಸಲಾಗುವುದು ಎಂದು ಸರ್ಕಾರ ಹೇಳಿದೆ(ಆಗಸ್ಟ್ 2021).

ಡಿಪಿಆರ್‌ನಲ್ಲಿ ಕೆಲವು ಘಟಕಗಳು/ಉಪಕರಣಗಳ ಕಡಿಮೆ ಅಂದಾಜು ಮತ್ತು ಲೋಪ, ತೆರಿಗೆಗಳು ಮತ್ತು ಸುಂಕಗಳ ಮನ್ನಾ ವಿಷಯದಲ್ಲಿ ತಪ್ಪಾದ ಊಹೆ, ಯೋಜನೆಯ ನಿರ್ವಹಣೆಯಲ್ಲಿ ನ್ಯೂನತೆ, ಇತ್ಯಾದಿ ಕಾರಣಗಳಿಂದಾಗಿ ವೆಚ್ಚವು ಹೆಚ್ಚಳವಾಗಿದ್ದರಿಂದ ಉತ್ತರವು ಸಮರ್ಥನೀಯವಲ್ಲ. ಅಲ್ಲದೆ, ಯೋಜನೆಯನ್ನು ಪೂರ್ಣಗೊಳಿಸಲು ಯಾವುದೇ ಸಮಯವನ್ನು ನಿಗದಿಪಡಿಸಲಾಗಿಲ್ಲ.

[28] ಭಾರತ ಸರ್ಕಾರ ₹ 16.32 ಕೋಟಿ; ಕರ್ನಾಟಕ ಸರ್ಕಾರ ₹ 8.49 ಕೋಟಿ ಮತ್ತು ಎಸ್‌ಪಿವಿ ₹ 7.11 ಕೋಟಿ.

ಅಸಮರ್ಪಕ ಯೋಜನೆಗೆ ವ್ಯರ್ಥ ಖರ್ಚು

2.1.15.2. 2500 ಗ್ರಾಮ ಪಂಚಾಯತ್‌ಗಳಲ್ಲಿ (ಜಿಪಿಗಳು) ವೈ-ಫೈ ಹಾಟ್‌ಸ್ಪಾಟ್[29] ಸೌಲಭ್ಯವನ್ನು ಒದಗಿಸುವ ಕಿಯೋನಿಕ್ಸ್ ನ ಪ್ರಸ್ತಾವನೆಯನ್ನು ಕರ್ನಾಟಕ ಸರ್ಕಾರವು ಅನುಮೋದಿಸಿತು ಮತ್ತು ಮೂರು ವರ್ಷಗಳವರೆಗೆ ಕರ್ನಾಟಕ ಸರ್ಕಾರವು ₹ 79.50 ಕೋಟಿಯನ್ನು[30] ಕಾರ್ಯಸಾಧ್ಯತೆಯ ಅಂತರದ ಹಣಕಾಸು ಒದಗಿಸುವಿಕೆ (ವಿಜಿಎಫ್) ಗಾಗಿ ಕೊಡುಗೆ ನೀಡಬೇಕಿತ್ತು. ಯೋಜನಾ ವೆಚ್ಚವನ್ನು ವಾರ್ಷಿಕ ₹ 62.50 ಕೋಟಿ ಎಂದು ಲೆಕ್ಕ ಹಾಕಲಾಗಿತ್ತು. ಇದು ಆದಾಯದಿಂದ ಕ್ರಮೇಣ ಸರಿದೂಗಿಸಿ ಆ ಮೂಲಕ ಚಂದಾದಾರರ ಸಂಖ್ಯೆಯ ಹೆಚ್ಚಳದ ಆಧಾರದ ಮೇಲೆ ನಾಲ್ಕನೇ ವರ್ಷಕ್ಕೆ ಸ್ವಾವಲಂಬನೆಯನ್ನು ಸಾಧಿಸಬೇಕಿತ್ತು.

ಯೋಜನೆಯ ಅಡಿಯಲ್ಲಿ ಒಟ್ಟು 2650[31] ಜಿಪಿ ಗಳನ್ನು ಪ್ರಸ್ತಾಪಿಸಲಾಗಿತ್ತು. ಇದರಲ್ಲಿ ಕಿಯೋನಿಕ್ಸ್ (500 ಜಿಪಿಗಳು) ಮತ್ತು ಐಸಿಟಿ ಕೌಶಲ್ಯಾಭಿವೃದ್ಧಿ ಸೊಸೈಟಿ (2150 ಜಿಪಿಗಳು) ಒಳಗೊಂಡಿತ್ತು. ಇದು ನಂತರ ಜೂನ್ 2018 ರಲ್ಲಿ ಕಿಟ್ಸ್ ನೊಂದಿಗೆ ವಿಲೀನಗೊಂಡಿತು. ಕಿಯೋನಿಕ್ಸ್ ಬಿಎಸ್‌ಎನ್‌ಎಲ್ ಅನ್ನು ತೊಡಗಿಸಿಕೊಂಡಿತು, ಪ್ರತಿಯಾಗಿ ಅದು ಯೋಜನೆಯನ್ನು ಕಾರ್ಯಗತಗೊಳಿಸಲು ವೈರ್‌ಲೆಸ್ ಸೊಲ್ಯೂಷನ್ಸ್ ಐಎನ್‌ಸಿಯನ್ನು ಚಾನೆಲ್ ಪಾಲುದಾರರನ್ನಾಗಿ ತೊಡಗಿಸಿಕೊಂಡಿದೆ. ಐಸಿಟಿಎಸ್‌ಡಿ ಸೊಸೈಟಿ ಸಿಎಸ್‌ಸಿ ಇ-ಗವರ್ನೆನ್ಸ್ ಸರ್ವೀಸಸ್ ಇಂಡಿಯಾ ಲಿಮಿಟೆಡ್ (ಸಿಎಸ್‌ಸಿ)[32] ಯನ್ನು ತನ್ನ ಸೇವಾ ಪೂರೈಕೆದಾರರಾಗಿ ತೊಡಗಿಸಿಕೊಂಡಿದೆ. ಆದಾಗ್ಯೂ, ಎರಡೂ ಪ್ರಕರಣಗಳಲ್ಲಿ ವೈ-ಫೈ ಯೋಜನೆಯನ್ನು ಮೊದಲ ವರ್ಷದ ಕಾರ್ಯಾಚರಣೆಯ ನಂತರ ಕೈಬಿಡಲಾಯಿತು. ಬಿಎಸ್‌ಎನ್‌ಎಲ್ ಪ್ರಕರಣದಲ್ಲಿ, ಹಾಕಲಾದ ಮೂಲಸೌಕರ್ಯವನ್ನು ತೆಗೆದುಹಾಕಲಾಗಿದೆ ಎಂದು ವರದಿ ಮಾಡಲಾಗಿದೆ (ಜನವರಿ 2019). ಈ ಯೋಜನೆಯನ್ನು ಕಾರ್ಯಗತಗೊಳಿಸಲು ಒಪ್ಪಂದದ ಪ್ರಕಾರ ₹ 14.75 ಕೋಟಿ ಮೊತ್ತಕ್ಕೆ ಬಿಎಸ್‌ಎನ್‌ಎಲ್ ಹಕ್ಕು ಮಂಡಿಸಿದ್ದರೂ (28 ಜನವರಿ 2019) ₹ 10.10 ಕೋಟಿ ಪಾವತಿಸಲಾಗಿದೆ. ಸಿಎಸ್‌ಸಿ ಯ ಪ್ರಕರಣದಲ್ಲಿ, 5 ಸೆಪ್ಟೆಂಬರ್ 2018ರಲ್ಲಿದ್ದಂತೆ, 1782 ಜಿಪಿಗಳು ಲೈವ್ ಆಗಿವೆ ಎಂದು ಹೇಳಲಾಗಿದ್ದರೂ, ಲೈವ್ ಜಿಪಿ ಗಳ ಸಂಖ್ಯೆಯು 4 ಜುಲೈ 2019 ರಂದು 930ಕ್ಕೆ ತೀವ್ರವಾಗಿ ಕುಸಿದಿದೆ. ಇದಲ್ಲದೆ, ಲೈವ್ ಜಿಪಿಗಳ ಸ್ಥಿತಿಯು ಕಡತಗಳಲ್ಲಿ ಲಭ್ಯವಿರಲಿಲ್ಲ. ಸಿಎಸ್‌ಸಿಗೆ ಮಾಡಿದ ಒಟ್ಟು ಪಾವತಿಗಳು ₹ 19.48 ಕೋಟಿ (ಡಿಸೆಂಬರ್ 2017 ರಿಂದ ಫೆಬ್ರವರಿ 2019).

ಲೆಕ್ಕಪರಿಶೋಧನೆಯು ಜಿಪಿಗಳನ್ನು ಅವುಗಳ ಆರ್ಥಿಕ ಕಾರ್ಯಸಾಧ್ಯತೆಯನ್ನು ಖಚಿತಪಡಿಸಿಕೊಳ್ಳದೆ ಆಯ್ಕೆ ಮಾಡಿರುವುದನ್ನು ಗಮನಿಸಿತು. ಅದಲ್ಲದೇ, ಸರ್ಕಾರವು ನಿಗದಿಪಡಿಸಿದ್ದರೂ ಬಿಎಸ್‌ಎನ್‌ಎಲ್ ಮತ್ತು ಸಿಎಸ್‌ಸಿ ಎರಡರೊಂದಿಗೂ ವಿವರವಾದ ಸೇವಾ ಮಟ್ಟದ ಒಪ್ಪಂದವನ್ನು (ಎಸ್‌ಎಲ್‌ಎ) ನಮೂದಿಸಲಾಗಿಲ್ಲ. ಇದರಿಂದ ಮೈಲಿಗಲ್ಲುಗಳು, ಪಾವತಿ ವೇಳಾಪಟ್ಟಿಗಳು, ಮೇಲ್ವಿಚಾರಣಾ ವರದಿಗಳು, ದಂಡದ ಷರತ್ತುಗಳು, ಭದ್ರತೆ ಇತ್ಯಾದಿಗಳ ಬಗ್ಗೆ ಯಾವುದೇ ಸ್ಪಷ್ಟತೆ ಇರಲಿಲ್ಲ. ಪತ್ರವ್ಯವಹಾರಗಳ ಮತ್ತು ವಿವಾದಗಳ ಸರಣಿಯನ್ನು ಸೌಹಾರ್ದಯುತವಾಗಿ ಬಗೆಹರಿಸಲಾಗಲಿಲ್ಲ. ಎಸ್‌ಎಲ್‌ಎಯ ಅನುಪಸ್ಥಿತಿಯಲ್ಲಿ ಸೇವಾ ಪೂರೈಕೆದಾರರೊಂದಿಗೆ ಸಂಬಂಧದಲ್ಲಿ ಘರ್ಷಣೆಗಳಾಗಿ ಮತ್ತು ಅವರುಗಳು ವ್ಯಾಪಾರದ ಕಾರ್ಯಸಾಧ್ಯತೆಯ ಕೊರತೆಯಿಂದಾಗಿ ತಮ್ಮ ಕಾರ್ಯಾಚರಣೆಗಳನ್ನು ಅಂತ್ಯಗೊಳಿಸಿದರು. ಸೇವೆ ಒದಗಿಸುವವರಲ್ಲಿ ಒಬ್ಬರು ಕಿಯೋನಿಕ್ಸ್ ಆಗಿದ್ದು, ಪ್ರಾರಂಭದಲ್ಲಿ ಇವರೇ ಪ್ರಸ್ತಾಪವನ್ನು ಮಂಡಿಸಿದ್ದರು. ಆದರೆ ಅವರು ಯಾವುದೇ ಪ್ರಾಯೋಗಿಕ ಕಾರ್ಯಕ್ರಮವನ್ನು ನಡೆಸಿದ್ದಾರೋ ಇಲ್ಲವೋ

[29] ನ್ಯಾಶನಲ್ ಫೈಬರ್ ಆಪ್ಟಿಕ್ ನೆಟ್‌ವರ್ಕ್ (ಎನ್‌ಓಎಫ್‌ಎನ್) ಅನ್ನು ಬಳಸಿ 'ವೈ-ಫೈ ಹಾಟ್‌ಸ್ಪಾಟ್' ಮೂಲಕ ಚಿಂತಿಸಲಾಗಿದ್ದ ಸಂಪರ್ಕವನ್ನು ಭಾರತ ಸರ್ಕಾರದಿಂದ ಕೈಗೆತ್ತಿಕೊಳ್ಳಲಾಯಿತು (ಅಕ್ಟೋಬರ್ 2011) ಮತ್ತು ನಂತರದಲ್ಲಿ ಡಿಜಿಟಲ್ ಇಂಡಿಯಾದ ಅಡಿಯಲ್ಲಿನ ಭಾರತ ಸರ್ಕಾರದ ಮಿಷನ್‌ನ ಪ್ರಕಾರ ಅದನ್ನು ಭಾರತ್‌ನೆಟ್ ಎಂದು ತಿಳಿಯಲ್ಪಡುತ್ತದೆ.

[30] ಕರ್ನಾಟಕ ಸರ್ಕಾರದಿಂದ ಆಯವ್ಯಯ ಬೆಂಬಲ ಮೊದಲನೇ ವರ್ಷದಲ್ಲಿ ₹ 50.50 ಕೋಟಿ, ಎರಡನೇ ವರ್ಷದಲ್ಲಿ ₹ 26.50 ಕೋಟಿ ಮತ್ತು ಮೂರನೇ ವರ್ಷದಲ್ಲಿ ₹ 2.50 ಕೋಟಿ ಎಂದು ಆಲೋಚಿಸಲಾಗಿತ್ತು.

[31] 3 ಅಗಸ್ಟ್ 2017ರ ಸರ್ಕಾರದ ಆದೇಶದಂತೆ ₹ 3.00 ಕೋಟಿ ಅನುದಾನದ ಮೂಲಕ ಹೆಚ್ಚುವರಿ 150 ಜಿಪಿಗಳನ್ನು ಮುಂದುವರಿದು ಪ್ರಸ್ಥಾಪಿಸಲಾಯಿತು.

[32] ಸಿಎಸ್‌ಸಿ (ಸಾಮಾನ್ಯ ಸೌಲಭ್ಯ ಕೇಂದ್ರಗಳ) ಕಾರ್ಯಕ್ರಮದ ಅನುಷ್ಠಾನದ ಮೇಲ್ವಿಚಾರಣೆ ಮಾಡಲು ಭಾರತ ಸರ್ಕಾರದ (ಎಸ್‌ಪಿವಿ) ತೊಡಗುವಿಕೆ.

ಎಂಬುದನ್ನು ಲೆಕ್ಕಪರಿಶೋಧನೆಗೆ ಸ್ಪಷ್ಟಪಡಿಸಲಾಗಿಲ್ಲ. ಸರ್ಕಾರವೂ ಸಹ, ಅನುಮೋದನೆ ನೀಡುವ ಮೊದಲು ಪ್ರಾಯೋಗಿಕ ಅಧ್ಯಯನವನ್ನು ನಡೆಸುವಂತೆ ಒತ್ತಾಯಿಸಲಿಲ್ಲ.

ಹೀಗಾಗಿ, ಸರಿಯಾದ ಕಾರ್ಯಸಾಧ್ಯತೆಯ ಅಧ್ಯಯನ ನಡೆಸದೆ ಮತ್ತು ವಿವರವಾದ ಒಪ್ಪಂದದ ಷರತ್ತುಗಳಿಲ್ಲದೆ ಗ್ರಾಮ ಪಂಚಾಯಿತಿಗಳಲ್ಲಿ ವೈ–ಫೈ ಒದಗಿಸುವ ಕಳಪೆಯಾಗಿ ರೂಪಿಸಿದ ಯೋಜನೆಯು ಬೊಕ್ಕಸಕ್ಕೆ ₹ 29.58 ಕೋಟಿ ವ್ಯರ್ಥ ವೆಚ್ಚವನ್ನುಂಟುಮಾಡಿತು.

ಉತ್ತರವಾಗಿ ಸರ್ಕಾರವು ಕಿಯೋನಿಕ್ಸ್ ಬಿಎಸ್ಎನ್ಎಲ್ ಗೆ ಸೇವಾ ಆದೇಶವನ್ನು ನೀಡುವ ಮೊದಲು ಕಾರ್ಯಸಾಧ್ಯತೆಯ ಅಧ್ಯಯನವನ್ನು (ನವೆಂಬರ್ 2016) ನಡೆಸಿದೆ ಎಂದು ಹೇಳಿದೆ (ಆಗಸ್ಟ್ 2021). ಕಾರ್ಯಸಾಧ್ಯತೆಯ ಅಧ್ಯಯನದ ಫಲಿತಾಂಶಗಳು ದಾಖಲೆಯಲ್ಲಿಲ್ಲದ ಕಾರಣ ಉತ್ತರವು ಸ್ವೀಕಾರಾರ್ಹವಲ್ಲ. ಇದಲ್ಲದೇ, ಜಿಪಿಗಳ ಆಯ್ಕೆಯಲ್ಲಿ ಆರ್ಥಿಕ ಕಾರ್ಯಸಾಧ್ಯತೆಯನ್ನು ಖಚಿತಪಡಿಸಿಕೊಳ್ಳಲು ಕಿಯೋನಿಕ್ಸ್‌ಗೆ ಜವಾಬ್ದಾರಿಯನ್ನು ನೀಡಲಾಗಿತ್ತಾದರೂ ಅದು ಸಹ ದಾಖಲೆಯಲ್ಲಿರಲಿಲ್ಲ. ಆದ್ದರಿಂದ, ನಂತರದ ಹಂತದಲ್ಲಿ ವೈಫಲ್ಯಕ್ಕೆ ಕಾರ್ಯಸಾಧ್ಯತೆಯಿರಲಿಲ್ಲವೆಂಬ ಕಾರಣ ನೀಡಿದ್ದಕ್ಕೆ ಸಮರ್ಥನೆಯ ಕೊರತೆಯಿದೆ. ಪ್ರಾಯೋಗಿಕ ಕಾರ್ಯಾಚರಣೆಯ ಫಲಿತಾಂಶಗಳನ್ನು ವರದಿ ಮಾಡಲಾಗಿಲ್ಲದಿದ್ದರೂ ಒಂದು ವರ್ಷದೊಳಗೆ ಕಾರ್ಯಕ್ರಮದ ಕಾರ್ಯಸಾಧ್ಯತೆಯನ್ನು ಕಿಯೋನಿಕ್ಸ್ ಹೇಗೆ ತೀರ್ಮಾನಿಸಿರಬಹುದೆಂದು ಸ್ಪಷ್ಟವಾಗಿಲ್ಲ. ಆದ್ದರಿಂದ, ಸರಿಯಾದ ಸಮೀಕ್ಷೆ ಮತ್ತು ಕಾರ್ಯಸಾಧ್ಯತೆಯ ಅಧ್ಯಯನದ ಕೊರತೆಯಿಂದಾಗಿ ಕಾರ್ಯಕ್ರಮ ವಿಫಲವಾಗಿದೆ ಎಂದು ತೀರ್ಮಾನಿಸಬಹುದು. ಐಸಿಟಿಎಸ್‌ಡಿಎಸ್ (ಕಿಟ್ಸ್) ಮೂಲಕ ಜಾರಿಗೊಳಿಸಲಾದ ಕಾರ್ಯಕ್ರಮದ ಸ್ಥಿತಿಯ ಬಗ್ಗೆ ಕೂಡ ಉತ್ತರವು ಮೌನವಾಗಿದೆ.

ಕೌಶಲ್ಯೀಕರಣ ಮತ್ತು ಶ್ರೇಷ್ಠತೆಯ ಕೇಂದ್ರಗಳು

ಕೌಶಲ್ಯೀಕರಣ ಕಾರ್ಯಕ್ರಮದ ಯೋಜನೆ ಮತ್ತು ಅನುಷ್ಠಾನದಲ್ಲಿನ ನ್ಯೂನತೆಗಳಿಂದಾಗಿ ₹ 1.42 ಕೋಟಿಯ ಫಲಪ್ರದವಲ್ಲದ ವೆಚ್ಚ

2.1.16. ಕೌಶಲ್ಯದ ಅಂತರವನ್ನು ಪರಿಹರಿಸಲು ಮತ್ತು ಐಟಿ/ಐಟಿಇಎಸ್ ವಲಯದಲ್ಲಿ ಖಚಿತವಾದ ನಿಯೋಜನೆಗಳಿಗಾಗಿ ಕಿಟ್ಸ್ (43,000) ಮತ್ತು ಕಿಯೋನಿಕ್ಸ್ (67,000) ಮೂಲಕ 1.10 ಲಕ್ಷ ಜನರಿಗೆ ತರಬೇತಿ ನೀಡಲು ಯುವ ಯುಗ ಕಾರ್ಯಕ್ರಮವನ್ನು ಕರ್ನಾಟಕ ಸರ್ಕಾರ ಘೋಷಿಸಿತು(2017). ಮಾರ್ಗಸೂಚಿಗಳು (ಜೂನ್ 2017) ತರಬೇತಿ ನೀಡಲು ಕೇಂದ್ರಗಳ ಮಾನ್ಯತೆಯನ್ನು ಕಲ್ಪಿಸಿದೆ. ಕಿಟ್ಸ್ 18 ತರಬೇತಿ/ಉದ್ಯಮ ಪಾಲುದಾರರನ್ನು ನೇಮಿಸಿದ್ದರೆ ಕಿಯೋನಿಕ್ಸ್ ತರಬೇತಿಯನ್ನು ನೀಡಲು ಅಸ್ತಿತ್ವದಲ್ಲಿರುವ ಫ್ರಾಂಚೈಸಿಗಳನ್ನು ತೊಡಗಿಸಿತು. ಕಿಟ್ಸ್ ಮತ್ತು ತರಬೇತಿ ಪಾಲುದಾರರ ನಡುವಿನ ಎಮ್‌ಒಎ ಕೋರ್ಸ್ ಶುಲ್ಕದ ಮೇಲೆ ಹಂತ ಹಂತದ ಪಾವತಿಗಳನ್ನು ಒಳಗೊಂಡಿತ್ತು (ನೋಂದಣಿಯಲ್ಲಿ 10 ಪ್ರತಿಶತ, ತರಬೇತಿಯನ್ನು ಪೂರ್ಣಗೊಳಿಸಿದ ನಂತರ 70 ಪ್ರತಿಶತ ಮತ್ತು ಉದ್ಯೋಗಾವಕಾಶವನ್ನು ಒದಗಿಸಿದ ಮೇಲೆ 20 ಪ್ರತಿಶತ). ಇಲಾಖೆಯು ₹ 11.81 ಕೋಟಿ[33] ಮುಡಿಪಾಗಿರಿಸಿದ್ದು (2017–18), ₹ 1.42 ಕೋಟಿ[34] ವೆಚ್ಚವಾಗಿದೆ. ₹ 10.39 ಕೋಟಿಯ ಬಾಕಿ ಮೊತ್ತವನ್ನು ಮಾರ್ಚ್ 2021 ರಂತೆ ಕಿಟ್ಸ್ ಉಳಿತಾಯ ಬ್ಯಾಂಕ್ ಖಾತೆಯಲ್ಲಿ ಇರಿಸಿದೆ.

ಇಲಾಖೆಯು ಉದ್ಯೋಗಾವಕಾಶದ ವಿವರಗಳನ್ನು ನೀಡದೆ 23,235[35] ಜನರಿಗೆ (2017–18) ತರಬೇತಿಯನ್ನು ಪೂರ್ಣಗೊಳಿಸಿದೆ ಎಂದು ವರದಿ ಮಾಡಿದೆ. ಈ ಕೊರತೆಗೆ ನಿರುದ್ಯೋಗಿ ಯುವಕರನ್ನು

[33] ₹ 10.81 ಕೋಟಿಯನ್ನು ಕೆಇಎಸ್‌ಡಿಎಮ್ ನೀತಿಯಿಂದ ಮರುವಿಂಗಡಣೆ ಮಾಡಲಾಗಿತ್ತು ಮತ್ತು ₹ 1 ಕೋಟಿಯನ್ನು ಕರ್ನಾಟಕ ಸರ್ಕಾರ ಬಿಡುಗಡೆ ಮಾಡಿತ್ತು (2017–18).

[34] ತರಬೇತಿಗಾಗಿ ಕಿಯೋನಿಕ್ಸ್ ₹ 48.11 ಲಕ್ಷ, ತರಬೇತಿ ಕಾರ್ಯಕ್ರಮಕ್ಕಾಗಿ ಐಸಿಟಿಎಸ್‌ಡಿಎಸ್ ₹ 39.55 ಲಕ್ಷ; ಮತ್ತು ಇತರ ಖರ್ಚುಗಳು–ಜಾಹೀರಾತುಗಳಿಗೆ ₹ 24.40 ಲಕ್ಷ ಮತ್ತು ವೆಬ್ ಪೋರ್ಟಲ್‌ಗೆ ₹ 30 ಲಕ್ಷ.

[35] ಕಿಯೋನಿಕ್ಸ್– ಗುರಿಯಾದ 67,000ಕ್ಕೆ ಎದುರಾಗಿ 21,337 ಮತ್ತು ಐಸಿಟಿಎಸ್‌ಡಿಎಸ್–ಗುರಿಯಾದ 43,000ಕ್ಕೆ ಎದುರಾಗಿ 1,898.

ಗುರುತಿಸುವಲ್ಲಿನ ತೊಂದರೆಯ ಕಾರಣವನ್ನು ನೀಡಲಾಗಿತ್ತು ಮತ್ತು ತದನಂತರ ಕಾರ್ಯಕ್ರಮವನ್ನು ನಿಲ್ಲಿಸಲಾಯಿತು.

ಲೆಕ್ಕಪರಿಶೋಧನೆಯ ಪರಿಶೀಲನೆಯು ಈ ಕೆಳಗಿನ ಲೋಪಗಳನ್ನು ಬಹಿರಂಗಪಡಿಸಿದೆ:

- ಯಾವುದೇ ತರಬೇತಿ ಕೇಂದ್ರಗಳು/ಫ್ರಾಂಚೈಸಿಗಳು ನ್ಯಾಷನಲ್ ಸ್ಕಿಲ್ ಡೆವಲಪ್‌ಮೆಂಟ್ ಕಾರ್ಪೊರೇಶನ್ (ಎನ್ಎಸ್‌ಡಿಸಿ)/ಸೆಕ್ಟರ್ ಸ್ಕಿಲ್ ಕೌನ್ಸಿಲ್ (ಎಸ್ಎಸ್‌ಸಿ) ನಿಂದ ಮಾನ್ಯತೆ ಪಡೆದಿಲ್ಲ ಮತ್ತು ಇದನ್ನು ಕಿಟ್ಸ್/ಕಿಯೋನಿಕ್ಸ್ ನಿಂದ ಜಾರಿಗೊಳಿಸಲಾಗಿಲ್ಲ. ಈ ಕೋರ್ಸ್‌ಗಳಿಗೆ ಮನ್ನಣೆಯ ಕೊರತೆಯು ತರಬೇತಿ ಪಾಲುದಾರರು ನೀಡಿದ ಪ್ರಮಾಣಪತ್ರಗಳ ಮೌಲ್ಯವನ್ನು ಕಡಿಮೆ ಮಾಡಿದೆ. ಇದರಲ್ಲಿ ಹಲವಾರು ತರಬೇತಿ ಕಾರ್ಯಕ್ರಮಗಳು ಕಾಲೇಜು ವಿದ್ಯಾರ್ಥಿಗಳಿಗೆ ಪೂರಕ ಕೋರ್ಸ್‌ಗಳಾಗಿವೆ[36] ಮತ್ತು ನಿರ್ದಿಷ್ಟವಾಗಿ ಉದ್ಯೋಗದ ಕಡೆಗೆ ನಿರ್ದೇಶಿಸಲಾಗಿಲ್ಲವೆಂದು ಕೌಶಲ್ಯ ಅಭಿವೃದ್ಧಿ ಪ್ರಾಧಿಕಾರ (ಕೆಎಸ್‌ಡಿಎ)[37] ವಿವರಿಸಿದೆ (ಮಾರ್ಚ್ 2018).

- ಕಿಟ್ಸ್‌ನ ತರಬೇತಿ ಪಾಲುದಾರರಿಗೆ ಕೋರ್ಸ್ ಶುಲ್ಕದ 80 ಪ್ರತಿಶತವನ್ನು ಪಾವತಿಸಲಾಗಿದೆ (₹ 39.55 ಲಕ್ಷ) ಮತ್ತು ಅವರಿಗೆ ಉದ್ಯೋಗಾವಕಾಶ ದೊರೆತ ನಂತರ ಪಾವತಿಸಬೇಕಾದ ಬಾಕಿ 20 ಪ್ರತಿಶತವನ್ನು ತ್ಯಜಿಸಲು ನಿರ್ಧರಿಸಿದರು. ಹೀಗಾಗಿ, ತರಬೇತಿಗೆ ಒಳಗಾದ ವ್ಯಕ್ತಿಗಳು ಯೋಜನೆಯ ಪ್ರಧಾನ ಉದ್ದೇಶವಾಗಿದ್ದ ಉದ್ಯೋಗಾವಕಾಶದಿಂದ ವಂಚಿತರಾದರು;

- ಉಳಿದಿರುವ ₹ 10.39 ಕೋಟಿ ಮೊತ್ತವನ್ನು ಅಸ್ತಿತ್ವದಲ್ಲಿರುವ ನಿಬಂಧನೆಗಳ ಪ್ರಕಾರ ಸರ್ಕಾರಕ್ಕೆ ಪಾವತಿ ಮಾಡದೆಯೇ ಮಾರ್ಚ್ 2021 ರವರೆಗೆ ಕಿಟ್ಸ್‌ನಿಂದ ಉಳಿತಾಯ ಬ್ಯಾಂಕ್ ಖಾತೆಯಲ್ಲಿ ಇರಿಸಲಾಗಿದೆ.

ಹೀಗಾಗಿ, ಇಲಾಖಾ ಲೋಪದೋಷದಿಂದ ಉದ್ಯೋಗಾವಕಾಶ ಒದಗಿಸುವ ಉದ್ದೇಶ ಈಡೇರದ ಕಾರಣ ₹ 1.42 ಕೋಟಿ ವೆಚ್ಚ ಫಲಪ್ರದವಾಗಲಿಲ್ಲ.

ಸರ್ಕಾರವು ತರಬೇತಿ ಕೇಂದ್ರಗಳ ಮಾನ್ಯತೆಯು ತರಬೇತಿ ಪಾಲುದಾರರಿಗೆ ಹೆಚ್ಚುವರಿ ವೆಚ್ಚವನ್ನು ಒಳಗೊಂಡಿರುತ್ತದೆ ಮತ್ತು ಹೆಚ್ಚಿನ ವಿದ್ಯಾರ್ಥಿಗಳು ಉನ್ನತ ಶಿಕ್ಷಣ, ಸ್ವಯಂ ಉದ್ಯೋಗ ಇತ್ಯಾದಿಗಳಿಗೆ ಹೋದ ಕಾರಣ ಯಾವುದೇ ನೇಮಕಾತಿಗಳನ್ನು ವರದಿ ಮಾಡಲಾಗಿಲ್ಲ ಎಂದು ಹೇಳಿದೆ (ಆಗಸ್ಟ್ 2021). ಆದಾಗ್ಯೂ, ಇಲಾಖೆಯ ಈ ಪ್ರತಿಪಾದನೆಯು ದತ್ತಾಂಶದಿಂದ ಬೆಂಬಲಿತವಾಗಿಲ್ಲ.

ಮಾರ್ಗಸೂಚಿಗಳು ಮಾನ್ಯತೆ ಪಡೆದ ಕೇಂದ್ರಗಳಲ್ಲಿ ತರಬೇತಿ ನೀಡಲು ಸೂಚಿಸಿದ್ದರಿಂದ ಮಾನ್ಯತೆ ಪಡೆಯದ ತರಬೇತಿ ಕೇಂದ್ರಗಳನ್ನು ತರಬೇತಿ ನೀಡಲು ತೊಡಗಿಸಿಕೊಂಡಿದ್ದು ತಪ್ಪಾಗಿರುವುದರಿಂದ ಉತ್ತರವು ಸಮರ್ಥನೀಯವಲ್ಲ. ಈ ಲೋಪಗಳಿಂದ ₹ 1.42 ಕೋಟಿ ವೆಚ್ಚವು ಫಲಪ್ರದವಾಗಲಿಲ್ಲ.

ಶ್ರೇಷ್ಠತೆ ಕೇಂದ್ರಗಳ(ಸೆಂಟರ್ಸ್ ಆಫ್ ಎಕ್ಸಲೆನ್ಸ್ (ಸಿಒಇ)) ಕಳಪೆ ಪ್ರಗತಿ

2.1.17. ಅಭಿವೃದ್ಧಿ ಹೊಂದುತ್ತಿರುವ ತಂತ್ರಜ್ಞಾನಗಳನ್ನು ಗಮನದಲ್ಲಿಟ್ಟುಕೊಂಡು ಸಾಮರ್ಥ್ಯ ನಿರ್ಮಾಣಕ್ಕೆ ಒತ್ತು ನೀಡಲು ಮತ್ತು ಕೈಗಾರಿಕೆಗಳು/ಉದ್ಯಮಿಗಳ ಸಹಯೋಗದೊಂದಿಗೆ ಕೌಶಲ್ಯ ಅಭಿವೃದ್ಧಿಯ ಮೂಲಕ ಅಗತ್ಯ ತಾಂತ್ರಿಕ ಸಂಪನ್ಮೂಲಗಳನ್ನು ರಚಿಸಲು ಇಲಾಖೆಯು ಸಿಒಇಗಳನ್ನು ಸ್ಥಾಪಿಸಲು ಪ್ರಸ್ತಾಪಿಸಿತು. ಸಿಒಇಗಳನ್ನು ನ್ಯಾಸ್‌ಕಾಮ್, ಡಸಾಲ್ಟ್, ಐಐಐಟಿ–ಬೆಂಗಳೂರು ಮತ್ತು ಅಸೋಸಿಯೇಷನ್ ಆಫ್ ಬೆಂಗಳೂರು ಅನಿಮೇಷನ್ ಇಂಡಸ್ಟ್ರಿ (ಎಬಿಎಐ) ನಂತಹ ಪ್ರಮುಖ ಉದ್ಯಮ ಪಾಲುದಾರರು

[36] ಅಂದರೆ, ಎಮ್ಎಸ್ ಆಫೀಸ್, ಟ್ಯಾಲಿ, ಡ್ಯಾಟಾ ಎಂಟ್ರಿ ಕಾರ್ಯಾಚರಣೆಗಳು, ಡೆಸ್ಕ್ ಟಾಪ್ ಪ್ರಕಾಶನ, ಆಫೀಸ್ ಮ್ಯಾನೇಜ್‌ಮೆಂಟ್ ಮುಂತಾದ ಮೂಲಭೂತ ಕೋರ್ಸ್‌ಗಳು.

[37] ಕರ್ನಾಟಕ ಕೌಶಲ್ಯಾಭಿವೃದ್ಧಿ ಪ್ರಾಧಿಕಾರ ಕರ್ನಾಟಕದಲ್ಲಿ ಕೌಶಲ್ಯೀಕರಣದ ಮೇಲ್ವಿಚಾರಣೆಯ ಮತ್ತು ನಿಯಂತ್ರಣದ ಜವಾಬ್ದಾರಿ ಹೊಂದಿದೆ.

ನಿರ್ವಹಿಸುತ್ತಾರೆ. ಬೆಂಗಳೂರಿನಲ್ಲಿ ₹ 74.04 ಕೋಟಿ ವೆಚ್ಚದಲ್ಲಿ ಐದು[38] ಸಿಒಇಗಳನ್ನು ಸ್ಥಾಪಿಸಲಾಗಿದೆ(ಮಾರ್ಚ್ 2020). ಕೆಳಗೆ ವಿವರಿಸಿದಂತೆ ಮೂಲತಃ ಯೋಜಿತ ಗುರಿಗಳಿಗೆ ಹೋಲಿಸಿದರೆ ನೀಡಲಾದ ತರಬೇತಿಯ ವಿಷಯದಲ್ಲಿ ಸಿಒಇಗಳ ಫಲಿತಾಂಶವು ಕಳಪೆಯಾಗಿತ್ತು.

2.1.17.1. ಕೃತಕ ಬುದ್ಧಿಮತ್ತೆ (ಆರ್ಟಿಫಿಷಿಯಲ್ ಇಂಟಲಿಜೆನ್ಸ್) ಮತ್ತು ದತ್ತಾಂಶ ವಿಜ್ಞಾನ(ಡ್ಯಾಟಾ ಸೈನ್ಸ್)ಕ್ಕಾಗಿ ಸಿಒಇ

ಕೋಷ್ಟಕ ಸಂಖ್ಯೆ. 2.1.2: ಕೃತಕ ಬುದ್ಧಿಮತ್ತೆ ಮತ್ತು ದತ್ತಾಂಶ ವಿಜ್ಞಾನಕ್ಕಾಗಿ ಸಿಒಇನ ಗುರಿ ಮತ್ತು ಸಾಧನೆಯನ್ನು ತೋರಿಸಲಾಗುತ್ತಿದೆ

ಕೈಗಾರಿಕೆ ಪಾಲುದಾರ	ಪ್ರಾರಂಭದ ದಿನಾಂಕ; ಯೋಜನೆಯ ವೆಚ್ಚ ಮತ್ತು ಖರ್ಚು	ವಾರ್ಷಿಕ ಗುರಿ –ತರಬೇತಿ ಪಡೆಯಬೇಕಿದ್ದ ವ್ಯಕ್ತಿಗಳ ಸಂಖ್ಯೆ	2018–19ರಲ್ಲಿ ಸಾಧಿಸಿದ್ದು	2019–20ರಲ್ಲಿ ಸಾಧಿಸಿದ್ದು
ನ್ಯಾಸ್ಕಾಮ್	ಜುಲೈ 2018; ಯೋಜನೆಯ ವೆಚ್ಚ: ₹ 14.80 ಕೋಟಿ ಖರ್ಚು: ₹ 5.40 ಕೋಟಿ	ಮೊದಲನೇ ವರ್ಷಕ್ಕೆ 1000, ಎರಡನೇ ವರ್ಷಕ್ಕೆ ಸಂಚಿತ ಗುರಿ 4000 ಮತ್ತು ಐದನೇ ವರ್ಷದ ಕೊನೆಗೆ 35000	1000 (ಕೊರತೆಯಿಲ್ಲ)	400 (ಕೊರತೆ – 65 ಪ್ರತಿಶತ)

ಸಿಒಇ ಮೂಲಕ ತರಬೇತಿ ವಿವರಗಳನ್ನು ಸೆರೆಹಿಡಿಯಲು ಕಿಟ್ಸ್ ಟೆಂಪ್ಲೇಟ್ ಅನ್ನು (ಎಮ್ಒಎನ ಷರತ್ತು 12.1.5) ಅಂತಿಮಗೊಳಿಸಲಿಲ್ಲ. 1400 ವೃತ್ತಿಪರರು ತರಬೇತಿ ಪಡೆದಿದ್ದಾರೆ ಎಂದು ಹೇಳಲಾಗಿದ್ದರೂ, ಲೆಕ್ಕಪರಿಶೋಧನೆಯ ಪರಿಶೀಲನೆಯು 12 ಅವಧಿ (ಸೆಷನ್)ಗಳಲ್ಲಿ 11 ಸೆಷನ್‌ಗಳು ವಿಭಿನ್ನ ಅಭ್ಯರ್ಥಿಗಳಿಗೆ ಕೇವಲ ಒಂದು ದಿನದ ತರಬೇತಿ ಅವಧಿಗಳಾಗಿವೆ ಎಂಬುದನ್ನು ಬಹಿರಂಗಗೊಳಿಸಿದ್ದರಿಂದ ಅವನ್ನು ನಿಯಮಿತ ತರಬೇತಿ ಕೋರ್ಸ್‌ಗಳೆಂದು ಪರಿಗಣಿಸಲಾಗುವುದಿಲ್ಲ. ಇದಲ್ಲದೆ, ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಕ್ಕೆ ಉದ್ಯಮದಿಂದ ಗುರುತಿಸಲ್ಪಟ್ಟ ಪ್ರಮಾಣಪತ್ರಗಳನ್ನು ನೀಡಲಾಗಿಲ್ಲ.

ಇವುಗಳು ಉದ್ಯಮದ ಮಾನ್ಯತೆ ಪಡೆದ ತರಬೇತಿ ಕಾರ್ಯಕ್ರಮಗಳಲ್ಲ, ಆದರೆ ಸಾಮರ್ಥ್ಯವರ್ಧನೆಯ ಕಾರ್ಯಾಗಾರಗಳು ಮತ್ತು ಕಾರ್ಯಕ್ರಮಗಳನ್ನು ಅಕ್ಟೋಬರ್ 2020 ರಿಂದ ವಾಸ್ತವಿಕವಾಗಿ (ವರ್ಚ್ಯುಯಲ್) ನಡೆಸಲಾಯಿತು ಎಂದು ಸರ್ಕಾರವು ಹೇಳಿದೆ(ಆಗಸ್ಟ್ 2021). 35,000 ವೃತ್ತಿಪರರಿಗೆ ತರಬೇತಿ ನೀಡುವ ಎಮ್ಒಎ ಅವಶ್ಯಕತೆಯನ್ನು ಇದು ಪೂರೈಸದ ಕಾರಣ ಉತ್ತರವು ಸಮರ್ಥನೀಯವಲ್ಲ. ಇದಲ್ಲದೆ, ಹೆಚ್ಚುವರಿ ಕೌಶಲ್ಯದ ಸಂಪನ್ಮೂಲಗಳ ಈ ವಿವರಗಳನ್ನು ಕರ್ನಾಟಕ ಸರ್ಕಾರದ ಕೌಶಲ್ಯೀಕರಣ ಇಲಾಖೆಯ ಡೇಟಾಬೇಸ್‌ಗೆ ಸೇರಿಸಬೇಕಾಗಿತ್ತು, ಅದನ್ನು ಸಹ ಮಾಡಲಾಗಿಲ್ಲ. ಆದ್ದರಿಂದ, ಉದ್ದೇಶಗಳನ್ನು ಪೂರೈಸಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಲು ಕೆಪಿಐಗಳ ಆಧಾರದ ಮೇಲೆ ಸರಿಯಾದ ಮೇಲ್ವಿಚಾರಣಾ ವ್ಯವಸ್ಥೆಯನ್ನು ಜಾರಿಗೆ ತರಬೇಕಾಗಿದೆ.

2.1.17.2. ಏರೋಸ್ಪೇಸ್ ಮತ್ತು ಡಿಫೆನ್ಸ್‌ಗಾಗಿ ಸಿಒಇ

ಕೋಷ್ಟಕ ಸಂಖ್ಯೆ. 2.1.3: ಏರೋಸ್ಪೇಸ್ ಮತ್ತು ಡಿಫೆನ್ಸ್‌ಗಾಗಿ ಸಿಒಇಯ ಗುರಿ ಮತ್ತು ಸಾಧನೆಯನ್ನು ತೋರಿಸುತ್ತಿದೆ

ಕೈಗಾರಿಕೆ ಪಾಲುದಾರ	ಪ್ರಾರಂಭದ ದಿನಾಂಕ; ಯೋಜನೆಯ ವೆಚ್ಚ ಮತ್ತು ಖರ್ಚು	ವಾರ್ಷಿಕ ಗುರಿ	2018–19ರಲ್ಲಿ ಸಾಧಿಸಿದ್ದು	2019–20ರಲ್ಲಿ ಸಾಧಿಸಿದ್ದು
ಡಸ್ಸಾಲ್ಟ್ ಸಿಸ್ಟಮ್ಸ್ (ಡಿಎಸ್)	ಜುಲೈ 2017 ಯೋಜನೆಯ ವೆಚ್ಚ: ₹ 33.46 ಕೋಟಿ ಖರ್ಚು: ₹ 31.05 ಕೋಟಿ	22 ಫೆಬ್ರವರಿ 2017ರ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಐಟಿಡಿ 291 ಎಡಿಎಮ್ 2016ರ ಪ್ರಕಾರ ವಾರ್ಷಿಕ ಸುಮಾರು 1600 ಇಂಜಿನೀಯರ್‌ಗಳಿಗೆ ಉನ್ನತ ಮಟ್ಟದ ತರಬೇತಿ ಮತ್ತು ಕೌಶಲ್ಯಾಭಿವೃದ್ಧಿ ನೀಡಬೇಕಿತ್ತು.	2017–18: 12 (ಮುಂದುವರಿದ), 90 (ಮೂಲಭೂತ) ಮತ್ತು 27 (ಯೋಜನೆ ಆಧಾರಿತ) 2018–19: 13 (ಮುಂದುವರಿದ), 90 (ಮೂಲಭೂತ), 1 (ಯೋಜನೆ ಆಧಾರಿತ) ಮತ್ತು 186 ಎಮ್‌ಬೆಡ್ಡೆಡ್ ಕೋರ್ಸ್‌ಗಳು ಒಟ್ಟು 419	73 (ಮೂಲಭೂತ); 262 (ಎಮ್‌ಬೆಡ್ಡೆಡ್ ಕೋರ್ಸ್‌ಗಳು); 13 (ತರಬೇತಿದಾರರಿಗೆ ತರಬೇತಿ); 1 (ವ್ಯಾಲ್ಯು ಸ್ಟ್ರೀಮ್). ಒಟ್ಟು 349

[38] ಸಿಒಇ – ಕೃತಕ ಬುದ್ಧಿಮತ್ತೆ ಮತ್ತು ದತ್ತಾಂಶ ವಿಜ್ಞಾನ; ಸಿಒಇ – ಏರೋಸ್ಪೇಸ್ ಮತ್ತು ಡಿಫೆನ್ಸ್; ಸಿಒಇ – ಸೈಬರ್ ಭದ್ರತೆ; ಸಿಒಇ – ಎವಿಜಿಸಿ ಮತ್ತು ಸಿಒಇ – ಯಂತ್ರ ಬುದ್ಧಿಮತ್ತೆ ಮತ್ತು ರೋಬೋಟಿಕ್ಸ್.

ಆರಂಭದಲ್ಲಿ, ಕರ್ನಾಟಕ ಸರ್ಕಾರವು 1344 ಅಭ್ಯರ್ಥಿಗಳಿಗೆ ತರಬೇತಿ ನೀಡುವ ಗುರಿಯೊಂದಿಗೆ ಮೆ. ಡಸ್ಸಾಲ್ಟ್ ಸಿಸ್ಟಮೇಸ್ನಿಂದ ₹ 16.68 ಕೋಟಿ ವೆಚ್ಚದಲ್ಲಿ 27 ಪರವಾನಗಿಗಳನ್ನು[39] ಪಡೆದುಕೊಂಡಿತು. ಕಾರ್ಯಾಚರಣೆಗಳು ಪ್ರಾರಂಭವಾದ ತಕ್ಷಣ (ಜುಲೈ 2017), ಕರ್ನಾಟಕ ಸರ್ಕಾರವು ₹ 9.04 ಕೋಟಿ ವೆಚ್ಚದಲ್ಲಿ 15[40] ಹೆಚ್ಚುವರಿ ಪರವಾನಗಿಗಳನ್ನು ಸಂಗ್ರಹಣ ಮಾಡಿಕೊಂಡಿದೆ (ಸೆಪ್ಟೆಂಬರ್ 2017). ಈ ಕೆಳಗಿನ ಕಾರಣಗಳಿಗಾಗಿ ಹೆಚ್ಚುವರಿ ಪರವಾನಗಿಗಳ ಸಂಗ್ರಹಣೆಯು ಅನಗತ್ಯವಾಗಿತ್ತು ಎಂದು ಲೆಕ್ಕಪರಿಶೋಧನೆಯ ಪರಿಶೀಲನೆಯು ತೋರಿಸಿದೆ:

- ಸಿಒಇ ಮೂರು ವರ್ಷಗಳ ಅವಧಿಯಲ್ಲಿ (2017-2020) ಒಟ್ಟು 768 ಅಭ್ಯರ್ಥಿಗಳಿಗೆ ಮಾತ್ರ ತರಬೇತಿಯನ್ನು ನೀಡಲು ಸಾಧ್ಯವಾಯಿತು.
- ಎಮ್‌ಒಎಯನ್ನು ನವೀಕರಿಸಲಾಗಿದೆ (ಫೆಬ್ರವರಿ 2021) ಮತ್ತು ತರಬೇತಿ ಗುರಿಗಳನ್ನು ವಿವಿಧ ಕೋರ್ಸ್‌ಗಳಲ್ಲಿ ಮೂರು ವರ್ಷಗಳ ಅವಧಿಗೆ 750[41] ಅಭ್ಯರ್ಥಿಗಳಿಗೆ ಇಳಿಕೆ ಮಾಡಲಾಗಿದೆ. ತರಬೇತಿಯ ಒಟ್ಟಾರೆ ಗುರಿಗಳು ಗಣನೀಯವಾಗಿ ಕಡಿಮೆಯಾದ ಕಾರಣ, ಹೆಚ್ಚುವರಿ ಪರವಾನಗಿಗಳ ಖರೀದಿಯಲ್ಲಿ ಆತುರದ ನಿರ್ಧಾರವು ₹ 9.04 ಕೋಟಿ ವ್ಯರ್ಥ ವೆಚ್ಚಕ್ಕೆ ಕಾರಣವಾಯಿತು. ತರಬೇತಿ ಕಾರ್ಯಕ್ರಮವನ್ನು ಆಲೋಚಿಸುವ ಮೊದಲು ಸರ್ಕಾರವು ಬೇಡಿಕೆಯನ್ನು ನಿರ್ಣಯಿಸಿದ್ದರೆ ಇದನ್ನು ತಪ್ಪಿಸಬಹುದಿತ್ತು.

ಹೆಚ್ಚುವರಿ ಪರವಾನಗಿಗಳು ಒಂದು ಸ್ವತ್ತಾಗಲಿದೆ ಎಂದು ಸರ್ಕಾರ ಉತ್ತರಿಸಿದೆ (ಆಗಸ್ಟ್ 2021). ಪ್ರತಿ ವರ್ಷಕ್ಕೆ 1,344 ಅಭ್ಯರ್ಥಿಗಳಿಗೆ ತರಬೇತಿ ಕೋರ್ಸ್‌ಗಳನ್ನು ಪೂರೈಸಲು 27 ಪರವಾನಗಿಗಳ ಆರಂಭಿಕ ಸಂಗ್ರಹಣೆಯು ಸಾಕಾಗಿತ್ತು ಮತ್ತು ವರ್ಷಕ್ಕೆ ತರಬೇತಿ ಪಡೆದ ಅಭ್ಯರ್ಥಿಗಳು 256 ಆಗಿದ್ದು ಅವನ್ನೇ ಕಡಿಮೆ ಪ್ರಮಾಣದಲ್ಲಿ ಬಳಸಿಕೊಳ್ಳಲಾಗಿತ್ತಾಗಿದ್ದರಿಂದ ಉತ್ತರವು ಸಮರ್ಥನೀಯವಲ್ಲ. ಇದು ಅಗತ್ಯತೆಯ ವಿಶ್ಲೇಷಣೆಯನ್ನು ಮಾಡಿಲ್ಲವೆಂಬುದನ್ನು ತೋರಿಸುತ್ತದೆ. ಆದ್ದರಿಂದ ₹ 9.04 ಕೋಟಿ ಹೆಚ್ಚುವರಿ ವೆಚ್ಚವನ್ನು ತಪ್ಪಿಸಬಹುದಾಗಿತ್ತು.

2.1.17.3. ಸೈಬರ್ ಭದ್ರತೆಗಾಗಿ ಸಿಒಇ

ಕೋಷ್ಟಕ ಸಂಖ್ಯೆ. 2.1.4: ಸೈಬರ್ ಭದ್ರತೆಗಾಗಿ ಸಿಒಇನ ಗುರಿ ಮತ್ತು ಸಾಧನೆಯನ್ನು ತೋರಿಸಲಾಗುತ್ತಿದೆ

ಕೈಗಾರಿಕೆ ಪಾಲುದಾರ	ಪ್ರಾರಂಭದ ದಿನಾಂಕ; ಯೋಜನೆಯ ವೆಚ್ಚ ಮತ್ತು ಖರ್ಚು	ವಾರ್ಷಿಕ ಗುರಿ – ತರಬೇತಿ ಪಡೆಯಬೇಕಿದ್ದ ವ್ಯಕ್ತಿಗಳ ಸಂಖ್ಯೆ	2018-19ರಲ್ಲಿ ಸಾಧಿಸಿದ್ದು	2019-20ರಲ್ಲಿ ಸಾಧಿಸಿದ್ದು
ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ (ಕೆಎಸ್‌ಸಿಎಸ್‌ಟಿ)	ಸೆಪ್ಟೆಂಬರ್ 2018 ಯೋಜನೆಯ ವೆಚ್ಚ: ₹ 9.32 ಕೋಟಿ ಖರ್ಚು: ₹ 4.93 ಕೋಟಿ.	4000 (2019-20ರ ಒಳಗೆ)	310	1073 (2019-20) + 8272 (2020-21)

- ತರಬೇತಿಯನ್ನು ಮುಖ್ಯವಾಗಿ ವಾಸ್ತವವಾಗಿ (ವರ್ಚ್ಯುಯಲ್) ವೆಬಿನಾರ್‌ಗಳು ಮತ್ತು ಆರು ಗಂಟೆಗಳಿಂದ 16 ಗಂಟೆಗಳ ಅವಧಿಯ ಕಾರ್ಯಾಗಾರಗಳ ಮೂಲಕ ಮಾಡಲಾಯಿತು. ಈ ವೆಬಿನಾರ್‌ಗಳು ಮತ್ತು ಕಾರ್ಯಾಗಾರಗಳಿಗೆ ಯಾವುದೇ ಮೌಲ್ಯಮಾಪನಗಳನ್ನು ನಡೆಸಲಾಗಿಲ್ಲ. ಸೈಬರ್ ಭದ್ರತೆಯಲ್ಲಿ ನಡೆಸಲಾದ ನಾಲ್ಕು ಕೋರ್ಸ್‌ಗಳು (ಐದರಿಂದ ಒಂಬತ್ತು ದಿನಗಳ ಅವಧಿ) ಮಾತ್ರ ಮೌಲ್ಯಮಾಪನಕ್ಕೆ ಒಳಪಟ್ಟಿವೆ. ಈ ನಾಲ್ಕು ಕೋರ್ಸ್‌ಗಳಿಗೆ ಹಾಜರಾಗಿದ್ದ 837 ಅಭ್ಯರ್ಥಿಗಳ ಪೈಕಿ ಕೇವಲ 73 ಮಂದಿ ಮಾತ್ರ ಮೌಲ್ಯಮಾಪನದಲ್ಲಿ ತೇರ್ಗಡೆಯಾಗಿದ್ದು,

[39] ಪ್ರಾರಂಭಿಕ ಪ್ಯಾಕೇಜು 1344 ಅಭ್ಯರ್ಥಿಗಳಿಗೆ ತರಬೇತಿ ನೀಡುವುದಕ್ಕೆ ಸಾಕಾಗುವ 25 ಮುಖ್ಯ ಪರವಾನಗಿಗಳು ಮತ್ತು 2 ಬೇಸ್ ಪರವಾನಗಿಗಳಿಂದ ಕೂಡಿತ್ತು.

[40] ಹೆಚ್ಚುವರಿ ಸಂಗ್ರಹಣ ಪ್ಯಾಕೇಜು 13 ಮುಖ್ಯ ಪರವಾನಗಿಗಳು ಮತ್ತು 2 ಬೇಸ್ ಪರವಾನಗಿಗಳಿಂದ ಕೂಡಿದೆ.

[41] ಮೂರು ವರ್ಷಗಳಿಗೆ ಗುರಿ: ಮುಂದುವರಿದ ಕೋರ್ಸ್-20; ಪ್ರಾಥಮಿಕ (ಫೌಂಡೇಶನ್) ಕೋರ್ಸ್‌ಗಳು-150; ತರಬೇತಿದಾರರಿಗೆ ತರಬೇತಿ-20; ಎಮ್‌ಬೆಡ್ಡೆಡ್ ಕೋರ್ಸ್‌ಗಳು-360; ನೋಡಲ್ ಸೆಂಟರ್-150; ಲೆಕ್ಚರ್ ಬೆಂಬಲ-50.

ಸೈಬರ್ ಭದ್ರತೆಯಲ್ಲಿ ತರಬೇತಿ ಪಡೆಯಬೇಕಿದ್ದ 4,000 ಅಭ್ಯರ್ಥಿಗಳ ವಾರ್ಷಿಕ ಗುರಿಗೆ ಹೋಲಿಸಿದರೆ ಇದು ತೀರಾ ಕಳಪೆಯಾಗಿತ್ತು.

- ಪಠ್ಯಕ್ರಮದ ವಿವರಗಳು ಮತ್ತು ಪಠ್ಯ ಸಾಮಗ್ರಿಗಳ ಅನುಮೋದನೆ, ಮಾನ್ಯತೆ, ಕೌಶಲ್ಯ ಸಂಸ್ಥೆಯಿಂದ ಮಾನ್ಯತೆ, ಇತ್ಯಾದಿಗಳನ್ನು ಇಲಾಖೆಯು ಪಡೆದಿಲ್ಲ. ಹೀಗಾಗಿ, ತರಬೇತಿ ಪಡೆದ ವ್ಯಕ್ತಿಗಳು ಮಾನ್ಯತೆಯ ಕೊರತೆಯಿಂದಾಗಿ ಪ್ರಯೋಜನ ಪಡೆಯದಿರಬಹುದು, ಇದು ಉದ್ಯಮದಿಂದ ಮಾನ್ಯತೆಯ ಕೊರತೆಗೆ ಸಮನಾಗಿರುತ್ತದೆ.

- ಕರ್ನಾಟಕ ಸರ್ಕಾರದಿಂದ ಆರಂಭಿಕ ಅವಧಿಯ (ಮೂರು ವರ್ಷಗಳು) ನಿಧಿ ಒದಗಿಸುವಿಕೆಯ ನಂತರ ಸಿಒಇ ತಮ್ಮ ಕಾರ್ಯಾಚರಣೆಯನ್ನು ತಾವಾಗಿಯೇ ಮುಂದುವರಿಸಲು ಯಾವುದೇ ಸಮರ್ಥನೀಯತೆಯ ಯೋಜನೆಯೂ ಇರಲಿಲ್ಲ.

- ಪ್ರಗತಿ ವರದಿಗಳು ಸೂಕ್ತ ರೀತಿಯಲ್ಲಿ ರಚನೆಯಾಗಿರಲಿಲ್ಲ ಮತ್ತು ಎಮ್ಒಯ ಸೂಚಿಸಿರುವ ವಿತರಣೆಯ ಅಂಶಗಳಿಗೆ ಹೊಂದಿಕೊಂಡಂತ ಯಾವುದೇ ಸರಿಯಾದ ಸ್ವರೂಪವನ್ನು ಹೊಂದಿರಲಿಲ್ಲ. ಇಂಟರ್ನ್‌ಶಿಪ್, ಇನ್‌ಕ್ಯುಬೇಟೆಡ್ ಸ್ಟಾರ್ಟ್‌ಅಪ್‌ಗಳು, ವರದಿಗಳು/ಸುದ್ದಿಪತ್ರ ಇತ್ಯಾದಿಗಳ ವಿಷಯದಲ್ಲಿ ಎಮ್ಒಎ ವಿತರಣೆಗಳ ಸಾಧನೆಯನ್ನು ಸಹ ಒದಗಿಸಲಾಗಿಲ್ಲ.

ಉತ್ತರವಾಗಿ ಸರ್ಕಾರವು ಪ್ರಮುಖ ಕೌಶಲ್ಯ ನಿರ್ಮಾಣ ಚಟುವಟಿಕೆಗಳನ್ನು ಪರಿಷ್ಕರಿಸಲಾಗಿದೆ ಮತ್ತು ವೆಬಿನಾರ್‌ಗಳು, ಉನ್ನತ ಸಂಸ್ಥೆಗಳ ಕೋರ್ಸ್‌ಗಳು, ಇತ್ಯಾದಿಗಳನ್ನು ಸೇರಿಸಲು ತಾಂತ್ರಿಕ ಸಮಿತಿಯ ಮಾರ್ಗದರ್ಶನದ ಆಧಾರದ ಮೇಲೆ ತರಬೇತಿಗಳಿಗೆ ಪಠ್ಯಕ್ರಮವನ್ನು ಸಿದ್ಧಪಡಿಸಲಾಗಿದೆ ಎಂದು ಹೇಳಿದೆ (ಆಗಸ್ಟ್ 2021). ಸಮರ್ಥನೀಯತೆಯನ್ನು ಸಾಧಿಸುವ ಗುರಿಯನ್ನು ಆಡಳಿತ ಮಂಡಳಿಯೊಂದಿಗೆ ಚರ್ಚಿಸಿ ಪರಿಶೀಲಿಸಬೇಕಾಗುವುದು. ಪ್ರತಿ ಟ್ರ್ಯಾಕ್‌ಗಳ ಎದುರಾಗಿ ಸಿಒಇಯ ಚಟುವಟಿಕೆಗಳು ಕಿಟ್ಸ್‌ನ ಡ್ಯಾಶ್‌ಬೋರ್ಡ್‌ನಲ್ಲಿ ಪ್ರತಿಬಿಂಬಿಸುತ್ತವೆ.

ಲೆಕ್ಕಪರಿಶೋಧನೆಯು ಅವಲೋಕನಗಳನ್ನು ನೀಡಿದ (ಫೆಬ್ರವರಿ 2020 ಮತ್ತು ಅಕ್ಟೋಬರ್ 2020) ನಂತರ 2019 ರಲ್ಲಿ ಸಹಿ ಮಾಡಲಾದ ಎಮ್ಒಎನಲ್ಲಿ ಒಪ್ಪಿಕೊಂಡ ಚೌಕಟ್ಟಿನ ಸಂಪೂರ್ಣ ಪರಿಷ್ಕರಣೆಯಾಗಿರುವುದರಿಂದ ಉತ್ತರವು ಸಮರ್ಥನೀಯವಲ್ಲ. ಪರಿಷ್ಕೃತ ಎಮ್ಒಎ, ವಿತರಣೆಗಳು, ತಾಂತ್ರಿಕ ಸಮಿತಿಯ ನಡಾವಳಿಗಳು, ಅಂತಿಮಗೊಳಿಸಲಾದ ಪಠ್ಯಕ್ರಮ, ವಾರ್ಷಿಕ ಗುರಿಗಳು, ಇತ್ಯಾದಿಗಳಂತಹ ಸಂಬಂಧಿತ ದಾಖಲೆಗಳಿಂದ ಉತ್ತರವನ್ನು ಬೆಂಬಲಿಸಲಾಗಿಲ್ಲ. ಆದ್ದರಿಂದ ಲೆಕ್ಕಪರಿಶೋಧನೆಯು ಮಾನದಂಡಗಳ ವಿರುದ್ಧ ಸಿಒಇನ ಕಾರ್ಯಕ್ಷಮತೆಯನ್ನು ಖಚಿತಪಡಿಸಲು ಸಾಧ್ಯವಾಗಲಿಲ್ಲ.

2.1.17.4. ಎವಿಜಿಸಿ ವಲಯಕ್ಕೆ ಸಿಒಇ

ಕೋಷ್ಟಕ ಸಂಖ್ಯೆ. 2.1.5: ಎವಿಜಿಸಿ ವಲಯಕ್ಕೆ ಸಿಒಎ ನ ಗುರಿ ಮತ್ತು ಸಾಧನೆಯನ್ನು ತೋರಿಸಲಾಗುತ್ತಿದೆ

ಕೈಗಾರಿಕೆ ಪಾಲುದಾರ	ಪ್ರಾರಂಭದ ದಿನಾಂಕ; ಯೋಜನೆಯ ವೆಚ್ಚ ಮತ್ತು ಖರ್ಚು	ವಾರ್ಷಿಕ ಗುರಿ	2018–19ರಲ್ಲಿ ಸಾಧಿಸಿದ್ದು	2019–20ರಲ್ಲಿ ಸಾಧಿಸಿದ್ದು
ಅಸೋಸಿಯೇಶನ್ ಆಫ್ ಬೆಂಗಳೂರು ಅನಿಮೇಶನ್ ಇಂಡಸ್ಟ್ರಿ (ಎಬಿಎಐ)	2019–20: ಯೋಜನೆಯ ವೆಚ್ಚ: ₹ 48.85 ಕೋಟಿ ಖರ್ಚು: ₹ 24.14 ಕೋಟಿ	ಪೂರ್ಣಗೊಳಿಸುವ ಶಾಲೆ (ಫಿನಿಶಿಂಗ್ ಸ್ಕೂಲ್): 82 ಅಭ್ಯರ್ಥಿಗಳ ಮೊದಲ ಬ್ಯಾಚ್‌ಗೆ ಡಿಸೆಂಬರ್ 2018ರ ಒಳಗೆ ತರಬೇತಿ ನೀಡಬೇಕಿತ್ತು ಮತ್ತು ಮೂರನೇ ಬ್ಯಾಚ್‌ಗೆ ಸಂಚಿತವಾಗಿ 318 ಅಭ್ಯರ್ಥಿಗಳಿಗೆ ಡಿಸೆಂಬರ್ 2019ರ ಒಳಗೆ ತರಬೇತಿ ನೀಡಬೇಕಿತ್ತು.	ಯಾವುದೂ ಇಲ್ಲ	ಲಭ್ಯವಿಲ್ಲ

ಎವಿಜಿಸಿ ಕಂಪನಿಗಳಿಗೆ ಅಗತ್ಯವಿರುವ ಹಲವಾರು ಸೇವೆಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಅತ್ಯಾಧುನಿಕ ಪರಿಹಾರಗಳು ಮತ್ತು ಡಿಜಿಟಲ್ ಮೂಲಸೌಕರ್ಯವನ್ನು ಸಿಒಇ ಹೊಂದಿರಬೇಕಿತ್ತು. ಸಿಒಇಯ ವ್ಯಾಪ್ತಿಯು ಡಿಜಿಟಲ್ ಪೋಸ್ಟ್‌ಪ್ರೊಡಕ್ಷನ್ ಪ್ರಯೋಗಾಲಯ ಮತ್ತು ಉದ್ಯಮದ ಅವಶ್ಯಕತೆಗಳನ್ನು ಪೂರೈಸಲು ಕೌಶಲ್ಯೀಕರಣದ ಅಂತರವನ್ನು ಕಡಿಮೆ ಮಾಡಲು ಪೂರ್ಣಗೊಳಿಸುವ ಶಾಲೆಯನ್ನು

ಒಳಗೊಂಡಿದೆ. ಜುಲೈ 2018 ರೊಳಗೆ ಪೂರ್ಣಗೊಳಿಸಲು ₹ 48.85 ಕೋಟಿ ಯೋಜನಾ ವೆಚ್ಚದಲ್ಲಿ ಅಸೋಸಿಯೇಷನ್ ಆಫ್ ಬೆಂಗಳೂರು ಅನಿಮೇಷನ್ ಇಂಡಸ್ಟ್ರಿ (ಎಬಿಎಐ) ಯೊಂದಿಗೆ ಎಮ್ಒಎ ಅನ್ನು ಕಾರ್ಯಗತಗೊಳಿಸಲಾಯಿತು (ಜನವರಿ 2018). ಪ್ರಯೋಗಾಲಯವು ಸೌಲಭ್ಯಗಳಿಂದ ಮೊದಲನೇ, ಎರಡನೇ ಮತ್ತು ಮೂರನೇ ವರ್ಷದ ಕಾರ್ಯಾಚರಣೆಗಳಲ್ಲಿ ಕ್ರಮವಾಗಿ ₹ 1.63 ಕೋಟಿ, ₹ 8.91 ಕೋಟಿ ಮತ್ತು ₹ 12.95 ಕೋಟಿ ಆದಾಯವನ್ನು ಗಳಿಸುವ ಗುರಿಯನ್ನು ಹೊಂದಿತ್ತು.

- ಸಲಕರಣೆಗಳ ಸಂಗ್ರಹಣೆಯು ವಿಳಂಬವಾದ ಕಾರಣ ಎರಡು ವರ್ಷಗಳಿಗಿಂತ ಹೆಚ್ಚು ಕಾಲ ಕಳೆದರೂ ಸಹ ಸಿಓಇ ಪೂರ್ಣಗೊಂಡಿಲ್ಲ. ಸಂಗ್ರಹಣೆಗೆ ಮಾನದಂಡಗಳನ್ನು ಅಳವಡಿಸಿಕೊಳ್ಳಬೇಕಾದ ವಿಷಯದಲ್ಲಿ ಕಿಟ್ಸ್ ಮತ್ತು ಎಬಿಎಐ ನಡುವಿನ ವಿವಾದದಿಂದಾಗಿ ಈ ವಿಳಂಬವಾಗಿತ್ತು. ಖರೀದಿಗಳಿಗೆ ಅಳವಡಿಸಿಕೊಳ್ಳಬೇಕಾದ ಮಾನದಂಡಗಳನ್ನು ಒಳಗೊಂಡು ಎಮ್ಒಎ ರಚಿಸಿದ್ದರೆ ಇದನ್ನು ತಪ್ಪಿಸಬಹುದಿತ್ತು.

- ಕಿಟ್ಸ್ ₹ 24.14 ಕೋಟಿಯನ್ನು ಬಿಡುಗಡೆ ಮಾಡಿತ್ತು, ಇದರಲ್ಲಿ ಭಾಗಶಃ ಆರಂಭಿಸಿದ ಸಿಓಇನ ಕಾರ್ಯಾಚರಣೆ ವೆಚ್ಚವಾದ ₹ 7.53 ಕೋಟಿ ಒಳಗೊಂಡಿತ್ತು. 53 ಸೀಟುಗಳನ್ನು ಹೊಂದಿರುವ ನಾಲ್ಕು ಸ್ಟಾರ್ಟ್‌ಅಪ್ ಕಂಪನಿಗಳು ಈ ಸೌಲಭ್ಯವನ್ನು ಬಳಸುತ್ತಿದ್ದವು. ಸಿಓಇಯನ್ನು ಸಂಪೂರ್ಣವಾಗಿ ಕಾರ್ಯಗತಗೊಳಿಸಲು ಅಗತ್ಯವಿರುವ ಬಾಕಿ ಉಪಕರಣಗಳ ಖರೀದಿಗೆ ಸಂಬಂಧಿಸಿದಂತೆ ಯಾವುದೇ ವಿವರಗಳು ಲಭ್ಯವಿರಲಿಲ್ಲ. ಈ ಸೌಲಭ್ಯವನ್ನು ಪೂರ್ಣಗೊಳಿಸುವ ದಿನಾಂಕದಿಂದ ಎರಡು ವರ್ಷಗಳಿಗಿಂತಲೂ ಹೆಚ್ಚು ಅವಧಿಯ ನಂತರವೂ ಕೇವಲ ನಾಲ್ಕು ಕಂಪನಿಗಳು ಮಾತ್ರ ಬಳಸುತ್ತಿರುವುದನ್ನು ಪರಿಗಣಿಸಿದಾಗ ಸಿಓಇಯ ಆರ್ಥಿಕ ಕಾರ್ಯಸಾಧ್ಯತೆಯ ನಿರೀಕ್ಷೆಗಳು ಅನುಮಾನಾಸ್ಪದವಾಗಿತ್ತು.

- ಪೂರ್ಣಗೊಳಿಸುವ ಶಾಲೆ ಕ್ರಿಯಾತ್ಮಕವಾಗಿದೆ ಎಂದು ಹೇಳಲಾಗಿದ್ದರೂ, ಪಠ್ಯಕ್ರಮದ ಅಂತಿಮಗೊಳಿಸುವಿಕೆ ಮತ್ತು ತರಬೇತಿ ಕಾರ್ಯಕ್ರಮಗಳನ್ನು ನಡೆಸದಿರಲು ಕಾರಣಗಳು ಕಂಡುಬರಲಿಲ್ಲ.

ಹೀಗಾಗಿ, ಸಿಓಇ ಅದರ ನಿಗದಿತ ಪೂರ್ಣಗೊಳ್ಳುವ ದಿನಾಂಕದಿಂದ (ಜುಲೈ 2018) ಎರಡು ವರ್ಷಗಳಿಗಿಂತ ಹೆಚ್ಚಿನ (ಮಾರ್ಚ್ 2021) ಅವಧಿಯ ನಂತರವೂ ಭಾಗಶಃ ಪೂರ್ಣಗೊಂಡಿರುವ ಕಾರಣ ವಲಯಕ್ಕೆ ಪ್ರಯೋಜನವಾಗಿಲ್ಲ.

ಜೂನ್ 2019[42] ರಿಂದ ತನ್ನ ಸ್ವಂತ ಆದಾಯದೊಂದಿಗೆ ಸಿಓಇ ಸೌಲಭ್ಯವು ತನ್ನ ಕಾರ್ಯಾಚರಣೆಯನ್ನು ಪ್ರಾರಂಭಿಸಿದೆ ಮತ್ತು ಎಬಿಎಐ ಖರೀದಿಗೆ ಎಲ್ಲಾ ಕಾರ್ಯವಿಧಾನಗಳನ್ನು ಅನುಸರಿಸಿದೆ ಎಂದು ಸರ್ಕಾರವು ಹೇಳಿದೆ(ಆಗಸ್ಟ್ 2021). ಎಬಿಎಐ ಮೂರನೇ ಸೆಟ್ ಮತ್ತು ನಾಲ್ಕನೇ ಬ್ಯಾಚ್‌ಗಾಗಿ ಖರೀದಿ ಪಟ್ಟಿಯನ್ನು ಸಲ್ಲಿಸಿದೆ ಮತ್ತು ಹಣದ ಲಭ್ಯತೆಯಿಲ್ಲದ ಕಾರಣ ಪಾವತಿಯನ್ನು ಬಿಡುಗಡೆ ಮಾಡಲಾಗಿಲ್ಲ ಎಂದು ಹೇಳಲಾಗಿದೆ. 176 ಸೀಟುಗಳನ್ನು ಹೊಂದಿರುವ ಒಂಬತ್ತು ಸ್ಟಾರ್ಟ್‌ಅಪ್‌ಗಳು ಈ ಸೌಲಭ್ಯವನ್ನು ಬಳಸುತ್ತಿದ್ದವು. ಪೂರ್ಣಗೊಳಿಸುವ ಶಾಲೆಯು 348 ವಿದ್ಯಾರ್ಥಿಗಳಿಗೆ ವೆಬಿನಾರ್ ಸೆಷನ್‌ಗಳನ್ನು ನಡೆಸಿದೆ ಮತ್ತು ಪ್ರಸ್ತುತ ಕೋರ್ಸ್‌ನ ಪಠ್ಯಕ್ರಮದಲ್ಲಿ ಕಾರ್ಯನಿರ್ವಹಿಸುತ್ತಿದೆ.

ಎರಡನೇ ವರ್ಷದ ಅಂತ್ಯದ ವೇಳೆಗೆ ₹ 10.54 ಕೋಟಿ ನಿರೀಕ್ಷಿತ ಆದಾಯದ ಶೇಕಡ 10 ಕ್ಕಿಂತ ಕಡಿಮೆ (₹ 0.94 ಕೋಟಿ) ಆದಾಯವು ಉತ್ಪತ್ತಿಯಾಗಿರುವುದರಿಂದ ಉತ್ತರವು ಸಮರ್ಥನೀಯವಲ್ಲ. ಇದಲ್ಲದೆ, ಖರೀದಿಗಳು ವಿಳಂಬವಾಗಿವೆ ಮತ್ತು ಉಪಕರಣಗಳನ್ನು ಇನ್ನೂ ಅಳವಡಿಸಲಾಗಿಲ್ಲ. ಪೂರ್ಣಗೊಳಿಸುವ ಶಾಲೆಯ ಪಠ್ಯಕ್ರಮವು ಸಹ ವಿಪರೀತವಾಗಿ ವಿಳಂಬವಾಯಿತು.

[42] 2019-20 – ₹ 42.59 ಲಕ್ಷ ಮತ್ತು 2020-21 – ₹ 51.59 ಲಕ್ಷ.

2.1.17.5. ಕೃತಕ ಬುದ್ಧಿಮತ್ತೆ ಮತ್ತು ರೊಬೊಟಿಕ್ಸ್‌ಗಾಗಿ ಸಿಓಇ

ಕೋಷ್ಟಕ ಸಂಖ್ಯೆ. 2.1.6: ಕೃತಕ ಬುದ್ಧಿಮತ್ತೆ ಮತ್ತು ರೊಬೊಟಿಕ್ಸ್‌ಗಾಗಿ ಸಿಓಇನ ಗುರಿ ಮತ್ತು ಸಾಧನೆಯನ್ನು ತೋರಿಸಲಾಗುತ್ತಿದೆ

ಕೈಗಾರಿಕ ಪಾಲುದಾರ	ಪ್ರಾರಂಭದ ದಿನಾಂಕ; ಯೋಜನೆಯ ವೆಚ್ಚ ಮತ್ತು ಖರ್ಚು	ವಾರ್ಷಿಕ ಗುರಿ – ತರಬೇತಿ ಪಡೆಯಬೇಕಿದ್ದ ವ್ಯಕ್ತಿಗಳ ಸಂಖ್ಯೆ	2018–19ರಲ್ಲಿ ಸಾಧಿಸಿದ್ದು	2019–20ರಲ್ಲಿ ಸಾಧಿಸಿದ್ದು
ಮಾಹಿತಿ ತಂತ್ರಜ್ಞಾನದ ಅಂತರರಾಷ್ಟ್ರೀಯ ಸಂಸ್ಥೆ (ಐಐಐಟಿ–ಬಿ), ಬೆಂಗಳೂರು	2018–19; ಯೋಜನೆಯ ವೆಚ್ಚ: ₹ 34.35 ಕೋಟಿ ಖರ್ಚು: ₹ 8.52 ಕೋಟಿ	1,000	ಯಾವುದೂ ಇಲ್ಲ	ಲಭ್ಯವಿಲ್ಲ

ಬೆಂಗಳೂರಿನ ಐಐಐಟಿ ಸಹಯೋಗದಲ್ಲಿ ₹ 34.35 ಕೋಟಿಗೆ ಸಿಓಇ ಸ್ಥಾಪನೆಗೆ (ಫೆಬ್ರವರಿ 2018) ಅನುಮೋದನೆ ನೀಡಲಾಗಿದೆ.

- ಎಮ್‌ಓಎಗೆ 2019 ರ ಆಗಸ್ಟ್‌ನಲ್ಲಿ, ಅಂದರೆ 18 ತಿಂಗಳುಗಳಿಗಿಂತ ಹೆಚ್ಚು ವಿಳಂಬದ ನಂತರವಷ್ಟೇ ವಿತರಣೆಗಳು 2020–21 ರಿಂದ ಸಲ್ಲುವ ರೀತಿಯಲ್ಲಿ ಸಹಿ ಮಾಡಲಾಯಿತು.

- ಕರ್ನಾಟಕ ಸರ್ಕಾರವು ₹ 8.52 ಕೋಟಿ (ಜೂನ್ 2020) ಬಿಡುಗಡೆ ಮಾಡಿದೆ ಮತ್ತು ಸಂಬಂಧಿತ ವರದಿಗಳು ಲಭ್ಯವಿಲ್ಲದ ಕಾರಣ ತರಬೇತಿ ವಿತರಣೆಯಲ್ಲಿನ ವಿಳಂಬಗಳನ್ನು (ಸ್ಲಿಪ್ಪೇಜಸ್) ಖಚಿತಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ.

- ಉತ್ತರವಾಗಿ ಸರ್ಕಾರವು ಕರ್ನಾಟಕಕ್ಕೆ ಕೃತಕ ಬುದ್ಧಿಮತ್ತೆ ಮತ್ತು ರೊಬೊಟಿಕ್ಸ್ ಕ್ಷೇತ್ರಗಳಲ್ಲಿ ವಿಶ್ವ ದರ್ಜೆಯ ಸಂಶೋಧನಾ ಸಾಮರ್ಥ್ಯವನ್ನು ಸ್ಥಾಪಿಸುವುದು ಸಿಓಇಯ ಪ್ರಾಥಮಿಕ ಕರ್ತವ್ಯವಾಗಿದೆ ಎಂದು ಹೇಳಿದೆ (ಆಗಸ್ಟ್ 2021). ಸಿಓಇ ತನ್ನ ಸಂಶೋಧನಾ ತೊಡಗುವಿಕೆಗಳಲ್ಲಿ ಸ್ಥಿರ ಸ್ಥಿತಿಯಲ್ಲಿದೆ ಮತ್ತು ಸಾಮರ್ಥ್ಯ ನಿರ್ಮಾಣ ಕಾರ್ಯಕ್ರಮಗಳ ಮೇಲೆ ಮತ್ತಷ್ಟು ಗಮನಹರಿಸುತ್ತದೆ. ಎಮ್‌ಐಎನ್‌ಆರ್‌ಓ ಸಂಶೋಧನಾ ಬೆಂಬಲದಿಂದ ಒಟ್ಟು 92 ಸಂಶೋಧನಾ ವಿದ್ಯಾರ್ಥಿಗಳು ಪ್ರಯೋಜನ ಪಡೆದಿದ್ದಾರೆ ಮತ್ತು 624 ಫಲಾನುಭವಿಗಳು ಜ್ಞಾನ ಪ್ರಸರಣ ಕಾರ್ಯಕ್ರಮಗಳಿಂದ ಪ್ರಯೋಜನ ಪಡೆದಿದ್ದಾರೆ. ಒಪ್ಪಂದಗಳಿಗೆ ಸಹಿ ಹಾಕಲು ಐಐಐಟಿ–ಬಿ ಗೆ ತನ್ನ ಆಡಳಿತ ಮಂಡಳಿಯ ಅನುಮೋದನೆ ಅಗತ್ಯವಿರುವುದರಿಂದ ವಿಳಂಬವಾಗಿದೆ.

ಸಿಓಇ ಇನ್ನಿತರವುಗಳ ಜೊತೆಗೆ ವಾರ್ಷಿಕವಾಗಿ ಸರಾಸರಿ 1,000 ಪದವಿಪೂರ್ವ ವಿದ್ಯಾರ್ಥಿಗಳಿಗೆ ತರಬೇತಿ ನೀಡಿ ಅವರನ್ನು ಉದ್ಯೋಗಕ್ಕೆ ಸಿದ್ಧಗೊಳಿಸಬೇಕೆಂಬ ನಿರೀಕ್ಷೆಯಿದ್ದಿದ್ದರಿಂದ ಉತ್ತರವು ಸಮರ್ಥನೀಯವಲ್ಲ. ತರಬೇತಿ ಪಡೆದ ಮತ್ತು ಉದ್ಯೋಗ ಪಡೆದಿರುವ ಪದವಿಪೂರ್ವ ವಿದ್ಯಾರ್ಥಿಗಳ ಸಂಖ್ಯೆಯ ಪ್ರಮುಖ ಮೈಲಿಗಲ್ಲಿನ ಕುರಿತು ಉತ್ತರವು ಮೌನವಾಗಿದೆ.

ಹೀಗಾಗಿ, ತರಬೇತಿ ಪಡೆದ ಸಿಬ್ಬಂದಿಗಳ ಲಭ್ಯತೆಯ ಅಗತ್ಯವಿರುವ ಉದಯೋನ್ಮುಖ ತಂತ್ರಜ್ಞಾನಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಮ್‌ಎಸ್‌ಎಮ್‌ಇ ವಲಯದ ಅಗತ್ಯಗಳನ್ನು ಪೂರೈಸಲು ಸಿಓಇಗಳನ್ನು ಕ್ರಿಯಾತ್ಮಕಗೊಳಿಸಲು ಸಾಧ್ಯವಾಗದ ಕಾರಣ, ಸಿಓಇಗಳ ಮೂಲಕ ಕೌಶಲ್ಯೀಕರಣಕ್ಕೆ ಮಾಡಿದ ₹ 74.04 ಕೋಟಿ ವೆಚ್ಚವು ಬಹುಮಟ್ಟಿಗೆ ನಿಷ್ಪ್ರಯೋಜಕವಾಗಿದೆ. ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಕಿಟ್ಸ್ ಗೆ ಎಲ್ಲಾ ಸಿಓಇಗಳನ್ನು ಮಾಸಿಕ ಮೇಲ್ವಿಚಾರಣೆ ಮಾಡಬೇಕೆಂದು ನಿರ್ದೇಶನ ನೀಡಿದ್ದರೂ(ಜೂನ್ 2018), ಎಲ್ಲಾ ಸಿಓಇಗಳ ಮಾಸಿಕ ವಿಮರ್ಶೆಗಳು ನಡೆಯಲಿಲ್ಲ. ಹೀಗಾಗಿ, ಇಲಾಖೆಯು ಕೌಶಲ್ಯೀಕರಣದ ಪ್ರಮುಖ ನೀತಿ ತೊಡಗುವಿಕೆಯನ್ನು ನಿರ್ಲಕ್ಷಿಸಿದೆ ಮತ್ತು ಉದ್ದೇಶವನ್ನು ಪೂರೈಸುವಲ್ಲಿ ವಿಫಲವಾಗಿದೆ.

ಉತ್ತರವಾಗಿ ಉದಯೋನ್ಮುಖ ತಂತ್ರಜ್ಞಾನಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಮ್‌ಎಸ್‌ಎಮ್‌ಇ ವಲಯದ ಅಗತ್ಯಗಳನ್ನು ಪೂರೈಸಲು ಸಿಓಇಗಳನ್ನು ಕ್ರಿಯಾತ್ಮಕಗೊಳಿಸಿರುವುದರಿಂದ ಸಿಓಇ ಮೂಲಕ ಕೌಶಲ್ಯೀಕರಣಕ್ಕೆ ಮಾಡಿದ ₹ 74.04 ಕೋಟಿ ವೆಚ್ಚವು ನಿಷ್ಪ್ರಯೋಜಕವಾಗಿರಲಿಲ್ಲ ಎಂದು ಸರ್ಕಾರ ಹೇಳಿದೆ(ಆಗಸ್ಟ್ 2021). ಸಿಓಇ ತಂಡಗಳು ಅಪಾರ ತರಬೇತಿ ಪಡೆದ ಸಿಬ್ಬಂದಿಯನ್ನು ಹೊಂದಿದ್ದವು

ಮತ್ತು ಇಲಾಖೆಯು ಸಿಒಇ ಡ್ಯಾಶ್‌ಬೋರ್ಡ್ ಅನ್ನು ಅಭಿವೃದ್ಧಿಪಡಿಸುತ್ತಿದೆ ಮತ್ತು ಅಲ್ಲಿ ಎಲ್ಲಾ ಸಿಒಇಗಳನ್ನು ನಿಯಮಿತವಾಗಿ ಮೇಲ್ವಿಚಾರಣೆ ಮಾಡಲಾಗುತ್ತದೆ ಎಂದು ಹೇಳಲಾಗಿದೆ.

ಸಿಒಇಗಳು ತರಬೇತಿ ಪಡೆದ ವೃತ್ತಿಪರರು/ಉದ್ಯೋಗಸಿದ್ಧ ವಿದ್ಯಾರ್ಥಿಗಳನ್ನು ಉದಯೋನ್ಮುಖ ತಂತ್ರಜ್ಞಾನಗಳಿಗೆ ಒದಗಿಸುವುವೆಂದು ನಿರೀಕ್ಷಿಸಲಾಗಿತ್ತಾದ್ದರಿಂದ ಉತ್ತರವು ಸಮರ್ಥನೀಯವಲ್ಲ. ವೆಬಿನಾರ್‌ಗಳು/ಕಾರ್ಯಾಗಾರಗಳು/ಮಾಸ್ ಎಕ್ಸ್‌ಪೋಶರ್/ ಓರಿಯಂಟೇಶನ್/ ಫೌಂಡೇಶನ್/ಬೇಸಿಕ್ ಲೆವೆಲ್ ಕೋರ್ಸ್‌ಗಳಂತಹ ಒಂದು ದಿನ/ಅಲ್ಪಾವಧಿಯ ತರಬೇತಿಗಳು ಈ ಉದ್ದೇಶವನ್ನು ಸಾಧಿಸದಿರಬಹುದು. ಇದಲ್ಲದೆ, ಸಿಒಇಗಳನ್ನು ಮೇಲ್ವಿಚಾರಣೆ ಮಾಡಲು ಡ್ಯಾಶ್‌ಬೋರ್ಡನ್ನು ಇನ್ನೂ ಅಭಿವೃದ್ಧಿಪಡಿಸಬೇಕಾಗಿದೆ.

ಡಿಜಿಟಲ್ ಕಲಾ ಕೇಂದ್ರಗಳು (ಡಿಜಿಟಲ್ ಆರ್ಟ್ ಸೆಂಟರ್ಸ್)

2.1.18. 2017 ರ ಎವಿಜಿಸಿ ನೀತಿಯು ಹಿಂದಿನ ನೀತಿಯ (2012) ಕಾರ್ಯಕ್ರಮದ ಮುಂದುವರಿಕೆಯಲ್ಲಿ 50 ಲಲಿತಕಲಾ ಕಾಲೇಜುಗಳಲ್ಲಿ ಡಿಜಿಟಲ್ ಕಲಾ ಕೋರ್ಸ್‌ಗಳನ್ನು ನಡೆಸಲು ಡಿಜಿಟಲ್ ಕಲಾ ಕೇಂದ್ರಗಳನ್ನು ಸ್ಥಾಪಿಸಲು ಯೋಜಿಸಿತು. ಕಾರ್ಯಕ್ರಮದ ಅಡಿಯಲ್ಲಿ, ಪ್ರತಿ ಕಾಲೇಜಿಗೆ ಅಗತ್ಯವಿರುವ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್[43] ಹೊಂದಲು ಒಟ್ಟು ₹ 30 ಲಕ್ಷವನ್ನು ಅನುದಾನದ ರೂಪದಲ್ಲಿ (ವರ್ಷಕ್ಕೆ ₹ 10 ಲಕ್ಷ ಮೂರು ವರ್ಷಗಳ ಅವಧಿಗೆ ಸೀಮಿತಗೊಳಿಸಲಾಗಿದೆ) ಮತ್ತು ಕಿಟ್ಸ್ ಎಬಿಎಐಯನ್ನು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಸಂಸ್ಥೆಯಾಗಿ ನೇಮಿಸಿದೆ.

ಇಲಾಖೆಯು ₹ 5.47 ಕೋಟಿ (2012ರ ನೀತಿ – ₹ 1.47 ಕೋಟಿ ಮತ್ತು 2017ರ ನೀತಿ – ₹ 4 ಕೋಟಿ) ಬಿಡುಗಡೆ ಮಾಡಿದ್ದು, ಈ ಕಾರ್ಯಕ್ರಮದ ಅಡಿಯಲ್ಲಿ ಏಳು ಕಾಲೇಜುಗಳಲ್ಲಿ 267 ವಿದ್ಯಾರ್ಥಿಗಳು (2012 ನೀತಿ) ಕೋರ್ಸ್‌ಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ ಮತ್ತು 381 ವಿದ್ಯಾರ್ಥಿಗಳ (2017 ನೀತಿ) ತರಬೇತಿ ಇನ್ನೂ ಪ್ರಸ್ತುತದಲ್ಲಿದೆ(ಮಾರ್ಚ್ 2021).

ಲೆಕ್ಕಪರಿಶೋಧನೆಯ ಪರಿಶೀಲನೆಯು ಈ ಕೆಳಗಿನ ಲೋಪದೋಷಗಳು/ನ್ಯೂನತೆಗಳನ್ನು ಬಹಿರಂಗಪಡಿಸಿದೆ:

- ಕಿಟ್ಸ್ ಆಗಸ್ಟ್ 2016 ರಲ್ಲಿ ನಡೆದ ಸಭೆಯಲ್ಲಿ ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ನಿಗಮದಿಂದ (ಎನ್‌ಎಸ್‌ಡಿಸಿ) ಕೋರ್ಸ್ ಅನ್ನು ಪ್ರಮಾಣೀಕರಿಸಬೇಕು ಎಂದು ಒತ್ತಾಯಿಸಿತು. ಈ ಮಾನದಂಡವನ್ನು ಎವಿಜಿಸಿ ನೀತಿ 2017 ರಲ್ಲಿ ಸಹ ಸೇರಿಸಲಾಗಿದೆ, ಇದರಲ್ಲಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಸಂಸ್ಥೆಗಳು ಹಾಗೂ ಎನ್‌ಎಸ್‌ಡಿಸಿ, ಎವಿಜಿಸಿ ಸ್ಟುಡಿಯೋಗಳು ಮತ್ತು ಇನ್‌ಸ್ಟಿಟ್ಯೂಟ್‌ಗಳಂತಹ ಸಂಸ್ಥೆಗಳೊಂದಿಗೆ ಇತ್ತೀಚಿನ ತಂತ್ರಜ್ಞಾನವನ್ನು ತರಲು ಮತ್ತು ಸಾಂಪ್ರದಾಯಿಕ ಕಲಾ ಕಾಲೇಜುಗಳಿಗೆ ಪ್ರಯೋಜನವಾಗುವಂತೆ ಏಕರೂಪದ ಪಠ್ಯಕ್ರಮವನ್ನು ಅಭಿವೃದ್ಧಿಪಡಿಸಲು ಒಪ್ಪಂದ ಅಥವಾ ಎಂಒಯುಗೆ ಸಹಿ ಮಾಡಲು ಪ್ರಸ್ತಾಪಿಸಲಾಗಿದೆ. ಆದರೆ ಅಂತಹ ಯಾವುದೇ ಮಾನ್ಯತೆ ಇಲ್ಲದೆ ತರಬೇತಿ ಕೋರ್ಸನ್ನು ಒದಗಿಸಲಾಗಿದೆ ಮತ್ತು ಸರಿಯಾದ ಮಾನ್ಯತೆಯ ಅನುಪಸ್ಥಿತಿಯಲ್ಲಿ, ಕಾರ್ಯಕ್ರಮದ ಮೂಲಕ ಒದಗಿಸಿದ ತರಬೇತಿಗೆ ಸೂಕ್ತವಾದ ಉದ್ಯೋಗದ ರೂಪದಲ್ಲಿ ಅಪೇಕ್ಷಿತ ಫಲಿತಾಂಶಗಳು ದೊರಕದೇ ಇರಬಹುದು.

- ಸರಬರಾಜು ಮಾಡಲಾದ ಸಲಕರಣೆಗಳ ಮಾಲೀಕತ್ವವು ಎಬಿಎಐನಲ್ಲಿ ಉಳಿಯುತ್ತದೆ ಮತ್ತು ನಾಮಮಾತ್ರದ ಉಳಿಕೆ ಮೌಲ್ಯಕ್ಕೆ ಮೂರು ವರ್ಷಗಳ ಕೊನೆಯಲ್ಲಿ ಮಾಲೀಕತ್ವದ ವರ್ಗಾವಣೆಗೆ ಅವಕಾಶ ನೀಡುತ್ತದೆ ಎಂಬ ಷರತ್ತಿನೊಂದಿಗೆ(ಷರತ್ತು 4(ಡಿ)) ಎಬಿಎಐ ಲಲಿತಕಲಾ ಕಾಲೇಜುಗಳೊಂದಿಗೆ ಒಪ್ಪಂದಗಳನ್ನು ಮಾಡಿಕೊಂಡಿತು. ಎಬಿಎಐ ಜೊತೆಗಿನ ಎಮ್‌ಒಎ ನಲ್ಲಿ ಇಲಾಖೆಯು ಅಂತಹ ಯಾವುದೇ ಷರತ್ತನ್ನು ಒಪ್ಪದಿದ್ದರೂ ಸಹ ಲಲಿತಕಲಾ ಕಾಲೇಜುಗಳೊಂದಿಗೆ ಎಬಿಎಐ ಮಾಡಿಕೊಂಡ ಒಪ್ಪಂದವನ್ನು ಇಲಾಖೆಯು ವಿರೋಧಿಸಲಿಲ್ಲ.

[43] ಅಡೋಬ್ ಫೋಟೋಶಾಪ್ ಸಾಫ್ಟ್‌ವೇರ್, ಡೆಸ್ಕ್‌ಟಾಪ್‌ಗಳು, ಪ್ರಿಂಟರ್‌ಗಳು, ಪ್ರೊಜೆಕ್ಟರ್, ಲ್ಯಾಪ್‌ಟಾಪ್‌ಗಳು, ಗ್ರಾಫಿಕ್ ಟ್ಯಾಬ್ಲೆಟ್, ಇತ್ಯಾದಿಗಳ ರೀತಿ.

ಕಿಟ್ಸ್ ಉಪಕರಣಗಳಿಗೆ ಧನಸಹಾಯ ನೀಡಿದ್ದರಿಂದ ಕಾಲೇಜುಗಳು ಎಬಿಎಐಗೆ ಉಪಕರಣಗಳನ್ನು ಹಿಂದಿರುಗಿಸುವ ಅಥವಾ ಉಳಿಕೆ ಮೌಲ್ಯದಲ್ಲಿ ಖರೀದಿಸುವ ಹಿಂದಿನ ತಾರ್ಕಿಕ ಕಾರಣವು ಸಮರ್ಥನೆಯನ್ನು ಹೊಂದಿಲ್ಲ.

ಉತ್ತರವಾಗಿ ಸರ್ಕಾರವು ಪ್ರಮಾಣಪತ್ರಗಳನ್ನು ನೀಡಲು ಎಬಿಎಐ ಸ್ವತಃ ಮಾನ್ಯತೆ ಪಡೆದ ಪ್ರಾಧಿಕಾರವಾಗಿದೆ ಎಂದು ಹೇಳಿದೆ (ಆಗಸ್ಟ್ 2021). ಕಾಲೇಜುಗಳಿಗೆ ಒದಗಿಸಲಾದ ಸಲಕರಣೆಗಳ ಮಾಲೀಕತ್ವದ ವಿಷಯದ ದೋಷಯುಕ್ತ ಎಮ್ಒಎ ಷರತ್ತಿನ ಬಗ್ಗೆ ಇಲಾಖೆ ಉತ್ತರವನ್ನು ನೀಡಲಿಲ್ಲ. ಇದಲ್ಲದೆ, 134 ವಿದ್ಯಾರ್ಥಿಗಳ ಉದ್ಯೋಗ ವಿವರಗಳನ್ನು ಲಗತ್ತಿಸಲಾಗಿದೆ ಎಂದು ತಿಳಿಸಲಾಗಿದೆ.

ಆಗಸ್ಟ್ 2016 ರಲ್ಲಿ ನಡೆದ ಸಭೆಯಲ್ಲಿ ಎನ್ಎಸ್‌ಡಿಸಿಯಿಂದ ಕೋರ್ಸನ್ನು ಪ್ರಮಾಣೀಕರಿಸಲು ಎಬಿಎಐ ದೃಢೀಕರಣವನ್ನು ನೀಡಬೇಕೆಂದು ಕಿಟ್ಸ್ ಒತ್ತಾಯಿಸಿದ್ದರಿಂದ ಉತ್ತರವು ಸಮರ್ಥನೀಯವಲ್ಲ. ಆದಾಗ್ಯೂ, ಇದನ್ನು ಕಿಟ್ಸ್ ಅನುಸರಿಸಲಿಲ್ಲ ಮತ್ತು ಸರಿಯಾದ ಪ್ರಮಾಣೀಕರಣವಿಲ್ಲದೆ ಕೋರ್ಸ್‌ಗಳನ್ನು ಮುಂದುವರಿಸಲಾಯಿತು. ಉದ್ಯೋಗಿಗಳ ಪಟ್ಟಿಯು ಕಂಪನಿಗಳ ವಿವರಗಳನ್ನು ನೀಡದೇ (21 ಅಭ್ಯರ್ಥಿಗಳನ್ನು ಹೊರತುಪಡಿಸಿ) ಅಭ್ಯರ್ಥಿಯ ಹೆಸರು ಮತ್ತು ಅವರ ಹುದ್ದೆಯನ್ನು ಮಾತ್ರ ಒದಗಿಸಿದೆ.

ಹೀಗಾಗಿ, ವಿವಿಧ ವಲಯಗಳಲ್ಲಿ ಇಲಾಖೆಯ ಎಲ್ಲಾ ಕೌಶಲ್ಯೀಕರಣ ತೊಡಗುವಿಕೆಗಳು ಅಪೇಕ್ಷಿತ ಫಲಿತಾಂಶಗಳನ್ನು ನೀಡುವಲ್ಲಿ ವಿಫಲವಾಗಿವೆ. ಇದಲ್ಲದೆ, ಪ್ರಸ್ತುತ ಸಮಯದಲ್ಲಿ, ತರಬೇತಿ ನೀಡುವ **ಪರಿಕಲ್ಪನೆಯು ಬೃಹತ್ ಮುಕ್ತ ಆನ್‌ಲೈನ್ ಕೋರ್ಸ್‌ಗಳ (ಎಮ್ಒಒಸಿ)**[44] ಆಗಮನದೊಂದಿಗೆ ಅಮೂಲಾಗ್ರ ಬದಲಾವಣೆಗೆ ಒಳಗಾಯಿತು. ಅವು ವೆಚ್ಚವನ್ನು ಮೀರಿದ ಮೌಲ್ಯ (ಕಾಸ್ಟ್ ಎಫೆಕ್ಟೀವ್), ಹೊಂದಿಕೊಳ್ಳುವ ಕಲಿಕೆಯ ಮಾಡ್ಯೂಲ್‌ಗಳನ್ನು ಹೊಂದಿದ್ದು ವ್ಯಾಪಕ ಸ್ವೀಕಾರವನ್ನು ಗಳಿಸಿವೆ. ಇದಲ್ಲದೆ, ಕ್ಯಾಂಪಸ್ ನೇಮಕಾತಿಯ ನಂತರ ತಮ್ಮ ಹೊಸ ನೇಮಕಾತಿಗಳಿಗೆ ತಂತ್ರಜ್ಞಾನ ಆಧಾರಿತ ಕಂಪನಿಗಳಿಂದ ತರಬೇತಿಯನ್ನು ನೀಡಲಾಗುತ್ತದೆ. ಈ ಸಂದರ್ಭದಲ್ಲಿ, ಕೌಶಲ್ಯೀಕರಣದಲ್ಲಿ ಇಲಾಖಾ ಮಧ್ಯಸ್ಥಿಕೆಗಳು ಮಟ್ಟವನ್ನು ಹೆಚ್ಚಿಸದ ಹೊರತು ಮತ್ತು ಆಧುನಿಕ ಶಿಕ್ಷಣಶಾಸ್ತ್ರಗಳಿಗೆ ಹೊಂದಿಕೊಳ್ಳದ ಹೊರತು, ಕೇಂದ್ರೀಕೃತವಲ್ಲದ ತರಬೇತಿ ಕಾರ್ಯಕ್ರಮಗಳಲ್ಲಿ ಸಂಪನ್ಮೂಲಗಳ ನಿಯೋಜನೆಯು ಯಾವುದೇ ಪ್ರಯೋಜನವನ್ನು ನೀಡುವುದಿಲ್ಲ ಮತ್ತು ಉದ್ದೇಶಿತ ಉದ್ದೇಶಗಳನ್ನು ಪೂರೈಸದ ಕಾರಣ ಅತಿರೇಕವಾಗಿ ಪರಿಣಮಿಸಲಿದೆ. ಕೌಶಲ್ಯೀಕರಣದ ತೊಡಗುವಿಕೆಗಳನ್ನು ರೂಪಿಸುವಾಗ ಇಲಾಖೆಯಿಂದ ಇವುಗಳನ್ನು ಕಡೆಗಣಿಸಲಾಗಿದೆ ಮತ್ತು ಯಾವುದೇ ನಿಯೋಜನೆಗಳು ವರದಿಯಾಗದ ಕಾರಣ ಯೋಜನೆಗಳು ವೈಫಲ್ಯ ಕಂಡು ಸ್ಥಗಿತಗೊಂಡವು. ಇದಲ್ಲದೆ, ಅನುಷ್ಠಾನ ಪಾಲುದಾರರಿಂದ ಕೌಶಲ್ಯೀಕರಣ ಚಟುವಟಿಕೆಗಳ ಮೇಲ್ವಿಚಾರಣೆಯ ಕೊರತೆಯು ಈ ಕಾರ್ಯಕ್ರಮಗಳಿಗೆ ಖರ್ಚು ಮಾಡಿದ ಹಣವನ್ನು ಅನಗತ್ಯ ಮತ್ತು ಫಲಪ್ರದವಾಗದಂತೆ ಮಾಡಿದೆ. ಆದ್ದರಿಂದ ಕಾರ್ಯಕ್ರಮಕ್ಕೆ ಅಂತಹ ತೊಡಗುವಿಕೆಗಳ ಪ್ರಸ್ತುತತೆ ಮತ್ತು ಅಗತ್ಯತೆಯ ಮೇಲೆ ಕೇಂದ್ರೀಕರಿಸುವ ಸಮಗ್ರ ಮತ್ತು ನಿರ್ಣಾಯಕ ವಿಮರ್ಶೆಯ ಅಗತ್ಯವಿದೆ.

ಮೇಲ್ವಿಚಾರಣೆ

2.1.19. ಕಾರ್ಯಕ್ರಮಗಳು/ಯೋಜನೆಗಳ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡಲು ಇಲಾಖೆಯು ವಿವಿಧ ಸಮಿತಿಗಳನ್ನು[45] ರಚಿಸಿದೆ. ನೀತಿಯ ಗುರಿಗಳನ್ನು ಸಾಧಿಸಲು 36 ಕಾರ್ಯತಂತ್ರಗಳನ್ನು ನಿರ್ದಿಷ್ಟವಾಗಿ ವಿವರಿಸಲಾಗಿದ್ದರೂ, 19 ತೊಡಗುವಿಕೆಗಳಿಗೆ ಸಂಬಂಧಿಸಿದಂತೆ ಸಾಧನೆಯ ವಿವರಗಳು/ದತ್ತಾಂಶ ದಾಖಲೆಯಲ್ಲಿಲ್ಲ. ಇರುವ ಅಡೆತಡೆಗಳನ್ನು ಪರಿಶೀಲಿಸಿ ಸಕಾಲಿಕ ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಸಮಿತಿಗಳು ನಿಯತಕಾಲಿಕವಾಗಿ ಸಭೆ ನಡೆಸಲಿಲ್ಲ. ಲಭ್ಯವಿರುವ ನಿಧಿಯ ಬಳಕೆಯನ್ನು ಖಚಿತಪಡಿಸಿಕೊಳ್ಳದೆ ವಾರ್ಷಿಕ ಕ್ರಿಯಾ ಯೋಜನೆಗಳು ಅನುದಾನವನ್ನು ಕೋರುವುದಕ್ಕೆ ಸೀಮಿತವಾಗಿವೆ.

---

[44] ಎಮ್ಒಒಸಿ ಯಾರೇ ಆದರೂ ನೋಂದಾಯಿಸಿಕೊಳ್ಳಬಲ್ಲ ಕೈಗೆಟುಕುವ ಮತ್ತು ಹೊಂದಿಕೊಳ್ಳುವ ರೀತಿಯಲ್ಲಿ ನವೀನ ಕೌಶಲ್ಯಗಳನ್ನು ಮತ್ತು ಗುಣಮಟ್ಟದ ಶಿಕ್ಷಣ ಅನುಭವಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ವಿತರಿಸುವ ಉಚಿತ ಆನ್‌ಲೈನ್ ಕೋರ್ಸ್‌ಗಳಾಗಿವೆ.

[45] ಉನ್ನತ ಮಟ್ಟದ ಅನುಷ್ಠಾನ ಸಮಿತಿ, ಸ್ಟಾರ್ಟ್‌ಅಪ್ ಪರಿಷತ್ತು, ಸ್ಟಾರ್ಟ್‌ಅಪ್ ಮೇಲ್ವಿಚಾರಣೆ ಮತ್ತು ಪರಾಮರ್ಶೆ ಸಮಿತಿ.

ಅತ್ಯುನ್ನತ ಮಟ್ಟದಲ್ಲಿ ರಚಿಸಲಾದ ಸಮಿತಿಗಳು ಸಾಧಿಸಿದ ಪ್ರಗತಿಯನ್ನು ನಿರ್ಣಯಿಸಲು ನಿಯತಕಾಲಿಕವಾಗಿ ಸಭೆ ನಡೆಸಲಿಲ್ಲ. ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಅನುಷ್ಠಾನ ಸಮಿತಿಯನ್ನು ತೊಡಗುವಿಕೆಗಳನ್ನು ಮುಂದಕ್ಕೆ ಕೊಂಡೊಯ್ಯಲು ಮತ್ತು ನಿರ್ದಿಷ್ಟ ಕಾಲಮಿತಿಯಲ್ಲಿ ಕೆಐಜಿ ಶಿಫಾರಸುಗಳ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡಲು ರಚಿಸಲಾಗಿದೆ(ಜನವರಿ 2013). ಆದರೆ, ಸಭೆ ಮತ್ತು ನಡಾವಳಿಗಳ ವಿವರಗಳು ದಾಖಲೆಯಲ್ಲಿ ಇರಲಿಲ್ಲ.

ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸ್ಥಾಪಿಸಲಾದ(ಮಾರ್ಚ್ 2016) ಸ್ಟಾರ್ಟ್‌ಅಪ್ ನೀತಿ ಮೇಲ್ವಿಚಾರಣಾ ಮತ್ತು ಪರಿಶೀಲನಾ ಸಮಿತಿಯು ಒಂದು ಬಾರಿಯೂ ಸಭೆ ನಡೆಸದ ಕಾರಣ ಕಾರ್ಯರೂಪಕ್ಕೆ ಬಂದಿಲ್ಲ. ಸ್ಟಾರ್ಟ್‌ಅಪ್ ನೀತಿಯ ಅನುಷ್ಠಾನವನ್ನು ಪರಿಶೀಲಿಸಲು ಮಾರ್ಚ್ 2016ರಲ್ಲಿ ಸ್ಥಾಪಿಸಲಾದ ಮುಖ್ಯಮಂತ್ರಿಯವರ ನೇತೃತ್ವದಲ್ಲಿ ಮತ್ತು 10 ಉದ್ಯಮ ತಜ್ಞರನ್ನು ಸದಸ್ಯರಾಗಿ ಒಳಗೊಂಡಿರುವ ಸ್ಟಾರ್ಟ್‌ಅಪ್ ಕೌನ್ಸಿಲ್ ಇದುವರೆಗೆ (ಫೆಬ್ರವರಿ 2021) ಸೆಪ್ಟೆಂಬರ್ 2016 ರಲ್ಲಿ ಒಮ್ಮೆ ಮಾತ್ರ ಸಭೆ ಸೇರಿದೆ.

ಇದಲ್ಲದೆ, ಸರ್ಕಾರವು ಸುತ್ತೋಲೆಗಳ ಮೂಲಕ ಸೂಚನೆ ನೀಡಿದ್ದರೂ(ಮೇ 2017), ಇಲಾಖೆಯು ಮಾಸಿಕ ಭೌತಿಕ ಮತ್ತು ಆರ್ಥಿಕ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಿಲ್ಲ ಎಂದು ಲೆಕ್ಕಪರಿಶೋಧನೆಯು ಗಮನಿಸಿದೆ.

ಮೇಲ್ವಿಚಾರಣೆಯಲ್ಲಿನ ಕೊರತೆಯಿಂದಾಗಿ ಹೆಚ್ಚಿನ ನೀತಿ ತೊಡಗುವಿಕೆಗಳು ವೈಫಲ್ಯಕ್ಕೆ ಸಾಕ್ಷಿಯಾದವು ಮತ್ತು ಹೀಗಾಗಿ ನಿರ್ದಿಷ್ಟ ನೀತಿಗಳನ್ನು ಹೊರತರಲಾದ ಐಟಿ ಮತ್ತು ಐಟಿಇಎಸ್ ವಲಯಗಳ ಬೆಳವಣಿಗೆಗೆ ಕೊಡುಗೆ ನೀಡಲು ವಿಫಲವಾಗಿವೆ.

ಐಟಿ ಮತ್ತು ಐಟಿಇಎಸ್ ವಲಯದ ಬೆಳವಣಿಗೆ

2.1.19.1. ಮೂರು ದಶಕಗಳ ಹಿಂದೆ ಬಿತ್ತಿದ ಬೀಜಗಳು ಮೂಲಸೌಕರ್ಯ, ನುರಿತ ಮಾನವಶಕ್ತಿಯ ಲಭ್ಯತೆ, ಸಂಪರ್ಕ, ಶಿಕ್ಷಣ ಸಂಸ್ಥೆಗಳು, ಆರೋಗ್ಯ ಮೂಲಸೌಕರ್ಯ ಇತ್ಯಾದಿಗಳ ವಿಷಯದಲ್ಲಿ ಜಾಗತಿಕ ಮನ್ನಣೆ ಮತ್ತು ಪರಿಸರ ವ್ಯವಸ್ಥೆಯ ಅಭಿವೃದ್ಧಿಯೊಂದಿಗೆ ಬೆಂಗಳೂರಿನಲ್ಲಿಯಾದರೂ (ಒಂದು ಪ್ರಥಮ ಶ್ರೇಣಿ ನಗರ)ಶ್ಲಾಘನೀಯ ಫಲಿತಾಂಶಗಳನ್ನು ನೀಡಿವೆ. ***ಕೋಷ್ಟಕ ಸಂಖ್ಯೆ 2.1.7ರಲ್ಲಿ*** ತೋರಿಸಿರುವ ಆರು ವರ್ಷಗಳ ಅವಧಿಯಲ್ಲಿ ಕರ್ನಾಟಕದಲ್ಲಿ ವಲಯವು ಹೆಚ್ಚಾಗಿ ಖಾಸಗಿ ವಲಯದ ಕಂಪನಿಗಳಿಂದ ನಡೆಸಲ್ಪಟ್ಟಿದೆ ಮತ್ತು ರಾಜ್ಯವು ಐಟಿ ಮತ್ತು ಐಟಿಇಎಸ್ ವಲಯದಿಂದ ರಫ್ತು ಆದಾಯದಲ್ಲಿ ಅಗ್ರ ಸ್ಥಾನವನ್ನು ಉಳಿಸಿಕೊಂಡಿದೆ. ಮತ್ತು ಬೆಳವಣಿಗೆಗೆ ಪೂರಕವಾಗಿ ಇಲಾಖೆಗಳ ಮಧ್ಯಸ್ಥಿಕೆಗಳಲ್ಲಿ ಹೆಚ್ಚಿನವು ಇನ್ನೂ ಅನುಷ್ಠಾನದ ಹಂತದಲ್ಲಿದ್ದರೂ ಇದೆಲ್ಲವನ್ನೂ ಸಾಧಿಸಲಾಗಿದೆ.

ಕೋಷ್ಟಕ ಸಂಖ್ಯೆ.2.1.7: ಐಟಿ ವಲಯ– ಆರ್ಥಿಕ ಸಮೀಕ್ಷೆಯ ದತ್ತಾಂಶ

ಸೂಚಕ	2014–15	2019–20
ಕಂಪನಿಗಳ ಸಂಖ್ಯೆ	2560	5500+
ರಫ್ತು ಆದಾಯ (₹ ಲಕ್ಷ ಕೋಟಿ)	1.80	5.8
ದೇಶದ ಐಟಿ ರಫ್ತಿನಲ್ಲಿ ಪಾಲು (ಪ್ರತಿಶತ)	38	40
ರಾಜ್ಯದ ಜಿಡಿಪಿಯಲ್ಲಿ ಪಾಲು (ಪ್ರತಿಶತ)	25	25
ನೇರ ಉದ್ಯೋಗ (ಲಕ್ಷದಲ್ಲಿ)	10	12
ಪರೋಕ್ಷ ಉದ್ಯೋಗ (ಲಕ್ಷದಲ್ಲಿ)	30	31
ಕರ್ನಾಟಕದ ಎಸ್‌ಜಿಡಿಪಿ (ಲಕ್ಷ ಕೋಟಿ)	3.44 (ಮೂಲ ವರ್ಷ 2004–05 ಆಗಿತ್ತು)	12.01 (ಮೂಲ ವರ್ಷ 2011–12ಕ್ಕೆ ಬದಲಾಯಿಸಲಾಗಿದೆ)

ಮೂಲ: ಕರ್ನಾಟಕ ರಾಜ್ಯದ ಆರ್ಥಿಕ ಸಮೀಕ್ಷೆ ವರದಿಗಳು

ಉತ್ತರವಾಗಿ ವಿತರಣೆಗಳು/ಫಲಿತಾಂಶಗಳಿಗೆ ಸಂಬಂಧಿಸಿದಂತೆ ನೈಜ ಸಮಯದ ಆಧಾರದ ಮೇಲೆ ಅವುಗಳನ್ನು ಮೇಲ್ವಿಚಾರಣೆ ಮಾಡುವ ಉದ್ದೇಶದಿಂದ ಇಲಾಖೆಯು ಸಿಒಇಗಳು, ಸಿಐಎಫ್‌ಗಳು, ಟಿಬಿಐಗಳು ಇತ್ಯಾದಿಗಳಿಗೆ ಮೀಸಲಾದ ಡ್ಯಾಶ್‌ಬೋರ್ಡನ್ನು ಅಭಿವೃದ್ಧಿಪಡಿಸಿದೆ ಎಂದು ಸರ್ಕಾರ ತಿಳಿಸಿದೆ (ಆಗಸ್ಟ್ 2021). ಮಾಸಿಕ ಮೇಲ್ವಿಚಾರಣೆಯ ಪರಾಮರ್ಶೆಯನ್ನು ನಡೆಸಲಾಯಿತು ಮತ್ತು ಈ

ಸಮಯದಲ್ಲಿ ಇಲಾಖೆಯ ಯೋಜನೆಗಳು/ಕಾರ್ಯಕ್ರಮಗಳ ಭೌತಿಕ ಪ್ರಗತಿ ಮತ್ತು ಆರ್ಥಿಕ ಪ್ರಗತಿ ಎರಡಕ್ಕೂ ಸಂಬಂಧಿಸಿದಂತೆ ಮೇಲ್ವಿಚಾರಣೆ ಮಾಡಲಾಗುತ್ತಿದೆ ಎಂದು ಹೇಳಲಾಗಿದೆ.

ಡ್ಯಾಶ್‌ಬೋರ್ಡ್‌ನ ವಿವರಗಳು ಮತ್ತು ಮಾಸಿಕ ಪ್ರಗತಿ ವರದಿಗಳ ಪ್ರತಿಗಳನ್ನು ಬೆಂಬಲವಾಗಿ ನೀಡದ ಕಾರಣ ಉತ್ತರವು ಅಪೂರ್ಣವಾಗಿದೆ.

ತೀರ್ಮಾನ

ನೀತಿಯ ತೊಡಗುವಿಕೆಗಳ ಅನುಷ್ಠಾನಕ್ಕಾಗಿ ವಿವರವಾದ ಯೋಜನೆಗಳನ್ನು ಇಲಾಖೆಯು ಸಿದ್ಧಪಡಿಸಿಲ್ಲ ಮತ್ತು ಹೀಗಾಗಿ, ಗುರಿಗಳ ಸಾಧನೆಯಲ್ಲಿನ ಕೊರತೆಯು ಕಳಪೆ ಯೋಜನೆಯ ಕಾರಣದಿಂದಾಗಿದೆ. ಹಿಂದಿನ ನಿಧಿ ಬಿಡುಗಡೆಗಳ ಬಳಕೆಯನ್ನು ಖಾತ್ರಿಪಡಿಸಿಕೊಳ್ಳದೆ ಹಣವನ್ನು ಬಿಡುಗಡೆ ಮಾಡಿದ್ದರಿಂದ ಹಣಕಾಸಿನ ನಿರ್ವಹಣೆಯು ನ್ಯೂನತೆಯಿಂದ ಕೂಡಿತ್ತು. ಅನುಷ್ಠಾನ ಮಾಡುವ ಸಂಸ್ಥೆಗಳು ಹಣವನ್ನು ಬ್ಯಾಂಕ್ ಖಾತೆಗಳಲ್ಲಿ ಇರಿಸಿದ್ದವು ಮತ್ತು ಅವುಗಳನ್ನು ಇತರ ತೊಡಗುವಿಕೆಗಳಿಗೆ ಮಾರ್ಗಾಂತರಿಸಿದ್ದವು. ತೊಡಗುವಿಕೆಗಳ ಫಲಿತಾಂಶವನ್ನು ನಿರ್ಣಯಿಸಲು ಪ್ರಮುಖ ಕಾರ್ಯಕ್ಷಮತೆ ಸೂಚಕಗಳನ್ನು ರೂಪಿಸಲಾಗಿರಲಿಲ್ಲ. ಧನಸಹಾಯ ಪಡೆದ ಸ್ಟಾರ್ಟ್‌ಅಪ್‌ಗಳ ಕಾರ್ಯಕ್ಷಮತೆಗೆ ಸಂಬಂಧಿಸಿದಂತೆ ಇಲಾಖೆಯಲ್ಲಿ ಸಂಪೂರ್ಣ ಮತ್ತು ಸಮರ್ಪಕ ಮಾಹಿತಿ ಲಭ್ಯವಿರಲಿಲ್ಲ. ಸಿಐಎಫ್‌ಗಳು, ಸಿಎಫ್‌ಸಿಗಳು, ಮುಂತಾದ ತೊಡಗುವಿಕೆಗಳು ಯೋಜಿಸಿದಂತೆ ಪೂರ್ಣಗೊಳ್ಳದ ಕಾರಣ ಎಮ್‌ಎಸ್‌ಎಮ್‌ಇಗಳಿಗೆ ಪ್ರಯೋಜನವಾಗಲಿಲ್ಲ. ಅದೇ ರೀತಿ, ಕೈಗಾರಿಕೆಗಳ ಅಗತ್ಯತೆಗಳನ್ನು ಪೂರೈಸಲು ಉದಯೋನ್ಮುಖ ತಂತ್ರಜ್ಞಾನಗಳ ಕ್ಷೇತ್ರದಲ್ಲಿನ ಕೌಶಲ್ಯದ ಅಂತರವನ್ನು ಸಿಒಇಗಳು ಪರಿಹರಿಸಲಿಲ್ಲ. ನಡೆಸಿದ ವಿವಿಧ ತರಬೇತಿ ಕಾರ್ಯಕ್ರಮಗಳು ಮಾನ್ಯತೆಯ ಕೊರತೆಯನ್ನು ಹೊಂದಿದ್ದವು. ₹ 9.04 ಕೋಟಿ ವೆಚ್ಚದ ಹೆಚ್ಚುವರಿ ತರಬೇತಿ ಪರವಾನಗಿಗಳನ್ನು ಸಕಾರಣವಿಲ್ಲದೆ ಖರೀದಿಸಲಾಗಿದೆ, ಇದು ಅನಗತ್ಯ ವೆಚ್ಚಕ್ಕೆ ಕಾರಣವಾಗಿದೆ. ಅಸಮರ್ಪಕ ಮೇಲ್ವಿಚಾರಣೆಯಿಂದ ಅನೇಕ ತೊಡಗುವಿಕೆಗಳು ಇನ್ನೂ ಪ್ರಗತಿಯಲ್ಲಿರುವುದರಿಂದ ಅಥವಾ ನಿಗದಿತ ಅವಧಿಯೊಳಗೆ ಪೂರ್ಣಗೊಳ್ಳಲಿಲ್ಲವಾದ್ದರಿಂದ ನಾಲ್ಕು ನೀತಿಗಳ ಅಡಿಯಲ್ಲಿರುವ ತೊಡಗುವಿಕೆಗಳು ಉದ್ದೇಶಿತ ವಲಯಗಳ ಬೆಳವಣಿಗೆಗೆ ಕೊಡುಗೆ ನೀಡಲಿಲ್ಲ.

ಶಿಫಾರಸುಗಳು:

- **ಯೋಜನಾ ಪ್ರಕ್ರಿಯೆಯನ್ನು ಬಲಪಡಿಸುವ ಅಗತ್ಯವಿದೆ ಮತ್ತು ಕಾರ್ಯಕ್ಷಮತೆ ಸೂಚಕಗಳನ್ನು ಸರಿಪಡಿಸಬೇಕಾಗಿದೆ.**

- **ಇಲಾಖೆಯು ಉದ್ಯಮದ ಅಗತ್ಯತೆಗಳನ್ನು ಅಧ್ಯಯನ ಮಾಡಬೇಕಾಗಿದೆ ಮತ್ತು ಯೋಜಿತ ಮೂಲಸೌಕರ್ಯ ಸೌಲಭ್ಯಗಳಾದ ಇನ್‌ಕ್ಯುಬೇಶನ್ ಸೆಂಟರ್‌ಗಳು, ಸಿಐಎಫ್‌ಗಳು ಮತ್ತು ಸಿಒಇಗಳನ್ನು ಮತ್ತಷ್ಟು ವಿಳಂಬವಿಲ್ಲದೆ ಪೂರ್ಣಗೊಳಿಸಬೇಕು.**

- **ಮಾನ್ಯತೆ ಇಲ್ಲದ ತರಬೇತಿ ಕೋರ್ಸ್‌ಗಳನ್ನು ಸ್ಥಗಿತಗೊಳಿಸಬೇಕು.**

- **ಇಲಾಖೆಯು ಎಲ್ಲಾ ಚಟುವಟಿಕೆಗಳ ಪ್ರಗತಿಯ ಸರಿಯಾದ ದಾಖಲಾತಿಯನ್ನು ಖಚಿತಪಡಿಸಿಕೊಳ್ಳಬೇಕು ಮತ್ತು ವಿಶೇಷವಾಗಿ ಹಣಕಾಸಿನ ನೆರವು ನೀಡುವ ಯೋಜನೆಗಳಿಗೆ ಸಂಬಂಧಿಸಿದಂತೆ ಪ್ರಭಾವದ ಮೌಲ್ಯಮಾಪನ ಮಾಡಲು ಸಂಬಂಧಿಸಿದ ಉದ್ಯಮಗಳ ಬಗ್ಗೆ ಸೂಕ್ತ ದತ್ತಾಂಶವನ್ನು ಸಂಗ್ರಹಿಸಬೇಕು,.**

- **ಮೌಲ್ಯಮಾಪನ ವರದಿಗಳಿಲ್ಲದೆ ಸ್ಟಾರ್ಟ್‌ಅಪ್‌ಗಳಿಗೆ ನಿಯಮಬಾಹಿರ ಹಣ ಬಿಡುಗಡೆಗೆ ಇಲಾಖೆಯು ಹೊಣೆಗಾರಿಕೆಯನ್ನು ನಿಗದಿಪಡಿಸಬಹುದು.**

- **ಉದ್ದೇಶಿತ ಪ್ರಯೋಜನಗಳನ್ನು ಪಡೆಯಲು ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಮೇಲ್ವಿಚಾರಣೆ ಪ್ರಕ್ರಿಯೆಯನ್ನು ಬಲಪಡಿಸಬೇಕು.**

ನಗರಾಭಿವೃದ್ಧಿ ಇಲಾಖೆ

2.2. ಬೆಂಗಳೂರು ನಗರ ಪ್ರದೇಶದಲ್ಲಿ ಭೂಗತ ಉಪಯುಕ್ತತೆಗಳ ಮ್ಯಾಪಿಂಗ್ ಮತ್ತು ಕಾರ್ಯಗತಗೊಳಿಸುವಿಕೆ

ಪರಿಚಯ

2.2.1. ಒಳಚರಂಡಿ, ವಿದ್ಯುತ್ ಕೇಬಲ್‌ಗಳು, ಟೆಲಿಕಾಂ ಕೇಬಲ್‌ಗಳು, ಗ್ಯಾಸ್ ಮತ್ತು ನೀರಿನ ಪೈಪ್‌ಗಳಂತಹ ಉಪಯುಕ್ತತೆಗಳನ್ನು ಸಾಮಾನ್ಯವಾಗಿ ನಗರ ಪ್ರದೇಶಗಳಲ್ಲಿ ನೆಲದಡಿಯಲ್ಲಿ ಹಾಕಲಾಗುತ್ತದೆ. ಈ ಉಪಯುಕ್ತತೆಗಳನ್ನು ವಿವಿಧ ಅವಧಿಗಳಲ್ಲಿ ವಿವಿಧ ಉಪಯುಕ್ತತೆ ಕಂಪನಿಗಳು ಮತ್ತು ಸಂಸ್ಥೆಗಳು ಅಳವಡಿಸುತ್ತವೆ. ಉಪಯುಕ್ತತೆಗಳ ನಕ್ಷೆಯು ನೆಲದ ಕೆಳಗೆ ಹಾಕಲಾಗಿರುವ ಪೈಪ್‌ಗಳು ಮತ್ತು ಕೇಬಲ್‌ಗಳ ಗುರುತಿಸುವಿಕೆ ಮತ್ತು ಸ್ಥಾನವನ್ನು ತೋರಿಸುತ್ತದೆ. ಬೆಂಗಳೂರು ನಗರದಲ್ಲಿ ನಗರ ಮೂಲಸೌಕರ್ಯ ಅಭಿವೃದ್ಧಿಗೆ ಈ ಕೆಳಗಿನ ಪ್ರಾಧಿಕಾರಗಳು ಜವಾಬ್ದಾರಿಯುತವಾಗಿವೆ.

- ಕರ್ನಾಟಕ ಸರ್ಕಾರದ ನಗರಾಭಿವೃದ್ಧಿ ಇಲಾಖೆಯು ಉಪಯುಕ್ತತೆ ಲೈನ್‌ಗಳ ಮಾರ್ಗವನ್ನು ನಿಯಂತ್ರಿಸುವ ಪ್ರಾಧಿಕಾರವಾಗಿದೆ.

- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಮ್‌ಪಿ) ಕರ್ನಾಟಕ ಪುರಸಭೆಗಳ ಕಾಯಿದೆ, 1976 (ಕೆಎಮ್‌ಸಿ) ಮತ್ತು ಬಿಬಿಎಮ್‌ಪಿ ಕಾಯಿದೆ, 2020ರಡಿಯಲ್ಲಿ ಬೆಂಗಳೂರು ನಗರದಲ್ಲಿ ಸಾರ್ವಜನಿಕ ರಸ್ತೆಗಳ ನಿರ್ಮಾಣ ಮತ್ತು ನಿರ್ವಹಣೆಗಾಗಿ ಮತ್ತು ಈ ರಸ್ತೆಗಳಲ್ಲಿ ಉಪಯುಕ್ತತೆ ಲೈನ್‌ಗಳ ಹಾಕುವಿಕೆಯನ್ನು ನಿಯಂತ್ರಿಸುವ ಪ್ರಾಧಿಕಾರವಾಗಿದೆ. ರಸ್ತೆ ಅಗೆಯುವುದು ಮತ್ತು ಅವುಗಳ ಮರುಸ್ಥಾಪನೆಗಾಗಿ ವಿವಿಧ ನಗರ ಸೇವಾ ಪೂರೈಕೆದಾರರಿಗೆ ಅನುಮತಿ ನೀಡುವುದು ಮುಂತಾದವುಗಳನ್ನು ಬಿಬಿಎಮ್‌ಪಿ ನಿಯಂತ್ರಿಸುತ್ತದೆ ಮತ್ತು ಹೀಗೆ ಬೆಂಗಳೂರು ನಗರದ ರಸ್ತೆ ಪ್ರಾಧಿಕಾರವಾಗಿ ಕಾರ್ಯ ನಿರ್ವಹಿಸುತ್ತದೆ.

ಬಿಬಿಎಮ್‌ಪಿಯಲ್ಲಿನ ಮುಖ್ಯ ಇಂಜಿನಿಯರ್‌ರವರು (ರಸ್ತೆ ಮೂಲಸೌಕರ್ಯ) ಈ ಉಪಯುಕ್ತತೆ ಲೈನ್‌ಗಳನ್ನು ನಿಗದಿಪಡಿಸಿದ ನಿಬಂಧನೆಗಳ ಪ್ರಕಾರ ಹಾಕುವುದನ್ನು ಖಚಿತಪಡಿಸಿಕೊಳ್ಳಲು ಜವಾಬ್ದಾರರಾಗಿರುತ್ತಾರೆ, ಅವರು ಬಿಬಿಎಮ್‌ಪಿಯ ಆಯುಕ್ತರಿಗೆ ವರದಿ ಸಲ್ಲಿಸುತ್ತಾರೆ. ಕರ್ನಾಟಕ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು ಉನ್ನತ ಅಧಿಕಾರ ಹೊಂದಿದ್ದು, ಬಿಬಿಎಂಪಿ ಆಯುಕ್ತರು ಅವರಿಗೆ ವರದಿ ಮಾಡುತ್ತಾರೆ.

ಭೂಗತ ಉಪಯುಕ್ತತೆಗಳನ್ನು ಹಾಕಲು ಮಾರ್ಗಸೂಚಿಗಳು ಮತ್ತು ಪ್ರಸ್ತುತ ಅಸ್ತಿತ್ವದಲ್ಲಿರುವ ವ್ಯವಸ್ಥೆ

2.2.2. ರಸ್ತೆಗಳ ವಿನ್ಯಾಸ, ನಿರ್ಮಾಣ ಮತ್ತು ನಿರ್ವಹಣೆಯು ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ, ಕರ್ನಾಟಕ ರಸ್ತೆಗಳು ಮತ್ತು ಸೇತುವೆಗಳ ವಿಶಿಷ್ಟತೆಗಳು, ಬ್ಯೂರೋ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ಸ್ ಮತ್ತು ಇಂಡಿಯನ್ ರೋಡ್ ಕಾಂಗ್ರೆಸ್‌ಗೆ (ಐಆರ್‌ಸಿ) ಅನುಗುಣವಾಗಿರಬೇಕು ಎಂದು ಕರ್ನಾಟಕ ಲೋಕೋಪಯೋಗಿ ಇಲಾಖಾ (ಕೆಪಿಡಬ್ಲ್ಯುಡಿ) ಸಂಹಿತೆ, 2014ರ ಕಂಡಿಕೆ–8 ನಿಗದಿಪಡಿಸುತ್ತದೆ. ಮೇಲಿನ ಮಾನದಂಡಗಳಲ್ಲಿ, ನಗರ ರಸ್ತೆಗಳಲ್ಲಿ ಉಪಯುಕ್ತತೆ ಸೇವೆಗಳ ಮಾರ್ಗಸೂಚಿಗಳನ್ನು ಐಆರ್‌ಸಿ (ಐಆರ್‌ಸಿ:98–2011) ಮೂಲಕ ನೀಡಲಾಗಿದೆ (ಮೇ 2011). ನಗರ ರಸ್ತೆ ಅಧಿಕಾರಿಗಳು ಸ್ಥಳ ಮತ್ತು ಆಳದೊಂದಿಗೆ ಅಸ್ತಿತ್ವದಲ್ಲಿರುವ ಎಲ್ಲಾ ಉಪಯುಕ್ತತೆ ಮಾರ್ಗಗಳನ್ನು ತೋರಿಸುವ ಉಲ್ಲೇಖ ಯೋಜನೆಗಳ ಬ್ಯಾಂಕನ್ನು (ರಸ್ತೆ ಅಥವಾ ಪ್ರದೇಶವಾರು) ನಿರ್ವಹಿಸುವಂತೆ ಮಾರ್ಗಸೂಚಿಗಳು ಷರತ್ತು ವಿಧಿಸಿದೆ.

ವಿವಿಧ ಉಪಯುಕ್ತತೆಗಳು/ಸೇವಾ ಪೂರೈಕೆದಾರರ ರಸ್ತೆ ಅಗೆತದ ಅವಶ್ಯಕತೆಗಳಿಗೆ ಏಕಗವಾಕ್ಷಿ ಪರಿಹಾರವನ್ನು ಒದಗಿಸಲು ಮತ್ತು ಸಾಕಷ್ಟು ಸಮನ್ವಯವನ್ನು ಖಚಿತಪಡಿಸಿಕೊಳ್ಳಲು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು (ಬಿಬಿಎಮ್‌ಪಿ) ರಸ್ತೆ ಅಗೆಯುವುದಕ್ಕೆ ಅನುಮತಿಗಳನ್ನು ನೀಡಲು 'ಮಲ್ಟಿ ಏಜೆನ್ಸಿ ರೋಡ್ ಕಟಿಂಗ್ ಅಂಡ್ ಕೋಆರ್ಡಿನೇಷನ್ ಸಿಸ್ಟಮ್' (ಎಮ್‌ಎಆರ್‌ಸಿಎಸ್) ಎಂಬ

ಆನ್‌ಲೈನ್ ವ್ಯವಸ್ಥೆಯನ್ನು ಸ್ಥಾಪಿಸಿತು (ಸೆಪ್ಟಂಬರ್ 2015). ಎಮ್‌ಎಆರ್‌ಸಿಸಿಎಸ್‌ನಲ್ಲಿ ದತ್ತ ಸಂಚಯವನ್ನು ಇಂದೀಕರಿಸಲು ಸೇವಾ ಪೂರೈಕೆದಾರರಿಂದ ಉಪಯುಕ್ತತೆ ನಕ್ಷೆಗಳ ನಿಯತಕಾಲಿಕ ಸಲ್ಲಿಕೆಯನ್ನು ಬಿಬಿಎಮ್‌ಪಿ ಖಚಿತಪಡಿಸಿಕೊಳ್ಳಬೇಕು.

ಲೆಕ್ಕಪರಿಶೋಧನಾ ಚೌಕಟ್ಟು

2.2.3. ನಗರಾಭಿವೃದ್ಧಿ ಇಲಾಖೆ, ಬಿಬಿಎಮ್‌ಪಿ, ಮತ್ತು ಐದು ಸೇವಾ ಪೂರೈಕೆದಾರರ ಅಂದರೆ– ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ಲಿಮಿಟೆಡ್ (ಬೆಸ್ಕಾಂ), ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ), ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆಪಿಟಿಸಿಎಲ್), ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್ (ಜಿಎಐಎಲ್) ಮತ್ತು ಜಿಎಐಎಲ್ ಗ್ಯಾಸ್ ಲಿಮಿಟೆಡ್ (ಜಿಜಿಎಲ್)[46] ಇವುಗಳ 2015–16ರಿಂದ 2020–21ರ ಅವಧಿಯ ದಾಖಲೆಗಳನ್ನು ಲೆಕ್ಕಪರಿಶೋಧನೆಯು ಪರೀಕ್ಷಾ–ತನಿಖೆ ನಡೆಸಿತು (ಮಾರ್ಚ್ 2019 ರಿಂದ ಜೂನ್ 2021). ಬೆಂಗಳೂರು ನಗರದಲ್ಲಿ ವಿವಿಧ ಭೂಗತ ಉಪಯುಕ್ತತೆಗಳ ಮ್ಯಾಪಿಂಗ್‌ಗಾಗಿ ನಗರಾಭಿವೃದ್ಧಿ ಇಲಾಖೆ/ ಬಿಬಿಎಂಪಿ ವ್ಯವಸ್ಥೆಯು ಅಸ್ತಿತ್ವದಲ್ಲಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಲೆಕ್ಕಪರಿಶೋಧನೆಯ ಉದ್ದೇಶವಾಗಿತ್ತು ಹಾಗೂ ಮ್ಯಾಪಿಂಗ್ ಪೂರ್ಣಗೊಂಡಿದೆಯೇ, ಇಂದೀಕರಿಸಲಾಗಿದೆಯೇ ಮತ್ತು ಉತ್ಖನನ ಸಮಯದಲ್ಲಿ ಅಸ್ತಿತ್ವದಲ್ಲಿರುವ ಭೂಗತ ಉಪಯುಕ್ತತೆಗಳಿಗೆ ಹಾನಿಯ ಅಪಾಯವನ್ನು ಕಡಿಮೆ ಮಾಡಲು ಸೇವಾ ಪೂರೈಕೆದಾರರಲ್ಲಿ ಸಮನ್ವಯ ಸಾಧಿಸಲು ಸಹಾಯ ಮಾಡಿದ್ದವೇ ಎಂಬುದನ್ನು ನಿರ್ಣಯಿಸುವುದಾಗಿತ್ತು.

30 ಮಾರ್ಚ್ 2019ರಂದು ನಡೆದ ಪ್ರವೇಶ ಸಭೆಯಲ್ಲಿ ಬಿಬಿಎಮ್‌ಪಿ ಮತ್ತು ಭೂಗತ ಉಪಯುಕ್ತತೆಗಳ ನಿರ್ವಹಣೆಯ ಜವಾಬ್ದಾರಿ ಹೊಂದಿರುವ ಸೇವಾ ಪೂರೈಕೆದಾರರೊಂದಿಗೆ ಲೆಕ್ಕಪರಿಶೋಧನಾ ಉದ್ದೇಶಗಳು ಮತ್ತು ವ್ಯಾಪ್ತಿಯನ್ನು ಚರ್ಚಿಸಲಾಯಿತು. ಲೆಕ್ಕಪರಿಶೋಧನೆಯು, ಭೂಗತ ಉಪಯುಕ್ತತೆಗಳ ಕ್ಷೇತ್ರ ಸಮೀಕ್ಷೆಯನ್ನು ಮತ್ತು ಸಂಚಾರ ಮಾದರಿಗಳು, ವಾಹನದ ಸರಾಸರಿ ವೇಗ ಮತ್ತು ಇಂಧನ ಹೊರಸೂಸುವಿಕೆಯ ಮೇಲೆ ಯೋಜಿತವಲ್ಲದ ರಸ್ತೆ ಉತ್ಖನನದ ಪ್ರಭಾವದ ಅಧ್ಯಯನಗಳನ್ನು ನಡೆಸಲು ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (ಐಐಎಸ್‌ಸಿ) ತಜ್ಞರನ್ನು ಸಹ ತೊಡಗಿಸಿಕೊಂಡಿತ್ತು. ಆಗಸ್ಟ್ 2021ರಲ್ಲಿ ಬಿಬಿಎಮ್‌ಪಿ ಮತ್ತು ಸೇವಾ ಪೂರೈಕೆದಾರರೊಂದಿಗೆ ನಿರ್ಗಮನ ಸಭೆಗಳನ್ನು ನಡೆಸಲಾಯಿತು ಮತ್ತು ವರದಿಯ ಸಂಬಂಧಿತ ಕಂಡಿಕೆಗಳಲ್ಲಿ ಅವರ ಉತ್ತರಗಳನ್ನು ಸೂಕ್ತವಾಗಿ ಅಳವಡಿಸಲಾಗಿದೆ.

ಲೆಕ್ಕಪರಿಶೋಧನಾ ಆವಿಷ್ಕಾರಗಳು

2.2.4. ಲೆಕ್ಕಪರಿಶೋಧನಾ ಆವಿಷ್ಕಾರಗಳನ್ನು ಮುಂದಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ:

ನಿಯಂತ್ರಕ ಚೌಕಟ್ಟಿನ ಅನುಪಸ್ಥಿತಿ

2.2.5. ಹೊಸ ಬಂಡವಾಳ ಕಾಮಗಾರಿಗಳನ್ನು ಯೋಜಿಸಲು, ದುರಸ್ತಿ/ನಿರ್ವಹಣೆಯನ್ನು ಕೈಗೊಳ್ಳಲು ಮತ್ತು ಯಾವುದೇ ಉತ್ಖನನ ಕಾರ್ಯಗಳನ್ನು ನಿರ್ವಹಿಸುವಾಗ ಭೂಗತ ಉಪಯುಕ್ತತೆಗಳಿಗೆ ಹಾನಿಯಾಗದಂತೆ ತಡೆಯಲು ಭೂಗತ ಉಪಯುಕ್ತತೆಗಳ ಸಂಪೂರ್ಣ ಮತ್ತು ನಿಖರವಾದ ಮ್ಯಾಪಿಂಗ್ ಅತ್ಯಗತ್ಯವಾಗಿದೆ. ಭೂಗತ ಉಪಯುಕ್ತತೆಗಳ ಮ್ಯಾಪಿಂಗ್ ಅನ್ನು ಭೌಗೋಳಿಕ ಮಾಹಿತಿ ವ್ಯವಸ್ಥೆಯಲ್ಲಿ (ಜಿಐಎಸ್) ನಿರ್ವಹಿಸುವುದು ಸಾಮಾನ್ಯ ವೇದಿಕೆಯಲ್ಲಿ ನಕ್ಷೆಗಳ ಏಕೀಕರಣವನ್ನು ಸುಲಭಗೊಳಿಸುತ್ತದೆ ಮತ್ತು ವಿವಿಧ ನಗರ ಸೇವಾ ಪೂರೈಕೆದಾರರಿಗೆ ಅವರ ಬಂಡವಾಳ ಮತ್ತು ನಿರ್ವಹಣೆ ಕಾಮಗಾರಿಗಳನ್ನು ಯೋಜಿಸಲು ಅನುಕೂಲ ಮಾಡುತ್ತದೆ. ನಗರಾಭಿವೃದ್ಧಿ ಇಲಾಖೆ ಮತ್ತು ಬಿಬಿಎಮ್‌ಪಿಗಳು ಉಪಯುಕ್ತತೆ ಮಾರ್ಗಗಳನ್ನು ಹಾಕುವುದನ್ನು ನಿಯಂತ್ರಿಸುವ ಜವಾಬ್ದಾರಿಯನ್ನು ಹೊಂದಿದ್ದು, ಸೇವಾ ಪೂರೈಕೆದಾರರ ಅನುಕೂಲಕ್ಕಾಗಿ ಭೂಗತ ಉಪಯುಕ್ತತೆಗಳನ್ನು ಕ್ರಮಬದ್ಧವಾಗಿ ಹಾಕಲು ಮತ್ತು ನಿಗದಿತ ರೂಪದಲ್ಲಿ ಅವುಗಳ ಮ್ಯಾಪಿಂಗ್ ಅನ್ನು ಮಾಡಲು ಅನುಕೂಲವಾಗುವ ನೀತಿ/ನಿಯಮಾವಳಿಗಳನ್ನು ಜಾರಿಗೆ ತರುವ ಜವಾಬ್ದಾರಿಯನ್ನೂ ಸಹ ಹೊಂದಿದ್ದವು.

[46] ಜಿಎಐಎಲ್ ಮುಖ್ಯ ಗ್ಯಾಸ್ ಪೈಪ್‌ಲೈನನ್ನು ನಿರ್ವಹಿಸಿದರೆ ಜಿಜಿಎಲ್ ವಿತರಣಾ ಪೈಪ್‌ಲೈನ್‌ಗಳನ್ನು ನಿರ್ವಹಿಸುತ್ತದೆ.

ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ನಿಯಂತ್ರಣ ಮಂಡಳಿಯಿಂದ ಹೊರಡಿಸಲಾದ ಇಂಟಗ್ರಿಟಿ ಮ್ಯಾನೇಜ್‌ಮೆಂಟ್ ಸಿಸ್ಟಮ್ ಫಾರ್ ನ್ಯಾಚುರಲ್ ಗ್ಯಾಸ್ ಪೈಪ್‌ಲೈನ್ಸ್ (ಐಎಮ್‌ಎಸ್‌ಎನ್‌ಜಿಪಿ), ನಿಯಂತ್ರಣ ಕಾಯಿದೆ, 2012ರ ಅನ್ವಯ ಎರಡು ವರ್ಷಗಳೊಳಗೆ ಪೂರ್ಣಗೊಂಡ ನೆಟ್‌ವರ್ಕ್‌ನ ಮ್ಯಾಪಿಂಗ್‌ಅನ್ನು ಜಿಐಎಸ್ ದತ್ತಸಂಚಯದಲ್ಲಿ ಕಡ್ಡಾಯವಾಗಿ ಕೈಗೊಳ್ಳಬೇಕಿರುವ ಗ್ಯಾಸ್ ಪೈಪ್‌ಲೈನ್‌ಗಳನ್ನು ಹೊರತುಪಡಿಸಿ, ಕೆಎಮ್‌ಸಿ/ಬಿಬಿಎಮ್‌ಪಿ ಕಾಯಿದೆ ಅಥವಾ ಆಯಾ ಸೇವಾ ಪೂರೈಕೆದಾರರನ್ನು (ಬೆಸ್ಕಾಂ, ಬಿಡಬ್ಲ್ಯುಎಸ್‌ಎಸ್‌ಬಿ, ಕೆಪಿಟಿಸಿಎಲ್, ಇತ್ಯಾದಿ) ನಿಯಂತ್ರಿಸುವ ಕಾಯಿದೆಗಳು ಮತ್ತು ನಿಯಮಗಳು ಉಪಯುಕ್ತತೆ ನಕ್ಷೆಗಳ ತಯಾರಿಕೆ, ನಿರ್ವಹಣೆ ಮತ್ತು ಇಂದೀಕರಣಗಳನ್ನು ಕಡ್ಡಾಯ ಮಾಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ನಗರ ಪ್ರದೇಶಗಳಲ್ಲಿ ಕೇಬಲ್‌ಗಳು/ಪೈಪ್‌ಗಳಂತಹ ಭೂಗತ ಉಪಯುಕ್ತತೆಗಳ ಹಾಕುವಿಕೆ ಮತ್ತು ನಿರ್ವಹಣೆಯನ್ನು ನಿಯಂತ್ರಿಸಲು ನಗರಾಭಿವೃದ್ಧಿ ಇಲಾಖೆಯು ಯಾವುದೇ ನೀತಿಯನ್ನು ಜಾರಿಗೊಳಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ನಗರಾಭಿವೃದ್ಧಿ ಇಲಾಖೆಯು ಕರ್ನಾಟಕ ಪುರಸಭಾ (ಕೇಬಲ್ ಹಾಕುವಿಕೆಯ ನಿಯಂತ್ರಣ) ನಿಯಮಗಳು, 2015ರ ಕರಡನ್ನು ಪ್ರಸ್ತಾಪಿಸಿತ್ತು (ಸೆಪ್ಟೆಂಬರ್ 2015), ಆದರೆ ಅದನ್ನು ಇನ್ನೂ ಅಧಿಸೂಚಿಸಿಲ್ಲ (ಆಗಸ್ಟ್ 2021). ಮೇಲಿನ ಕರಡು ನಿಯಮಗಳ ಬದಲಿಗೆ, ಕರ್ನಾಟಕ ಪುರಸಭೆಗಳ ಮಾದರಿ ಕಟ್ಟಡ ಉಪನಿಯಮಗಳು (ತಿದ್ದುಪಡಿ) 2021ರಲ್ಲಿ ಆಪ್ಟಿಕಲ್ ಫೈಬರ್‌ಗಳನ್ನು ಹಾಕುವುದನ್ನು ನಿಯಂತ್ರಿಸಲು ಏಕರೂಪದ ನಿಯಮಗಳನ್ನು ಜಾರಿಗೆ ತರಲು ಸರ್ಕಾರವು ಪ್ರಸ್ತಾಪವಿಸಿದೆ ಎಂದು ನಗರಾಭಿವೃದ್ಧಿ ಇಲಾಖೆಯು ತಿಳಿಸಿತು (ಆಗಸ್ಟ್ 2021), ಆದರೆ ಅದನ್ನು ಇನ್ನೂ ಅಧಿಸೂಚಿಸಿರಲಿಲ್ಲ. ಹೀಗೆ, ವಿವಿಧ ಸೇವಾ ಪೂರೈಕೆದಾರರ ಮ್ಯಾಪ್ ಮಾಡಿದ ಭೂಗತ ಜಾಲವನ್ನು ನಿರ್ವಹಿಸಲು ಮತ್ತು ಇಂದೀಕರಿಸಲು ಬಿಬಿಎಮ್‌ಪಿಯನ್ನು ಕಡ್ಡಾಯಗೊಳಿಸುವ ಯಾವುದೇ ನಿಯಂತ್ರಕ ಕಾರ್ಯವಿಧಾನ ಅಸ್ತಿತ್ವದಲ್ಲಿರಲಿಲ್ಲ. ಸೇವಾ ಪೂರೈಕೆದಾರರು ತಮ್ಮ ನಕ್ಷೆಗಳು/ದತ್ತ ಸಂಚಯವನ್ನು ಬಿಬಿಎಮ್‌ಪಿಯೊಂದಿಗೆ ಹಂಚಿಕೊಳ್ಳುವುದನ್ನು ಖಚಿತಪಡಿಸಿಕೊಳ್ಳಲು ಯಾವುದೇ ನಿಯಂತ್ರಣವೂ ಇರಲಿಲ್ಲ.

ಮ್ಯಾಪ್ ಮಾಡಲಾಗಿರುವ ಭೂಗತ ಉಪಯುಕ್ತತೆ ಜಾಲದ ವಿಸ್ತಾರ

2.2.6. ಬೆಂಗಳೂರು ನಗರ ವ್ಯಾಪ್ತಿಯಲ್ಲಿನ ಒಟ್ಟು ಉಪಯುಕ್ತತೆ ಜಾಲ ಮತ್ತು 31 ಮಾರ್ಚ್ 2021 ರಲ್ಲಿದ್ದಂತೆ ಐದು ಪರೀಕ್ಷಾ-ತನಿಖೆ ನಡೆಸಿದ ಸೇವಾ ಪೂರೈಕೆದಾರರಿಗೆ ಸಂಬಂಧಿಸಿದಂತೆ ಜಿಐಎಸ್ ರೂಪದಲ್ಲಿ ಮ್ಯಾಪ್ ಮಾಡಲಾದ ಜಾಲವನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ:

ಕೋಷ್ಟಕ ಸಂಖ್ಯೆ 2.2.1: 31 ಮಾರ್ಚ್ 2021ರಲ್ಲಿದ್ದಂತೆ ಬೆಂಗಳೂರು ನಗರದಲ್ಲಿ ಮ್ಯಾಪ್ ಮಾಡಲಾಗಿರುವ ಭೂಗತ ಉಪಯುಕ್ತತೆ ಜಾಲದ ವಿಸ್ತಾರ

ಕ್ರಮ ಸಂಖ್ಯೆ	ಸೇವಾ ಪೂರೈಕೆದಾರರ ಹೆಸರು	ಉಪಯುಕ್ತತೆ ಜಾಲದ ಒಟ್ಟು ಉದ್ದ (ಕಿ.ಮಿ)	ಮ್ಯಾಪ್ ಮಾಡಲಾದ ಉಪಯುಕ್ತತೆ ಜಾಲ (ಕಿ.ಮಿ)	ಮ್ಯಾಪ್ ಮಾಡಲಾದ ಜಾಲದ ಶೇಕಡಾವಾರು
1	ಬಿಡಬ್ಲ್ಯುಎಸ್‌ಎಸ್‌ಬಿ	21,636	21,636	100
2	ಬೆಸ್ಕಾಂ	7,201	5,997	83
3	ಕೆಪಿಟಿಸಿಎಲ್	440	385	88
4	ಜಿಎಐಎಲ್	73	73	100
5	ಜಿಜಿಎಲ್	1,561	778	71*

* ಐಎಮ್‌ಎಸ್‌ಎನ್‌ಜಿಪಿ ನಿಯಮ, 2012ರಲ್ಲಿ ನೀಡಲಾದ ಎರಡು ವರ್ಷಗಳ ಹೆಚ್ಚಿನ ಅವಧಿಯನ್ನು ಪರಿಗಣಿಸಿ ಮ್ಯಾಪ್ ಮಾಡಬೇಕಿದ್ದ ಉದ್ದವು 1096 ಕಿ.ಮೀಗಳಾಗಿತು.

(ಆಧಾರ: ಬೆಸ್ಕಾಂ, ಬಿಡಬ್ಲ್ಯುಎಸ್‌ಎಸ್‌ಬಿ, ಕೆಪಿಟಿಸಿಎಲ್, ಜಿಎಐಎಲ್ ಮತ್ತು ಜಿಜಿಎಲ್ ಒದಗಿಸಿದ ಮಾಹಿತಿ)

ಬಿಡಬ್ಲ್ಯುಎಸ್‌ಎಸ್‌ಬಿ ಮತ್ತು ಜಿಎಐಎಲ್‌ಗಳ ಸಂಪೂರ್ಣ ಭೂಗತ ಸ್ವತ್ತುಗಳನ್ನು ಜಿಐಎಸ್ ಜಾಲದಲ್ಲಿ ಇಂದೀಕರಿಸಲಾಗಿದ್ದರೂ ಸಹ ಇತರ ಮೂರು ಸೇವಾ ಪೂರೈಕೆದಾರರ ಜಿಐಎಸ್ ಇಂದೀಕರಣದ ಶೇಕಡಾವಾರು ಪ್ರಮಾಣವು 71 ರಿಂದ 88ರಷ್ಟಿತ್ತು. ಜಿಐಎಸ್ ಇಂದೀಕರಣದಲ್ಲಿ ಮಾಡಿದ ಪ್ರಗತಿಯ ಹೊರತಾಗಿಯೂ, ಪರೀಕ್ಷಾ-ತನಿಖೆ ನಡೆಸಿದ ಐದು ಸೇವಾ ಪೂರೈಕೆದಾರರ ಪೈಕಿ ಇಬ್ಬರ[47] ಮ್ಯಾಪ್

[47] ಬಿಡಬ್ಲ್ಯುಎಸ್‌ಎಸ್‌ಬಿ ಮತ್ತು ಬೆಸ್ಕಾಂ.

ಮಾಡಿದ ದತ್ತಾಂಶಗಳಲ್ಲಿ ಲೆಕ್ಕಪರಿಶೋಧನೆಯು ಹಳೆಯ ಮತ್ತು ತಪ್ಪಾದ ದತ್ತಸಂಚಯವನ್ನು ಅಳವಡಿಸಿಕೊಂಡಿರುವುದು, ಜಿಐಎಸ್ ನಿರ್ದೇಶಾಂಕಗಳನ್ನು ಮತ್ತು ಪ್ರಮುಖ ಗುಣಲಕ್ಷಣಗಳನ್ನು ಸೆರೆಹಿಡಿಯದಿರುವುದು, ದತ್ತಾಂಶದ ಹೊಂದಾಣಿಕೆಯಾಗದಿರುವುದು, ಮುಂತಾದ ನ್ಯೂನತೆಗಳನ್ನು ಗಮನಿಸಿತು. ಇದು, ಕೆಳಗೆ ಚರ್ಚಿಸಿದಂತೆ ಜಿಐಎಸ್ ಮ್ಯಾಪಿಂಗ್‌ನ ಉದ್ದೇಶವನ್ನು ಸೋಲಿಸಿತು.

2.2.7. ಜಿಐಎಸ್ ದತ್ತಸಂಚಯ/ಮ್ಯಾಪಿಂಗ್‌ನಲ್ಲಿ ನ್ಯೂನತೆಗಳು

ಬಿಡಬ್ಲ್ಯುಎಸ್ಎಸ್‌ಬಿ – ಮೂಲ ನಕ್ಷೆಗಳು

2.2.7.1. ಬಿಡಬ್ಲ್ಯುಎಸ್ಎಸ್‌ಬಿ 11646.04 ಕಿಲೋಮೀಟರ್ ನೀರು ಸರಬರಾಜು ಯೋಜನೆ ಪೈಪ್‌ಲೈನ್‌ಗಳನ್ನು ಮತ್ತು 9,989.53 ಕಿಲೋಮೀಟರ್ ಒಳಚರಂಡಿ ಮಾರ್ಗಗಳನ್ನು ಹೊಂದಿತ್ತು ಮತ್ತು ಮಾರ್ಚ್ 2021ರಲ್ಲಿದ್ದಂತೆ ವೇಳೆಗೆ ತನ್ನ ನೀರು ಸರಬರಾಜು ಮತ್ತು ಒಳಚರಂಡಿ ಆಸ್ತಿಗಳ ಶೇಕಡಾ 100ರಷ್ಟನ್ನು ಮ್ಯಾಪಿಂಗ್‌ಅನ್ನು ಪೂರ್ಣಗೊಳಿಸಿತ್ತು.

ಬಿಡಬ್ಲ್ಯುಎಸ್ಎಸ್‌ಬಿ ತನ್ನ ಭೂಗತ ಉಪಯುಕ್ತತೆಗಳನ್ನು ಮ್ಯಾಪಿಂಗ್ ಮಾಡಲು 2002ರ ಹಿಂದಿನ ರಸ್ತೆ ಆಕಾರದ[48] ಫೈಲ್‌ಗಳನ್ನು ಅಳವಡಿಸಿಕೊಂಡಿದೆ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ರಸ್ತೆ ಆಕಾರದ ಫೈಲ್‌ಗಳ ರಚನೆ ಮತ್ತು ಉಪಯುಕ್ತತೆಗಳ ನಿಜವಾದ ಮ್ಯಾಪಿಂಗ್ ನಡುವಿನ ಸಮಯದ ಅಂತರದಿಂದಾಗಿ[49], ಅಂತಹ ಹಳೆಯ ಆಕಾರದ ಫೈಲ್‌ಗಳಲ್ಲಿ ಭೂಗತ ಉಪಯುಕ್ತತೆಗಳನ್ನು ಮ್ಯಾಪಿಂಗ್ ಮಾಡುವಲ್ಲಿ ದತ್ತಾಂಶ ಕದಲಿಕೆಯ[50] ಅಪಾಯವಿದ್ದಿತು. ಬಿಡಬ್ಲ್ಯುಎಸ್ಎಸ್‌ಬಿ ಈ ರಸ್ತೆ ಆಕಾರದ ಫೈಲ್‌ಗಳಲ್ಲಿ ದತ್ತಾಂಶ ಕದಲಿಕೆಯ ನಿಯತಾಂಕಗಳನ್ನು[51] ಅನ್ವಯಿಸದೆ ಅದರ ಉಪಯುಕ್ತತೆಗಳನ್ನು ಮ್ಯಾಪ್ ಮಾಡಿದ್ದರ ಪರಿಣಾಮವಾಗಿ ಅಂತಹ ನಕ್ಷೆಗಳಲ್ಲಿನ ಉಪಯುಕ್ತತೆಗಳ ನೈಜ ಸ್ಥಳಗಳು ಹೊಂದಾಣಿಕೆಯಾಗುತ್ತಿರಲಿಲ್ಲ. ಅಂತಹ ವ್ಯತ್ಯಾಸದ ವಿವರಣೆಯನ್ನು ಕೆಳಗಿನ ಚಿತ್ರದಲ್ಲಿ ತೋರಿಸಲಾಗಿದೆ, ಅದರಲ್ಲಿ ಜಿಐಎಸ್ ನಕ್ಷೆಯಲ್ಲಿ ಕಟ್ಟಡಗಳ ಮೇಲೆ ನೀರಿನ ಪೈಪ್‌ಲೈನಿನ ಜೋಡಣೆಯನ್ನು ತೋರಿಸಲಾಗಿದೆ.

ಚಿತ್ರ ಸಂಖ್ಯೆ–.2.2.1: ಕಟ್ಟಡಗಳ ಮೇಲೆ ನೀರಿನ ಪೈಪ್‌ಲೈನ್‌ಗಳ ಜೋಡಣೆಯನ್ನು ತೋರಿಸಿರುವುದು



---

[48] ಶೇಪ್ ಫೈಲ್‌ಗಳೆಂದರೆ ಜಿಯೋಮೆಟ್ರಿಕ್ ಸ್ಥಳ ಮತ್ತು ಭೌಗೋಳಿಕ ವೈಶಿಷ್ಟಗಳ ಗುಣಲಕ್ಷಣ ಮಾಹಿತಿಯನ್ನು ಸಂಗ್ರಹಿಸಲು ಸರಳವಾದ ಟೋಪೋಲಾಜಿಕಲ್ ಅಲ್ಲದ ಸ್ವರೂಪದ ಫೈಲ್‌ಗಳಾಗಿವೆ.

[49] ಬಿಡಬ್ಲ್ಯುಎಸ್ಎಸ್‌ಬಿಯಲ್ಲಿ ವಾಸ್ತವವಾದ ಮ್ಯಾಪಿಂಗ್ 2004ರಿಂದ ಪ್ರಾರಂಭವಾಯಿತು ಮತ್ತು ಹೆಚ್ಚುತ್ತಿರುವ ಸ್ವತ್ತುಗಳ ಸೇರ್ಪಡೆಯ ಆಧಾರದ ಮೇಲೆ ಮುಂದುವರೆಯುತ್ತಿದೆ.

[50] ಎರಡು ವಿಭಿನ್ನ ದತ್ತಸಂಚಯಗಳಲ್ಲಿ ಒಂದೇ ಸಮತಲ ನಿರ್ದೇಶಾಂಕಗಳನ್ನು ಹೊಂದಿರುವ ಅಂಶಗಳ ನಡುವಿನ ಅಸಮಾನತೆಯು ದತ್ತಸಂಚಯಗಳ ನಡುವೆ ಮೇಳೈಸಿದಾಗ ದತ್ತಾಂಶಕ್ಕೆ ವರ್ಗಾವಣೆ ನಿಯತಾಂಕಗಳನ್ನು ಅನ್ವಯಿಸಬೇಕಾಗುತ್ತದೆ.

[51] ಎರಡು ವಿಭಿನ್ನ ದತ್ತಸಂಚಯಗಳಲ್ಲಿನ ಅಂಶಗಳನ್ನು ಜೋಡಿಸಲು ತಿದ್ದುಪಡಿ ಅಂಶವನ್ನು ಅನ್ವಯಿಸಲಾಗುತ್ತದೆ ಇದರಿಂದ ದತ್ತಸಂಚಯಗಳಲ್ಲಿನ ವಸ್ತುವಿನ ನಿರ್ದೇಶಾಂಕ ಸ್ಥಾನದಲ್ಲಿ ಯಾವುದೇ ಹೊಂದಾಣಿಕೆಯಿಲ್ಲದಿರುವುದು ತಪ್ಪುತ್ತದೆ.

ಹೀಗೆ, ಉಪಯುಕ್ತತೆಗಳ ಮ್ಯಾಪಿಂಗ್ ಮಾಡುವ ಉದ್ದೇಶವು ಸಫಲವಾಗಲಿಲ್ಲ ಏಕೆಂದರೆ ಅವುಗಳು ವಾಸ್ತವಿಕ ಸ್ಥಳಗಳನ್ನು ತೋರಿಸುತ್ತಿರಲಿಲ್ಲ. ಬಿಡಬ್ಲ್ಯುಎಸ್‌ಎಸ್‌ಬಿ ತನ್ನ ಜಿಐಎಸ್ ಜಾಲವನ್ನು ಕರ್ನಾಟಕ ರಾಜ್ಯ ರಿಮೋಟ್ ಸೆನ್ಸಿಂಗ್ ಅಪ್ಲಿಕೇಶನ್ ಸೆಂಟರ್‌ನ (ಕೆಎಸ್‌ಆರ್‌ಎಸ್‌ಎಸಿ) ಕರ್ನಾಟಕ ಭೌಗೋಳಿಕ ಮಾಹಿತಿ ವ್ಯವಸ್ಥೆ (ಕೆಜಿಐಎಸ್) ಅನ್ವಯಕ್ಕೆ ಸ್ಥಳಾಂತರಿಸುವ ಪ್ರಕ್ರಿಯೆಯಲ್ಲಿದೆ ಮತ್ತು ಆ ಮೂಲಕ ಹಳೆಯ ಮ್ಯಾಪಿಂಗ್ ಸಮಸ್ಯೆಯನ್ನು ಪರಿಹರಿಸಲಾಗುತ್ತಿದೆ ಎಂದು ಬಿಡಬ್ಲ್ಯುಎಸ್‌ಎಸ್‌ಬಿ ಅಧ್ಯಕ್ಷರು ತಿಳಿಸಿದರು (ಸೆಪ್ಟೆಂಬರ್ 2021). ಆದರೂ, ದತ್ತಾಂಶದ ನಿಯತಕಾಲಿಕ ತಿದ್ದುಪಡಿಗಾಗಿ ಬಿಡಬ್ಲ್ಯುಎಸ್‌ಎಸ್‌ಬಿಯಲ್ಲಿ ಯಾವುದೇ ವ್ಯವಸ್ಥೆಯು ಅಸ್ತಿತ್ವದಲ್ಲಿರದಿದ್ದುದು ಮ್ಯಾಪಿಂಗ್‌ನ ನಿಖರತೆಯ ಜೊತೆ ರಾಜಿ ಮಾಡಿಕೊಂಡಾಂತಾಗುತ್ತದೆ ಮತ್ತು ಉತ್ಖನನಗಳನ್ನು ಕೈಗೊಳ್ಳುವಾಗ ಭೂಗತ ಉಪಯುಕ್ತತೆಗಳ ತಪ್ಪಾದ ಗುರುತಿಸುವಿಕೆಗೆ ಕಾರಣವಾಗಬಹುದು.

ಬಿಡಬ್ಲ್ಯುಎಸ್‌ಎಸ್‌ಬಿ –ಅಪೂರ್ಣ ದತ್ತಾಂಶ ಮತ್ತು ದತ್ತಾಂಶ ದೃಢೀಕರಣದ ಅನುಪಸ್ಥಿತಿ

2.2.7.2. ಭೂಗತ ನೀರಿನ ಮಾರ್ಗಗಳ ಮ್ಯಾಪಿಂಗ್ ನೆಲದ ಮಟ್ಟಕ್ಕಿಂತ ಕೆಳಗಿರುವ ಪೈಪ್‌ಗಳ ಆಳ, ನೀರಿನ ಒತ್ತಡ ಮತ್ತು ಹರಿವಿನ ದಿಕ್ಕಿನಂತಹ ಹೆಚ್ಚುವರಿ ಗುಣಲಕ್ಷಣಗಳನ್ನು ಸೆರೆಹಿಡಿಯಬೇಕು ಎಂದು ವಸತಿ ಮತ್ತು ನಗರ ಬಡತನ ನಿರ್ಮೂಲನಾ ಮಂತ್ರಾಲಯವು ಸೂಚಿಸಿತ್ತು (ಆಗಸ್ಟ್ 2010). ಆದಾಗ್ಯೂ, ಬಿಡಬ್ಲ್ಯುಎಸ್‌ಎಸ್‌ಬಿಯ ಜಿಐಎಸ್ ದತ್ತಸಂಚಯವು ಮೇಲಿನ ಗುಣಲಕ್ಷಣಗಳನ್ನು ಸೆರೆ ಹಿಡಿದಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಕಾಮಗಾರಿಯ ಪೂರ್ಣಗೊಳಿಸುವಿಕೆಯನ್ನು ದಾಖಲಿಸಲು ಕಡ್ಡಾಯಗೊಳಿಸಲಾಗಿದ್ದ ಜಿಐಎಸ್ ಪ್ರಮಾಣಪತ್ರವು ನೀರು ಸರಬರಾಜು/ಒಳಚರಂಡಿ ಯೋಜನೆಯ ಜಿಐಎಸ್ ನಿರ್ದೇಶಾಂಕಗಳನ್ನಾಗಲೀ ಅಥವಾ ಇತರ ಉಪಯುಕ್ತತೆ ವಿಭಾಗಗಳ ವಿವರಗಳನ್ನಾಗಲೀ ಸೂಚಿಸಿರಲಿಲ್ಲ.

ಪ್ರಮಾಣೀಕರಿಸುವ ಮೊದಲು ದತ್ತಾಂಶದ ದೃಢೀಕರಣಕ್ಕೆ ಯಾವುದೇ ವ್ಯವಸ್ಥೆ ಇಲ್ಲದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ದತ್ತಸಂಚಯದಲ್ಲಿನ 2,02,788ರಲ್ಲಿ 84,916 ದಾಖಲೆಗಳಲ್ಲಿ ದತ್ತಾಂಶದ ಅಸಮಂಜಸತೆಯನ್ನು ಗಮನಿಸಲಾಯಿತು (ವಿವರಗಳು ***ಅನುಬಂಧ–10ರಲ್ಲಿ***). ಉದಾಹರಣೆಗೆ, ಅನುಷ್ಠಾನದ ತಿಂಗಳು '0' ಮತ್ತು '17 ಮತ್ತು 3347 ನಡುವೆ' ಎಂಬಂತಹ ಅಮಾನ್ಯ ಮೌಲ್ಯಗಳನ್ನು ಹೊಂದಿದ್ದರೆ ಅನುಷ್ಠಾನದ ವರ್ಷವು '0', '20141', ಇತ್ಯಾದಿ ಮೌಲ್ಯಗಳನ್ನು ಹೊಂದಿತ್ತು. ಸಾಮಾನ್ಯವಾಗಿ 80 ಮಿ.ಮಿ.ನಿಂದ 2000 ಮಿ.ಮಿ.ವರೆಗೆ ಇರುವ ಪೈಪ್‌ಗಳ ವ್ಯಾಸವು '0' ಮಿ.ಮಿ, 1.5 ಮಿ.ಮಿ, 150150 ಮಿ.ಮಿ, 300100 ಮಿ.ಮಿ, ಇತ್ಯಾದಿಗಳಂತಹ ತಪ್ಪಾದ ಮೌಲ್ಯಗಳನ್ನು ಹೊಂದಿತ್ತು.

ಬಿಡಬ್ಲ್ಯುಎಸ್‌ಎಸ್‌ಬಿ – ಹೊಂದಾಣಿಕೆಯಾಗದ ದತ್ತಾಂಶ

2.2.7.3. ಸೋರಿಕೆಗಳು ಮತ್ತು ಬಿಲ್ ಮಾಡದ ಕುಡಿಯುವ ನೀರಿನ ಪ್ರಮಾಣಗಳ ಕಾರಣದಿಂದಾಗುವ ಆದಾಯ ನಷ್ಟವನ್ನು ಪರಿಹರಿಸಲು ಬಿಡಬ್ಲ್ಯುಎಸ್‌ಎಸ್‌ಬಿ 'ಲೆಕ್ಕಕ್ಕೆ ಸಿಗದ ನೀರು' (ಅನ್‌ಅಕೌಂಟೆಡ್ ಫಾರ್ ವಾಟರ್) (ಯುಎಫ್‌ಡಬ್ಲ್ಯು) ಎಂಬ ಯೋಜನೆಯನ್ನು ಕೈಗೆತ್ತಿಕೊಂಡಿತು (ಮೇ 2003). ಈ ಯೋಜನೆಯು ಬಿಡಬ್ಲ್ಯುಎಸ್‌ಎಸ್‌ಬಿಯ 570 ಚ.ಕಿ.ಮೀ ಒಟ್ಟು ಸೇವೆಯ ಪ್ರದೇಶದಲ್ಲಿ ಸುಮಾರು 305 ಚದರ ಕಿಲೋಮೀಟರ್‌ಗಳಷ್ಟು ಪ್ರದೇಶವನ್ನು ವ್ಯಾಪಿಸಿತ್ತು. ಯೋಜನೆಯು ಬಿಡಬ್ಲ್ಯುಎಸ್‌ಎಸ್‌ಬಿಯ ಸ್ವತ್ತುಗಳನ್ನು ನಕ್ಷೆ ಮಾಡಲು ಜಿಪಿಆರ್ ತಾಂತ್ರಿಕತೆಯೊಂದಿಗೆ ಸಮೀಕ್ಷೆ ಮತ್ತು ಕ್ಷೇತ್ರ ತನಿಖೆಗಳನ್ನು ಒಳಗೊಂಡಿತ್ತು. ಕೆಳಗಿನ ಕೋಷ್ಟಕದಲ್ಲಿ ವಿವರಿಸಿದಂತೆ ಯೋಜನೆಯಡಿಯಲ್ಲಿನ ಆರು ಪ್ಯಾಕೇಜ್‌ಗಳಲ್ಲಿ ಮೂರರಲ್ಲಿ ಬಿಡಬ್ಲ್ಯುಎಸ್‌ಬಿಬಿಯ ಸಮೀಕ್ಷೆಯಲ್ಲಿ ಮತ್ತು ಬಿಡಬ್ಲ್ಯುಎಸ್‌ಬಿಬಿಯ ದತ್ತ ಸಂಚಯದಲ್ಲಿ ಮ್ಯಾಪ್ ಮಾಡಲಾದ ನೀರು ಸರಬರಾಜು ಮೇನ್‌ಗಳು ಮತ್ತು ಕವಾಟಗಳಿಗೆ ಸಂಬಂಧಿಸಿದ ದತ್ತಾಂಶದಲ್ಲಿ ಹೊಂದಾಣಿಕೆ ಇಲ್ಲದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಕೋಷ್ಟಕ ಸಂಖ್ಯೆ–2.2.2: ಬಿಡಬ್ಲ್ಯುಎಸ್ಎಸ್‌ಬಿಯ ಯುಎಫ್‌ಡಬ್ಲ್ಯು ಅಡಿಯಲ್ಲಿ ಜಿಐಎಸ್ ದತ್ತಾಂಶ ಮತ್ತು ಸಮೀಕ್ಷೆ ದತ್ತಾಂಶದಲ್ಲಿ ಹೊಂದಾಣಿಕೆ ಇಲ್ಲದಿರುವುದು

ಪ್ಯಾಕೇಜ್	ಸಮೀಕ್ಷೆ ಮಾಡಿದ ಪ್ರದೇಶ (ಚದರ ಕಿ.ಮೀ)	ದತ್ತ ಸಂಚಯದ ಅನ್ವಯ ಮೇನ್‌ಗಳ ಉದ್ದ (ಲಕ್ಷ ಮೀಟರ್‌ಗಳು)	ಸಮೀಕ್ಷೆಯ ಅನ್ವಯ ಮೇನ್‌ಗಳ ಉದ್ದ (ಲಕ್ಷ ಮೀಟರ್‌ಗಳು)	ವ್ಯತ್ಯಾಸದ ಶೇಕಡಾವಾರು	ದತ್ತಸಂಚಯದ ಅನ್ವಯ ವಾಲ್ವ್‌ಗಳ ಸಂಖ್ಯೆ	ಸಮೀಕ್ಷೆಯ ಅನ್ವಯ ವಾಲ್ವ್‌ಗಳ ಸಂಖ್ಯೆ	ವ್ಯತ್ಯಾಸದ ಶೇಕಡಾವಾರು
ಡಿ1ಎ	26.50	7.30	7.66	5	2,231	3,015	35
ಡಿ2ಎ	54.00	13.45	14.76	10	8,332	5,886	–29
ಡಿ2ಬಿ	52.00	11.28	15.58	38	2,912	5,192	78

(ಆಧಾರ: ಬಿಡಬ್ಲ್ಯುಎಸ್ಎಸ್‌ಬಿ ಒದಗಿಸಿದ ಮಾಹಿತಿ)

ದತ್ತಾಂಶದಲ್ಲಿನ ವ್ಯತ್ಯಾಸಗಳು ಶೇಕಡಾ 5 ಮತ್ತು 78ರ ವ್ಯಾಪ್ತಿಯ ನಡುವೆ ಇದ್ದು, ಸ್ವತ್ತುಗಳ ನಿಯತಕಾಲಿಕ ಇಂದೀಕರಣದ ಅನುಪಸ್ಥಿತಿಯಿಂದಾಗಿ ಆ ಮಟ್ಟಿಗೆ ಜಿಐಎಸ್ ದತ್ತಾಂಶವು ನಿಖರವಾಗಿರಲಿಲ್ಲ ಎಂಬುದನ್ನು ಸೂಚಿಸಿತು. ಇದು ದತ್ತಸಂಚಯವನ್ನು ಅಪೂರ್ಣವಾಗಿಸಿತು ಮತ್ತು ಭೂಗತ ಉಪಯುಕ್ತತೆಗಳ ನೈಜ ಚಿತ್ರವನ್ನು ಒದಗಿಸುವ ಸಾಮರ್ಥ್ಯವನ್ನು ಹೊಂದಿರಲಿಲ್ಲ.

ಬೆಸ್ಕಾಂ – ಪ್ರಮುಖ ಗುಣಲಕ್ಷಣಗಳನ್ನು ಸೆರೆಹಿಡಿಯದಿರುವುದು

2.2.7.4. ವಿವಿಧ ಸ್ವತ್ತುಗಳ ಸ್ಥಳ ನಿರ್ದೇಶಾಂಕಗಳನ್ನು ಸೆರೆ ಹಿಡಿಯಲು ಒತ್ತು ನೀಡಿ ಜಿಐಎಸ್ ಗ್ರಾಹಕ ಸಮೀಕ್ಷೆ ಮತ್ತು ಸ್ವತ್ತುಗಳ ಮ್ಯಾಪಿಂಗ್ ಅನುಷ್ಠಾನಕ್ಕಾಗಿ ಬೆಸ್ಕಾಂ ಸುತ್ತೋಲೆಗಳನ್ನು ಹೊರಡಿಸಿತು (ನವೆಂಬರ್ 2010). ಉದ್ದ, ಅಗಲ ಮತ್ತು ಆಳದ ಎಲ್ಲಾ ಮೂರು ಭೌತಿಕ ಆಯಾಮಗಳನ್ನು ಸೆರೆಹಿಡಿಯುವ ಜಿಐಎಸ್ ವ್ಯವಸ್ಥೆಗಳು ಭೂಗತ ಯುಪಯುಕ್ತತೆಗಳ ನಿಖರವಾದ ಜೋಡಣೆಯನ್ನು ಪತ್ತೆಹಚ್ಚುವಲ್ಲಿ ನಿಖರತೆಯನ್ನು ಹೆಚ್ಚಿಸುತ್ತದೆ.

ಬೆಸ್ಕಾಂನಲ್ಲಿ ನೆಟ್‌ವರ್ಕ್ ಇಂದೀಕರಣಕ್ಕಾಗಿ ಬಳಸಲಾದ ಗುಣಲಕ್ಷಣ ಡೇಟಾಶೀಟ್‌ಗಳ ಲೆಕ್ಕಪರಿಶೋಧನಾ ಪರಿಶೀಲನೆಯು ಭೂಗತ ಕೇಬಲ್‌ನ ಉದ್ದ ಮತ್ತು ಗಾತ್ರವನ್ನು ಮಾತ್ರ ಸೆರೆಹಿಡಿಯುವ ಎರಡು ಆಯಾಮದ ಸ್ವರೂಪದಲ್ಲಿ ಜಿಐಎಸ್ ನಕ್ಷೆಗಳನ್ನು ಸಿದ್ಧಪಡಿಸಲಾಗಿದೆ ಎಂಬುದನ್ನು ತಿಳಿಯಪಡಿಸಿತು, ಮತ್ತು ಆಳವನ್ನು ಸೆರೆಹಿಡಿಯಲು ಯಾವುದೇ ಅವಕಾಶವಿರಲಿಲ್ಲ. ಉಪಯುಕ್ತತೆಗಳನ್ನು ಹಾಕಿರುವ ಆಳವನ್ನು ಸೆರೆಹಿಡಿಯುವಲ್ಲಿ ವಿಫಲತೆಯು ಮ್ಯಾಪಿಂಗ್‌ನ ಪರಿಣಾಮಕಾರಿತ್ವವನ್ನು ಕಡಿಮೆಗೊಳಿಸಿತು.

ಬೆಸ್ಕಾಂ – ಆರ್‌ಎಪಿಡಿಆರ್‌ಪಿ ಅಡಿಯಲ್ಲಿ ಜಿಐಎಸ್ ಆಧಾರಿತ ಆಸ್ತಿ ಮ್ಯಾಪಿಂಗ್ ಮತ್ತು ಗ್ರಾಹಕ ಸೂಚಿಕೆ ಮಾಡ್ಯೂಲ್ ಅನುಷ್ಠಾನ

2.2.7.5. ಭಾರತ ಸರ್ಕಾರದ ಪ್ರಾಯೋಜಕತ್ವದಲ್ಲಿ ಪುನರ್‌ರಚಿತ ವೇಗವರ್ಧಿತ ವಿದ್ಯುತ್ ಅಭಿವೃದ್ಧಿ ಮತ್ತು ಸುಧಾರಣೆಗಳ ಕಾರ್ಯಕ್ರಮವನ್ನು ಜಾರಿಗೆ ತಂದಿತು. ಇದರಲ್ಲಿ 17 ಸಂಯೋಜಿತ ತಂತ್ರಾಂಶ ಮಾಡ್ಯೂಲ್‌ಗಳನ್ನು ಅಭಿವೃದ್ಧಿಪಡಿಸಿತು, ಅದರಲ್ಲಿ ಜಿಐಎಸ್ ಆಧಾರಿತ ಗ್ರಾಹಕ ಸೂಚ್ಯಂಕ ಮತ್ತು ನೆಟ್‌ವರ್ಕ್ ಆಸ್ತಿ ಮ್ಯಾಪಿಂಗ್ ಮಾಡ್ಯೂಲ್ ಪ್ರಮುಖ ಮಾಡ್ಯೂಲ್ ಆಗಿತ್ತು. ಕಾರ್ಯಕ್ರಮದಡಿಯಲ್ಲಿ, ಜಿಐಎಸ್ ಪ್ಲಾಟ್‌ಫಾರ್ಮ್‌ಗೆ ಒಟ್ಟು 5149 ಕಿಮೀಗಳ ಭೂಗತ ಜಾಲವನ್ನು ಸೇರಿಸಲಾಯಿತು. ಬಂಡವಾಳ/ನಿರ್ವಹಣೆ ಕಾಮಗಾರಿಗಳನ್ನು ಕೈಗೊಂಡ ನಂತರ ಬೆಸ್ಕಾಂ ವಿಭಾಗಗಳು ನೀಡಿದ ಟಿಕೆಟ್‌ಗಳ (ವಿನಂತಿಗಳು) ಮೂಲಕ ಭೂಗತ ಜಾಲದ ನವೀಕರಣವನ್ನು ಕೈಗೊಳ್ಳಲಾಯಿತು.

2017–18ರಿಂದ 2020–21ರ ಅವಧಿಯಲ್ಲಿ ಸ್ಪಷ್ಟೀಕರಣ/ತಿದ್ದುಪಡಿಗಾಗಿ ವಿಭಾಗಗಳಿಂದ ಸ್ವೀಕರಿಸಿದ, ಸಂಸ್ಕರಿಸಿದ ಮತ್ತು ಹಿಂತಿರುಗಿದ ವಿನಂತಿಗಳ ಲೆಕ್ಕಪರಿಶೋಧನಾ ಪರಿಶೀಲನೆಯು, ತಿದ್ದುಪಡಿಗಾಗಿ ಉಪವಿಭಾಗಗಳಿಗೆ ಹಿಂತಿರುಗಿದ ಒಟ್ಟು ವಿನಂತಿಗಳಲ್ಲಿ, ಕೇವಲ ಶೇಕಡಾ 24ರಿಂದ 87ರಷ್ಟು ಮಾತ್ರ ತಿದ್ದುಪಡಿ ಮಾಡಿದ ವಿನಂತಿಗಳನ್ನು ನಿಗದಿತ ಏಳು ದಿನಗಳಲ್ಲಿ ಸ್ವೀಕರಿಸಲಾಗಿತ್ತು ಎಂಬುದನ್ನು ತಿಳಿಯಪಡಿಸಿತು. ಏಳು ದಿನಗಳೊಳಗೆ ಹಿಂತಿರುಗಿಸದ ವಿನಂತಿಗಳನ್ನು ಸ್ವಯಂ ಮುಕ್ತಾಯ ಗೊಳಿಸಲಾಯಿತು ಮತ್ತು ಹೊಸ ವಿನಂತಿ ಸಂಖ್ಯೆಯನ್ನು ರಚಿಸಲಾಯಿತು. ಸ್ವಯಂ

ಮುಕ್ತಾಯಗೊಳಿಸಲ್ಪಟ್ಟ ಅಂತಹ ವಿನಂತಿಗಳ ಹೆಚ್ಚಿನ ಲೆಕ್ಕಪರಿಶೋಧನಾ ವಿಶ್ಲೇಷಣೆಯು ಈ ಕೆಳಗಿನವುಗಳನ್ನು ತಿಳಿಯಪಡಿಸಿತು:

ಕೋಷ್ಟಕ ಸಂಖ್ಯೆ–2.2.3: ತಿದ್ದುಪಡಿಗಾಗಿ ಹಿಂತಿರುಗಿಸಿದ ವಿನಂತಿಗಳ ಬಗೆಗಿನ ಮಾಹಿತಿ

ಕ್ರಮ ಸಂಖ್ಯೆ	ವರ್ಷ	ವಿನಂತಿಗಳ ಸಂಖ್ಯೆ				
		ಇಂದೀಕರಣಕ್ಕಾಗಿ ತೆಗೆದುಕೊಂಡವು	ತಿದ್ದುಪಡಿಗಾಗಿ ಹಿಂತಿರುಗಿದವು	ಆ ವರ್ಷದಲ್ಲಿ ಸ್ವೀಕರಿಸಿ ಇಂದೀಕರಿಸಿದಂತವು	ನಂತರದ ವರ್ಷಗಳಲ್ಲಿ ಸ್ವೀಕರಿಸಿ ಇಂದೀಕರಿಸಿದಂತವು	ತಿದ್ದುಪಡಿಗೆ ಬಾಕಿ ಇರುವವು
1	2017–18	2,120	88	21	67	25
2	2018–19	3,407	658	431	227	24
3	2019–20	3,960	783	451	332	45
4	2020–21	3,886	1,486	1,290	196	45
	Total	**13,373**	**3,015**	**2,193**	**822**	**139**

ಆಧಾರ: ಬೆಸ್ಕಾಂನ ಜಿಐಎಸ್ ಕೋಶದಿಂದ ಸ್ವೀಕರಿಸಿದ ಮಾಹಿತಿ

ತಿದ್ದುಪಡಿಗಾಗಿ ಉಪ–ವಿಭಾಗಗಳಿಗೆ ಹಿಂತಿರುಗಿದ 3015ರಲ್ಲಿ 822 ವಿನಂತಿಗಳನ್ನು (ಶೇಕಡಾ 27) ಅದೇ ವರ್ಷದಲ್ಲಿ ಜಿಐಎಸ್ ಕೋಶಕ್ಕೆ ಹಿಂತಿರುಗಿಸಿರಲಿಲ್ಲ, ಇದು ಡೇಟಾ ಆಟೋಮೇಷನ್ ಸಿಸ್ಟಮ್‌ಗೆ ಸ್ವತ್ತುಗಳನ್ನು ನವೀಕರಿಸುವಲ್ಲಿ ವಿಳಂಬವಾಗಿದೆ ಎಂಬುದನ್ನು ಸೂಚಿಸುತ್ತದೆ. 31 ಮಾರ್ಚ್ 2021ರಲ್ಲಿದ್ದಂತೆ 822ರಲ್ಲಿ 139 (ಶೇಕಡಾ 16) ಅಂತಹ ವಿಳಂಬಿತ ಟಿಕೆಟ್‌ಗಳು ನವೀಕರಣಕ್ಕಾಗಿ ಬಾಕಿ ಉಳಿದಿದ್ದವು. 2015–16 ರಿಂದ 2019–20ರ ಅವಧಿಯಲ್ಲಿ 12 ಉಪ–ವಿಭಾಗಗಳಲ್ಲಿ[52] 623 ಕಾಮಗಾರಿಗಳ ದಾಖಲೆಗಳ ಹೆಚ್ಚಿನ ಪರೀಕ್ಷಾ ಪರಿಶೀಲನೆಯು, ಕಾಮಗಾರಿಗಳು ಪೂರ್ಣಗೊಂಡ ದಿನಾಂಕದಿಂದ 2 ರಿಂದ 56 ತಿಂಗಳವರೆಗಿನ ವಿಳಂಬದ ವ್ಯಾಪ್ತಿಯಲ್ಲಿ 165 ಕಿಮೀಗಳ ನೆಟ್‌ವರ್ಕ್ ಸೇರ್ಪಡೆಯನ್ನು ಒಳಗೊಂಡಿರುವ 218 ಕಾಮಗಾರಿಗಳಲ್ಲಿ ಜಿಐಎಸ್ ಇಂದೀಕರಣದ ವಿಳಂಬವನ್ನು ತಿಳಿಯಪಡಿಸಿತು.

ಜನವರಿ 2019ರಿಂದ ಎಲ್ಲಾ ಕಾಮಗಾರಿಗಳನ್ನು ಡಬ್ಲ್ಯುಎಮ್‌ಎಸ್ ಅನ್ವಯದಲ್ಲಿ ಕಾರ್ಯಗತ ಗೊಳಿಸಲಾಗಿದೆ, ವಿನಂತಿಗಳನ್ನು ಮಾಡಲಾಗಿದೆ ಮತ್ತು ವಿನಂತಿ ಸ್ವೀಕರಿಸಿದ ಮೂರು ಕೆಲಸದ ದಿನಗಳಲ್ಲಿ ಜಿಐಎಸ್ ಸೆಲ್‌ನಲ್ಲಿ ನವೀಕರಿಸಲಾಗುತ್ತಿದೆ ಎಂದು ಬೆಸ್ಕಾಂ ಜನರಲ್ ಮ್ಯಾನೇಜರ್ (ಐಸಿಟಿ&ಎಮ್‌ಐಎಸ್) ತಿಳಿಸಿದರು (ಆಗಸ್ಟ್ 2021). ಶೇಕಡಾ 27ರಷ್ಟು ಅಂತಹ ಟಿಕೆಟ್‌ಗಳನ್ನು ತಿದ್ದುಪಡಿಗಾಗಿ ಹಿಂತಿರುಗಿಸಲಾಗಿರುವುದರಿಂದ ಮತ್ತು ಸ್ವತ್ತುಗಳ ಇಂದೀಕರಣದಲ್ಲಿ ವಿಳಂಬವನ್ನು ಸೂಚಿಸುವ ನಂತರದ ವರ್ಷಗಳಲ್ಲಿ ನವೀಕರಿಸಲಾಗಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.

ಕೆಎಸ್‌ಆರ್‌ಎಸ್‌ಎಸಿ ಯಿಂದ ಜಿಐಎಸ್ ದತ್ತಸಂಚಯದ ದೃಢೀಕರಣ

2.2.7.6. ದೂರ ಸಂವೇದಿ ಚಟುವಟಿಕೆಗಳಿಗಾಗಿ ರಾಜ್ಯ ನೋಡಲ್ ಏಜೆನ್ಸಿಯಾಗಿ ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯ ಕೇಂದ್ರವನ್ನು (ಕೆಎಸ್‌ಆರ್‌ಎಸಿ) ಕರ್ನಾಟಕ ಸರ್ಕಾರವು ಅಧಿಸೂಚಿಸಿತು (ಆಗಸ್ಟ್ 2001). ತರುವಾಯ, ಸರ್ಕಾರ, ನಾಗರಿಕರು ಮತ್ತು ಉದ್ಯಮಗಳ ಅಗತ್ಯತೆಗಳನ್ನು ಪೂರೈಸಲು ರಾಜ್ಯಾದ್ಯಂತ ಜಿಐಎಸ್ ದತ್ತಸಂಚಯವನ್ನು ಸಿದ್ಧಪಡಿಸುವುದನ್ನು ಒಳಗೊಂಡ ಕರ್ನಾಟಕ ಭೌಗೋಳಿಕ ಮಾಹಿತಿ ವ್ಯವಸ್ಥೆ (ಕೆಜಿಐಎಸ್) ಅನುಷ್ಠಾನವನ್ನು ಕೆಎಸ್‌ಆರ್‌ಎಸಿಗೆ ವಹಿಸಲಾಯಿತು (ಜೂನ್ 2015). ಜಿಯೋ–ಟ್ಯಾಗಿಂಗ್[53] ಉದ್ದೇಶಕ್ಕಾಗಿ, ಆಸ್ತಿಗಳ ಸಂಪೂರ್ಣ ಪಟ್ಟಿಯನ್ನು ಕೆಎಸ್‌ಆರ್‌ಎಸಿಗೆ ಒದಗಿಸುವಂತೆ ಎಲ್ಲಾ ಇಲಾಖೆಗಳಿಗೆ ನಿರ್ದೇಶನ ನೀಡುವ ಆದೇಶಗಳನ್ನು ಕರ್ನಾಟಕ ಸರ್ಕಾರ ಹೊರಡಿಸಿತು (ನವೆಂಬರ್ 2017).

[52] ಹೆಬ್ಬಾಳ, ಇಂದಿರಾನಗರ, ಜಾಲಹಳ್ಳಿ, ಜಯನಗರ, ಕೋರಮಂಗಲ, ಮಲ್ಲೇಶ್ವರಮ್, ಪೀಣ್ಯ, ರಾಜಾಜಿನಗರ, ಆರ್‌ಆರ್‌ನಗರ, ಶಿವಾಜಿನಗರ, ವಿಧಾನಸೌಧ ಮತ್ತು ವೈಟ್‌ಫೀಲ್ಡ್.

[53] ಜಿಯೋ–ಟ್ಯಾಗಿಂಗ್ ಎನ್ನುವುದು ಡಿಜಿಟಲ್ ಮ್ಯಾಪ್‌ಗೆ ಸ್ಥಳದ ಬಗ್ಗೆ ಭೌಗೋಳಿಕ ಮಾಹಿತಿಯನ್ನು ಸೇರಿಸುವ ಪ್ರಕ್ರಿಯೆಯಾಗಿದೆ.

ಲೆಕ್ಕಪರಿಶೋಧನೆಯು ಕೆಳಗಿನ ಅಂಶಗಳನ್ನು ಗಮನಿಸಿತು:

- ಕೆಪಿಟಿಸಿಎಲ್ ಕೆಎಸ್‌ಆರ್‌ಎಸಿನೊಂದಿಗೆ ದತ್ತಾಂಶವನ್ನು ಜನವರಿ 2021ರಲ್ಲಿ ಹಂಚಿಕೊಂಡಿತು. ಕೆಪಿಟಿಸಿಎಲ್ ಹಂಚಿಕೊಂಡ ಸಬ್‌ಸ್ಟೇಷನ್‌ಗಳ ದತ್ತಾಂಶವನ್ನು ದೃಢೀಕರಣ ಮಾಡಲಾಗಿದೆ ಮತ್ತು ಕೆಜಿಐಎಸ್‌ನಲ್ಲಿ ಲಭ್ಯವಾಗುವಂತೆ ಮಾಡಲಾಗಿದೆ. ಆದರೆ ಇದು ಉಪಗ್ರಹ ಚಿತ್ರಗಳ ಪ್ರಕಾರದ ನೆಲಮಟ್ಟದ ದತ್ತಾಂಶದೊಂದಿಗೆ ಹೊಂದಾಣಿಕೆಯಾಗಲಿಲ್ಲ. ವ್ಯತ್ಯಾಸವನ್ನು ಸರಿಪಡಿಸುವ ಕಾರ್ಯ ಪ್ರಗತಿಯಲ್ಲಿದೆ.

- ಬಿಡಬ್ಲ್ಯುಎಸ್‌ಎಸ್‌ಬಿ ಮತ್ತು ಬೆಸ್ಕಾಂನ ಜಿಐಎಸ್ ದತ್ತಸಂಚಯವನ್ನು ಕೆಜಿಐಎಸ್ ಫ್ರೇಮ್‌ವರ್ಕ್‌ಗೆ ಇಂದೀಕರಿಸುವುದು ಪೂರ್ಣಗೊಂಡಿತ್ತು. ಬಿಬಿಎಮ್‌ಪಿ ರಸ್ತೆಗಳ/ಹೆಗ್ಗುರುತು ದತ್ತಾಂಶವನ್ನು ವೆಬ್ ಮ್ಯಾಪ್ ಸೇವೆಯಾಗಿ[54] ಹಂಚಿಕೊಂಡಿತ್ತು. ಆದರೂ, ಉಪಯುಕ್ತತೆ ನೆಟ್‌ವರ್ಕ್‌ನ ವಿವರಗಳನ್ನು ಒಳಗೊಂಡಿರುವ ಸಂಪೂರ್ಣ ರಸ್ತೆ ಎಮ್‌ಐಎಸ್ ದತ್ತಾಂಶವನ್ನು ಇನ್ನೂ ಕೆಜಿಐಎಸ್‌ನಲ್ಲಿ ಸಂಯೋಜನೆ ಮಾಡಲಾಗಿಲ್ಲ.

- ಗೇಲ್ ಗ್ಯಾಸ್ ಮತ್ತು ಗೇಲ್ ಇಂಡಿಯಾ ಲಿಮಿಟೆಡ್, ಆಪ್ಟಿಕಲ್ ಫೈಬರ್ ಕೇಬಲ್ ನೆಟ್‌ವರ್ಕ್ ಮುಂತಾದ ಏಜೆನ್ಸಿಗಳ ದತ್ತಾಂಶ ಹಂಚಿಕೆಯನ್ನು ಇನ್ನೂ ಪ್ರಾರಂಭಿಸಬೇಕಾಗಿದೆ.

ಹೀಗೆ, ಎಲ್ಲಾ ನಗರ ಸೇವಾ ಪೂರೈಕೆದಾರರ ಪ್ರಮಾಣೀಕೃತ ಜಿಐಎಸ್ ದತ್ತಾಂಶದ ಕೇಂದ್ರ ಭಂಡಾರವನ್ನು ರಚಿಸುವ ಸರ್ಕಾರದ ಗುರಿಯನ್ನು ಸಾಧಿಸಲಾಗಲಿಲ್ಲ.

ಭೂಗತ ಉಪಯುಕ್ತತೆಗಳ ಜಿಐಎಸ್ ಮ್ಯಾಪಿಂಗ್‌ನಲ್ಲಿ ಸೇವಾ ಪೂರೈಕೆದಾರರು ಸಾಧಿಸಿದ ಪ್ರಗತಿಯ ಪ್ರಮಾಣವು ದತ್ತಸಂಚಯದಲ್ಲಿನ ಅಸಮರ್ಪಕತೆ, ಪ್ರಮುಖ ಗುಣಲಕ್ಷಣಗಳನ್ನು ಸೆರೆಹಿಡಿಯದಿರುವುದು, ನಿಯತಕಾಲಿಕ ನವೀಕರಣದ ಕೊರತೆ ಮತ್ತು ದೃಢೀಕರಣದ ನಿಯಂತ್ರಣದ ಅನುಪಸ್ಥಿತಿಯಂತಹ ನ್ಯೂನತೆಗಳ ದೃಷ್ಟಿಯಿಂದ ಉದ್ದೇಶಿತ ಫಲಿತಾಂಶಗಳನ್ನು ಹೊಂದಲು ಸಾಧ್ಯವಾಗಲಿಲ್ಲ.

ಬಿಬಿಎಮ್‌ಪಿಯಿಂದ ಎಮ್‌ಎಆರ್‌ಸಿಸಿಎಸ್‌ನ ಅನುಷ್ಠಾನ

2.2.8. ಬಿಬಿಎಮ್‌ಪಿ ವಿವಿಧ ಸೇವಾ ಪೂರೈಕೆದಾರರಿಂದ ಜಿಐಎಸ್ ದತ್ತಾಂಶವನ್ನು ಪಡೆದು ಸಂಯೋಜಿಸಲು ಮತ್ತು ಎಮ್‌ಎಆರ್‌ಸಿಸಿಎಸ್ ಆನ್‌ಲೈನ್ ಅಂತರ್‌ಸಂಪರ್ಕದ ಮೂಲಕ ಅನುಮತಿಗಳನ್ನು ನೀಡುವುದಕ್ಕೆ ಬಳಸಿಕೊಳ್ಳು ಪ್ರಯತ್ನಿಸಿತು. ಆದರೆ, ಲೆಕ್ಕಪರಿಶೋಧನೆಯು ಈ ಕಾರ್ಯನಿರ್ವಹಣೆಯಲ್ಲಿ ಹಲವಾರು ನ್ಯೂನತೆಗಳನ್ನು ಕೆಳಗೆ ಚರ್ಚಿಸಿದಂತೆ ಗಮನಿಸಿತು:

ದತ್ತಾಂಶವನ್ನು ಇಂದೀಕರಿಸದಿರುವುದು

2.2.8.1. ವಿವಿಧ ಭೂಗತ ಉಪಯುಕ್ತತೆ ಜಾಲದ ದತ್ತಾಂಶವನ್ನು ಕೊನೆಯದಾಗಿ ನವೆಂಬರ್ 2016 ರಲ್ಲಿ ಎಮ್‌ಎಆರ್‌ಸಿಸಿಎಸ್‌ನಲ್ಲಿ ನವೀಕರಿಸಲಾಗಿತ್ತು. ತರುವಾಯ, ಮಾರ್ಚ್ 2021ರಲ್ಲಿದ್ದಂತೆ ಬೆಸ್ಕಾಂ (2,145 ಕಿ.ಮೀ.ಗಳು), ಕೆಪಿಟಿಸಿಎಲ್ (139 ಕಿ.ಮೀ.ಗಳು) ಮತ್ತು ಬಿಡಬ್ಲ್ಯುಎಸ್‌ಎಸ್‌ಬಿ (4238 ಕಿ.ಮೀ.ಗಳು), ಇವುಗಳು ಜಾಲವನ್ನು ಸೇರ್ಪಡೆ ಮಾಡಿದ್ದರೂ ಸಹ ದತ್ತಾಂಶವನ್ನು ನವೀಕರಿಸಲು ಯಾವುದೇ ಪ್ರಯತ್ನಗಳನ್ನು ಮಾಡಿರಲಿಲ್ಲ. ಅಲ್ಲದೇ, ಎಮ್‌ಎಆರ್‌ಸಿಸಿಎಸ್ ದತ್ತಸಂಚಯವು ಅಪೂರ್ಣವಾಗಿತ್ತು ಏಕೆಂದರೆ ಇದು ಬಿಬಿಎಮ್‌ಪಿ ಮಿತಿಯೊಳಗೆ ಇರುವ ಜಿಎಐಎಲ್ (73 ಕಿ.ಮೀ.ಗಳು) ಮತ್ತು ಜಿಜಿಎಲ್‌ನ (1561 ಕಿ.ಮೀ.ಗಳು) ಸ್ವತ್ತುಗಳನ್ನು ಒಳಗೊಂಡಿರಲಿಲ್ಲ. ನವೆಂಬರ್ 2018ರಲ್ಲಿ ಜಿಎಐಎಲ್ ಮತ್ತು ಫೆಬ್ರವರಿ 2020ರಲ್ಲಿ ಜಿಜಿಎಲ್‌ಗಳು ಉಪಯುಕ್ತತೆ ನಕ್ಷೆಗಳನ್ನು ಒದಗಿಸಿದ್ದರೂ ಸಹ ಎಮ್‌ಎಆರ್‌ಸಿಸಿಎಸ್ ನಲ್ಲಿ ಅವುಗಳನ್ನು ಇಂದೀಕರಿಸಿರಲಿಲ್ಲ.

ಇದಲ್ಲದೆ, ಈ ಸೇರ್ಪಡೆಗಳು ಪ್ರತಿ ಉಪಯುಕ್ತತೆ ಜಾಲದ ಉದ್ದ, ಹಾಕಲಾದ ಉಪಯುಕ್ತತೆಗಳ ಆಳ, ಬಳಸಿದ ಕೊಳವೆಗಳು/ಪೈಪ್‌ಗಳ ವಸ್ತು, ಅಂತಹ ಉಪಯುಕ್ತತೆಗಳ ಸ್ಥಾಪನೆಯ ದಿನಾಂಕ, ಕೊಳವೆಗಳು/

[54] ವೆಬ್ ಮ್ಯಾಪ್ ಸೇವೆಯು ಅಂತರ್ಜಾಲದ ಮೂಲಕ ಜಿಯೋ-ಉಲ್ಲೇಖಿತ ನಕ್ಷೆಯ ಚಿತ್ರಗಳನ್ನು ಒದಗಿಸಲು ಪ್ರಮಾಣಿತ ಶಿಷ್ಟಾಚಾರವಾಗಿದೆ.

ಪೈಪ್‌ಗಳ ವ್ಯಾಸ, ಭೂ ಸಮೀಕ್ಷೆ ದತ್ತಾಂಶ ಮತ್ತು ಜಿಯೋ-ಟ್ಯಾಗ್‌ನಂತಹ ನಿರ್ಣಾಯಕ ಜಿಐಎಸ್ ಗುಣಲಕ್ಷಣಗಳನ್ನು ಸೂಚಿಸಿರಲಿಲ್ಲ. ಆಯಾ ಉಪಯುಕ್ತತೆಗಳು ಒದಗಿಸಿದ ಜಿಐಎಸ್ ನಕ್ಷೆಗಳಲ್ಲಿ ಈ ಗುಣಲಕ್ಷಣಗಳ ಲಭ್ಯತೆಯಿಲ್ಲದಿರುವುದು ಇದಕ್ಕೆ ಮುಖ್ಯ ಕಾರಣವಾಗಿತ್ತು.

ಬೇಡಿಕೆಗಳನ್ನು ಜಾರಿ ಮಾಡುವಲ್ಲಿ ವಿಳಂಬ ಮತ್ತು ರಸ್ತೆ ಅಗೆತ ಅನುಮತಿಗಳಿಗೆ ಸಂಬಂಧಿಸಿದ ಬಾಕಿಗಳನ್ನು ವಸೂಲಿ ಮಾಡದಿರುವುದು

2.2.8.2. ಎಮ್‌ಎಆರ್‌ಸಿಸಿಎಸ್‌ನ 'ಸ್ಟ್ಯಾಂಡರ್ಡ್ ಆಪರೇಟಿಂಗ್ ಪ್ರೊಸೀಜರ್' ಅನ್ವಯ, ಬಳಕೆದಾರ ಇಲಾಖೆಯು ರಸ್ತೆ ಅಗೆಯುವ ಅನುಮತಿಗಾಗಿ ಅರ್ಜಿ ಸಲ್ಲಿಸುವಾಗ ರಸ್ತೆಯ ವಿಸ್ತರಣೆಯನ್ನು ಸೂಚಿಸಬೇಕು ಮತ್ತು ಹಾಕಬೇಕಾದ ಉಪಯುಕ್ತತೆಯ ಉದ್ದ, ಹಾಕುವ ವಿಧಾನ, ಕಾಮಗಾರಿಯ ಪ್ರಾರಂಭದ ದಿನಾಂಕ, ಪೂರ್ಣಗೊಳಿಸುವ ಮತ್ತು ಪುನ:ಸ್ಥಾಪನೆಯ ಸಂಭವನೀಯ ದಿನಾಂಕ, ಇತ್ಯಾದಿ ವಿವರಗಳನ್ನು ಇಂದೀಕರಿಸಬೇಕು. ಬಿಬಿಎಮ್‌ಪಿ ರಸ್ತೆ ಅಗೆಯುವ ವಿನಂತಿಗಳನ್ನು ಅನುಮೋದಿಸುತ್ತದೆ ಅಥವಾ ತಿರಸ್ಕರಿಸುತ್ತದೆ ಮತ್ತು ಅನುಮೋದಿತ ಪ್ರಕರಣಗಳಿಗೆ ಅನ್ವಯವಾಗುವ ಬೇಡಿಕೆ ಟಿಪ್ಪಣಿಯನ್ನು ಜಾರಿಗೊಳಿಸುತ್ತದೆ. ಉಪಯುಕ್ತತೆ ಇಲಾಖೆಗಳು ಅನುಮೋದನೆಯ ಪ್ರಕಾರ ಮತ್ತು ಶುಲ್ಕವನ್ನು ಪಾವತಿಸಿದ ನಂತರ ಕಾಮಗಾರಿಗಳ ಕಾರ್ಯಗತಗೊಳಿಸುವಿಕೆಯನ್ನು ಪ್ರಾರಂಭಿಸುತ್ತವೆ. ಎಮ್‌ಎಆರ್‌ಸಿಸಿಎಸ್ ಪ್ರಕ್ರಿಯೆಯ ಯೋಜನಾ ರೇಖಾಚಿತ್ರವನ್ನು ಕೆಳಗೆ ನೀಡಲಾಗಿದೆ:

ರೇಖಾಚಿತ್ರ ಸಂಖ್ಯೆ 2.2.1: ಎಮ್‌ಎಆರ್‌ಸಿಸಿಎಸ್ ಯೋಜನಾ ಹರಿವಿನ ಪ್ರಕ್ರಿಯೆ



ಲೆಕ್ಕಪರಿಶೋಧನೆಯು ಈ ಕೆಳಗಿನ ನ್ಯೂನತೆಗಳನ್ನು ಗಮನಿಸಿದೆ:

i. 2015-21ರ ಅವಧಿಯಲ್ಲಿ ಎಮ್‌ಎಆರ್‌ಸಿಸಿಎಸ್‌ನಲ್ಲಿ ಸ್ವೀಕರಿಸಿದ ರಸ್ತೆ ಅಗೆಯುವ 12139 ವಿನಂತಿಗಳಲ್ಲಿ, ಮಾರ್ಚ್ 31, 2021ರಲ್ಲಿದ್ದಂತೆ 1014 ಬಾಕಿ ಉಳಿದಿವೆ. ಬಾಕಿ ಉಳಿದಿರುವ ವಿನಂತಿಗಳಲ್ಲಿ, 482 ವಿನಂತಿಗಳು ಒಂದು ವರ್ಷಕ್ಕೂ ಹೆಚ್ಚು ಕಾಲ ಬಾಕಿ ಉಳಿದಿದ್ದು ಅದಕ್ಕೆ ದತ್ತಸಂಚಯದಲ್ಲಿ ಕಾರಣಗಳನ್ನು ದಾಖಲಿಸಲಾಗಿಲ್ಲ;

ii. ಎಸ್‌ಒಪಿ ಅನ್ವಯ, ಬೇಡಿಕೆ ಟಿಪ್ಪಣಿಯ ಪ್ರಕಾರ ಪಾವತಿಯ ರಸೀದಿಯು ರಸ್ತೆ ಅಗೆಯುವ ಅನುಮತಿಗೆ ಪೂರ್ವಾಪೇಕ್ಷಿತವಾಗಿದೆ. ಬಳಕೆದಾರರ ಇಲಾಖೆಗಳಿಂದ ಸ್ವೀಕರಿಸಿದ ವಿನಂತಿಗಳ ಅನುಮೋದನೆ ಅಥವಾ ತಿರಸ್ಕಾರವನ್ನು ತಿಳಿಸಲು ಬಿಬಿಎಂಪಿಗೆ ಯಾವುದೇ ಸಮಯದ ಚೌಕಟ್ಟನ್ನು ಅದು ಸೂಚಿಸಿರಲಿಲ್ಲ. 2015-21ರಲ್ಲಿ ರಸ್ತೆ ಅಗೆಯುವ ಅನುಮತಿಗಾಗಿ ಜಾರಿಮಾಡಿದ 7,287 ಬೇಡಿಕೆ ಟಿಪ್ಪಣಿಗಳ ಪರೀಕ್ಷಾ-ತನಿಖೆಯು ಈ ಕೆಳಗಿನವುಗಳನ್ನು ತಿಳಿಯಪಡಿಸಿತು:

- 30 ದಿನಗಳೊಳಗೆ ಕೇವಲ 1,432 ಬೇಡಿಕೆ ಟಿಪ್ಪಣಿಗಳನ್ನು (ಶೇಕಡಾ 20) ಸಂಗ್ರಹಿಸಲಾಗಿತ್ತು;
- 3,625 ಪ್ರಕರಣಗಳಲ್ಲಿ (ಶೇಕಡಾ 50) ಬೇಡಿಕೆ ಟಿಪ್ಪಣಿಗಳನ್ನು ಒಂದು ತಿಂಗಳಿನಿಂದ ಒಂದು ವರ್ಷದ ವಿಳಂಬದೊಂದಿಗೆ ಜಾರಿ ಮಾಡಲಾಗಿತ್ತು;

- 1,785 ಪ್ರಕರಣಗಳಲ್ಲಿ (ಶೇಕಡಾ 24) ಬೇಡಿಕೆ ಟಿಪ್ಪಣಿಗಳನ್ನು ಜಾರಿ ಮಾಡುವಲ್ಲಿನ ವಿಳಂಬವು ಒಂದರಿಂದ ಎರಡು ವರ್ಷಗಳ ನಡುವೆ ಇದ್ದಿತು.
- 445 ಪ್ರಕರಣಗಳಲ್ಲಿ (ಶೇಕಡಾ 06) ವಿಳಂಬವು ಎರಡು ವರ್ಷಗಳಿಗಿಂತ ಹೆಚ್ಚಾಗಿದ್ದಿತು;

ಹೆಚ್ಚಿನ ವಿಶ್ಲೇಷಣೆಯು ಎರಡು ವರ್ಷಗಳಿಗಿಂತಲೂ ಹೆಚ್ಚು ಕಾಲ ಬಾಕಿಯಿರುವ 445 ಬೇಡಿಕೆಗಳಲ್ಲಿ 382 ಬೇಡಿಕೆಗಳು (ಶೇಕಡಾ 86) ಬೆಸ್ಕಾಂಗೆ ಸಂಬಂಧಿಸಿದ್ದವು ಎಂಬುದು ತಿಳಿದುಬಂದಿತು. ಬೇಡಿಕೆಗಳನ್ನು ಜಾರಿಗೊಳಿಸುವಲ್ಲಿನ ವಿಳಂಬವು ಸೇವಾ ಪೂರೈಕೆದಾರರು ತಮ್ಮ ಆದ್ಯತೆಯ ಕೆಲಸವನ್ನು ಅನುಮತಿಯಿಲ್ಲದೆ ಕಾರ್ಯಗತಗೊಳಿಸುವಂತೆ ಮಾಡಿತು, ಹಾಗೂ ಎಮ್ಎಆರ್‌ಸಿಸಿಎಸ್ ನಲ್ಲಿ ಕಲ್ಪಿಸಲಾದ ಸಮನ್ವಯದ ಉದ್ದೇಶವನ್ನು ಸೋಲಿಸಿದಂತಾಯಿತು;

(iii) ಮಾರ್ಚ್ 2021ರ ಅಂತ್ಯಕ್ಕೆ ಜಾರಿ ಮಾಡಲಾದ ಬೇಡಿಕೆ ಟಿಪ್ಪಣಿಗಳಿಗೆ ಪ್ರತಿಯಾಗಿ ಉಪಯುಕ್ತತೆ ಇಲಾಖೆಗಳು ₹ 582.37 ಕೋಟಿ[55] ನಿಗದಿತ ಶುಲ್ಕವನ್ನು ಪಾವತಿ ಮಾಡಿರಲಿಲ್ಲ. ವಿವಿಧ ಇಲಾಖೆಗಳಿಂದ ಬಾಕಿ ಇರುವ ವಸೂಲಾತಿಗಾಗಿ ಸರ್ಕಾರದ ಮಟ್ಟದಲ್ಲಿ ಚರ್ಚೆಗಳನ್ನು ನಡೆಸಲಾಗುತ್ತಿದೆ ಎಂದು ಮುಖ್ಯ ಎಂಜಿನಿಯರ್ ಮತ್ತು ನೋಡಲ್ ಅಧಿಕಾರಿ, ಎಮ್ಎಆರ್‌ಸಿಸಿಎಸ್, ಬಿಬಿಎಮ್‌ಪಿ ಅವರು ತಿಳಿಸಿದರು (ಜನವರಿ 2021);

(iv) ಬಾಕಿ ಉಳಿದಿರುವ ಮೊತ್ತದ ಹೊರತಾಗಿ, ಉಪಯುಕ್ತತೆ ಇಲಾಖೆಗಳು, ಹೊಸದಾಗಿ ಹಾಕಲಾದ ರಸ್ತೆಗಳು ಮತ್ತು ದೋಷದ ಹೊಣೆಗಾರಿಕೆಯ ಅವಧಿಯಲ್ಲಿರುವ ರಸ್ತೆಗಳು ಎಂಬಂತಹ ಕಾರಣಗಳಿಂದಾಗಿ ಎಮ್ಎಆರ್‌ಸಿಸಿಎಸ್‌ನಲ್ಲಿ ಅನುಮತಿಗಳನ್ನು ತಿರಸ್ಕರಿಸಲಾಗಿದ್ದ 7,56,167 ಮೀಟರ್‌ಗಳ[56] ಭೂಗತ ಜಾಲವನ್ನು ಒಳಗೊಂಡ 983 ಕಾಮಗಾರಿಗಳನ್ನು[57] ಕಾರ್ಯಗತಗೊಳಿಸಿದ್ದವು. ಅನುಮೋದಿತವಲ್ಲದ ಕಾಮಗಾರಿಗಳ ಅನುಷ್ಠಾನವು ಉಪಯುಕ್ತತೆ ಇಲಾಖೆಗಳ ಮಟ್ಟದಲ್ಲಿ ಹಾಗೂ ಬಿಬಿಎಂಪಿಯಲ್ಲಿ ನಿರ್ವಹಣೆಯ ವಿವಿಧ ಹಂತಗಳಲ್ಲಿನ ಮೇಲ್ವಿಚಾರಣಾ ವ್ಯವಸ್ಥೆಯಲ್ಲಿನ ವಿಫಲತೆಯ ಸ್ಪಷ್ಟ ಸೂಚನೆಯಾಗಿತ್ತು. ಇದು ₹ 119.45 ಕೋಟಿ[58] ಅನುಮತಿ ಶುಲ್ಕವನ್ನು ಸಂಗ್ರಹಿಸದಿರುವಲ್ಲಿ ಕೂಡ ಪರಿಣಮಿಸಿತು;

(v) ಸರ್ಕಾರದ ಆದೇಶಗಳ ಪ್ರಕಾರ (ಡಿಸೆಂಬರ್ 2018) ಅನಧಿಕೃತ ರಸ್ತೆ ಅಗೆತಗಳಿಗೆ ₹ 25.00 ಲಕ್ಷ ದರದಲ್ಲಿ ದಂಡವನ್ನು ವಿಧಿಸಲಾಗುತ್ತದೆ ಮತ್ತು ಕರ್ತವ್ಯ ಲೋಪವೆಸಗುವ ಇಲಾಖೆಗಳು ರಸ್ತೆಯನ್ನು ಪುನಃಸ್ಥಾಪಿಸಬೇಕು. ಆದಾಗ್ಯೂ, ಡಿಸೆಂಬರ್ 2018ರ ನಂತರ ಬೆಸ್ಕಾಂ (95) ಮತ್ತು ಬಿಡಬ್ಲ್ಯುಎಸ್‌ಎಸ್‌ಬಿ (2) 97 ಕಾಮಗಾರಿಗಳನ್ನು ಕಾರ್ಯಗತಗೊಳಿಸಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು, ಅವುಗಳು ಬಿಬಿಎಂಪಿಯಿಂದ ತಿರಸ್ಕರಿಸಲ್ಪಟ್ಟಿದ್ದವು ಅಥವಾ ಎಮ್ಎಆರ್‌ಸಿಸಿಎಸ್ ಮೂಲಕ ಅನುಮತಿಗಳನ್ನು ಕೋರಿರಲಿಲ್ಲ. ಆದರೆ ಬಿಬಿಎಂಪಿ ಈ ಅನಧಿಕೃತ ಕಾಮಗಾರಿಗಳ ಮೇಲೆ ₹ 24.25 ಕೋಟಿ ದಂಡವನ್ನು ವಿಧಿಸಿ ಸಂಗ್ರಹಿಸಿರಲಿಲ್ಲ.

ಐಐಎಸ್‌ಸಿ ತಂಡದ ಸಹಯೋಗದೊಂದಿಗೆ ನಡೆಸಿದ ಭೂಗತ ಉಪಯುಕ್ತತೆಗಳ ಸಮೀಕ್ಷೆಯ ಫಲಿತಾಂಶಗಳು

2.2.9. ಭೂಗತ ಉಪಯುಕ್ತತೆಗಳ ನಕ್ಷೆಗಳ ಸಂಖ್ಯೆ, ಸ್ಥಳ ಮತ್ತು ಪ್ರಕಾರದ ನಿಖರತೆಯನ್ನು ಭೌತಿಕವಾಗಿ ಪರಿಶೀಲಿಸಲು, ಮೂರು ಆಯ್ದ ಸ್ಥಳಗಳಲ್ಲಿ[59] ಗ್ರೌಂಡ್ ಪೆನೆಟ್ರೇಟಿಂಗ್ ರಾಡಾರ್ (ಜಿಪಿಆರ್)

---

[55] ಬಿಡಬ್ಲ್ಯುಎಸ್‌ಎಸ್‌ಬಿ–₹ 455.14 ಕೋಟಿ; ಬೆಸ್ಕಾಂ–₹ 101.41 ಕೋಟಿ; ಕೆಪಿಟಿಸಿಎಲ್–₹ 12.29 ಕೋಟಿ; ಬಿಎಮ್‌ಆರ್‌ಸಿಎಲ್ –₹ 9.92 ಕೋಟಿ; ಜಿಜಿಎಲ್ –₹ 1.87 ಕೋಟಿ ಮತ್ತು ಜಿಎಐಎಲ್ – ₹ 1.74 ಕೋಟಿ.

[56] ಬಿಡಬ್ಲ್ಯುಎಸ್‌ಎಸ್‌ಬಿ – 6,34,318 ಮೀಟರ್‌ಗಳು; ಬೆಸ್ಕಾಂ – 1,21,849 ಮೀಟರ್‌ಗಳು.

[57] ಬಿಡಬ್ಲ್ಯುಎಸ್‌ಎಸ್‌ಬಿ – 771 ಸಂಖ್ಯೆಗಳು; ಬೆಸ್ಕಾಂ – 212 ಸಂಖ್ಯೆಗಳು.

[58] ಬಿಡಬ್ಲ್ಯುಎಸ್‌ಎಸ್‌ಬಿ – ₹ 88.29 ಕೋಟಿ; ಬೆಸ್ಕಾಂ – ₹ 31.16 ಕೋಟಿ.

[59] (i) ಮಲ್ಲೇಶ್ವರಮ್ ವೃತ್ತ, ಸಂಪಿಗೆ ರಸ್ತೆ, (ii) ಐಡಿಯಲ್ ಹೋಮ್ ವೃತ್ತ, ರಾಜರಾಜೇಶ್ವರಿನಗರ; (iii) ಪಾರ್ವತಿ ಸಹಿತ ಚಂದ್ರಮೌಳೇಶ್ವರ ದೇವಸ್ಥಾನದ ವೃತ್ತ, ಜಯನಗರ 9ನೇ ಬ್ಲಾಕ್.

ತಂತ್ರಜ್ಞಾನವನ್ನು[60] ಬಳಸಲು ಐಐಎಸ್‌ಸಿ ತಂಡದೊಂದಿಗೆ ಆಡಿಟ್ ಸಹಕರಿಸಿತು. ಜಿಪಿಆರ್ ಸಮೀಕ್ಷೆಯು ರಸ್ತೆಗಳನ್ನು ಅಗೆಯುವ ಅಗತ್ಯವಿಲ್ಲದೇ ಭೂಗತ ಉಪಯುಕ್ತತೆಗಳ ಸಂಖ್ಯೆ, ಪ್ರಕಾರ, ಸ್ಥಳ ಮತ್ತು ಇತರ ಸಂಬಂಧಿತ ವಿವರಗಳನ್ನು ಪತ್ತೆಹಚ್ಚುವ ಪ್ರಯೋಜನವನ್ನು ನೀಡುತ್ತದೆ. ಜಿಪಿಆರ್ ಸಮೀಕ್ಷೆಯ ವಿಧಾನದ ಯೋಜನಾ ಪ್ರಾತಿನಿಧ್ಯವನ್ನು ಕೆಳಗೆ ನೀಡಲಾಗಿದೆ:

ಚಿತ್ರ ಸಂಖ್ಯೆ-2.2.2: ಜಿಪಿಆರ್ ಸಮೀಕ್ಷೆಯ ಯೋಜನಾ ಪ್ರಾತಿನಿಧ್ಯ



ಅಧ್ಯಯನದ ಫಲಿತಾಂಶಗಳನ್ನು ಕೆಳಗಿನ ಕಂಡಿಕೆಗಳಲ್ಲಿ ನೀಡಲಾಗಿದೆ:

ಸಮೀಕ್ಷೆ ಮತ್ತು ಉಪಯುಕ್ತತೆ ದತ್ತಸಂಚಯದ ಅನ್ವಯರ ಉಪಯುಕ್ತತೆ ಮಾರ್ಗಗಳ ಸಂಖ್ಯೆಯ ನಡುವೆ ಹೊಂದಾಣಿಕೆಯಿಲ್ಲದಿರುವುದು

2.2.9.1. ಮೂರು ಸ್ಥಳಗಳ ಜಿಪಿಆರ್ ಸಮೀಕ್ಷೆಯ[61] ಮೂಲಕ ಪಡೆದ ಕ್ಷೇತ್ರ ದತ್ತಾಂಶವನ್ನು ಆಯಾ ಉಪಯುಕ್ತತೆ ಪೂರೈಕೆದಾರರ ನಕ್ಷೆಗಳು ಮತ್ತು ಬಿಬಿಎಮ್‌ಪಿಯಲ್ಲಿ ಲಭ್ಯವಿರುವ ದತ್ತಾಂಶದೊಂದಿಗೆ ಹೋಲಿಸಲಾಯಿತು. ಸಮೀಕ್ಷೆಯ ಫಲಿತಾಂಶಗಳನ್ನು ಕೆಳಗಿನ ನಕ್ಷೆಯಲ್ಲಿ ತೋರಿಸಲಾಗಿದೆ:

ರೇಖಾಚಿತ್ರ ಸಂಖ್ಯೆ 2.2.2: ಭೂಗತ ಉಪಯುಕ್ತತೆಗಳ ಜಿಪಿಆರ್ ಸಮೀಕ್ಷೆಯ ಫಲಿತಾಂಶ

ಸಮೀಕ್ಷೆ ಮಾಡಿದ ಸ್ಥಳ	ರಸ್ತೆಯ ಭಾಗ	ಒಳಚರಂಡಿ ಮಾರ್ಗ			ನೀರಿನ ಮಾರ್ಗ			ವಿದ್ಯುತ್ ಮಾರ್ಗ		
		ಬಿಡಬ್ಲ್ಯು ಎಸ್‌ಎಸ್‌ಬಿ	ಬಿಬಿಎಮ್‌ಪಿ	ಸಮೀಕ್ಷೆ	ಬಿಡಬ್ಲ್ಯು ಎಸ್‌ಎಸ್‌ಬಿ	ಬಿಬಿಎಮ್‌ಪಿ	ಸಮೀಕ್ಷೆ	ಬಿಡಬ್ಲ್ಯು ಎಸ್‌ಎಸ್‌ಬಿ	ಬಿಬಿಎಮ್‌ಪಿ	ಸಮೀಕ್ಷೆ
ಮಲ್ಲೇಶ್ವರಂ ವೃತ್ತ	ವೃತ್ತದಿಂದ ಪೂರ್ವದ ಕಡೆಗೆ ಸೇವಾರಸ್ತೆ	1	1	1	1	1	0	1	0	0
	ವೃತ್ತದಿಂದ ಪೂರ್ವದ ಕಡೆಗೆ 5ನೇ ಕ್ರಾಸ್	0	0	0	1	1	1	0	0	0
	ವೃತ್ತದಿಂದ ಪಶ್ಚಿಮದ ಕಡೆಗೆ ಸೇವಾರಸ್ತೆ	0	1	1	0	0	0	0	0	0
	ವೃತ್ತದಿಂದ ಪಶ್ಚಿಮದ ಕಡೆಗೆ 5ನೇ ಕ್ರಾಸ್	1	1	1	1	1	0	0	0	0
ಐಡಿಯಲ್ ಹೋಮ್ಸ್ ವೃತ್ತ, ಆರ್‌ಆರ್ ನಗರ	ಜಂಕ್ಷನ್‌ನಿಂದ ದಕ್ಷಿಣಕ್ಕೆ 8ನೇ ಮುಖ್ಯರಸ್ತೆ	1	1	1	2	2	1	0	0	1
	ಜಂಕ್ಷನ್‌ನಿಂದ ಪಶ್ಚಿಮಕ್ಕೆ 12ನೇ ಮುಖ್ಯರಸ್ತೆ	1	1	1	2	2	1	0	0	0
	ಜಂಕ್ಷನ್‌ನಿಂದ ಉತ್ತರಕ್ಕೆ 8ನೇ ಮುಖ್ಯರಸ್ತೆ	1	1	1	2	2	0	0	0	0
	ಜಂಕ್ಷನ್‌ನಿಂದ ಪೂರ್ವಕ್ಕೆ 12ನೇ ಮುಖ್ಯರಸ್ತೆ	1	1	1	2	2	1	0	0	0
ಪಾರ್ವತಿ ಸಮೇತ ಚಂದ್ರಮೌಳೇಶ್ವರ ದೇವಸ್ಥಾನ ವೃತ್ತ	26ನೇ ಮುಖ್ಯ ರಸ್ತೆ	1	2	2	2	2	2	1	0	1
	25ನೇ ಮುಖ್ಯ ರಸ್ತೆ	1	2	2	1	1	2	0	0	0
	ಸೆಂಟ್ರಲ್ ಜಂಕ್ಷನ್‌ನಿಂದ ಪಶ್ಚಿಮಕ್ಕೆ 39ನೇ ಕ್ರಾಸ್‌ರಸ್ತೆ	1	1	1	1	1	1	1	0	0
	ಸೆಂಟ್ರಲ್ ಜಂಕ್ಷನ್‌ನಿಂದ ಪೂರ್ವಕ್ಕೆ 39ನೇ ಕ್ರಾಸ್‌ರಸ್ತೆ	1	1	1	2	2	1	1	0	0

	ಸಮೀಕ್ಷೆಯ ದತ್ತಾಂಶದಲ್ಲಿ ಯಾವುದೇ ವ್ಯತ್ಯಾಸಗಳನ್ನು ಗಮನಿಸಲಾಗಿಲ್ಲ
	ಬಿಡಬ್ಲ್ಯುಎಸ್‌ಎಸ್‌ಬಿ/ಬೆಸ್ಕಾಂ ದತ್ತಾಂಶದೊಂದಿಗೆ ವ್ಯತ್ಯಾಸಗಳನ್ನು ಗಮನಿಸಲಾಯಿತು ಆದರೆ ಬಿಬಿಎಮ್‌ಪಿ ದತ್ತಾಂಶದೊಂದಿಗೆ ಹೊಂದಿಕೆಯಾಯಿತುಜಚಣಚಿ
	ಉಪಯುಕ್ತತೆಗಳ ದತ್ತಾಂಶವು ಸಮೀಕ್ಷೆಯ ದತ್ತಾಂಶದೊಂದಿಗೆ ಹೊಂದಾಣಿಕೆಯಾಗಲಿಲ್ಲ

ಆಯ್ಕೆಮಾಡಿದ ರಸ್ತೆಗಳ 10 ವಿಭಾಗಗಳಲ್ಲಿ, ಭೂಗತ ಉಪಯುಕ್ತತೆಗಳ ದತ್ತಾಂಶವು (ಬಿಡಬ್ಲ್ಯುಎಸ್‌ಎಸ್‌ಬಿಗೆ ಸಂಬಂಧಿಸಿದ 10ರಲ್ಲಿ 8 ನೀರಿನ ಮಾರ್ಗಗಳು) ತಪ್ಪಾಗಿರುವುದನ್ನು

[60] ಜಿಪಿಆರ್ ವ್ಯವಸ್ಥೆಯು ಟ್ರಾನ್ಸ್ಮಿಟರ್, ರಿಸೀವರ್ ಮತ್ತು ಪ್ರೊಫೈಲಿಂಗ್ ರೆಕಾರ್ಡರ್ ಹೊಂದಿರುವ ಆಂಟೆನಾವನ್ನು ಒಳಗೊಂಡಿರುತ್ತದೆ; ಸ್ವೀಕರಿಸಿದ ಸಂಕೇತವನ್ನು ಸಂಸ್ಕರಿಸಿ ದತ್ತಾಂಶದ ಗ್ರಾಫಿಕ್ ಪ್ರದರ್ಶನವನ್ನು ತೋರಿಸುತ್ತದೆ.

[61] ಜಿಪಿಆರ್ ಸಿಗ್ನಲ್‌ನ ತನಿಖೆಯ ಆಳವು ಹೆಚ್ಚು ನಿವೇಶನ ನಿರ್ದಿಷ್ಟವಾಗಿದೆ ಮತ್ತು ಉಪಮೇಲ್ಮೈ ವಸ್ತುಗಳ ಸಿಗ್ನಲ್ ಅಟೆನ್ಯೂಯೇಶನ್ (ಹೀರಿಕೊಳ್ಳುವಿಕೆ) ಮೂಲಕ ಸೀಮಿತವಾಗಿದೆ. ಸಿಗ್ನಲ್ ಅಟೆನ್ಯೂಯೇಶನ್ ಉಪಮೇಲ್ಮೈ ವಸ್ತುಗಳ ವಿದ್ಯುತ್ ವಾಹಕತೆಯ ಮೇಲೆ ಅವಲಂಬಿತವಾಗಿದೆ. ಪರ್ಯಾಯವಾಗಿ, ಜಿಪಿಆರ್‌ನಲ್ಲಿ ಪತ್ತೆಯಾಗದ ಮಾರ್ಗಗಳನ್ನು ವ್ಯಾಖ್ಯಾನಿಸಲಾದ ಸಮೀಕ್ಷೆಯ ಪ್ರದೇಶದ ಹೊರಗೆ ಹಾಕಬಹುದಿತ್ತು (ಕಾಲು ಮಾರ್ಗದ ಅಡಿಯಲ್ಲಿ). ಇದು ಲಭ್ಯವಿರುವ ನಕ್ಷೆಗಳ ಪ್ರಕಾರ ಇರಲಿಲ್ಲ.

ಲೆಕ್ಕಪರಿಶೋಧನೆಯು ಗಮನಿಸಿತು ಏಕೆಂದರೆ ಸಮೀಕ್ಷೆಯ ಅನ್ವಯ ವಾಸ್ತವಿಕ ಸಂಖ್ಯೆಯು ಜಿಐಎಸ್ ದತ್ತಾಂಶಕ್ಕೆ ಹೋಲಿಸಿದರೆ ಕಡಿಮೆ ಅಥವಾ ಅಧಿಕವಾಗಿದ್ದಿತು. ಉಪಯುಕ್ತತೆ ಸೇವಾದಾರರು ನಿರ್ವಹಿಸಿದ್ದ ಜಿಐಎಸ್ ನಕ್ಷೆಗಳು ಅಪೂರ್ಣ ಮತ್ತು ತಪ್ಪಾಗಿದ್ದವು ಎಂಬ ಲೆಕ್ಕಪರಿಶೋಧನಾ ವೀಕ್ಷಣೆಯನ್ನು ಇದು ಅನುಮೋದಿಸುತ್ತದೆ ಮತ್ತು ಉತ್ಖನನದ ಸಮಯದಲ್ಲಿ ಉಪಯುಕ್ತತೆಗಳನ್ನು ತಪ್ಪಾಗಿ ಗುರುತಿಸಿ ಹಾನಿಗೆ ಕಾರಣವಾಗುತ್ತದೆ.

ಐಆರ್‌ಸಿ ಮಾನದಂಡಗಳನ್ನು ಅನುಸರಿಸದಿರುವುದು

2.2.9.2. ನಗರ ರಸ್ತೆಗಳ ಬಲ–ಮಾರ್ಗದಲ್ಲಿ ಸಾರ್ವಜನಿಕ ಉಪಯುಕ್ತತೆ ಸೇವೆಗಳ ಸ್ಥಳ, ವಿನ್ಯಾಸ, ಸ್ಥಾಪನೆ ಮತ್ತು ನಿರ್ವಹಣೆಯನ್ನು ಐಆರ್‌ಸಿ 98–2011 ಸೂಚಿಸುತ್ತದೆ. ವಿವಿಧ ಏಜೆನ್ಸಿಗಳ ಕಾರ್ಯಾಚರಣೆಗಳ ನಡುವಿನ ಹಸ್ತಕ್ಷೇಪವನ್ನು ಕಡಿಮೆ ಮಾಡಲು ಏಕರೂಪದ ವಿಧಾನವನ್ನು ಒದಗಿಸುವುದು ಮತ್ತು ಕಾಮಗಾರಿ ಪೂರ್ಣಗೊಂಡ ನಂತರ ಕಂದಕಗಳನ್ನು ಭರ್ತಿ ಮಾಡುವ ಮೂಲಕ ಸುರಕ್ಷಿತ ಮತ್ತು ಸುಗಮ ಸಂಚಾರದ ಹರಿವನ್ನು ಖಚಿತಪಡಿಸಿಕೊಳ್ಳುವುದು ಇದರ ಉದ್ದೇಶವಾಗಿದೆ. ಆಯ್ದ ಸ್ಥಳಗಳಲ್ಲಿ ನಡೆಸಿದ ಜಿಪಿಆರ್ ಸಮೀಕ್ಷೆಯು, ಕೆಳಗಿನ ಕೋಷ್ಟಕದಲ್ಲಿ ವಿವರಿಸಿದಂತೆ ಐಆರ್‌ಸಿ ಸೂಚಿಸಿದ ವಿಶಿಷ್ಟತೆಗಳನ್ನು ಸೇವಾ ಪೂರೈಕೆದಾರರು ಮಾರ್ಗಪಲ್ಲಟ ಮಾಡಿದ್ದರು ಎಂಬುದನ್ನು ತಿಳಿಯಪಡಿಸಿತು.

ಕೋಷ್ಟಕ ಸಂಖ್ಯೆ 2.2.4: ಅಧ್ಯಯನ ಸ್ಥಳಗಳಲ್ಲಿ ಅಸ್ತಿತ್ವದಲ್ಲಿರುವ ಉಪಯುಕ್ತತೆ ಮಾರ್ಗಗಳಲ್ಲಿ ಐಆರ್‌ಸಿ ವಿಶಿಷ್ಟತೆಗಳ ಮಾರ್ಗಪಲ್ಲಟ

(ಮೀಟರ್‌ಗಳಲ್ಲಿ)

ಕ್ರಮ ಸಂಖ್ಯೆ	ಯುಪಯುಕ್ತತೆ	ನೆಲಮಟ್ಟದಿಂದ ಆಳ				ರಸ್ತೆಯ ಅಂಚಿನಿಂದ ದೂರ			
		ಐಆರ್‌ಸಿ	ಐಡಿಯಲ್ ಹೋಮ್	ಜಯನಗರ	ಮಲ್ಲೇಶ್ವರಂ	ಐಆರ್‌ಸಿ	ಐಡಿಯಲ್ ಹೋಮ್	ಜಯನಗರ	ಮಲ್ಲೇಶ್ವರಂ
1	ಒಳಚರಂಡಿ ಮಾರ್ಗ	>1.5	0.655	0.65	0.73	3.5	2.71	2.75	1.5
2	ನೀರಿನ ಮಾರ್ಗ	0.6–6	0.577	0.652	0.78	2.5	3.92	2.4	1.2
3	ಆಪ್ಟಿಕಲ್ ಫೈಬರ್ ಮಾರ್ಗ	0.6–1	–	0.39	–	3.5	–	2.7	–
4	ವಿದ್ಯುತ್ ಮಾರ್ಗ	0.6–1	–	0.415	–	4.6	–	6.5	–

(ಆಧಾರ: ಭಾರತೀಯ ವಿಜ್ಞಾನ ಸಂಸ್ಥೆಯ ಅಧ್ಯಯನ ವರದಿ)

ಮಾರ್ಗದರ್ಶಿ ಸೂತ್ರಗಳಿಗೆ ವಿರುದ್ಧವಾಗಿ ಅಧ್ಯಯನದ ಸ್ಥಳಗಳಲ್ಲಿ ವಿವಿಧ ಉಪಯುಕ್ತತೆಗಳನ್ನು ಹಾಕುವಲ್ಲಿ ಯಾವುದೇ ಏಕರೂಪತೆ ಇಲ್ಲದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಐಆರ್‌ಸಿಯಿಂದ ನಿರ್ದಿಷ್ಟ ಪಡಿಸಿದ ಕನಿಷ್ಠ ಆಳಕ್ಕಿಂತ ಕಡಿಮೆ ಆಳದಲ್ಲಿ ಒಳಚರಂಡಿ ಮಾರ್ಗಗಳನ್ನು ಹಾಕಲಾಗಿದ್ದರೆ, ನೀರಿನ ಮಾರ್ಗಗಳು ಐಆರ್‌ಸಿ ನೀಡಿದ ಆಳದ ವ್ಯಾಪ್ತಿಯನ್ನು ಬಹುತೇಕ ಪೂರೈಸಿದ್ದವು. ಸಮೀಕ್ಷೆ ಮಾಡಿದ ಸ್ಥಳಗಳಲ್ಲಿ ನೀರು ಮತ್ತು ಒಳಚರಂಡಿ ಮಾರ್ಗಗಳನ್ನು ಐಆರ್‌ಸಿ ನಿಯಮಗಳಿಗೆ ವಿರುದ್ಧವಾಗಿ ಹಾಕಲಾಗಿದ್ದು, ಪೈಪ್‌ಗಳು ಒಡೆದು ಹೋದಾಗ ಕುಡಿಯುವ ನೀರಿನೊಂದಿಗೆ ಕೊಳಚೆ ನೀರು ಬೆರೆತು ಆರೋಗ್ಯಕ್ಕೆ ಹಾನಿಯಾಗುವ ಅಪಾಯವನ್ನುಂಟು ಮಾಡಿರುವುದು ಗಮನಕ್ಕೆ ಬಂದಿತು. ಅದೇ ರೀತಿ, ಐಆರ್‌ಸಿ ಮಾನದಂಡಗಳು ಭೂಗತ ಕೇಬಲ್ ಜಾಲವನ್ನು ಹಾಕುವ ಪ್ರತಿಯೊಂದು ವಿಧದ ಸೇವಾ ಪೂರೈಕೆದಾರರಿಗೆ ಪ್ರತ್ಯೇಕ ಆವರಣಗಳೊಂದಿಗೆ ಬಹು ಉಪಯುಕ್ತತೆ ಕೊಳವೆಗಳನ್ನು ಸೂಚಿಸಿದ್ದವು. ಆದರೆ ಅವುಗಳನ್ನು ಸಮೀಕ್ಷೆ ಮಾಡಿದ ಸ್ಥಳಗಳಲ್ಲಿ ಒದಗಿಸಿರಲಿಲ್ಲ.

ಭೂಗತ ಉಪಯುಕ್ತತೆಗಳ ಸಂಪೂರ್ಣ ನಕ್ಷೆಯನ್ನು ಹೊಂದದಿರುವುದರ ಅಪಾಯಗಳು

2.2.9.3. ಉಪಯುಕ್ತತೆಗಳ ನಕ್ಷೆಗಳು ಅಸ್ತಿತ್ವದಲ್ಲಿಲ್ಲದಿರುವುದು ಉಪಯುಕ್ತತೆಗಳ ನಿರ್ವಹಣೆಗಾಗಿ ನೆಲದ ಮೇಲ್ಮೈನ ಅಗತ್ಯಕ್ಕಿಂತ ಹೆಚ್ಚು ಉತ್ಖನನಕ್ಕೆ ಕಾರಣವಾಗಬಹುದು. ಭೂಗತ ಉಪಯುಕ್ತತೆಗಳ ನಿಖರವಾದ ಸ್ಥಾನಗಳನ್ನು ತೋರಿಸುವುದರಿಂದ ಉಪಯುಕ್ತತೆಯ ನಕ್ಷೆಗಳು ಮುಖ್ಯವಾಗಿವೆ ಏಕೆಂದರೆ ಇದು ಸಾರ್ವಜನಿಕರಿಗೆ ಅಥವಾ ಉದ್ಯೋಗಿಗಳಿಗೆ ಅನಾನುಕೂಲತೆಯನ್ನು ಉಂಟುಮಾಡುವ ಯಾವುದೇ ಇತರ ಉಪಯುಕ್ತತೆಗಳನ್ನು ಅಗೆಯುವುದನ್ನು ಅಥವಾ ಹಾನಿ ಮಾಡುವುದನ್ನು ತಪ್ಪಿಸುತ್ತದೆ. ಉತ್ಖನನ ಕಾಮಗಾರಿಯನ್ನು ನಡೆಸಲಾಗುತ್ತಿದ್ದ ಬೆಂಗಳೂರು ನಗರದ ನಾಲ್ಕು ಸ್ಥಳಗಳಲ್ಲಿ[62] ವಾಹನದ ಸರಾಸರಿ

[62] ಡಿಸೆಂಬರ್ 2019/ಜನವರಿ 2020ರಲ್ಲಿದ್ದಂತೆ ಉಪಯುಕ್ತತೆ ಪುನ:ಸ್ಥಾಪನೆ ಕಾಮಗಾರಿಗಳು ಪ್ರಗತಿಯಲ್ಲಿದ್ದ ನಾಲ್ಕು ಸ್ಥಳಗಳನ್ನು, ಅಂದರೆ ಅವಲಹಳ್ಳಿ 50 ಅಡಿ ಮುಖ್ಯ ರಸ್ತೆ (ಎಫ್‌ಎಫ್‌ಎಮ್‌ಆರ್), ಬನ್ನೇರಘಟ್ಟ ಮುಖ್ಯ ರಸ್ತೆ

ವೇಗ, ಮಾಲಿನ್ಯಕಾರಕದ ಹೊರಸೂಸುವಿಕೆ ಮತ್ತು ಇಂಧನ ಬಳಕೆ, ಇವುಗಳ ಮೇಲೆ ರಸ್ತೆಗಳ ಹೆಚ್ಚಿನ ಅಗೆಯುವಿಕೆಯ ಪರಿಣಾಮವನ್ನು ಅಳೆಯಲು ಐಐಎಸ್‌ಸಿ ತಂಡವು ಅಧ್ಯಯನವನ್ನು ನಡೆಸಿತು. ಅಧ್ಯಯನದ ಫಲಿತಾಂಶಗಳನ್ನು ಕೆಳಗೆ ನೀಡಲಾಗಿದೆ:

ಹೆಚ್ಚಿದ ಅಡಚಣೆಯೊಂದಿಗೆ ಹೆಚ್ಚಿದ ವಾಹನ ಹೊರಸೂಸುವಿಕೆ ಮಟ್ಟಗಳು ಮತ್ತು ಇಂಧನ ಬಳಕೆ

2.2.9.4 ಉಪಯುಕ್ತತೆಗಳ ನಿರ್ವಹಣೆಗಾಗಿ ರಸ್ತೆ ಅಗೆಯುವಿಕೆಯ ಕಾರಣದಿಂದಾಗಿ ಸಂಚಾರಕ್ಕೆ ಲಭ್ಯವಿರುವ ರಸ್ತೆಯ ಅಗಲದಲ್ಲಿನ ಇಳಿಕೆಯೊಂದಿಗೆ ಸರಾಸರಿ ವಾಹನದ ವೇಗವು ಸ್ಥಿರವಾಗಿ ಮತ್ತು ಗಣನೀಯವಾಗಿ ಇಳಿಯುತ್ತದೆ ಎಂದು ಅಧ್ಯಯನದಲ್ಲಿ ಕಂಡುಬಂದಿತು. ಸಾಮಾನ್ಯವಾಗಿ, ಅಡಚಣೆಯ ಹೆಚ್ಚಳದೊಂದಿಗೆ ವಾಹನ ಹೊರಸೂಸುವಿಕೆ ಮತ್ತು ಇಂಧನ ಬಳಕೆಯಲ್ಲಿ ಹೆಚ್ಚಳವು ಕಂಡುಬಂದಿತು.

ಕೆಳಗಿನ ನಕ್ಷೆಯು, ಸಂಚಾರ ದಟ್ಟಣೆಯು ಅತಿ ಹೆಚ್ಚಿರುವ ಒಂದು ಗಂಟೆಯಲ್ಲಿ, ಆಯ್ದ ನಾಲ್ಕರಲ್ಲಿ ರಸ್ತೆಯ ಹೆಚ್ಚಿನ ಅಗಲದಲ್ಲಿ ಅಡಚಣೆಯಿದ್ದ ಎರಡು ಸ್ಥಳಗಳಲ್ಲಿ, ಹೆಚ್ಚಿದ ಹೊರಸೂಸುವಿಕೆಯ ಮಟ್ಟವನ್ನು ತೋರಿಸುತ್ತಿತ್ತು.

ರೇಖಾಚಿತ್ರ ಸಂಖ್ಯೆ. – 2.2.3: ರಸ್ತೆಯ ಅಗಲದಲ್ಲಿನ ಅಡಚಣೆಯು ಹೆಚ್ಚಿದ್ದ ಸ್ಥಳಗಳಲ್ಲಿ ವಾಹನದ ಹೊರಸೂಸುವಿಕೆ



(**ಟಿಪ್ಪಣಿ:** ಟಿಎಸ್‌ಎಮ್‌ಆರ್‌ನಲ್ಲಿನ ಋಣಾತ್ಮಕ (ಕಡಿಮೆ) ಹೈಡ್ರೋಕಾರ್ಬನ್ ಮಟ್ಟಗಳು ಮಿಶ್ರ ಟ್ರಾಫಿಕ್ ಪರಿಸರದಲ್ಲಿ ವಾಹನದ ಪರಸ್ಪರ ಸಂವಹನದ ಸಂಕೀರ್ಣತೆಗೆ ಮತ್ತು ವಾಹನ ತಂತ್ರಜ್ಞಾನಗಳಂತಹ ವ್ಯಾಪಕ ಅಂಶಗಳಿಗೆ ಕಾರಣವೆಂದು ಹೇಳಬಹುದು).

ಎಂಎಸ್ ರಾಮಯ್ಯ ರಸ್ತೆ ಮತ್ತು ಥಣಿಸಂದ್ರ ಮುಖ್ಯ ರಸ್ತೆಯಲ್ಲಿ ವಾಹನ ದಟ್ಟಣೆಯು ಅಧಿಕವಾಗಿರುವಾಗ ಕ್ರಮವಾಗಿ 16.8 ಲೀಟರ್ ಮತ್ತು 3.97 ಲೀಟರ್ ಹೆಚ್ಚಿನ ಇಂಧನ ಬಳಕೆ ಗಮನಕ್ಕೆ ಬಂದಿತು. ಭೂಗತ ಉಪಯುಕ್ತತೆಗಳ ನಿಖರವಾದ ಸ್ಥಳದ ಬಗ್ಗೆ ಕಾರ್ಮಿಕರಿಗೆ ತಿಳಿಯದಿದ್ದುದು ರಸ್ತೆಯ ಹೆಚ್ಚಿನ ಭಾಗದ ಉತ್ಖನನಕ್ಕೆ ಕಾರಣವಾಯಿತು. ರಸ್ತೆಯ ಅಧಿಕ ಭಾಗದ ಉತ್ಖನನವು ವಾಹನಗಳ ಚಲನೆಗೆ ಲಭ್ಯವಿರುವ ರಸ್ತೆಯ ಅಗಲವನ್ನು ಕಡಿಮೆ ಮಾಡಿತು ಮತ್ತು ತತ್ಪರಿಣಾಮವಾಗಿ ಪ್ರಯಾಣದ ಸಮಯ, ಇಂಧನ ಬಳಕೆ ಮತ್ತು ಮಾಲಿನ್ಯಕಾರಕಗಳ ಹೊರಸೂಸುವಿಕೆಯು ಅಧಿಕವಾಗಿ ರಸ್ತೆ ಬಳಕೆದಾರರ ಆರೋಗ್ಯದ ಅಪಾಯಗಳಿಗೆ ಕಾರಣವಾಗಿತ್ತು.

ಭೂಗತ ಉಪಯುಕ್ತತೆಗಳಿಗೆ ಹಾನಿಯುಂಟಾಗಿರುವ ಘಟನೆಗಳು

2.2.10. ಭೂಗತ ಉಪಯುಕ್ತತೆಗಳ ಮೇಲೆ ಹಳೆಯ ಮತ್ತು ಅಪೂರ್ಣ ಜಿಐಎಸ್ ದತ್ತಾಂಶವನ್ನು ಅಳವಡಿಸಿಕೊಂಡಿರುವುದನ್ನು ಮತ್ತು ಅವುಗಳ ನಿಯತಕಾಲಿಕ ಇಂದೀಕರಣವಾಗದಿರುವುದು, ಅನುಮತಿಗಳಿಲ್ಲದೆ ಕಾಮಗಾರಿಗಳನ್ನು ಕೈಗೊಂಡಿರುವುದು ಇತ್ಯಾದಿಗಳನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದು ರಸ್ತೆ ಅಗೆಯುವುದು/ಉತ್ಖನನ ಮಾಡುವಾಗ ಉಪಯುಕ್ತತೆ ಮಾರ್ಗಗಳಿಗೆ ಆಗಾಗ್ಗೆ ಹಾನಿ ಉಂಟಾಗುವಲ್ಲಿ ಪರಿಣಮಿಸಿತು. ಇದು ವಾಹನ ದಟ್ಟಣೆಗೆ ಅನಪೇಕ್ಷಿತ ಅನಾನುಕೂಲತೆಯಲ್ಲಿ ಮತ್ತು ಹಾನಿಗೊಳಗಾದ ಆಸ್ತಿಯನ್ನು ಮರುಸ್ಥಾಪಿಸಲು ತಪ್ಪಿಸಬಹುದಾದ ವೆಚ್ಚದಲ್ಲಿ ಪರಿಣಮಿಸಿತು.

(ಬಿಜಿಎಮ್‌ಆರ್), ಎಮ್‌ಎಸ್ ರಾಮಯ್ಯ ರಸ್ತೆ (ಎಮ್‌ಎಸ್‌ಆರ್‌ಆರ್) ಮತ್ತು ಥಣೀಸಂದ್ರ ಮುಖ್ಯ ರಸ್ತೆ (ಟಿಎಸ್‌ಎಮ್‌ಆರ್), ಇವುಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಲಾಯಿತು.

2015–21ರ ಅವಧಿಯಲ್ಲಿ ಭೂಗತ ಉಪಯುಕ್ತತೆಗಳಿಗೆ ಹಾನಿಯಾದ ಘಟನೆಗಳ ಸಂಖ್ಯೆಯನ್ನು ಈ ಕೆಳಗಿನ ಚಾರ್ಟ್‌ನಲ್ಲಿ ತೋರಿಸಲಾಗಿದೆ:

ರೇಖಾಚಿತ್ರ ಸಂಖ್ಯೆ. – 2.2.4: 2015–21ರ ಅವಧಿಯಲ್ಲಿ ಭೂಗತ ಉಪಯುಕ್ತತೆಗಳಿಗೆ ಹಾನಿಯುಂಟಾಗಿರುವ ಘಟನೆಗಳು



(ಆಧಾರ: ಸೇವಾ ಪೂರೈಕೆದಾರರು ಒದಗಿಸಿದ ಮಾಹಿತಿ)

ಮುಖ್ಯವಾಗಿ ಬಿಡಬ್ಲ್ಯುಎಸ್ಎಸ್‌ಬಿ (597 ಸಂಖ್ಯೆಗಳು) ಮತ್ತು ಇತರ ಬಾಹ್ಯ ಏಜೆನ್ಸಿಗಳಿಂದ[63] (367 ಸಂಖ್ಯೆಗಳು) ಕಾಮಗಾರಿಗಳನ್ನು ಕಾರ್ಯಗತಗೊಳಿಸಿದ್ದರಿಂದ ಜಿಜಿಎಲ್ ಪೈಪ್‌ಲೈನ್‌ಗಳಿಗೆ ಗರಿಷ್ಠ ಸಂಖ್ಯೆಯ ಹಾನಿ ಸಂಭವಿಸಿತ್ತು ಎಂಬುದನ್ನು ಗಮನಿಸಬಹುದು. ಅಲ್ಲದೆ, ಬೆಸ್ಕಾಮ್‌ನ ಭೂಗತ ಕೇಬಲ್‌ಗಳು ಬೆಂಗಳೂರು ಮೆಟ್ರೋ ರೈಲ್ ಕಾರ್ಪೊರೇಷನ್ ಲಿಮಿಟೆಡ್ (201 ಸಂಖ್ಯೆಗಳು), ಇತರ ಬಾಹ್ಯ ಏಜೆನ್ಸಿಗಳು (349 ಸಂಖ್ಯೆಗಳು), ಬಿಡಬ್ಲ್ಯುಎಸ್ಎಸ್‌ಬಿ (89 ಸಂಖ್ಯೆಗಳು) ಮತ್ತು ಸ್ವತಃ ಬಿಬಿಎಂಪಿಯಿಂದ (110 ಸಂಖ್ಯೆಗಳು) ಹಾನಿಗೊಳಗಾಗಿದ್ದವು. ಇಂತಹ ಹಾನಿಗಳು ಅನುಮತಿಯಿಲ್ಲದೆ ಕಾಮಗಾರಿಗಳನ್ನು ನಿರ್ವಹಿಸುವುದು, ಇಂದೀಕರಿಸಿದ ದತ್ತಾಂಶದ ಅಲಭ್ಯತೆ, ಸೇವಾ ಪೂರೈಕೆದಾರರ ನಡುವಿನ ಸಮನ್ವಯದ ಅನುಪಸ್ಥಿತಿ, ಇತ್ಯಾದಿಗಳು ಕಾರಣವಾಗಿದ್ದವು. ತತ್ಪರಿಣಾಮವಾಗಿ, ಹಾನಿಗೊಳಗಾದ ಉಪಯುಕ್ತತೆಗಳ ದುರಸ್ತಿಗಾಗಿ ₹ 18.38 ಕೋಟಿ ವೆಚ್ಚವನ್ನು ಭರಿಸಲಾಯಿತು (ಕೆಪಿಟಿಸಿಎಲ್–₹ 15.13 ಕೋಟಿ; ಬೆಸ್ಕಾಂ–₹ 3.07 ಕೋಟಿ; ಬಿಡಬ್ಲ್ಯುಎಸ್ಎಸ್‌ಬಿ–₹ 0.18 ಕೋಟಿ). ಜಿಎಐಎಲ್/ಜಿಜಿಎಲ್ ಪೈಪ್‌ಲೈನ್‌ಗಳ ದುರಸ್ತಿಯ ವೆಚ್ಚವು ಲಭ್ಯವಿರಲಿಲ್ಲ.

ನಿರ್ಣಯ

ವಿವಿಧ ಸೇವಾ ಪೂರೈಕೆದಾರರ ಭೂಗತ ಉಪಯುಕ್ತತೆ ಆಸ್ತಿಗಳ ಪರಿಣಾಮಕಾರಿ ಮ್ಯಾಪಿಂಗ್ ಅನ್ನು ಜಾರಿಗೊಳಿಸಲು ಕಾನೂನು/ನಿಯಂತ್ರಕ ಚೌಕಟ್ಟನ್ನು ರೂಪಿಸಲು ರಾಜ್ಯಕ್ಕೆ ಸಾಧ್ಯವಾಗಲಿಲ್ಲ. ಬಿಡಬ್ಲ್ಯುಎಸ್ಎಸ್‌ಬಿ ಮತ್ತು ಗ್ಯಾಸ್ ಅಥಾರಿಟಿ (ಇಂಡಿಯಾ) ಲಿಮಿಟೆಡ್, ಇವುಗಳನ್ನು ಹೊರತುಪಡಿಸಿ ಸೇವಾ ಪೂರೈಕೆದಾರರ ಉಪಯುಕ್ತತೆಗಳ ಮ್ಯಾಪಿಂಗ್ ಅಪೂರ್ಣವಾಗಿತ್ತು ಮತ್ತು ನಿಯತಕಾಲಿಕ ನವೀಕರಣದ ಅನುಪಸ್ಥಿತಿಯಿಂದಾಗಿ ಮ್ಯಾಪ್ ಮಾಡಲಾದ ದತ್ತಾಂಶವು ನಿಖರ ಮತ್ತು ವಿಶ್ವಾಸಾರ್ಹವಾಗಿರಲಿಲ್ಲ. ರಸ್ತೆ ಉತ್ಖನನದ ಸಮಯದಲ್ಲಿ ವಿವಿಧ ಉಪಯುಕ್ತತೆ ವಿಭಾಗಗಳ ನಡುವೆ ಸಮನ್ವಯವನ್ನು ಅಭಿವೃದ್ಧಿಪಡಿಸಲು ಏಕ ಗವಾಕ್ಷಿ ವೇದಿಕೆಯಾಗಿ ಕಾರ್ಯನಿರ್ವಹಿಸಲು ಸ್ಥಾಪಿತವಾಗಿದ್ದ ಎಮ್ಎಆರ್‌ಸಿಸಿಎಸ್ ಉದ್ದೇಶವು ಉತ್ತಮ ಉದ್ದೇಶವನ್ನು ಹೊಂದಿದ್ದರೂ, ನವೀಕರಿಸಿದ ಒಳಚರಂಡಿ ಜಾಲದ ಅನುಪಸ್ಥಿತಿ ಮತ್ತು ಎಮ್ಎಆರ್‌ಸಿಸಿಎಸ್‌ಅನ್ನು ಉಪೇಕ್ಷೆ ಮಾಡಿ ರಸ್ತೆಗಳನ್ನು ಅಗೆಯುವ ಸೇವಾ ಪೂರೈಕೆದಾರರ ಮೇಲೆ ನಿಯಂತ್ರಣದ ಕೊರತೆಯಂತಹ ವ್ಯವಸ್ಥಿತ ನ್ಯೂನತೆಗಳಿಂದಾಗಿ ವಿಫಲವಾಯಿತು. ಉಲ್ಲಂಘನೆಗಾಗಿ ದಂಡದ ನಿಬಂಧನೆಗಳನ್ನು ಸಮರ್ಪಕವಾಗಿ ಜಾರಿ ಮಾಡಿರಲಿಲ್ಲ. ಮ್ಯಾಪಿಂಗ್ ಅಳವಡಿಕೆಗೆ ಕಾನೂನು ಕ್ರಮಗಳ ಅನುಪಸ್ಥಿತಿ ಹಾಗೂ ಬಿಬಿಎಂಪಿ ಮತ್ತು ಇತರ ನಗರ ಸೇವಾ ಪೂರೈಕೆದಾರರ ನಡುವೆ ಸಮನ್ವಯದ ಕೊರತೆಯು ಭೂಗತ ಉಪಯುಕ್ತತೆಗಳ ಅಸಮರ್ಪಕ ಯೋಜನೆಯಲ್ಲಿ ಪರಿಣಮಿಸಿತು. ಅಪೂರ್ಣ ಮತ್ತು ಇಂದೀಕರಿಸದ ಮ್ಯಾಪ್‌ಗಳು ಭೂಗತ ಉಪಯುಕ್ತತೆಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಒದಗಿಸಲು ಅಸಮರ್ಪಕವಾಗಿದ್ದು ರಸ್ತೆ ಉತ್ಖನನದ

[63] ಕೆಪಿಟಿಸಿಎಲ್, ಬಿಎಸ್ಎನ್ಎಲ್, ಆಪ್ಟಿಕಲ್ ಫೈಬರ್ ಕೇಬಲ್ ಸೇವಾ ಪೂರೈಕೆದಾರರು, ಇತ್ಯಾದಿ.

ಸಮಯದಲ್ಲಿ ಅವುಗಳಿಗೆ ಹಾನಿಯಾಗುವುದಲ್ಲದೇ ತಪ್ಪಿಸಬಹುದಾಗಿದ್ದ ವೆಚ್ಚ ಮತ್ತು ಸಾರ್ವಜನಿಕರಿಗೆ ತೊಂದರೆಯಾಗುವಲ್ಲಿ ಪರಿಣಮಿಸಿತು.

ಶಿಫಾರಸುಗಳು

- **ಕರ್ನಾಟಕ ಸರ್ಕಾರದ ನಗರಾಭಿವೃದ್ಧಿ ಇಲಾಖೆಯು ಸೇವಾ ಪೂರೈಕೆದಾರರಿಂದ ಭೂಗತ ಉಪಯುಕ್ತತೆಗಳ ಪರಿಣಾಮಕಾರಿ ಮತ್ತು ಸಂಪೂರ್ಣ ಮ್ಯಾಪಿಂಗ್ ಹಾಗೂ ಅವುಗಳ ಸಕಾಲಿಕ ನವೀಕರಣವನ್ನು ಕಡ್ಡಾಯಗೊಳಿಸುವ ಸಾಕಷ್ಟು ಕಾನೂನು ಮತ್ತು ನಿಯಂತ್ರಕ ಚೌಕಟ್ಟನ್ನು ರೂಪಿಸಬೇಕು.**
- **ಸೇವಾ ಪೂರೈಕೆದಾರರು ಜೋಡಣೆ, ಆಳ, ಗಾತ್ರ ಮತ್ತು ಪ್ರಕಾರದ ಸೂಕ್ಷ್ಮ ವಿವರಗಳೊಂದಿಗೆ ಭೂಗತ ಉಪಯುಕ್ತತೆಗಳ ಸಂಪೂರ್ಣ ಮತ್ತು ನಿಖರವಾದ ದತ್ತಾಂಶದ ನಿರ್ವಹಣೆಗೆ ಸೂಕ್ತವಾದ ಕಾರ್ಯವಿಧಾನವನ್ನು ಸ್ಥಾಪಿಸಬೇಕು ಹಾಗೂ ಅವುಗಳ ನಿಯತಕಾಲಿಕ ನವೀಕರಣವನ್ನು ಖಚಿತಪಡಿಸಿಕೊಳ್ಳಬೇಕು.**
- **ಸೇವಾ ಪೂರೈಕೆದಾರರು ಭೂಗತ ಉಪಯುಕ್ತತೆಗಳನ್ನು ಹಾಕಲು ನಿಗದಿಪಡಿಸಿರುವ ಸಂಬಂಧಿತ ಮಾನದಂಡಗಳು/ನಿಯಮಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳಬೇಕು.**
- **ಬಿಬಿಎಮ್‌ಪಿಯು ಎಮ್‌ಎಆರ್‌ಸಿಸಿಎಸ್‌ನಲ್ಲಿ ಉಪಯುಕ್ತತೆ ಮ್ಯಾಪ್‌ಗಳ ನವೀಕರಣವನ್ನು ಖಚಿತ ಪಡಿಸಿಕೊಳ್ಳಬೇಕು ಮತ್ತು ಉಲ್ಲಂಘನೆಗಳಿಗೆ ದಂಡವನ್ನು ವಿಧಿಸುವ ನಿಬಂಧನೆಗಳ ಜಾರಿಯೊಂದಿಗೆ ರಸ್ತೆ ಕತ್ತರಿಸುವ ಎಲ್ಲಾ ಅನುಮತಿಗಳನ್ನು ಆ ವ್ಯವಸ್ಥೆಯ ಮೂಲಕವೇ ಜಾರಿಗೊಳಿಸಬೇಕು.**
- **ದುರಸ್ತಿ ಮತ್ತು ನಿರ್ವಹಣೆಗೆ ಬಿಬಿಎಂಪಿ ತನ್ನ ಅನೇಕ ಉಪಯುಕ್ತತೆ ಮಾರ್ಗಗಳಿಗೆ ವಿವಿಧ ಬಣ್ಣಗಳನ್ನು ಅಳವಡಿಸಲು ಯೋಚಿಸಬೇಕು.**
- **ಅಪಘಾತಗಳು, ಆಸ್ತಿಗಳಿಗೆ ಹಾನಿ ಮತ್ತು ಯೋಜಿತವಲ್ಲದ ರಸ್ತೆ ಅಗೆಯುವಿಕೆಯಿಂದ ಉಂಟಾಗುವ ನಷ್ಟವನ್ನು ತಪ್ಪಿಸಲು, ತಮ್ಮ ಮೂಲಸೌಕರ್ಯ ಮತ್ತು ಸೇವೆಗಳ ವಿಸ್ತರಣೆಗಾಗಿ ರಸ್ತೆ ಉತ್ಖನನವನ್ನು ಕೈಗೊಳ್ಳುವ ವಿವಿಧ ನಗರ ಸೇವಾ ಪೂರೈಕೆದಾರರ ನಡುವೆ ಬಿಬಿಎಮ್‌ಪಿ ಸಾಕಷ್ಟು ಸಮನ್ವಯ ಕಾರ್ಯವಿಧಾನವನ್ನು ಸ್ಥಾಪಿಸಬೇಕು.**

ಲೋಕೋಪಯೋಗಿ ಇಲಾಖೆ

2.3. ನಿಷ್ಕ್ರಿಯವಾಗಿಡಲಾಗಿದ್ದ ಗುಣಮಟ್ಟ ಖಾತ್ರಿ ಉಪಕರಣ

ಅಗತ್ಯವಾದ ಮೂಲಸೌಕರ್ಯವನ್ನು ಮುಂಚಿತವಾಗಿ ರಚಿಸದೆ ಮಾಡಿದ ಗುಣಮಟ್ಟ ಖಾತ್ರಿ ಉಪಕರಣಗಳ ಖರೀದಿಯಿಂದ ₹ 20.82 ಕೋಟಿ ಫಲಪ್ರದವಲ್ಲದ ವೆಚ್ಚ

ಕರ್ನಾಟಕ ಸರ್ಕಾರವು ವಿಶ್ವಬ್ಯಾಂಕ್ ಆರ್ಥಿಕ ನೆರವಿನೊಂದಿಗೆ 2011–12 ಮತ್ತು 2018–19 ರ ನಡುವೆ ಕರ್ನಾಟಕ ರಾಜ್ಯ ಹೆದ್ದಾರಿಗಳ ಸುಧಾರಣಾ ಯೋಜನೆ (ಕೆಎಸ್‌ಹೆಚ್‌ಐಪಿ) ಖಖರ ಅನುಷ್ಠಾನವನ್ನು ₹ 4,522 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಯಿತು. ಯೋಜನಾ ವೆಚ್ಚವು, ಆಂತರಿಕವಾಗಿ ತಯಾರಿಸಿದ ಉಪಕರಣಗಳು ಮತ್ತು ಆಮದು ಮಾಡಲಾದ ಸುಧಾರಿತ ಉಪಕರಣಗಳನ್ನು ಒಳಗೊಂಡಂತೆ "ಗುಣಮಟ್ಟ ಖಾತ್ರಿ/ಗುಣಮಟ್ಟ ನಿಯಂತ್ರಣ (ಕ್ಯೂಎ/ಕ್ಯೂಸಿ) ಉಪಕರಣಗಳ ಖರೀದಿ" ಯನ್ನು ಒಳಗೊಂಡಿರುತ್ತದೆ. ಖರೀದಿಸಿದ ಉಪಕರಣಗಳ ಸ್ಥಾಪನೆ ಮತ್ತು ಬಳಕೆಗಾಗಿ ಮೂಲಸೌಕರ್ಯಗಳನ್ನು ಗುಣಮಟ್ಟ ನಿಯಂತ್ರಣ(ಕ್ಯೂಸಿ) ವಿಭಾಗಗಳು ರಚಿಸುವುದು ಅಗತ್ಯವಾಗಿತ್ತು.

ರಾಜ್ಯದಲ್ಲಿ ಗುರುತಿಸಲಾದ ಪ್ರಯೋಗಾಲಯಗಳಲ್ಲಿ (ಲೋಕೋಪಯೋಗಿ ಇಲಾಖೆಯ ಒಂಬತ್ತು ಪ್ರಯೋಗಾಲಯಗಳು ಮತ್ತು ರಾಷ್ಟ್ರೀಯ ಹೆದ್ದಾರಿಯ ಮೂರು ಪ್ರಯೋಗಾಲಯಗಳು) ₹ 20.98 ಕೋಟಿ ವೆಚ್ಚದಲ್ಲಿ ಏಳು ಐಟಂ (24 ಉಪಕರಣಗಳು) ಸುಧಾರಿತ ಕ್ಯೂಎ/ಕ್ಯೂಸಿ ಉಪಕರಣಗಳನ್ನು ಜುಲೈ 2018ರೊಳಗೆ ಪೂರೈಕೆ ಮತ್ತು ಸ್ಥಾಪನೆ ಮಾಡುವುದಕ್ಕೆ[64] ಯೋಜನಾ ನಿರ್ದೇಶಕರು (ಪೀಡಿ),

[64] ಮೆ. ಏಪಿಎಸ್ ಜೀಎಮ್‌ಬಿಹೆಚ್/ವಿಲ್ಲೆ ಜೀಯೊಟೆಕ್ನಿಕ್, ಜೆರ್ಮನಿ

ಯೋಜನಾ ಅನುಷ್ಠಾನ ಘಟಕ(ಪಿಐಯು), ಕರ್ನಾಟಕ ರಾಜ್ಯ ಹೆದ್ದಾರಿಗಳ ಸುಧಾರಣಾ ಯೋಜನೆ (ಕೆಎಸ್‌ಹಚ್‌ಐಪಿ) ಪೂರೈಕೆದಾರರೊಂದಿಗೆ ಫೆಬ್ರವರಿ 2018ರಲ್ಲಿ ಒಪ್ಪಂದ ಮಾಡಿಕೊಂಡರು. ಸರಬರಾಜಿನ ವಿತರಣೆಯ ದಿನಾಂಕದಿಂದ 38 ತಿಂಗಳ ಖಾತರಿಯನ್ನು ಹೊಂದಿತ್ತು. ಮೇ 2019 ಮತ್ತು ಜನವರಿ 2020 ರ ನಡುವೆ ಪೂರೈಕೆದಾರರು ಎಲ್ಲಾ 24 ಉಪಕರಣಗಳನ್ನು ಸರಬರಾಜು ಮಾಡಿದ್ದಾರೆ ಮತ್ತು ಪೂರೈಕೆದಾರರಿಗೆ ₹ 20.82 ಕೋಟಿ[65] ಪಾವತಿಸಲಾಗಿದೆ(ಮಾರ್ಚ್ 2021).

ಯೋಜನಾ ನಿರ್ದೇಶಕರು (ಕಆ), ಯೋಜನಾ ಅನುಷ್ಠಾನ ಘಟಕ, ಕೆಎಸ್‌ಹಚ್‌ಐಪಿಯ ದಾಖಲೆಗಳ ಲೆಕ್ಕಪರಿಶೋಧನೆಯು ನಡೆಸಿದ ಪರಿಶೀಲನೆಯಿಂದ (ಜುಲೈ 2019, ಆಗಸ್ಟ್ 2021) ಸರಬರಾಜು ಮಾಡಿದ ಉಪಕರಣಗಳನ್ನು ಉಪಯುಕ್ತತೆ ಮಾಡುವಲ್ಲಿ ವಿಫಲತೆಗಳ ಕಾರಣಗಳನ್ನು ಕೆಳಗೆ ಚರ್ಚಿಸಲಾಗಿದೆ:

- ಒಪ್ಪಂದದ ಭಾಗ VI ರ ಷೆಡ್ಯೂಲ್ 1ರಲ್ಲಿ ಪೂರೈಕೆದಾರರಿಂದ ವಿವಿಧ ಕ್ಯೂಸಿ ಪ್ರಯೋಗಾಲಯಗಳಿಗೆ ಉಪಕರಣಗಳನ್ನು ವಿತರಿಸಬೇಕಾದ ಅವಧಿ, ಉಪಕರಣಗಳ ಸಂಖ್ಯೆ ಮತ್ತು ಪ್ರಕಾರವನ್ನು ನಿಗದಿಪಡಿಸಲಾಗಿತ್ತು. ಇದಲ್ಲದೆ, ಸರಬರಾಜುದಾರರು ಈ ಉಪಕರಣಗಳನ್ನು ಅಳವಡಿಸಲು ವಿವರವಾದ ಮೂಲಸೌಕರ್ಯದ ಅಗತ್ಯತೆಗಳನ್ನು (ಮೇ 2018) ಒದಗಿಸಿದ್ದರು, ಅಂದರೆ, ರೊಮ್ದಾಸ್ ಮತ್ತು ಎಫ್‌ಡಬ್ಲ್ಯುಡಿ ಆರೋಹಿಸಲು ವಾಹನಗಳಲ್ಲದೇ ಬೆಂಗಳೂರು, ಹುಬ್ಬಳ್ಳಿ ಮತ್ತು ಚಿತ್ರದುರ್ಗ ವಿಭಾಗಗಳು/ಉಪ–ವಿಭಾಗಗಳಲ್ಲಿ ಸ್ಥಳ, ಕಟ್ಟಡ, ವಿದ್ಯುತ್, ಹವಾನಿಯಂತ್ರಣ, ಚಿಲ್ಲರ್ ಮತ್ತು ಗಾಳಿ ಸಂಕೋಚಕ (ಏರ್ ಕಂಪ್ರೆಸ್ಸರ್). ಒಪ್ಪಂದವು ಪೂರೈಕೆದಾರರು ತರಬೇತಿ ನೀಡಬೇಕೆಂಬುದನ್ನು ಕಡ್ಡಾಯಗೊಳಿಸಿತ್ತು.
- ಉಪಕರಣಗಳನ್ನು ಸ್ಥಾಪಿಸದಿರುವುದು/ ಮೂಲಸೌಕರ್ಯಗಳ ಅಲಭ್ಯತೆ/ತರಬೇತಿ ನೀಡದಿರುವ ಕಾರಣದಿಂದ ಸರಬರಾಜು ಮಾಡಲಾದ ಯಾವುದೇ ಸಲಕರಣೆಗಳನ್ನು (24 ಉಪಕರಣಗಳು) ಇಲ್ಲಿಯವರೆಗೆ(ಜುಲೈ 2021) ಬಳಸಲಾಗಿರುವುದಿಲ್ಲ ಎಂದು ಗಮನಿಸಲಾಗಿದೆ ಮತ್ತು ವಿವರಗಳನ್ನು ಕೋಷ್ಟಕದಲ್ಲಿ ತೋರಿಸಲಾಗಿದೆ:

ಕೋಷ್ಟಕ ಸಂಖ್ಯೆ. 2.3.1: ವಿವಿಧ ಉಪಕರಣಗಳ ಬಳಕೆಯ ಸ್ಥಿತಿ

ಕ್ರಮ ಸಂಖ್ಯೆ	ಉಪಕರಣ	ಒಟ್ಟು ಸರಬರಾಜು ಮಾಡಿದ್ದು	ಉಪಕರಣಗಳು ನಿಷ್ಕ್ರಿಯವಾಗಿದ್ದಕ್ಕೆ ಕಾರಣ ಮತ್ತು ಸಂಖ್ಯೆ		
			ಸ್ಥಾಪನೆ ಬಾಕಿಯಿದ್ದದ್ದು	ಮೂಲಸೌಕರ್ಯ ಇನ್ನೂ ಒದಗಿಸದೇ ಇದ್ದದು	ತರಬೇತಿ ನೀಡದೇ ಇದ್ದದ್ದು
1	ಡೈನಾಮಿಕ್ ವಿಶೇಷ ಟ್ರಯಾಕ್ಸಿಯಲ್ ಟೆಸ್ಟಿಂಗ್ ಮೆಷಿನ್ (ಡಿಎಸ್ ಟಿ ಎಮ್)	3	1	2	3
2	ರೋಲಿಂಗ್ ಥಿನ್ ಫಿಲ್ಮ್ ಓವನ್ (ಆರ್ ಟಿ ಎಫ್ ಓ)	3	2	3	3
3	ಸ್ಟಾಟಿಕ್ ಡೈನಾಮಿಕ್ ಯುನಿವರ್ಸಲ್ ಆಸ್ಫಾಲ್ಟ್ ಟೆಸ್ಟಿಂಗ್ ಮೆಷಿನ್ (ಎಸ್ ಡಿ ಎ ಟಿ ಎಮ್)	4	3	3	4
4	ಡಿಜಿಟಲ್ ಇನ್ಕ್ಲಿನೋಮೀಟರ್‌ಗಳು	9	6	ಅವಶ್ಯಕತೆ ಇಲ್ಲದಿರುವುದು	9
5	ಡೇಟಾ ಸ್ವಾಧೀನ ಮತ್ತು ಪ್ರಕ್ರಿಯೆಗಾಗಿ ರೊಮ್ದಾಸ್ ಮಾಡ್ಯುಲರ್ ಸಿಸ್ಟಮ್	2	0	1	2
6	ಪಾದಚಾರಿ ಮೇಲ್ಮೈ ವಿನ್ಯಾಸ ಮಾಪನ	1		ಅವಶ್ಯಕತೆ ಇಲ್ಲದಿರುವುದು	1
7	ಫಾಲಿಂಗ್ ವೆಯ್ಟ್ ಡಿಫ್ಲೆಕ್ಟೋಮೀಟರ್ (ಎಫ್‌ಡಬ್ಲ್ಯುಡಿ	2	1	ಒದಗಿಸಲಾಗಿದೆ	2
	ಒಟ್ಟು	**24**	**13**	**9**	**24**

[65] ₹ 16.37 ಕೋಟಿ ವಿಶ್ವ ಬ್ಯಾಂಕ್ ಸಹಾಯದಿಂದ ಮತ್ತು ಬಾಕಿ ರಾಜ್ಯದ ನಿಧಿಯಿಂದ. ವಿನಿಮಯ ಏರಿಳಿತಗಳ ಕಾರಣದಿಂದ ವೆಚ್ಚ ಮತ್ತು ಪಾವತಿಯ ನಡುವೆ ವ್ಯತ್ಯಾಸವಿತ್ತು.

- ಪೂರೈಕೆದಾರರು ಅಸಮರ್ಪಕ ಮೂಲಸೌಕರ್ಯಗಳ ಕಾರಣದಿಂದ ರಾಷ್ಟ್ರೀಯ ಹೆದ್ದಾರಿ ಕ್ಯೂಸಿ ಪ್ರಯೋಗಾಲಯಗಳು ಉಪಕರಣಗಳ ವಿತರಣೆಯನ್ನು ತೆಗೆದುಕೊಳ್ಳಲು ನಿರಾಕರಿಸುತ್ತಿವೆ ಎಂದು ತಿಳಿಸಿದ್ದರು(ಮೇ 2019), ಈ ಸಮಸ್ಯೆಯನ್ನು ಅಧಿಕಾರಿಗಳು ಆದ್ಯತೆಯ ಮೇಲೆ ಬಗೆಹರಿಸಲಿಲ್ಲ. ಪೂರೈಕೆದಾರರು ರೊಮ್ಡಾಸ್ ಮತ್ತು ಎಫ್‌ಡಬ್ಲ್ಯುಡಿ ಸ್ಥಾಪನೆಗೆ ವಾಹನಗಳ ಅಗತ್ಯತೆಯನ್ನು ತಿಳಿಸಿದ್ದರಾದರೂ ವಾಹನಗಳನ್ನು ಉಪಕರಣಗಳ ವಿತರಣೆಯ (ಮೇ 2019 ಮತ್ತು ಜನವರಿ 2020) ನಂತರ ಡಿಸೆಂಬರ್ 2020ರಲ್ಲಿಯಷ್ಟೇ ಖರೀದಿಸಲಾಗಿದೆ.

- ಹುಬ್ಬಳ್ಳಿಗೆ ಸಂಬಂಧಿಸಿದ ಉಪಕರಣವನ್ನು ಖಾಸಗಿ ಕಾರ್ಯಾಗಾರದಲ್ಲಿ ಇರಿಸಲಾಗಿತ್ತು, ಚಿತ್ರದುರ್ಗಕ್ಕೆ ಸಂಬಂಧಿಸಿದ ಉಪಕರಣವನ್ನು ಬಳಸಲು ಮೂರು ಕಂಪ್ಯೂಟರ್‌ಗಳು ಮತ್ತು ತರಬೇತಿಯ ಅವಶ್ಯಕತೆಯಿತ್ತು.

- ₹ 1.10 ಕೋಟಿ ವೆಚ್ಚದ ಎರಡು ಫಾಲಿಂಗ್ ವೇಟ್ ಡಿಫ್ಲೆಕ್ಟೋಮೀಟರ್‌ಗಳನ್ನು (ಎಫ್‌ಡಬ್ಲ್ಯುಡಿ) ಬೆಂಗಳೂರು ಮತ್ತು ಚಿತ್ರದುರ್ಗದ ರಾಷ್ಟ್ರೀಯ ಹೆದ್ದಾರಿ ಕ್ಯೂಸಿ ಉಪ-ವಿಭಾಗಗಳಲ್ಲಿ ಜುಲೈ 2018 ರ ಅಂತ್ಯದ ವೇಳೆಗೆ. ಅಳವಡಿಸಬೇಕಾಗಿತ್ತಾದರೂ ಇವುಗಳನ್ನು ಮೇ 2019 ಮತ್ತು ಆಗಸ್ಟ್ 2019 ರ ನಡುವೆ ಕಠಿಣ ಹವಾಮಾನಕ್ಕೆ ಒಡ್ಡಿಕೊಂಡ ನಂತರ ಮಾತ್ರ ಸರಬರಾಜು ಮಾಡಲಾಗಿದೆ. ಉಪಕರಣಗಳನ್ನು ಕಾರ್ಯಾರಂಭ ಮಾಡುವಲ್ಲಿನ ವಿಳಂಬದ ಹೊರತಾಗಿ, ಈ ಸಲಕರಣೆಗಳನ್ನು ಕಾರ್ಯಗತಗೊಳಿಸಲು ಅವುಗಳ ರಿಪೇರಿಯ ವೆಚ್ಚವನ್ನು ಇಲಾಖೆಯು ಭರಿಸಬೇಕಿದೆ. ಏಕೆಂದರೆ ವಾರಂಟಿ ಷರತ್ತುಗಳನ್ನು ಉಲ್ಲಂಘಿಸಲಾಗಿದೆ / ವಾರಂಟಿ ಅವಧಿ ಮುಕ್ತಾಯವಾಗಿರುತ್ತದೆ.

- ಒಪ್ಪಂದದ ಭಾಗ VI, ಶೆಡ್ಯೂಲ್ 2ರ ಪ್ರಕಾರ, ಪರೀಕ್ಷೆಗಳನ್ನು ನಡೆಸಲು ಮತ್ತು ಪ್ರಯೋಗಾಲಯ ಉಪಕರಣಗಳ ನಿರ್ವಹಣೆಗೆ ತರಬೇತಿಯನ್ನು ಅಳವಡಿಸಿದ ಒಂದು ತಿಂಗಳ ನಂತರ ನೀಡಬೇಕಾಗಿತ್ತು. ಆದಾಗ್ಯೂ, ಎಲ್ಲಾ 24 ಉಪಕರಣಗಳ (ರೊಮ್ಡಾಸ್ ಸೇರಿದಂತೆ) ಕಾರ್ಯಾಚರಣೆಗಾಗಿ ತರಬೇತಿಗೆ ಒಳಗಾಗಲು ಅಧಿಕಾರಿಗಳ/ಸಿಬ್ಬಂದಿಯ ಗುರುತಿಸುವಿಕೆಯನ್ನು ಇನ್ನೂ ಅಂತಿಮಗೊಳಿಸಲಾಗಿಲ್ಲ (ಜುಲೈ 2021).

ಚಿತ್ರ ಸಂಖ್ಯೆ 2.3.1: ಬೆಂಗಳೂರಿನ ಕ್ಯೂಸಿ ಉಪ-ವಿಭಾಗ (4ನೇ ಆಗಸ್ಟ್ 2021) ನಲ್ಲಿ ಕಠಿಣ ಹವಾಮಾನಕ್ಕೆ ಒಡ್ಡಿಕೊಂಡ ಕಾರಣ ₹ 0.55 ಕೋಟಿ ವೆಚ್ಚದ (ವಾಹನ ವೆಚ್ಚವನ್ನು ಹೊರತುಪಡಿಸಿ) ಎಫ್‌ಡಬ್ಲ್ಯುಡಿ ಉಪಕರಣಗಳು ಹಾನಿಗೊಳಗಾಗಿವೆ.

- ಕ್ಯೂಸಿ ವಿಭಾಗಗಳಲ್ಲಿ ಸಹಾಯಕ ಇಂಜಿನಿಯರ್, ಪ್ರಯೋಗಾಲಯ ತಂತ್ರಜ್ಞ ಮತ್ತು ಪ್ರಯೋಗಾಲಯ ಸಹಾಯಕ ಹುದ್ದೆಗಳಲ್ಲಿ ಹೆಚ್ಚಿನ ಸಂಖ್ಯೆ ಖಾಲಿ[66] ಇರುವುದನ್ನು ಸಹ

66

ಕ್ಯೂಸಿ ವಿಭಾಗಗಳಲ್ಲಿ ಮಾರ್ಚ್ 2021ರಂತೆ ಮಂಜೂರಾದ ಹುದ್ದೆಗಳು ಮತ್ತು ಕಾರ್ಯನಿರ್ವಹಿಸುತ್ತಿರುವವರ ಸಂಖ್ಯೆಯ ವಿವರ:

ಹುದ್ದೆ	ಮಂಜೂರಾದ ಹುದ್ದೆ	ಕಾರ್ಯನಿರ್ವಹಿಸುತ್ತಿರುವ ಹುದ್ದೆ	ಖಾಲಿ ಹುದ್ದೆಗಳು	ಶೇಕಡಾವಾರು
ಸಹಾಯಕ ಇಂಜಿನಿಯರ್	87	53	34	39
ಪ್ರಯೋಗಾಲಯ ತಂತ್ರಜ್ಞ	13	01	12	92
ಪ್ರಯೋಗಾಲಯ ಸಹಾಯಕ	26	01	25	96

ಗಮನಿಸಲಾಗಿದೆ. ಪ್ರಯೋಗಾಲಯ ತಂತ್ರಜ್ಞರು ಮತ್ತು ಪ್ರಯೋಗಾಲಯ ಸಹಾಯಕರು ಪರೀಕ್ಷೆಗಳನ್ನು ನಡೆಸುವಲ್ಲಿ ನಿರ್ಣಾಯಕರಾಗಿರುವುದರಿಂದ ಈ ವೃಂದಗಳಲ್ಲಿ ಹೆಚ್ಚಿನ ಹುದ್ದೆಗಳು ಖಾಲಿ ಇರುವುದನ್ನು ಪರಿಗಣಿಸಿ, ₹ 20.82 ಕೋಟಿ ವೆಚ್ಚದಲ್ಲಿ ಖರೀದಿಸಿದ ಈ ಉಪಕರಣಗಳ ಬಳಕೆ ಪ್ರಸ್ತುತ ಪರಿಸ್ಥಿತಿಯಲ್ಲಿ ಅಸಂಭವವಾಗಿದೆ.

ಹೀಗಾಗಿ, ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸುವಲ್ಲಿನ ವಿಳಂಬವು ₹ 20.82 ಕೋಟಿ ವೆಚ್ಚದಲ್ಲಿ ಖರೀದಿಸಿದ ಗುಣಮಟ್ಟದ ಭರವಸೆ ಉಪಕರಣಗಳು ಬಳಕೆಯಾಗದ ಪರಿಣಾಮ ಫಲಪ್ರದವಲ್ಲದ ವೆಚ್ಚಕ್ಕೆ ಕಾರಣವಾಯಿತು.

ಸರ್ಕಾರವು 24 ಉಪಕರಣಗಳಲ್ಲಿ 11 ಉಪಕರಣಗಳನ್ನು ಸ್ಥಾಪಿಸಲಾಗಿದೆ ಮತ್ತು ಮೂಲಸೌಕರ್ಯ, ವಿದ್ಯುತ್, ಪರಿಕರಗಳು ಇತ್ಯಾದಿಗಳ ಕೊರತೆಯಿಂದ 13 ಉಪಕರಣಗಳ ಸ್ಥಾಪನೆಯು ಬಾಕಿ ಉಳಿದಿದೆ ಎಂದು ಉತ್ತರಿಸಿತು (ಡಿಸೆಂಬರ್ 2021). ಮೂಲಸೌಕರ್ಯ ಒದಗಿಸಲು ₹ 1.78 ಕೋಟಿ ಮಂಜೂರು ಮಾಡಲಾಗಿದೆ (ನವೆಂಬರ್ 2021). ಇದಲ್ಲದೆ, ಹಣಕಾಸು ಇಲಾಖೆ ವಿಧಿಸಿರುವ ಮಿತವ್ಯಯ ಕ್ರಮದಿಂದಾಗಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸಾಧ್ಯವಾಗಲಿಲ್ಲ ಮತ್ತು ಮಿತವ್ಯಯ ಕ್ರಮವನ್ನು ಸಡಿಲಿಸಲು ಹಣಕಾಸು ಇಲಾಖೆಯೊಂದಿಗೆ ವಿಷಯವನ್ನು ಪ್ರಸ್ತಾಪಿಸಲಾಗುವುದು ಎಂದು ಸರ್ಕಾರವು ತಿಳಿಸಿತು.

ವಿವಿಧ ಸ್ಥಳಗಳಲ್ಲಿ ಅಗತ್ಯವಿರುವ ಮೂಲಸೌಕರ್ಯ ಮತ್ತು ನಿರ್ಣಾಯಕ ತಾಂತ್ರಿಕ ವೃಂದಗಳಲ್ಲಿ ಖಾಲಿ ಇರುವ ಪರಿಸ್ಥಿತಿಯು ಖರೀದಿಯ ಮೊದಲೇ ಇಲಾಖೆಗೆ ತಿಳಿದಿತ್ತು, ಆದರೆ ಉಪಕರಣಗಳ ಸರಬರಾಜಿನ ಮೊದಲು ಈ ಸಮಸ್ಯೆಗಳನ್ನು ಪರಿಹರಿಸಲು ಯಾವುದೇ ತ್ವರಿತತೆ ತೋರಿಸಲಾಗಿಲ್ಲ. ತರಬೇತಿ ಪಡೆದ ಸಿಬ್ಬಂದಿ ಲಭ್ಯವಿಲ್ಲದ ಕಾರಣ ಅಳವಡಿಸಲಾಗಿರುವ ಉಪಕರಣಗಳ ಬಳಕೆ ಅನುಮಾನಾಸ್ಪದವಾಗಿದೆ. ಆದ್ದರಿಂದ, ಲೆಕ್ಕಪರಿಶೋಧನೆಯ ಆಕ್ಷೇಪಣೆಯನ್ನು ಪುನರುಚ್ಚರಿಸಲಾಗಿದೆ.

ಶಿಫಾರಸು

ಇನ್ನು ಮುಂದೆ ಲೋಕೋಪಯೋಗಿ ಇಲಾಖೆಯು ಉಪಕರಣಗಳನ್ನು ಪೂರೈಸುವ ಮೊದಲು ಅಗತ್ಯ ಮೂಲಸೌಕರ್ಯಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಬೇಕು ಎಂದು ಶಿಫಾರಸು ಮಾಡಲಾಗಿದೆ.

2.4. ತಪ್ಪಿಸಬಹುದಾಗಿದ್ದ ವೆಚ್ಚ

ಕಡಿಮೆ ದಟ್ಟಣೆಯ ಗ್ರಾಮ ರಸ್ತೆಗಳ ಕಾರ್ಯಗತಗೊಳಿಸುವಿಕೆಯಲ್ಲಿ ಮಾನದಂಡಗಳಿಂದ ಮಾರ್ಗಾಂತರಣವು ₹ 18.50 ಕೋಟಿಯ ಹೆಚ್ಚುವರಿ ವೆಚ್ಚಕ್ಕೆ ಕಾರಣವಾಗಿದೆ

ಗ್ರಾಮ/ಗ್ರಾಮೀಣ ರಸ್ತೆಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ (ಆರ್‌ಡಿಪಿಆರ್) ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿವೆ ಮತ್ತು ಗ್ರಾಮೀಣ ರಸ್ತೆಗಳ ಅಭಿವೃದ್ಧಿಗಾಗಿ ಭಾರತೀಯ ರಸ್ತೆ ಕಾಂಗ್ರೆಸ್ (ಐಆರ್‌ಸಿ) ವಿಶೇಷ ವಿನ್ಯಾಸ ಮಾನದಂಡಗಳನ್ನು[67] ನಿಗದಿಪಡಿಸಿದೆ ಮತ್ತು ಇವನ್ನು ಕರ್ನಾಟಕ ಲೋಕೋಪಯೋಗಿ ಇಲಾಖೆ ಕೋಡ್ 2014ರ ಕಂಡಿಕೆ 8 ರ ಪ್ರಕಾರ ಅನುಸರಿಸಬೇಕು.

ಆ ವರ್ಗದ ರಸ್ತೆಗಳು ತಮ್ಮ ವ್ಯಾಪ್ತಿಗೆ ಬರುವುದಿಲ್ಲವಾದರೂ ಲೋಕೋಪಯೋಗಿ ಇಲಾಖೆ (ಪಿಡಬ್ಲ್ಯೂಡಿ) ಗ್ರಾಮ ರಸ್ತೆಗಳ ಸುಧಾರಣೆಯನ್ನು (2017–2020) ನಡೆಸಿದೆ ಎಂದು ಲೆಕ್ಕಪರಿಶೋಧನೆಯು ಗಮನಿಸಿತು(2019–2020), ₹ 165.89 ಕೋಟಿ ವೆಚ್ಚದ 117 ಅಂದಾಜುಗಳನ್ನು ಒಳಗೊಂಡಿರುವ 19[68] ಲೋಕೋಪಯೋಗಿ ವಿಭಾಗಗಳಲ್ಲಿನ ದಾಖಲೆಗಳ ಪರೀಕ್ಷಾ ಪರಿಶೀಲನೆಯ ಸಂದರ್ಭದಲ್ಲಿ, ಈ

[67] ಐಆರ್‌ಸಿ: ಎಸ್‌ಪಿ: 72–ಕಡಿಮೆ ದಟ್ಟಣೆಯ ಗ್ರಾಮೀಣ ರಸ್ತೆಗಳಿಗೆ ಹೊಂದಿಕೊಳ್ಳುವ ನೆಲಗಟ್ಟು (ಫ್ಲೆಕ್ಸಿಬಲ್ ಪೇವ್‌ಮೆಂಟ್)ದ ವಿನ್ಯಾಸದ ಮಾರ್ಗಸೂಚಿಗಳು.

[68] ಬಾಗಲಕೋಟೆ, ಬೆಳಗಾವಿ, ಚಿಕ್ಕಮಗಳೂರು, ಚಿಕ್ಕೋಡಿ, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಹಾಸನ, ಹುಣಸೂರು, ಕಾರವಾರ, ಮಧುಗಿರಿ, ಮಡಿಕೇರಿ, ಮೈಸೂರು, ರಾಮನಗರ, ಶಿವಮೊಗ್ಗ, ಶಿವಮೊಗ್ಗ ವಿಶೇಷ ವಿಭಾಗ, ಸಿರಸಿ, ತುಮಕೂರು ಮತ್ತು ವಿಜಯಪುರ.

ಕಾಮಗಾರಿಗಳನ್ನು ನಿರ್ವಹಿಸಲು ಅಧಿಕಾರ ಹೊಂದಿರಲಿಲ್ಲ, ಅಂದಾಜುಗಳು ನ್ಯೂನತೆಗಳನ್ನು ಹೊಂದಿದ್ದವು ಮತ್ತು ಐಆರ್‌ಸಿ ಮಾನದಂಡಗಳನ್ನು ತಪ್ಪಾಗಿ ಅಳವಡಿಸಿ ನಿರ್ಮಿಸಲಾಗಿದೆ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು ಮತ್ತು ಅವುಗಳನ್ನು ಕೆಳಗಿನ ಕಂಡಿಕೆಗಳಲ್ಲಿ ಚರ್ಚಿಸಲಾಗಿದೆ.

ಮಂಜೂರಾತಿ ಇಲ್ಲದೇ ಇದ್ದದ್ದು

2.4.1. ಆರ್‌ಡಿಪಿಆರ್ ವ್ಯಾಪ್ತಿಯಲ್ಲಿರುವ ಗ್ರಾಮ ರಸ್ತೆಗಳನ್ನು ಪಂಚಾಯತ್ ರಾಜ್ ಎಂಜಿನಿಯರಿಂಗ್ ಇಲಾಖೆ (ಪಿಆರ್‌ಇಡಿ) ಕಾರ್ಯಗತಗೊಳಿಸಬೇಕು ಮತ್ತು ಪ್ರತಿ ವರ್ಷ ಅವುಗಳ ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಸರ್ಕಾರದಿಂದ ಹಣವನ್ನು ನಿಗದಿಪಡಿಸಲಾಗುತ್ತದೆ. ಚುನಾಯಿತ ಪ್ರತಿನಿಧಿಗಳ ಕೋರಿಕೆಯಂತೆ ಲೋಕೋಪಯೋಗಿ ಇಲಾಖೆಯಿಂದ 2017–2020 ರ ಅನುಬಂಧ–ಇ (ವಾರ್ಷಿಕ ಕ್ರಿಯಾ ಯೋಜನೆ) ನಲ್ಲಿ ಗ್ರಾಮ ರಸ್ತೆಗಳ ಸುಧಾರಣೆಯನ್ನು ಸೇರಿಸಲಾಗಿದೆ ಎಂದು ಲೆಕ್ಕಪರಿಶೋಧನೆಯು ನಡೆಸಿದ ಪರಿಶೀಲನೆಯಿಂದ ತಿಳಿದುಬಂದಿದೆ. ಸಕ್ಷಮ ಪ್ರಾಧಿಕಾರದ (ಪಿಆರ್‌ಇಡಿ) ಪೂರ್ವಾನುಮತಿ ಪಡೆಯದ ಕಾರಣ ₹ 165.89 ಕೋಟಿ ವೆಚ್ಚದ ಗ್ರಾಮ ರಸ್ತೆಗಳ ಸುಧಾರಣೆಯನ್ನು ಪಿಡಬ್ಲ್ಯುಡಿ ತನ್ನ ವಾರ್ಷಿಕ ಕ್ರಿಯಾ ಯೋಜನೆಗಳಲ್ಲಿ ಸೇರಿಸಿದ್ದು ಅಕ್ರಮ ಮತ್ತು ಅನಧಿಕೃತವಾಗಿದೆ.

ಮಾನದಂಡಗಳ ಕಡೆಗಣನೆ

2.4.2. ವಿನ್ಯಾಸದ ಪೂರ್ಣಪಟ್ಟಿ ಹೀಗೆ ನಿರ್ದಿಷ್ಟಪಡಿಸುತ್ತದೆ: (i) ಟಿ9 ಸಂಚಾರ ವರ್ಗಕ್ಕೆ (1.5 ಎಮ್‌ಎಸ್‌ಎ ನಿಂದ 2 ಎಮ್‌ಎಸ್‌ಎ) ಬಿಟುಮಿನಸ್ ಮಕಾಡಮ್ ಲೇಯರ್ (ಬಿಎಮ್) ಒದಗಿಸುವುದು (ii) ಎರಡು ರೀತಿಯ ವಿಯರಿಂಗ್ ಕೋರ್ಸುಗಳು – ಮೇಲ್ಮೈ ಡ್ರೆಸಿಂಗ್ (ಎಸ್‌ಡಿ) (ಟಿ5 ವರೆಗಿನ ಸಂಚಾರ ವರ್ಗಕ್ಕೆ) ಮತ್ತು ಮುಕ್ತ ಗ್ರೇಡೆಡ್ ಪ್ರೀಮಿಕ್ಸ್ ಕಾರ್ಪೆಟ್ (ಓಜಿಪಿಸಿ) (ಟಿ6 ಮತ್ತು ನಂತರದ ಸಂಚಾರ ವರ್ಗಕ್ಕೆ). ವಿನ್ಯಾಸದ ಪೂರ್ಣಪಟ್ಟಿಗಳನ್ನು ಕಾರ್ಯನಿರ್ವಹಣೆ–ಆಧಾರಿತ ಮತ್ತು ವ್ಯಾಪಕವಾದ ಅನುಭವಗಳ ನಂತರ ಅಂತಿಮಗೊಳಿಸಲಾಗಿತ್ತು (ಷರತ್ತು 1.4.4).

ಅಂದಾಜುಗಳ ಲೆಕ್ಕಪರಿಶೋಧನೆಯ ಪರಿಶೀಲನೆಯಲ್ಲಿ (2020–21) ಈ ಕೆಳಗಿನ ನ್ಯೂನತೆಗಳನ್ನು ಗಮನಿಸಲಾಯಿತು:

- ಅಂದಾಜುಗಳ ತಯಾರಿಕೆಗಾಗಿ ಲೋಕೋಪಯೋಗಿ ವಿಭಾಗಗಳು ಆಯಾ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳಿಂದ ನೆಲಗಟ್ಟಿನ ದಪ್ಪ ಮತ್ತು ವಾಹನ ಸಂಚಾರದ ದತ್ತಾಂಶವನ್ನು ಪಡೆಯಬೇಕಾಗಿತ್ತು. ಆದರೆ ಇದನ್ನು ಮಾಡಲಾಗಿಲ್ಲ. ಅಲ್ಲದೇ, ಸುಧಾರಣೆಗಳನ್ನು ಕೈಗೊಳ್ಳಲು ಈ ರಸ್ತೆಗಳನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಿಂದ ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಿರುವ ಬಗ್ಗೆ ಯಾವುದೇ ದಾಖಲೆಗಳಿರಲಿಲ್ಲ. ಇದಲ್ಲದೆ, ಲೋಕೋಪಯೋಗಿ ಇಲಾಖೆಯಿಂದ ಸುಧಾರಣಾ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಅವಶ್ಯಕತೆ ಮತ್ತು ಅದರಿಂದ ಆದ ಪ್ರಯೋಜನವು ಕಂಡುಬರಲಿಲ್ಲ.

- ಅಂದಾಜುಗಳ ತಯಾರಿಕೆಗಾಗಿ ಅನ್ವಯವಾಗುವ ವಿನ್ಯಾಸ ಮಾನದಂಡಗಳನ್ನು ಅನುಸರಿಸಬೇಕು ಮತ್ತು ಮಾರ್ಗಾಂತರಣಗಳನ್ನು ಸರಿಯಾದ ಸಮರ್ಥನೆಯೊಂದಿಗೆ ಮಾಡಿರಬೇಕು. ಇದಲ್ಲದೆ, ಐಆರ್‌ಸಿ: ಎಸ್‌ಪಿ:72–2007 ರ ಷರತ್ತು 2.2.3 ಬಲಪಡಿಸುವ ಕ್ರಮಗಳನ್ನು ಕೈಗೊಳ್ಳುವ ಮೊದಲು ಪಾದಚಾರಿ ಮಾರ್ಗದ ಕಳಪೆ ಸ್ಥಿತಿಯ ಕಾರಣಗಳನ್ನು ನಿರ್ಣಯಿಸುವುದನ್ನು ಸೂಚಿಸುತ್ತದೆ. ಐಆರ್‌ಸಿ ಪ್ರಕಾರ, ಬಿಟುಮಿನಸ್ ಸರ್ಫೇಸಿಂಗ್ ಎಮ್‌ಎಸ್‌ಎ ಮತ್ತು ಮಣ್ಣಿನ ಸ್ಥಿತಿಯಲ್ಲಿ ವ್ಯಕ್ತಪಡಿಸಲಾದ ಸಂಚಾರ ಪರಿಮಾಣವನ್ನು ಅವಲಂಬಿಸಿ ಧರಿಸಿರುವ ಕೋರ್ಸ್ ಅಥವಾ ಬೈಂಡರ್ ಕೋರ್ಸ್ (ಬಿಎಮ್) ಅನ್ನು ಒಳಗೊಂಡಿರುತ್ತದೆ.

ಲೆಕ್ಕಪರಿಶೋಧನೆಯಲ್ಲಿನ ಅಂದಾಜುಗಳ ಪರಿಶೀಲನೆಯು ತಪ್ಪು ಮೌಲ್ಯಗಳನ್ನು ಅಳವಡಿಸಿಕೊಂಡು ಎಮ್‌ಎಸ್‌ಎಯನ್ನು ಹೆಚ್ಚಿಸಿ ಮತ್ತು ಬೈಂಡರ್ ಕೋರ್ಸ್ ಮತ್ತು ಉನ್ನತ ದರ್ಜೆಯ ಲೇಯರ್‌ಗಳನ್ನು ಅಳವಡಿಸಿಕೊಂಡಿದೆ ಅಂದರೆ, (i) ಲೆಕ್ಕಹಾಕಲಾದ ಎಮ್‌ಎಸ್‌ಎ 1.5 ಕ್ಕಿಂತ ಕಡಿಮೆಯಿದ್ದರೂ 2 ಎಂದು ಪರಿಗಣಿಸಲಾಗಿದೆ (ii) ವಾಹನ ಹಾನಿ ಅಂಶದ (ವೆಹಿಕಲ್ ಡ್ಯಾಮೇಜ್ ಫ್ಯಾಕ್ಟರ್(ವಿಡಿಎಫ್)) ಮತ್ತು

ಪಾರ್ಶ್ವ ಹಾನಿ ಅಂಶ (ಪಾರ್ಶ್ವ ಡ್ಯಾಮೇಜ್ ಫ್ಯಾಕ್ಟರ್(ಎಲ್‌ಡಿಎಫ್))ಗಳ ಮೌಲ್ಯಗಳನ್ನು ತಪ್ಪಾಗಿ ಅಳವಡಿಸಿಕೊಳ್ಳಲಾಗಿದೆ (ವಿಡಿಎಫ್ ಅನ್ನು 1.5 ಬದಲಿಗೆ 3.5 ಎಂದು ತೆಗೆದುಕೊಳ್ಳಲಾಗಿದೆ ಮತ್ತು ಎಲ್‌ಡಿಎಫ್ ಅನ್ನು 1 ಬದಲಿಗೆ 2 ಎಂದು ತೆಗೆದುಕೊಳ್ಳಲಾಗಿದೆ) ಎಂಬುದನ್ನು ಬಹಿರಂಗಗೊಳಿಸಿತು. ವಿವರಗಳನ್ನು ***ಅನುಬಂಧ–11 ರಲ್ಲಿ*** ತೋರಿಸಲಾಗಿದೆ.

ಯಾವುದೇ ವೆಚ್ಚದ ವಿಶ್ಲೇಷಣೆ ಅಥವಾ ತಾಂತ್ರಿಕ ಸಮರ್ಥನೆ ಇಲ್ಲದೆ ಉನ್ನತ ವಿನ್ಯಾಸದ ಮಾನದಂಡಗಳನ್ನು ಅನುಸರಿಸಲಾಗಿದೆ. ನಿರ್ವಹಣೆಯ ಕೊರತೆಯಿಂದಾಗಿ ಸುಧಾರಣೆಗಳು ಅಗತ್ಯವಾಗಿದ್ದವು ಮತ್ತು ಆದ್ದರಿಂದ ಉನ್ನತ ದರ್ಜೆಯ ಪದರಗಳನ್ನು ಅಳವಡಿಸಿಕೊಳ್ಳುವುದು ಅನಪೇಕ್ಷಿತವಾಗಿದೆ. ಮಾನದಂಡಗಳ ಮಾರ್ಗಾಂತರಣವು ಬೊಕ್ಕಸಕ್ಕೆ ₹ 18.50 ಕೋಟಿ ಹೆಚ್ಚುವರಿ ವೆಚ್ಚವನ್ನು ಉಂಟುಮಾಡಿದೆ, ಇದನ್ನು ಸುಧಾರಣೆಯ ಅಗತ್ಯವಿರುವ ಇತರ ರಸ್ತೆಗಳಿಗೆ ಬಳಸಬಹುದಾಗಿತ್ತು.

ಸರ್ಕಾರವು ಅವರ ಉತ್ತರದಲ್ಲಿ (ಡಿಸೆಂಬರ್ 2021) ಹೀಗೆ ಹೇಳಿದೆ;

(i) ಗ್ರಾಮಗಳ ರಸ್ತೆಗಳ ಸುಧಾರಣೆಯನ್ನು ಅನುಬಂಧ 'ಇ' ಅಥವಾ ಸರ್ಕಾರಿ ಪತ್ರಗಳ ಮೂಲಕ ಸೇರಿಸಲಾಗಿದೆ

(ii) ಸರ್ಕಾರದ ಆದೇಶದ ಪ್ರಕಾರ ಈ ಗ್ರಾಮದ ರಸ್ತೆಗಳನ್ನು ಪ್ರಮುಖ ಜಿಲ್ಲೆಯ ವಿನ್ಯಾಸ ಮಾನದಂಡಕ್ಕೆ ಅಪ್‌ಗ್ರೇಡ್ ಮಾಡಬೇಕಾಗಿತ್ತು ಮತ್ತು ಆದ್ದರಿಂದ ಐಆರ್‌ಸಿ 37–2012 ಅನ್ನು ಅನುಸರಿಸಲಾಗಿದೆ

(iii) ಸಂಚಾರ ಗಣತಿ ವಿವರಗಳು ಲಭ್ಯವಿಲ್ಲದ ಕಡೆಗಳಲ್ಲಿ 2 ರಿಂದ 3 ದಿನಗಳವರೆಗೆ ಸಂಚಾರ ಸಮೀಕ್ಷೆಯನ್ನು ನಡೆಸಲಾಯಿತು.

ಉತ್ತರವು ಈ ಕಾರಣಗಳಿಂದ ಸಮರ್ಥನೀಯವಲ್ಲ;

(i) ಲೋಕೋಪಯೋಗಿ ಇಲಾಖೆಯಲ್ಲಿ ಯಾವುದೇ ರಸ್ತೆ ದತ್ತಾಂಶ ಲಭ್ಯವಿಲ್ಲದಿದ್ದರೂ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಮೊದಲು ಈ ರಸ್ತೆಗಳ ವ್ಯಾಪ್ತಿಯ ಅಧಿಕಾರ ಹೊಂದಿರುವ ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆಯನ್ನು ಸಂಪರ್ಕಿಸಲಾಗಿಲ್ಲ. ಆದ್ದರಿಂದ, ಗ್ರಾಮ ರಸ್ತೆಗಳಿಗೆ ಸಂಬಂಧಿಸಿದ ಕಾಮಗಾರಿಗಳನ್ನು ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆಯೊಂದಿಗೆ ಸಮಾಲೋಚಿಸದೆ ಅನುಬಂಧ 'ಇ'ಯಲ್ಲಿ ಸೇರಿಸಿರುವುದು ಸಕ್ರಮವಲ್ಲ.

(ii) ಸುಧಾರಿಸಲು ಸರ್ಕಾರದ ಆದೇಶದ ಉಲ್ಲೇಖ ಅಥವಾ ಎಮ್‌ಡಿಆರ್‌ಗೆ ಮೇಲ್ದರ್ಜೆಗೇರಿಸಲು ಸರ್ಕಾರದ ಆದೇಶದ ಪ್ರತಿಯನ್ನು ತನ್ನ ಹೇಳಿಕೆಗೆ ಬೆಂಬಲವಾಗಿ ಒದಗಿಸಲಾಗಿಲ್ಲ.

(iii) ಸಂಚಾರ ಸಮೀಕ್ಷೆಯ ವರದಿಯನ್ನು ಮಂಜೂರಾದ ಅಂದಾಜುಗಳಿಗೆ ಲಗತ್ತಿಸಲಾಗಿಲ್ಲ ಮತ್ತು ನಿರಂಕುಶ ದತ್ತಾಂಶವನ್ನು ಅಳವಡಿಸಿಕೊಳ್ಳಲಾಗಿದೆ. ಎಮ್‌ಎಸ್‌ಎಯ ಪರಿಭಾಷೆಯಲ್ಲಿ ಒಟ್ಟು ವಾಹನ ದಟ್ಟಣೆಯು ಲೆಕ್ಕಹಾಕಿದಾಗ 1.5 ಇದ್ದರೂ ಅದನ್ನು 2 ಎಮ್‌ಎಸ್‌ಎ ಎಂದು ತೆಗೆದುಕೊಳ್ಳಲಾಗಿದೆ ಮತ್ತು ಅದರ ಪ್ರಕಾರ ಕ್ರಸ್ಟ್ ದಪ್ಪ ಮತ್ತು ಪದರಗಳನ್ನು ತಾಂತ್ರಿಕ ಸಮರ್ಥನೆ ಇಲ್ಲದೆ ಒದಗಿಸಲಾಗಿದೆ.

ಹೀಗಾಗಿ, ಸಕಾರಣವಿಲ್ಲದೆ ಉನ್ನತ ಗುಣಮಟ್ಟವನ್ನು ಅಳವಡಿಸಿಕೊಂಡಿದ್ದರಿಂದ ₹ 18.50 ಕೋಟಿ ಹೆಚ್ಚುವರಿ ವೆಚ್ಚವಾಯಿತು.

2.5. ಇಲಾಖೆಯ ತಪ್ಪುಗಳ ಕಾರಣದಿಂದ ಪರಿಹಾರದ ಪಾವತಿ

ಒತ್ತುವರಿ ಮುಕ್ತ ಭೂಮಿ ಲಭ್ಯವಿಲ್ಲದಿದ್ದರೂ ಕಾರ್ಯನಿರ್ವಾಹಕ ಇಂಜಿನೀಯರ್‌ರಿಂದ ಕಾಮಗಾರಿ ಆದೇಶ ನೀಡಿಕೆ ಮತ್ತು ಅಂತಹ ತುರ್ತು ಪರಿಸ್ಥಿತಿಗಳಲ್ಲಿ ಒಪ್ಪಂದದ ನಿಬಂಧನೆಗಳಲ್ಲಿ ಕಲ್ಪಿಸಿದಂತೆ ಗುತ್ತಿಗೆಯನ್ನು ಮುಟ್ಟುಗೋಲು ಹಾಕಲು ವಿಫಲವಾದ ಪರಿಣಾಮವಾಗಿ ನಿರ್ಣಾಯಕರಿಂದ (ಆರ್ಬಿಟ್ರೇಟರ್) ಒಟ್ಟು ₹ 9.10 ಕೋಟಿ ಪರಿಹಾರದ ಘೋಷಣೆಗೆ ಕಾರಣವಾಯಿತು.

ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಕೋಲಾರ ಆಂಧ್ರಪ್ರದೇಶದ ತಿರುಮಲದಲ್ಲಿರುವ ಕರ್ನಾಟಕ ರಾಜ್ಯ ಚಾರಿಟೀಸ್ ಆವರಣದಲ್ಲಿ (7.05 ಎಕರೆ) ಉದ್ದೇಶಿತ ಅತಿಥಿ ಗೃಹದ ಕಾಮಗಾರಿಯನ್ನು[69] ಮೆ. ಕನ್ಸಾಲಿಡೇಟೆಡ್ ಕನ್ಸ್ಟ್ರಕ್ಷನ್ ಕನ್ಸೋರ್ಟಿಯಂಗೆ ₹ 19.91 ಕೋಟಿ ಒಪ್ಪಂದದ ಬೆಲೆಗೆ ವಹಿಸಿದರು (3 ಮಾರ್ಚ್ 2010). ಕಾಮಗಾರಿಯು 15 ತಿಂಗಳಲ್ಲಿ (ಜೂನ್ 2011) ಪೂರ್ಣಗೊಳ್ಳಬೇಕಿತ್ತು. ಅತಿಥಿ ಗೃಹವನ್ನು 18 ರಚನೆಗಳನ್ನು ಕೆಡವಿ ಜಮೀನನ್ನು ತೆರವುಗೊಳಿಸಿದ ನಂತರ ನಿರ್ಮಿಸಬೇಕಿತ್ತು ಮತ್ತು ಇದು ನಿರ್ಮಾಣ ಒಪ್ಪಂದದ ಭಾಗವಾಗಿರಲಿಲ್ಲ. ಆದ್ದರಿಂದ, ಸಂರಕ್ಷಣಾ ಮೌಲ್ಯವನ್ನು (₹ 16.13 ಲಕ್ಷ) ಪಾವತಿಸಿದ ನಂತರ 18 ರಚನೆಗಳನ್ನು (₹ 20.90 ಲಕ್ಷ) ಕಿತ್ತುಹಾಕುವ ಕೆಲಸವನ್ನು ಒಂದು ತಿಂಗಳಲ್ಲಿ ಪೂರ್ಣಗೊಳಿಸಲು ಅದೇ ಏಜೆನ್ಸಿಗೆ ಟೆಂಡರ್ ಆಧಾರದ ಮೇಲೆ (26 ಮೇ 2010) ನೀಡಲಾಯಿತು. ಏಜೆನ್ಸಿಯು ಕೆಲಸವನ್ನು (ಮೇ 2010) ಪ್ರಾರಂಭಿಸಿತು ಮತ್ತು ಪರಿಸರದ ಆಧಾರದ ಮೇಲೆ ತಿರುಮಲ ಬೆಟ್ಟದಲ್ಲಿ ಹೊಸ ನಿರ್ಮಾಣಗಳನ್ನು ನಿಷೇಧಿಸುವಂತೆ ಕೋರಿ ಸಲ್ಲಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ಕಾರಣದಿಂದ ಆಂಧ್ರಪ್ರದೇಶದ ಗೌರವಾನ್ವಿತ ಉಚ್ಚ ನ್ಯಾಯಾಲಯವು ಕೆಲಸಕ್ಕೆ ತಡೆಯಾಜ್ಞೆ ನೀಡಿದ್ದರಿಂದ (16 ನವೆಂಬರ್ 2010) ನೆಲಸಮಗೊಳಿಸುವ ಕೆಲಸವನ್ನು ಮಧ್ಯದಲ್ಲಿ ನಿಲ್ಲಿಸಬೇಕಾಯಿತು. ಏಜೆನ್ಸಿಯು 18 ರಚನೆಗಳ ಪೈಕಿ 11 ರಚನೆಗಳ ಕೆಡವುವಿಕೆಯನ್ನು ಭಾಗಶಃ ಪೂರ್ಣಗೊಳಿಸಿತ್ತು. ತಡೆಯಾಜ್ಞೆಯಿಂದಾಗಿ ಏಜೆನ್ಸಿ ಅತಿಥಿ ಗೃಹ ನಿರ್ಮಾಣವನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗಲಿಲ್ಲ.

ತಡೆಯಾಜ್ಞೆ ತೆರವು ಮಾಡಲು ಇಲಾಖೆ ಯಾವುದೇ ವಕೀಲರನ್ನು ನೇಮಿಸಲಿಲ್ಲ. ಕಾರ್ಯನಿರ್ವಾಹಕ ಇಂಜಿನಿಯರ್ (ಇಇ) ಕೂಡ ಕಾನೂನಾತ್ಮಕ ಅಡೆತಡೆಯಿಂದ ಕಾಮಗಾರಿ ಆರಂಭಿಸುವ ನಿರೀಕ್ಷೆ ಇಲ್ಲದಿದ್ದರೂ ಗುತ್ತಿಗೆ ರದ್ದುಗೊಳಿಸಲಿಲ್ಲ. ಆದ್ದರಿಂದ, ಏಜೆನ್ಸಿಯು ಒಪ್ಪಂದದ ಷರತ್ತು 49.3 ರ ಪ್ರಕಾರ ಒಪ್ಪಂದವನ್ನು ಕೊನೆಗೊಳಿಸಿತು (ಜೂನ್ 2011) ಮತ್ತು ಮೂಲಭೂತ ಉಲ್ಲಂಘನೆಯು ಉಂಟಾದ ಕಾರಣ ಪರಿಹಾರವನ್ನು ಸಹ ಕೋರಿತು. ಆದಾಗ್ಯೂ, ಇಇ ಈ ವಾದವನ್ನು ಒಪ್ಪದೇ ಯಾವುದೇ ಪಕ್ಷಗಳು ಮೂಲಭೂತ ಉಲ್ಲಂಘನೆಯನ್ನು ಉಂಟುಮಾಡಲಿಲ್ಲ ಎಂದು (ಜುಲೈ 2011) ತಿಳಿಸಿದರು. ಏಜೆನ್ಸಿಯು ವಾದವನ್ನು ಒಪ್ಪದೇ ವಿವಾದಗಳ[70] ಇತ್ಯರ್ಥಕ್ಕಾಗಿ ಮಧ್ಯಸ್ಥಿಕೆಗೆ ಸಮಸ್ಯೆಯನ್ನು (ಮೇ 2015) ಉಲ್ಲೇಖಿಸಿದ್ದಲ್ಲದೇ ನಿರ್ಣಾಯಕರ (ಆರ್ಬಿಟ್ರೇಟರ್) ಮುಂದೆ ₹ 4.14 ಕೋಟಿ ಮತ್ತು 18 ಪ್ರತಿಶತ ಬಡ್ಡಿಯನ್ನು ಒಟ್ಟುಗೂಡಿಸಿ ಪರಿಹಾರಕ್ಕೆ ಹಕ್ಕು ಚಲಾಯಿಸಿತು. ಯಾವುದೇ ಅಡೆತಡೆಗಳಿಲ್ಲದೆ ಜಮೀನನ್ನು ಹಸ್ತಾಂತರಿಸುವ ಜವಾಬ್ದಾರಿಯು ಇಲಾಖೆಗೆ ಸೇರಿದೆ ಮತ್ತು ಇಲಾಖೆಯು ಹಾಗೆ ಮಾಡಲು ವಿಫಲವಾದ ಕಾರಣ, ಒಪ್ಪಂದದ ಮೂಲಭೂತ ಉಲ್ಲಂಘನೆಯನ್ನು ಉಂಟುಮಾಡಿದೆ ಎಂದು ನಿರ್ಣಾಯಕರು ಅಭಿಪ್ರಾಯಪಟ್ಟರು (ಮೇ 2017). ಆದ್ದರಿಂದ, ನಿರ್ಣಾಯಕರು 21 ನವೆಂಬರ್ 2013 ರಿಂದ ಪಾವತಿಯ ದಿನಾಂಕದವರೆಗೆ ಪರಿಹಾರಕ್ಕಾಗಿ ₹ 3.99 ಕೋಟಿ ಮತ್ತು ಶೇಕಡಾ 18 ಬಡ್ಡಿಯನ್ನು ನೀಡುವಂತೆ ಆದೇಶಿಸಿದರು. ಇಲಾಖೆಯು (ಸೆಪ್ಟೆಂಬರ್ 2017) ಬೆಂಗಳೂರಿನ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿತು, ಅದನ್ನು (ಡಿಸೆಂಬರ್ 2020) ಗೌರವಾನ್ವಿತ ನ್ಯಾಯಾಲಯವು ವಜಾಗೊಳಿಸಿತು ಮತ್ತು ಆ ಮೂಲಕ ನಿರ್ಣಾಯಕರ ಆದೇಶವನ್ನು ಎತ್ತಿಹಿಡಿಯಿತು. ಪಾವತಿಸಬೇಕಾದ (ಡಿಕ್ರೆಟಲ್) ಮೊತ್ತವು ₹ 9.10 ಕೋಟಿಗಳಾಗುವುದೆಂದು ಲೆಕ್ಕಹಾಕಲಾಗಿದೆ (ಡಿಸೆಂಬರ್ 2020).

---

[69] ಠೇವಣಿ ಕೊಡುಗೆ ಕಾಮಗಾರಿಗಳು (ಡಿಪಾಸಿಟ್ ಕಾಂಟ್ರಿಬ್ಯೂಷನ್ ವರ್ಕ್ಸ್).

[70] ಮೇಲುವೆಚ್ಚ (ಓವರ್‌ಹೆಡ್), ಯಂತ್ರಗಳು, ವಿಮೆ, ಸುರಕ್ಷತಾ ಕ್ರಮಗಳು, ಸಲಕರಣೆ, ಲಾಭದ ಕಡಿತ ಮತ್ತು ಬಡ್ಡಿಗಳಿಂದ ಉಂಟಾದ ನಷ್ಟಕ್ಕೆ ಪರಿಹಾರ.

ಇಇ, ಪಿಡಬ್ಲ್ಯೂಪಿ ಮತ್ತು ಐಡಬ್ಲ್ಯುಟಿಡಿ, ಕೋಲಾರ ಕಚೇರಿಯಲ್ಲಿ ದಾಖಲೆಗಳ ಪರಿಶೀಲನೆಯು (ಅಕ್ಟೋಬರ್ 2018), ಈ ಕೆಳಗೆ ಚರ್ಚಿಸಲಾದಂತೆ ಒಪ್ಪಂದಗಳ ತಪ್ಪು ನಿರ್ವಹಣೆಯನ್ನು ತೋರಿಸಿದೆ:

- ಕಾಮಗಾರಿ ಆದೇಶ ನೀಡಿದಾಗ ಸ್ಥಳೀಯ ಯೋಜನಾ ಪ್ರಾಧಿಕಾರದಿಂದ ಕಟ್ಟಡದ ಯೋಜನೆಗೆ ಅನುಮೋದನೆಯನ್ನು ಪಡೆಯಲಾಗಿಲ್ಲ. ಹೀಗಾಗಿ, ಒಪ್ಪಂದದಲ್ಲಿ (ಷರತ್ತು 21.1[71]) ಕಲ್ಪಿಸಿದಂತೆ ಕಾಮಗಾರಿಯನ್ನು ಪ್ರಾರಂಭಿಸದಿರುವುದು/ಕಾಮಗಾರಿಯನ್ನು ಆರಂಭಿಸಲು ವಿಳಂಬಕ್ಕೆ ಪರಿಹಾರವನ್ನು ಪಡೆಯಲು ಗುತ್ತಿಗೆದಾರನ ಹಕ್ಕನ್ನು ನಿರ್ಲಕ್ಷಿಸಿ ಕೆಲಸದ ಆದೇಶವನ್ನು ತರಾತುರಿಯಲ್ಲಿ ನೀಡಲಾಯಿತು.

- ಹಕ್ಕುಗಳ ಪರಿಶೀಲನೆಯ ನಂತರ ಬಾಕಿಗಳನ್ನು ಲೆಕ್ಕ ಹಾಕುವ ಮೂಲಕ ಇಲಾಖೆಯು ಒಪ್ಪಂದವನ್ನು ಮುಕ್ತಾಯಗೊಳಿಸಬಹುದಿತ್ತು.

- ಕಾರ್ಯನಿರ್ವಾಹಕ ಇಂಜಿನಿಯರ್ ಅಥವಾ ನಿಯಂತ್ರಕ ಅಧಿಕಾರಿಗಳು ತಡೆಯಾಜ್ಞೆಯನ್ನು ತೆರವು ಮಾಡಲು ಸರ್ಕಾರಿ ವಕೀಲರನ್ನು ತೊಡಗಿಸಿಕೊಳ್ಳಲು ತ್ವರಿತ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಸುಮಾರು ಮೂರು ವರ್ಷಗಳ ಅಂತರದ ನಂತರ ಜೂನ್ 2013 ರಲ್ಲಿಯಷ್ಟೇ ವಕೀಲರನ್ನು ನೇಮಿಸಲಾಯಿತು.

- ಲೆಕ್ಕಪರಿಶೋಧನೆಯು ನಡೆಸಿದ ಪರಿಶೀಲನೆಯು ಗುತ್ತಿಗೆದಾರನು ಇಲಾಖೆಗೆ ನಿಷ್ಕ್ರಿಯ ಕಾರ್ಮಿಕ/ಯಂತ್ರೋಪಕರಣಗಳ ಸಂಖ್ಯೆಗಳು, ಅವಧಿಯ ವಿವರಗಳನ್ನು ಬೆಂಬಲವಾಗಿ ಒದಗಿಸಿರಲಿಲ್ಲ ಎಂದು ತೋರಿಸಿದೆ ಮತ್ತು ಇಲಾಖೆಯು ಸಹ ಸೈಟ್ ಎಂಜಿನಿಯರ್ ವರದಿ/ನಿರ್ವಹಣಾ ಸಭೆಯ ರೂಪದಲ್ಲಿ, ಸಂಪನ್ಮೂಲಗಳ ನಿಯೋಜನೆ, ನಿಷ್ಕ್ರಿಯ ಸಂಪನ್ಮೂಲಗಳು, ಇತ್ಯಾದಿಗಳ ಬಗ್ಗೆ ನಡಾವಳಿಯಂತಹ ವಿವರಗಳನ್ನು ಹೊಂದಿರಲಿಲ್ಲ. ಅದೇ ಗುತ್ತಿಗೆದಾರನಿಗೆ ರಚನೆಗಳನ್ನು ಕೆಡವಲು ಗುತ್ತಿಗೆಯನ್ನು ನೀಡಲಾಗಿರುವುದರಿಂದ, ಗುತ್ತಿಗೆದಾರನು ನಿರ್ಮಾಣ ಕಾರ್ಯದ ವಿರುದ್ಧ ರಚನೆಗಳನ್ನು ಕೆಡವಲು ಸಜ್ಜುಗೊಳಿಸಲಾದ ಸಂಪನ್ಮೂಲಗಳನ್ನು ಎಣಿಸುವ ಸಾಧ್ಯತೆಯನ್ನು ತಳ್ಳಿಹಾಕಲಾಗುವುದಿಲ್ಲ.

- ಚಾಲ್ತಿಯಲ್ಲಿರುವ ಕಾರ್ಯವಿಧಾನದ ಪ್ರಕಾರ, ಮಧ್ಯಸ್ಥಿಕೆ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲು ಕಾನೂನು ಇಲಾಖೆಯಿಂದ ಅನುಮತಿಯನ್ನು ಪಡೆಯಬೇಕು. ಮಧ್ಯಸ್ಥಿಕೆ ತೀರ್ಪನ್ನು ಪ್ರಶ್ನಿಸಲು ಮಧ್ಯಸ್ಥಿಕೆಯಲ್ಲಿ ಪ್ರಾಸಂಗಿಕವಾಗಿ ಇಲಾಖೆಯನ್ನು ಪ್ರತಿನಿಧಿಸುವ ಖಾಸಗಿ ಕಾನೂನು ಏಜೆನ್ಸಿಯಿಂದ ಇಲಾಖೆಯು ಅಭಿಪ್ರಾಯವನ್ನು ಪಡೆದುಕೊಂಡಿತ್ತು. ಹೀಗಾಗಿ, ತೀರ್ಪನ್ನು ಪ್ರಶ್ನಿಸುವ ಮೊದಲು ಸಕ್ಷಮ ಪ್ರಾಧಿಕಾರದ ಅನುಮೋದನೆಯನ್ನು ಪಡೆಯಲಾಗಿಲ್ಲ ಮತ್ತು ಖಾಸಗಿ ಕಾನೂನು ಸಂಸ್ಥೆಯ ನೇಮಕವೂ ಅನಧಿಕೃತವಾಗಿದೆ.

ಆದ್ದರಿಂದ, ಗಂಭೀರ ಲೋಪಗಳು ಮತ್ತು ತಪ್ಪು ನಿರ್ವಹಣೆಯಿಂದ ₹ 9.10 ಕೋಟಿ ಪರಿಹಾರವನ್ನು ಪಾವತಿಸಲು (ಡಿಸೆಂಬರ್ 2020) ಕಾರಣವಾಯಿತು ಮತ್ತು 18 ಪ್ರತಿಶತದಷ್ಟು ಬಡ್ಡಿಯನ್ನು ಪಾವತಿಸುವ ಕಾರಣದಿಂದಾಗಿ ಹೊಣೆಗಾರಿಕೆಯು ವರ್ಷಕ್ಕೆ ₹ 71.82 ಲಕ್ಷ ಹೆಚ್ಚಾಗುತ್ತದೆ. ಹೀಗಾಗಿ ಇಲಾಖಾ ಲೋಪದಿಂದ ಪರಿಹಾರ ಪಾವತಿಯಾಗಿ ಸಾರ್ವಜನಿಕ ಬೊಕ್ಕಸಕ್ಕೆ ನಷ್ಟವಾಗಿದೆ.

ಮುಖ್ಯ ಇಂಜಿನಿಯರ್, ಸಿ & ಬಿ (ದಕ್ಷಿಣ), ಲೋಕೋಪಯೋಗಿ ಇಲಾಖೆ, ಬೆಂಗಳೂರು ಮುಜುರಾಯಿ ಇಲಾಖೆಯ ಮೌಖಿಕ ಸೂಚನೆಯಂತೆ ಕಾಮಗಾರಿಯನ್ನು ಪ್ರಾರಂಭಿಸಲು ಕಾರ್ಯಾದೇಶವನ್ನು ನೀಡಲಾಗಿದೆ ಮತ್ತು ತೀರ್ಪನ್ನು ರದ್ದುಗೊಳಿಸುವುದಕ್ಕಾಗಿ ಹೈಕೋರ್ಟ್‌ನಲ್ಲಿ ನಿರ್ಣಾಯಕರ ತೀರ್ಪನ್ನು ಪ್ರಶ್ನಿಸಲಾಗಿದೆ ಎಂದು ಉತ್ತರಿಸಿದರು (ಸೆಪ್ಟೆಂಬರ್ 2021).

---

[71] ಷರತ್ತು 21.1: ಜಮೀನಿನ ಎಲ್ಲಾ ಭಾಗಗಳ ಸ್ವಾಧೀನವನ್ನು ಗುತ್ತಿಗೆದಾರನಿಗೆ ನೀಡುವುದು. ಕರಾರಿನ ವಿವರಗಳಲ್ಲಿ ತಿಳಿಸಿರುವ ದಿನಾಂಕದ ಒಳಗೆ ಜಮೀನಿನ ಯಾವುದೇ ಭಾಗದ ಸ್ವಾಧೀನವನ್ನು ನೀಡದೇಯಿದ್ದ ಸಂದರ್ಭದಲ್ಲಿ ಉದ್ಯೋಗದಾತನು (ಎಮ್‌ಪ್ಲಾಯರ್) ಸಂಬಂಧಪಟ್ಟ ಚಟುವಟಿಕೆಗಳ ಆರಂಭಕ್ಕೆ ವಿಳಂಬ ಮಾಡಿದಂತೆ ಪರಿಗಣಿಸಲಾಗುವುದು ಮತ್ತು ಇದು ಪರಿಹಾರ ನೀಡಬೇಕಾದ ಘಟನೆಯಾಗಿರುತ್ತದೆ.

ಲೋಕೋಪಯೋಗಿ ಇಲಾಖೆ ಮತ್ತು ಗುತ್ತಿಗೆದಾರರ ನಡುವೆ ಒಪ್ಪಂದವಿದ್ದ ಕಾರಣ ಒಪ್ಪಂದದ ನಿರ್ವಹಣೆಯ ಜವಾಬ್ದಾರಿಯನ್ನು ಲೋಕೋಪಯೋಗಿ ಇಲಾಖೆ ಹೊಂದಿದ್ದರಿಂದ ಉತ್ತರವನ್ನು ಒಪ್ಪಲಾಗಿಲ್ಲ. ಜಮೀನು ಅಲಭ್ಯತೆಯಿಂದಾಗಿ ಕಾಮಗಾರಿ ಆರಂಭಕ್ಕೆ ಯಾವುದೇ ನಿರೀಕ್ಷೆ ಇಲ್ಲದಿದ್ದಾಗ ಮತ್ತು ಇದು ಪರಿಹಾರ ಪಾವತಿಸಬೇಕಾದ ಘಟನೆಯಾಗಿದ್ದರಿಂದ ಕಾಮಗಾರಿ ಆದೇಶ ಪತ್ರ ನೀಡಿಕೆ ಅಕ್ರಮವಾಗಿದೆ ಮತ್ತು ಇದರಿಂದ ಗುತ್ತಿಗೆದಾರರಿಂದ ಪರಿಹಾರದ ಹಕ್ಕು ಚಲಾಯಿಸುವುದಕ್ಕೆ ಮತ್ತು ನಿರ್ಣಾಯಕರು ಪರಿಹಾರದ ತೀರ್ಪು ನೀಡುವುದಕ್ಕೆ ಕಾರಣವಾಯಿತು.

ಶಿಫಾರಸು

ಇನ್ನು ಮುಂದೆ ಸರ್ಕಾರವು ಭೂಮಿಯ ಲಭ್ಯತೆಯನ್ನು ಖಚಿತಪಡಿಸಿಕೊಂಡು ಮತ್ತು ಗುತ್ತಿಗೆದಾರರಿಗೆ ಕೆಲಸವನ್ನು ನೀಡುವ ಮೊದಲು ಸ್ಥಳೀಯ ಪ್ರಾಧಿಕಾರದಿಂದ ಎಲ್ಲಾ ಕಟ್ಟಡದ ಯೋಜನೆಗೆ ಅನುಮೋದನೆ ಪಡೆಯಬೇಕೆಂದು ಶಿಫಾರಸು ಮಾಡಲಾಗಿದೆ.

2.6. ಸ್ವೀಕಾರಾರ್ಹವಲ್ಲದ ಪಾವತಿ

ಒಪ್ಪಂದದ ಷರತ್ತುಗಳಿಗೆ ವಿರುದ್ಧವಾಗಿ ಏಜೆನ್ಸಿ ಪಾವತಿಸಿದ ₹ 3.14 ಕೋಟಿ ಸೇವಾ ತೆರಿಗೆಯನ್ನು ಸರ್ಕಾರ ಮರುಪಾವತಿ ಮಾಡಿದೆ

ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್‌ಗಳ ಷರತ್ತು 11.3 (ಟೆಂಡರ್‌ದಾರರಿಗೆ ಸೂಚನೆಗಳು) ಮತ್ತು ಸಾಮಾನ್ಯ ಷರತ್ತು 39 ರ ಪ್ರಕಾರ, ಟೆಂಡರ್‌ದಾರರು ಉಲ್ಲೇಖಿಸಿದ ದರಗಳು ಗುತ್ತಿಗೆದಾರರು ಪಾವತಿಸಬೇಕಾದ ಎಲ್ಲಾ ಸುಂಕಗಳು, ತೆರಿಗೆಗಳು ಮತ್ತು ಇತರ ಶುಲ್ಕಗಳನ್ನು ಒಳಗೊಂಡಿರುತ್ತದೆ. ನಿರ್ದಿಷ್ಟತೆಯ ಪ್ರಕಾರ ಕೆಲಸವನ್ನು ಕೈಗೊಳ್ಳಲು ಘಟಕ ದರಗಳನ್ನು ಉಲ್ಲೇಖಿಸಲು ಐಟಂ ದರ ಟೆಂಡರ್‌ಗಳನ್ನು ಆಹ್ವಾನಿಸಲ್ಪಡುತ್ತದೆ ಮತ್ತು ದರಗಳು ಎಲ್ಲಾ ಸಂಬಂಧಿತ ಒಳಪಡುವ ವೆಚ್ಚಗಳನ್ನು (ಇನ್ಪುಟ್) ಒಳಗೊಂಡಿರುತ್ತವೆ.

ಬೆಂಗಳೂರಿನ ಕುಮಾರಕೃಪಾ ಅತಿಥಿ ಗೃಹದಲ್ಲಿ[72] ಹೆಚ್ಚುವರಿ ವಸತಿ ನಿಲಯಗಳ ನಿರ್ಮಾಣ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ (ಜೂನ್ 2013) ಮತ್ತು ತಾಂತ್ರಿಕವಾಗಿ (ಸೆಪ್ಟೆಂಬರ್ 2014) ₹ 80 ಕೋಟಿಗೆ ಮಂಜೂರಾತಿ ನೀಡಲಾಗಿದೆ. ಕಟ್ಟಡವು ವಾಣಿಜ್ಯ ಉದ್ದೇಶಕ್ಕಾಗಿ ನಿರ್ಮಿಸಲಾಗುತ್ತಿದ್ದರಿಂದ 2012 ರ ಜೂನ್ 20 ರ ಭಾರತ ಸರ್ಕಾರದ ವಿನಾಯಿತಿ ಅಧಿಸೂಚನೆ ಸಂಖ್ಯೆ 25/2012 ರ ಪ್ರಕಾರ ಗುತ್ತಿಗೆದಾರರಿಂದ ಸೇವಾ ತೆರಿಗೆ (ಎಸ್‌ಟಿ) ಪಾವತಿಯನ್ನು ಆಕರ್ಷಿಸಿತು. ನಿರ್ಮಾಣದ ಗುತ್ತಿಗೆಯನ್ನು ₹ 70.49 ಕೋಟಿ (2014–15 ರ ದರಗಳ ಪಟ್ಟಿಗಿಂತ ಶೇ. 17.51 ಹೆಚ್ಚುವರಿ) ಮೊತ್ತಕ್ಕೆ 18 ತಿಂಗಳೊಳಗೆ (ಸೆಪ್ಟೆಂಬರ್ 2016) ಪೂರ್ಣಗೊಳಿಸುವಂತೆ ಮೆ. ಬಿ ಜಿ ಶಿರ್ಕೆ ಕನ್ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್‌ಗೆ ವಹಿಸಲಾಗಿತ್ತು (27 ಮಾರ್ಚ್ 2015). ಕಾಮಗಾರಿಯ ಕಾರ್ಯನಿರ್ವಹಣೆಯು ಹೆಚ್ಚುವರಿ ಐಟಂಗಳು/ಹೆಚ್ಚುವರಿ ಪ್ರಮಾಣಗಳನ್ನು ಒಳಗೊಂಡಿದ್ದರಿಂದ ಕಾಮಗಾರಿಯ ವೆಚ್ಚವನ್ನು ₹ 99.45 ಕೋಟಿಗೆ[73] ಪರಿಷ್ಕರಿಸಲಾಯಿತು, ಇದನ್ನು ಜುಲೈ 2019 ರಲ್ಲಿ ಸರ್ಕಾರವು ಅನುಮೋದಿಸಿತು. ಪರಿಷ್ಕೃತ ವೆಚ್ಚವು ಗುತ್ತಿಗೆದಾರರಿಗೆ ಸೇವಾ ತೆರಿಗೆಯ ಮರುಪಾವತಿಗಾಗಿ ₹ 3.14 ಕೋಟಿಗಳನ್ನು ಒಳಗೊಂಡಿತ್ತು. ಸೇವಾ ತೆರಿಗೆಯ ಮರುಪಾವತಿ ಘಟಕ ಸೇರಿದಂತೆ ಒಂಬತ್ತು ಬದಲಾವಣೆಯ ಐಟಂಗಳಿಗೆ ಪೂರಕ ಒಪ್ಪಂದಕ್ಕೆ ಸಹಿ ಮಾಡಲಾಗಿತ್ತು (ಅಕ್ಟೋಬರ್ 2019). ₹ 76.97 ಕೋಟಿಯ ಕಾಮಗಾರಿಯ ಅಂತಿಮ ಬಿಲ್ಲನ್ನು ಗುತ್ತಿಗೆದಾರರಿಗೆ ಪಾವತಿಸಲಾಗಿತ್ತು (2ನೇ ನವೆಂಬರ್ 2019). ಸೇವಾ ತೆರಿಗೆಯ ಮರುಪಾವತಿಗಾಗಿ ಗುತ್ತಿಗೆದಾರರು ಪ್ರತ್ಯೇಕ ಬಿಲ್ ನೀಡಿದರು(23ನೇ ಜುಲೈ 2019), ಇದನ್ನು ಅಂತಿಮ ಬಿಲ್ಲನ್ನು ಇತ್ಯರ್ಥಪಡಿಸಿದ ನಂತರ ಪಾವತಿಸಲಾಗಿತ್ತು(20ನೇ ನವೆಂಬರ್ 2019).

[72] ವಾಣಿಜ್ಯ ಉದ್ದೇಶದ ಕಟ್ಟಡ.

[73] ಬಾಹ್ಯ ಅಭಿವೃದ್ಧಿ ಕಾಮಗಾರಿಗಳು, ವಿದ್ಯುತ್ ಕಾಮಗಾರಿಗಳು, ಹೆಚ್ಚುವರಿ ಐಟಂಗಳು, ಸೇವಾ ತೆರಿಗೆಯ ಮರುಪಾವತಿ, ಇತ್ಯಾದಿಗಳನ್ನು ಒಳಗೊಂಡಿತ್ತು.

ಕಾರ್ಯನಿರ್ವಾಹಕ ಇಂಜಿನಿಯರ್ (ಇಇ), ನಂ.1 ಕಟ್ಟಡಗಳ ವಿಭಾಗ, ಬೆಂಗಳೂರು ಇವರ ದಾಖಲೆಗಳ ಪರಿಶೀಲನೆ (ಅಕ್ಟೋಬರ್ 2020) ಹೊರಗೆಡವಿದ್ದೇನೆಂದರೆ ಉಲ್ಲೇಖಿಸಿದ ದರಗಳು ಎಲ್ಲಾ ತೆರಿಗೆಗಳು, ಸುಂಕಗಳು ಇತ್ಯಾದಿಗಳನ್ನು ಒಳಗೊಂಡಿದ್ದರಿಂದ ಸೇವಾ ತೆರಿಗೆ (₹ 3.14 ಕೋಟಿ) ಮರುಪಾವತಿಯು ನಿಯಮಬಾಹಿರವಾಗಿದೆ ಎಂದು ಬಹಿರಂಗಪಡಿಸಿತು. ಈ ಸೂಚನೆಯನ್ನು ಬಿಡ್ಡುದಾರರಿಗೆ ಆಹ್ವಾನದಲ್ಲಿ(ಐಎಫ್‌ಟಿ) ಸ್ಪಷ್ಟವಾಗಿ ನೀಡಲಾಗಿತ್ತು ಮತ್ತು ಇದು ಒಪ್ಪಂದದ ಭಾಗವಾಗಿದೆ. ಇದಲ್ಲದೆ, ಬಿಡ್‌ದಾರರೊಂದಿಗೆ ನಡೆದ ಬಿಡ್ ಪೂರ್ವ ಸಭೆಯಲ್ಲಿ ಇಲಾಖೆಯು ಹೆಚ್ಚಿದ ತೆರಿಗೆಗಳು, ಸುಂಕಗಳು, ಸೆಸ್ ಮತ್ತು ಟೆಂಡರ್ ಸಲ್ಲಿಸಿದ ನಂತರ ವಿಧಿಸಲಾದ ಯಾವುದೇ ಹೊಸ ತೆರಿಗೆಗಳ ಮರುಪಾವತಿ ಮಾಡಲಾಗುವುದಿಲ್ಲ ಎಂದು ಸ್ಪಷ್ಟಪಡಿಸಿತ್ತು(ನವೆಂಬರ್ 2014). ಹೀಗಾಗಿ, ಗುತ್ತಿಗೆದಾರರು ಉಲ್ಲೇಖಿಸಿದ ದರಗಳು ಅನ್ವಯವಾಗುವ ಎಲ್ಲಾ ತೆರಿಗೆಗಳನ್ನು ಒಳಗೊಂಡಿದ್ದವು. ಆದ್ದರಿಂದ, ಗುತ್ತಿಗೆದಾರರಿಗೆ ಸೇವಾ ತೆರಿಗೆ ಮರುಪಾವತಿ ಒಪ್ಪಂದದ ನಿಯಮಗಳ ಪ್ರಕಾರ ಸ್ವೀಕಾರಾರ್ಹವಾಗಿರಲಿಲ್ಲ ಮತ್ತು ಸೇವಾ ತೆರಿಗೆಯ ಮರುಪಾವತಿಯು ಒಪ್ಪಂದದ ಷರತ್ತುಗಳ ಉಲ್ಲಂಘನೆಯಾಗಿತ್ತು.

ಇದನ್ನು ಗಮನಸೆಳೆದ ಮೇಲೆ, ಟೆಂಡರ್‌ಗಳನ್ನು ಆಹ್ವಾನಿಸಿದಾಗ (ಅಕ್ಟೋಬರ್ 2014) ಕಾಮಗಾರಿಗೆ ಸೇವಾ ತೆರಿಗೆಯಿಂದ ವಿನಾಯಿತಿ ನೀಡಲಾಗಿದ್ದು, ಅಧಿಸೂಚನೆ ಸಂ. 6/2015 ಮೂಲಕ ಅದನ್ನು 1ನೇ ಮಾರ್ಚ್ 2015 ರಿಂದ ಜಾರಿಗೆ ಬರುವಂತೆ ಸೇವಾ ತೆರಿಗೆಯ ವ್ಯಾಪ್ತಿಗೆ ಪುನ: ತರಲಾಗಿದೆ ಮತ್ತು 1ನೇ ಮಾರ್ಚ್ 2015 ರ ಮೊದಲು ಕಾರ್ಯಗತಗೊಳಿಸಿದ ಒಪ್ಪಂದಗಳಿಗೆ ವಿನಾಯಿತಿ ಅನ್ವಯಿಸುತ್ತದೆ ಎಂದು ಇಇ ಉತ್ತರಿಸಿದರು (ಅಕ್ಟೋಬರ್ 2020). ಇದಲ್ಲದೆ, ಬಿಡ್ ಪೂರ್ವ ಸಭೆಯಲ್ಲಿ(ನವೆಂಬರ್ 2014) ಇಲಾಖೆಯು ಏಜೆನ್ಸಿಗೆ ಸೇವಾ ತೆರಿಗೆ ವಿಧಿಸಲಾಗುವುದಿಲ್ಲ ಎಂದು ಸ್ಪಷ್ಟಮಾಡಲಾಗಿತ್ತು ಎಂದು ಇಇ ತಿಳಿಸಿದ್ದಾರೆ.

ಸರ್ಕಾರವು ಅವರ ಉತ್ತರದಲ್ಲಿ (ಫೆಬ್ರವರಿ 2021) ಇಇ ಅವರ ಉತ್ತರವನ್ನು ಅನುಮೋದಿಸುತ್ತಾ ಒಪ್ಪಂದವನ್ನು ನೀಡಿದಾಗ ತಿದ್ದುಪಡಿ ಅಧಿಸೂಚನೆಗಳನ್ನು (ಸಂ.6/2015[74] ಮತ್ತು ನಂ.9/2016[75]) ನೀಡಲಾಗಿರಲಿಲ್ಲ ಎಂದು ಹೇಳಿದೆ. ಕಾಮಗಾರಿ ಆದೇಶವನ್ನು ನೀಡಲು ಮೊದಲು ಎಸ್‌ಟಿ ವಿಧಿಸಲು ಯಾವುದೇ ನಿಬಂಧನೆ ಇಲ್ಲ ಎಂದು ಸಹ ಸರ್ಕಾರ ಹೇಳಿದೆ. ಈ ಅಧಿಸೂಚನೆಗಳ ಮೊದಲು, ಸೇವಾ ತೆರಿಗೆಯ ಲೆವಿಯು ವಿನಾಯಿತಿಯ ವ್ಯಾಪ್ತಿ ಮತ್ತು ಪರಿಧಿಯ ಅಡಿಯಲ್ಲಿ ಬರುತ್ತದೆ ಮತ್ತು ಆದ್ದರಿಂದ, ದರಗಳನ್ನು ಉಲ್ಲೇಖಿಸುವಾಗ ಏಜೆನ್ಸಿಯು ಸೇವಾ ತೆರಿಗೆಯನ್ನು ಸೇರಿಸಿರುವುದಿಲ್ಲ ಎಂದು ಇಲಾಖೆ ಅಭಿಪ್ರಾಯಪಟ್ಟಿದೆ.

ಪ್ರತ್ಯುತ್ತರಗಳಿಂದ ನೋಡಬಹುದಾದಂತೆ, ಒಪ್ಪಂದದ ಷರತ್ತುಗಳನ್ನು ಕಡೆಗಣಿಸಿ ಇಇಯವರ ಸ್ಪಷ್ಟೀಕರಣ ಮತ್ತು ತೆರಿಗೆ ನೀತಿಯಲ್ಲಿನ ಬದಲಾವಣೆಗಳ ಆಧಾರದ ಮೇಲೆ ಮರುಪಾವತಿಯನ್ನು ಅನುಮತಿಸಲಾಗಿದೆ. ಆದಾಗ್ಯೂ, ಈ ಕೆಳಗಿನ ಕಾರಣಗಳಿಗಾಗಿ ಈ ವಾದವು ಸರಿಯಾಗಿಲ್ಲ:

- ನೋಟಿಫಿಕೇಶನ್ ಸಂ.12/2012 ರ ಪ್ರಕಾರ ಯೋಜನೆಯು ಸೇವಾ ತೆರಿಗೆಯ ಪಾವತಿಯನ್ನು ಆಕರ್ಷಿಸುವುದರಿಂದ ಸೇವಾ ತೆರಿಗೆ ವಿಧಿಸಲಾಗುವುದಿಲ್ಲ ಎಂದು ಇಇ ನೀಡಿದ ಸ್ಪಷ್ಟೀಕರಣವು ತಪ್ಪಾಗಿದೆ. ಇಇ ಅವರ ಸ್ಪಷ್ಟೀಕರಣದ ಹೊರತಾಗಿಯೂ ಗುತ್ತಿಗೆದಾರರು ಸ್ವಯಂಪ್ರೇರಣೆಯಿಂದ ಈ ಯೋಜನೆಗೆ ಸೇವಾ ತೆರಿಗೆಯನ್ನು ಪಾವತಿಸಿದ್ದಾರೆ ಎಂದು ಲೆಕ್ಕಪರಿಶೋಧನೆಯ ಪರಿಶೀಲನೆಯು ತೋರಿಸಿದೆ. ಗುತ್ತಿಗೆದಾರನು ತನ್ನ ದರಗಳನ್ನು ಉಲ್ಲೇಖಿಸುವಾಗ ಸೇವಾ ತೆರಿಗೆಯನ್ನು ಪರಿಗಣಿಸಿದ್ದಾರೆ ಎಂದು ಇದು ಸೂಚಿಸುತ್ತದೆ.

- ಈ ಯೋಜನೆಗೆ ಸೇವಾ ತೆರಿಗೆ ಪಾವತಿಯ ಹೊಣೆಗಾರಿಕೆಯು ಟೆಂಡರ್‌ಗಳ ಆಹ್ವಾನದ ಹಂತದಿಂದ (ಅಕ್ಟೋಬರ್ 2014) ಬಿಡ್‌ಗಳನ್ನು ಸಲ್ಲಿಸುವವರೆಗೆ (ನವೆಂಬರ್ 2014) ಮತ್ತು ನಂತರದ ತೆರಿಗೆ ನೀತಿಯಲ್ಲಿನ ಬದಲಾವಣೆಗಳ ಹೊರತಾಗಿಯೂ ಅಸ್ತಿತ್ವದಲ್ಲಿತ್ತು. ಯೋಜನೆಯು 2015 ಮತ್ತು 2016 ರ ಅಧಿಸೂಚನೆಗಳ ಅಡಿಯಲ್ಲಿ ಸೇವಾ ತೆರಿಗೆಯನ್ನು ಆಕರ್ಷಿಸುವುದನ್ನು ಮುಂದುವರೆಸಿತು, ಅಂದರೆ, ಬಿಡ್‌ಗಳ ಸಲ್ಲಿಕೆ ಮತ್ತು ಕಾಮಗಾರಿ ಆದೇಶದ

[74] ವಾಣಿಜ್ಯ ಮತ್ತು ವಾಣಿಜ್ಯೇತರ ಕಟ್ಟಡ ಒಪ್ಪಂದಗಳೆರಡೂ ಸೇವಾ ತೆರಿಗೆಯನ್ನು ಆಕರ್ಷಿಸುತ್ತವೆ.
[75] ಸರ್ಕಾರಿ ವಾಣಿಜ್ಯೇತರ ಕಟ್ಟಡಗಳಿಗೆ ಮಾತ್ರ ಸೇವಾ ತೆರಿಗೆಯಿಂದ ವಿನಾಯಿತಿ ನೀಡಲಾಗಿದೆ.

ದಿನಾಂಕದ ಸಮಯದಲ್ಲಿ ಸಹ. ಹೀಗಾಗಿ, ಏಜೆನ್ಸಿಯವರು ಪಾವತಿಸಿದ ಸೇವಾ ತೆರಿಗೆಯ ಮರುಪಾವತಿಗೆ ನೀಡಿದ ಕಾರಣ ಅಸಮರ್ಪಕವಾಗಿದೆ.

- ಎಲ್ಲಾ ತೆರಿಗೆಗಳು, ಸುಂಕಗಳು ಇತ್ಯಾದಿಗಳನ್ನು ಒಳಗೊಂಡಂತೆ ಕೆಲಸ ಮುಗಿದ ಐಟಂಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿತ್ತು ಮತ್ತು ಅದರ ಪ್ರಕಾರ ಇಲಾಖೆಯಿಂದ ಸ್ವೀಕರಿಸಲಾಗಿತ್ತು. ಆದ್ದರಿಂದ, ಉಲ್ಲೇಖಿಸಿದ ದರಗಳಿಂದ ನಿರ್ದಿಷ್ಟ ಘಟಕ ಅಥವಾ ತೆರಿಗೆ ಅಂಶವು ಒಳಗೊಂಡಿದೆಯೇ ಅಥವಾ ಇಲ್ಲವೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ. ತರುವಾಯ, ಐಟಂ ದರದ ಒಪ್ಪಂದಗಳಲ್ಲಿ ಅದನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ.
- ಮೂಲ ಒಪ್ಪಂದದಲ್ಲಿ ಮರುಪಾವತಿ ಮಾಡಲು ಯಾವುದೇ ಅವಕಾಶವಿಲ್ಲದ ಕಾರಣ, ಸೇವಾ ತೆರಿಗೆಯ ಮರುಪಾವತಿಯನ್ನು ಕಾನೂನುಬದ್ಧ ಪಾವತಿಯಾಗಿ ತೋರಿಸಲು ಪೂರಕ ಒಪ್ಪಂದದಲ್ಲಿ ಸೇರಿಸಲಾಯಿತು. ಹೀಗೆ ಅಳವಡಿಸಿಕೊಂಡ ಪ್ರಕ್ರಿಯೆಯು ಮೂಲ ಒಪ್ಪಂದದ ನಿಯಮಗಳು ಮತ್ತು ಷರತ್ತುಗಳಲ್ಲಿ ಅಕ್ರಮ ಬದಲಾವಣೆಗೆ ಸಮಾನವಾಗಿದೆ.
- ಸೇವಾ ತೆರಿಗೆಯ ಮರುಪಾವತಿ ಸ್ವೀಕಾರಾರ್ಹವಲ್ಲ ಎಂದು ಕಾನೂನು ಇಲಾಖೆ ನೀಡಿದ (ಆಗಸ್ಟ್ 2017) ಅಭಿಪ್ರಾಯದ ಹೊರತಾಗಿಯೂ ಇಲಾಖೆಯು ಸೇವಾ ತೆರಿಗೆಯ ಮರುಪಾವತಿ ಮಾಡಿದೆ.

ಹೀಗಾಗಿ, ಮೇಲೆ ತಿಳಿಸಿದ ಕಾರಣಗಳಿಗಾಗಿ ಸೇವಾ ತೆರಿಗೆಯ ಮರುಪಾವತಿಯು ಅಕ್ರಮವಾಗಿದೆ. ಮುಂದುವರಿದು, ₹ 3.14 ಕೋಟಿ ಮರುಪಾವತಿಸಿರುವುದು ಒಪ್ಪಂದದ ಉಲ್ಲಂಘನೆಯಾಗಿದೆ ಮತ್ತು ಅದನ್ನು ವಸೂಲಿ ಮಾಡಬಹುದಾಗಿದೆ.

ಶಿಫಾರಸು

ಒಪ್ಪಂದದಲ್ಲಿ ನಿಗದಿಪಡಿಸಿದ ನಿಬಂಧನೆಗಳು/ಷರತ್ತುಗಳ ಪ್ರಕಾರ ಪಾವತಿ ಮಾಡುವಲ್ಲಿ ಎಲ್ಲಾ ಕಾಳಜಿಯನ್ನು ತೆಗೆದುಕೊಳ್ಳಬೇಕು ಎಂದು ಶಿಫಾರಸು ಮಾಡಲಾಗಿದೆ. ಅನರ್ಹ ಪಾವತಿಗಳನ್ನು ಕಾನೂನುಬದ್ಧವಾಗಿ ಮಾಡಲು ಸಿದ್ಧಪಡಿಸಲಾದ ಪೂರಕ ಒಪ್ಪಂದಕ್ಕೆ ಹೆಚ್ಚಿನ ಪರಿಶೀಲನೆ ಮತ್ತು ವಿವರಣೆಯ ಅಗತ್ಯವಿದೆ.

2.7. ಅಕ್ರಮ ಪಾವತಿಗಳು

ನಕಲಿ ಕಾಮಗಾರಿ ಬಿಲ್ ತಯಾರಿಸಿ ₹ 3.09 ಕೋಟಿ ಸರ್ಕಾರದ ಹಣವನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ

ಕರ್ನಾಟಕ ಲೋಕೋಪಯೋಗಿ ಇಲಾಖೆ (ಕೆಪಿಡಬ್ಲ್ಯುಡಿ) ಕೋಡ್ ಮತ್ತು ಕರ್ನಾಟಕ ಲೋಕೋಪಯೋಗಿ ಕಾಮಗಾರಿ ಖಾತೆಗಳ (ಕೆಪಿಡಬ್ಲ್ಯುಎ) ಕೋಡ್‌ನಲ್ಲಿ ಪ್ರಸ್ತುತಪಡಿಸಲಾದ ನಿಯಮಗಳು ಮತ್ತು ನಿಬಂಧನೆಗಳು ಮಾಪನಗಳನ್ನು ತೆಗೆದುಕೊಳ್ಳುವ ಮತ್ತು ದಾಖಲಿಸುವ, ರನ್ನಿಂಗ್ ಅಕೌಂಟ್ ಬಿಲ್‌ಗಳ ತಯಾರಿಕೆ ಮತ್ತು ಸಲ್ಲಿಕೆ, ವಿಭಾಗೀಯ ಕಚೇರಿಯಲ್ಲಿ ಬಿಲ್ಲುಗಳ ಪರಿಶೀಲನೆ ಮತ್ತು ಬಿಲ್ ವಹಿ (ರಿಜಿಸ್ಟರ್) ನಿರ್ವಹಣೆಗೆ ವಿವರವಾದ ಕಾರ್ಯವಿಧಾನವನ್ನು ರೂಪಿಸಿವೆ. ಇದಲ್ಲದೆ, ವೋಚರ್ ವಿವರಗಳನ್ನು ಒಳಗೊಂಡಂತೆ ಕಾಮಗಾರಿಗೆ ಸಂಬಂಧಿಸಿದ ಪಾವತಿಗಳು/ಖರ್ಚುಗಳೊಂದಿಗೆ ಮಂಜೂರಾದ ಕಾಮಗಾರಿಯ ಸಂಪೂರ್ಣ ವಿವರಗಳನ್ನು ದಾಖಲಿಸಲು ಒಂದು ಮೂಲಭೂತ ಮತ್ತು ಪ್ರಮುಖ ಕಾಮಗಾರಿಗಳ ವಹಿ (ರಿಜಿಸ್ಟರ್ ಆಫ್ ವರ್ಕ್ಸ್) ನಿರ್ವಹಣೆಯನ್ನು ನಿಯಮಗಳು ಸೂಚಿಸುತ್ತವೆ. ಎರಡು ಬಾರಿ ಪಾವತಿ ಮಾಡುವುದನ್ನು ತಪ್ಪಿಸಲು ಕಡ್ಡಾಯ ಪರಿಶೀಲನೆಗಾಗಿ ಪಾವತಿ ಮಾಡಿದ ನಂತರ ಪಾವತಿ ವಿವರಗಳನ್ನು ಸಂಬಂಧಿಸಿದ ಮಾಪನ ಪುಸ್ತಕದಲ್ಲಿ ನಮೂದಿಸಬೇಕು. ₹ 25 ಲಕ್ಷಕ್ಕಿಂತ ಹೆಚ್ಚಿನ ವೆಚ್ಚದ ಕಾಮಗಾರಿಗಳಿಗೆ, ಗುತ್ತಿಗೆದಾರನು ಅಳತೆಗಳ ಎಲೆಕ್ಟ್ರಾನಿಕ್ ಸ್ಪ್ರೆಡ್‌ಶೀಟ್‌ಗಳನ್ನು ಸಲ್ಲಿಸಬೇಕು ಮತ್ತು ಈ ಅಳತೆಗಳ ಅಂಗೀಕಾರವಾಗಿ ಗುತ್ತಿಗೆದಾರರ/ಅವರ ಅಧಿಕೃತ ವ್ಯಕ್ತಿಯ ಪ್ರತಿಸಹಿಯನ್ನು ತೆಗೆದುಕೊಳ್ಳಲು ಸ್ಪ್ರೆಡ್‌ಶೀಟ್‌ಗಳ ಪ್ರತಿಯನ್ನು ಮುದ್ರಿಸಬೇಕು ಮತ್ತು ಪ್ರತಿ ಕಾಮಗಾರಿಗೆ ಸೂಚ್ಯಂಕ ವಹಿ (ಇಂಡೆಕ್ಸ್ ರಿಜಿಸ್ಟರ್) ನಿರ್ವಹಿಸಬೇಕು. ಈ ನಿಟ್ಟಿನಲ್ಲಿ ವಿವಿಧ ಕೋಡಲ್ ನಿಬಂಧನೆಗಳನ್ನು ***ಅನುಬಂಧ-12ರಲ್ಲಿ*** ನೀಡಲಾಗಿದೆ.

ಕಾರ್ಯನಿರ್ವಾಹಕ ಇಂಜಿನಿಯರ್ (ಇಇ), ಲೋಕೋಪಯೋಗಿ ಇಲಾಖೆ, ಕೊಪ್ಪಳ ಅವರ ಲೆಕ್ಕಪತ್ರಗಳ ಪರಿಶೀಲನೆಯನ್ನು ಜುಲೈ/ಆಗಸ್ಟ್ 2019 ರಲ್ಲಿ ನಡೆಸಲಾಯಿತು ಮತ್ತು ಲೆಕ್ಕಪರಿಶೋಧನೆಯ ಪರಿಶೀಲನೆಯು ಪರೀಕ್ಷಾ ಪರಿಶೀಲನೆ ನಡೆಸಿದ ಪ್ರಕರಣಗಳಲ್ಲಿ ಬಿಲ್‌ಗಳನ್ನು ಡ್ರಾ ಮಾಡುವಲ್ಲಿ ಅಕ್ರಮಗಳನ್ನು ತೋರಿಸಿದೆ. ₹ 310.51 ಕೋಟಿ ವೆಚ್ಚವನ್ನು ಒಳಗೊಂಡ ನಾಲ್ಕು ತಿಂಗಳ[76] ವ್ಯವಹಾರದ ವಿವರವಾದ ಪರಿಶೀಲನೆಯನ್ನು ಕೈಗೊಳ್ಳಲಾಗಿದ್ದು, ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಿರುವಂತೆ ನಕಲಿ ಕಾಮಗಾರಿ ಬಿಲ್‌ಗಳನ್ನು ಸಿದ್ಧಪಡಿಸುವ ಮೂಲಕ ₹ 3.09 ಕೋಟಿಗಳಷ್ಟು ಸರ್ಕಾರಿ ಹಣವನ್ನು ದುರುಪಯೋಗಪಡಿಸಿಕೊಂಡಿರುವುದು ಬೆಳಕಿಗೆ ಬಂದಿದೆ. ವಿವರಗಳನ್ನು ***ಅನುಬಂಧ–13 A, 13 B ಮತ್ತು 13 C*** ಯಲ್ಲಿ ತೋರಿಸಲಾಗಿದೆ.

ಕೋಷ್ಟಕ ಸಂಖ್ಯೆ. 2.7.1: ಕಾಮಗಾರಿಯ ನಕಲಿ ಬಿಲ್‌ಗಳ ವಿವರಗಳು

ಕ್ರಮ ಸಂಖ್ಯೆ	ಅಕ್ರಮದ ಬಗೆ	ಪ್ರಕರಣಗಳ ಸಂಖ್ಯೆ	ಒಳಗೊಂಡಿರುವ ಮೊತ್ತ (₹ ಲಕ್ಷಗಳಲ್ಲಿ)
1	ಒಂದೇ ಇಎಮ್‌ಬಿ (eMB) ಆಧಾರದ ಮೇಲೆ ಗುತ್ತಿಗೆದಾರರಿಗೆ ಎರಡು ಬಾರಿ ಪಾವತಿ ಮಾಡಿದ್ದುದು	6	87.68
2	ವಿವಿಧ ಎಮ್‌ಬಿ(ಳು)ಗಳನ್ನು/ ಇಎಮ್‌ಬಿಗಳನ್ನು ಉಲ್ಲೇಖಿಸಿ ಗುತ್ತಿಗೆದಾರನಿಗೆ ಎರಡು ಬಾರಿ ಪಾವತಿ ಮಾಡಿದ್ದುದು	15	125.86
3	ಒಂದೇ ಕರಾರು ಮತ್ತು ಕಾಮಗಾರಿ ಇಂಡೆಂಟ್ ಸಂಖ್ಯೆ ಉಲ್ಲೇಖಿಸಿ ಇಬ್ಬರು ಗುತ್ತಿಗೆದಾರರಿಗೆ ಪಾವತಿ ಮಾಡಿದ್ದುದು	7	95.34
	ಒಟ್ಟು	**28**	**308.88**

ಕಂಡುಬಂದ ಅಂಶಗಳು ಕೆಳಗಿನಂತಿವೆ:

- ಎಲ್ಲಾ ಸಂದರ್ಭಗಳಲ್ಲಿ, ಕಾಮಗಾರಿಗಳಿಗೆ ಪಾವತಿಗಳನ್ನು ಈಗಾಗಲೇ ಮಾಡಲಾಗಿದೆ ಎಂಬ ವಾಸ್ತವದ ಹೊರತಾಗಿಯೂ ಕಾಮಗಾರಿಗಳ ಬಿಲ್‌ಗಳನ್ನು ಮತ್ತೆ ಸಿದ್ಧಪಡಿಸಲಾಗಿದೆ ಮತ್ತು ಪಾವತಿಸಲಾಗಿದೆ. 28 ವೋಚರ್‌ಗಳ ಪೈಕಿ 21 ರಲ್ಲಿ, ಎಸ್‌ಬಿಆರ್/ಡಿಬಿಆರ್ ಸಂಖ್ಯೆಗಳನ್ನು ನಮೂದಿಸಲಾಗಿಲ್ಲ, ಇದು ಬಿಲ್‌ಗಳನ್ನು ನಮೂದಿಸುವಲ್ಲಿ ಮತ್ತು ವಿಲೇವಾರಿಯಲ್ಲಿ ನಿಯಂತ್ರಣದಲ್ಲಿನ ಸಡಿಲತೆಯನ್ನು ಸೂಚಿಸುತ್ತದೆ. ಬಿಲ್ಲನ್ನು ತಯಾರಿಸುವ ಸಮಯದಲ್ಲಿ ಅಳತೆಗಳನ್ನು ಕೆಂಪು ಶಾಯಿಯಲ್ಲಿ ಕರ್ಣೀಯವಾಗಿ (ಡೈಯಾಗೊನಲಿ) ಗೆರೆ ಎಳೆದಿರಲಿಲ್ಲ ಮತ್ತು ವೋಚರ್ ವಿವರಗಳನ್ನು ಸಹ ದಾಖಲಿಸಿರಲಿಲ್ಲವಾದ್ದರಿಂದ ಒಂದಕ್ಕಿಂತ ಹೆಚ್ಚು ಬಿಲ್‌ಗಳನ್ನು ತಯಾರಿಸಲು ಅನುಕೂಲವಾಯಿತು.
- ₹ 25 ಲಕ್ಷ ವೆಚ್ಚದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮಾಡಿದ ಕೆಲಸದ ವಿವರವಾದ ಅಳತೆಗಳನ್ನು ಸಿಡಿ ರೊಮ್ /ಡಿಸ್ಕೆಟ್ ಸ್ವರೂಪದಲ್ಲಿ ಗುತ್ತಿಗೆದಾರರು ಸಲ್ಲಿಸಿಲ್ಲ. ಆದರೆ ಸ್ಪೆಡ್‌ಶೀಟ್‌ಗಳ ಅಳತೆಗಳ ಮುದ್ರಿತ ಪ್ರತಿಗಳನ್ನು ನಿರ್ವಹಿಸಲಾಗಿದೆ. ಮುದ್ರಿತ ಪ್ರತಿಗಳಲ್ಲಿ ಗುತ್ತಿಗೆದಾರರ ಪ್ರತಿಸಹಿಯನ್ನು ಪಡೆಯಲಾಗಿಲ್ಲ ಮತ್ತು ಸೂಚ್ಯಂಕ ವಹಿ (ಇಂಡೆಕ್ಸ್ ರಿಜಿಸ್ಟರ್) ಅನ್ನು ಸಹ ನಿರ್ವಹಿಸಲಾಗಿಲ್ಲ. ಇಎಮ್‌ಬಿ(eMB) ವ್ಯವಸ್ಥೆಯಲ್ಲಿ ವಿದ್ಯುನ್ಮಾನವಾಗಿ ಮಾಪನಗಳ ಲೆಕ್ಕಾಚಾರಕ್ಕಾಗಿ ಸುರಕ್ಷಿತ ಎಲೆಕ್ಟ್ರಾನಿಕ್ ಪದ್ಧತಿಯನ್ನು ಇರಿಸಲಾಗಿಲ್ಲ. ಈ ಲೋಪವು ಪಾವತಿ ಮಾಡಲು ಬಿಲ್‌ಗಳನ್ನು ತಯಾರಿಸಲು ಮಾಪನಗಳ ಒಂದಕ್ಕಿಂತ ಹೆಚ್ಚು ಪ್ರತಿಗಳ ಮುದ್ರಣವನ್ನು ಸಕ್ರಿಯಗೊಳಿಸಿತು. ಮಾಪನದ ಸ್ಪೆಡ್‌ಶೀಟ್‌ಗಳ ಮುದ್ರಿತ ಪ್ರತಿಯ ಆಧಾರದ ಮೇಲೆ ರನ್ನಿಂಗ್ ಅಕೌಂಟ್ ಬಿಲ್‌ಗಳನ್ನು ಸಿದ್ಧಪಡಿಸುವ ಈ ಅಭ್ಯಾಸವು ದುರುಪಯೋಗಕ್ಕೆ ಪುಷ್ಟಿಕೊಡುತ್ತದೆ, ಏಕೆಂದರೆ ಇಎಮ್‌ಬಿ(eMB)ಯ ಕಾರ್ಯವಿಧಾನವು ಸರ್ಕಾರದಿಂದ ಇನ್ನೂ ಸ್ಥಾಪಿಸಲ್ಪಟ್ಟಿರದ ವಿದ್ಯುನ್ಮಾನದ ಪರಿಸರದಲ್ಲಿ ಮಾತ್ರ ಕಾರ್ಯನಿರ್ವಹಿಸುತ್ತದೆ.
- ಕಾಮಗಾರಿಗೆ ಸಂಬಂಧಿಸಿದಂತೆ ಗುತ್ತಿಗೆದಾರರಿಗೆ ಮಾಡಿದ ಪಾವತಿಗಳನ್ನು ಕಾಮಗಾರಿಗಳ ವಹಿ (ರಿಜಿಸ್ಟರ್ ಆಫ್ ವರ್ಕ್ಸ್)ಯಲ್ಲಿ ದಾಖಲಿಸಲಾಗಿಲ್ಲ – ಕಾಮಗಾರಿಗಳ ವಹಿಯು ಕೆಲಸಕ್ಕೆ ಸಂಬಂಧಿಸಿದಂತೆ ಮಾಡಿದ ಪಾವತಿಗಳು/ವೆಚ್ಚಗಳನ್ನು ದಾಖಲಿಸಲು ಇರುವ ಒಂದು

[76] ಜನವರಿ 2018, ಮಾರ್ಚ್ 2018, ಫೆಬ್ರವರಿ 2019 ಮತ್ತು ಮಾರ್ಚ್ 2019.

ಕಣ್ಗಾವಲು ವಹಿ (ವಾಚ್ ರಿಜಿಸ್ಟರ್) ಆಗಿರುತ್ತದೆ. ಕಾಮಗಾರಿಗಳ ವಹಿಯಲ್ಲಿ ಪಾವತಿಗಳನ್ನು ದಾಖಲಿಸಿದ್ದರೆ, ವಿಭಾಗೀಯ ಕಚೇರಿಯಲ್ಲಿ ನಕಲಿ ಬಿಲ್‌ಗಳ ಸ್ವೀಕೃತಿಯನ್ನು ಪತ್ತೆ ಮಾಡಬಹುದಾಗಿತ್ತು. ಹೀಗಾಗಿ ಈ ಲೋಪವು ಸರ್ಕಾರದ ಹಣವನ್ನು ದುರುಪಯೋಗಪಡಿಸಿಕೊಳ್ಳುವುದಕ್ಕೆ ಪುಷ್ಟಿ ನೀಡಿದೆ.

- ಇದಲ್ಲದೆ, ಇಲಾಖಾ ಸಿಬ್ಬಂದಿ/ಅಧಿಕಾರಿಗಳು ಮತ್ತು ಗುತ್ತಿಗೆದಾರರ ಒಳಸಂಚನ್ನು ತಳ್ಳಿಹಾಕಲಾಗಿಲ್ಲ ಮತ್ತು ಈ ವಿಷಯದಲ್ಲಿ ವಸೂಲಾತಿ ಮಾಡಲು ಮತ್ತು ಹೊಣೆಗಾರಿಕೆಯನ್ನು ನಿಗದಿ ಪಡಿಸಲು ವಿವರವಾದ ತನಿಖೆಯ ಅಗತ್ಯವಿದೆ.

ಸರ್ಕಾರವು ₹ 2.80 ಕೋಟಿಯನ್ನು ವಸೂಲಿ ಮಾಡಲಾಗಿದೆ ಮತ್ತು ಬಾಕಿ ಮೊತ್ತವನ್ನು ವಸೂಲಿ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಉತ್ತರಿಸಿದೆ (ನವೆಂಬರ್ 2021). ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದ ಅಂಶಗಳು ಪರೀಕ್ಷಾ ಪರಿಶೀಲನೆ ನಡೆಸಿದ ತಿಂಗಳುಗಳನ್ನು ಆಧರಿಸಿವೆ ಮತ್ತು ಆದ್ದರಿಂದ ವಿವರವಾದ ತನಿಖೆಗೆ ಆದೇಶಿಸಲು ಸರ್ಕಾರಕ್ಕೆ ಶಿಫಾರಸು ಮಾಡಲಾಗಿದೆ. ಇದಲ್ಲದೆ, ನಕಲಿ ಬಿಲ್‌ಗಳನ್ನು ತಯಾರಿಸಿ ಸರ್ಕಾರದ ಹಣವನ್ನು ವಂಚಿಸಿದ ಸಂಬಂಧಿತ ಅಧಿಕಾರಿಗಳು/ಸಿಬ್ಬಂದಿ ಮತ್ತು ಗುತ್ತಿಗೆದಾರರ ವಿರುದ್ಧ ತೆಗೆದುಕೊಂಡ ಕ್ರಮವನ್ನು ತಿಳಿಸಲಾಗಿಲ್ಲ.

ಶಿಫಾರಸು

ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದ ಅಂಶಗಳು ಪರೀಕ್ಷಾ ಪರಿಶೀಲನೆ ನಡೆಸಿದ ತಿಂಗಳುಗಳನ್ನು ಆಧರಿಸಿರುವುದರಿಂದ, ಸರ್ಕಾರವು ಎಲ್ಲಾ ವಿಭಾಗಗಳು/ಉಪ-ವಿಭಾಗಗಳಾದ್ಯಂತ ವಿವರವಾದ ತನಿಖೆಗೆ ಆದೇಶಿಸಬಹುದು ಎಂದು ಶಿಫಾರಸು ಮಾಡಲಾಗಿದೆ. ಸರ್ಕಾರಕ್ಕೆ ವಂಚಿಸಿ ಕರ್ತವ್ಯಲೋಪ ಎಸಗಿದ ಅಧಿಕಾರಿಗಳು/ಸಿಬ್ಬಂದಿ ಮತ್ತು ಗುತ್ತಿಗೆದಾರರ ವಿರುದ್ಧ ತೆಗೆದುಕೊಂಡ ಕ್ರಮವನ್ನು ಸಹ ತಿಳಿಸಬಹುದು.

ನಗರಾಭಿವೃದ್ಧಿ ಇಲಾಖೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

2.8. ಭೂ ಪರಿಹಾರ ಪಾವತಿಯಲ್ಲಿನ ವಿಳಂಬದಿಂದ ಭಾರಿ ಆರ್ಥಿಕ ಹೊರೆ

ನಿಗದಿತ ಕಾರ್ಯವಿಧಾನವನ್ನು ಅನುಸರಿಸದೆ ಖಾಸಗಿ ಜಮೀನು ಸ್ವಾಧೀನಪಡಿಸಿಕೊಂಡ ಪರಿಣಾಮವಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ₹ 10.91 ಲಕ್ಷ ಪರಿಹಾರಕ್ಕೆ ಪ್ರತಿಯಾಗಿ ₹ 44.47 ಕೋಟಿ ಮೊತ್ತದ ಅಭಿವೃದ್ಧಿ ಪಡಿಸಿದ ನಿವೇಶನಗಳನ್ನು ಹಂಚಿಕೆ ಮಾಡುವಲ್ಲಿ ಪರಿಣಮಿಸಿತು. ಮಂಜೂರು ಮಾಡಿದ ಜಮೀನು ನಿಗದಿತ ಪರಿಹಾರಕ್ಕಿಂತ ಹೆಚ್ಚಾಗಿದ್ದು, ಇದು ₹ 10.04 ಕೋಟಿ ಮೌಲ್ಯದ ನಿವೇಶನಗಳ ಹೆಚ್ಚುವರಿ ಹಂಚಿಕೆಯಲ್ಲಿ ಪರಿಣಮಿಸಿತು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಬಿಡಿಎ ಕಾಯಿದೆ, 1976ರ ಪರಿಚ್ಛೇದ 17 (ಪ್ರಾಥಮಿಕ ಅಧಿಸೂಚನೆ) ಮತ್ತು ಪರಿಚ್ಛೇದ 19 (ಅಂತಿಮ ಅಧಿಸೂಚನೆ), ಇವುಗಳು ನೀಡಿದ ಅಧಿಕಾರದಡಿಯಲ್ಲಿ ಬಿಡಿಎ ಅಭಿವೃದ್ಧಿ ಯೋಜನೆಗಳಿಗಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುತ್ತದೆ. ಭೂಮಾಲೀಕರೊಂದಿಗೆ ಮಾಡಿಕೊಂಡ ಒಪ್ಪಂದಗಳನ್ನು ಹೊರತುಪಡಿಸಿ ಬಿಡಿಎ ಮಾಡಿದ ಎಲ್ಲಾ ಭೂಸ್ವಾಧೀನಗಳಿಗೆ ಭೂಸ್ವಾಧೀನ ಅಧಿನಿಯಮ, 1894 ಅನ್ವಯಿಸುತ್ತದೆ ಎಂದು ಬಿಡಿಎ ಕಾಯಿದೆಯ ಪರಿಚ್ಛೇದ 36 ತಿಳಿಸುತ್ತದೆ. ಸ್ವಾಧೀನಪಡಿಸಿಕೊಂಡ ಭೂಮಿಗೆ ಪರಿಹಾರವನ್ನು ನೀಡಲು ಮತ್ತು ಪಾವತಿಸಲು ಭೂಸ್ವಾಧೀನ ಕಾಯಿದೆ, 1894ರಲ್ಲಿನ ನಿಬಂಧನೆಗಳು ಈ ಕೆಳಗಿನಂತಿವೆ:

- ಸ್ವಾಧೀನಪಡಿಸಿಕೊಂಡ ಭೂಮಿಯಲ್ಲಿ ಆಸಕ್ತಿಯುಳ್ಳ ಎಲ್ಲ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಕೇಳಿದ ನಂತರ ಸ್ವಾಧೀನಪಡಿಸಿಕೊಂಡ ಭೂಮಿಗೆ ಸಕ್ಷಮ ಪ್ರಾಧಿಕಾರವು ಪರಿಹಾರದ ಐತೀರ್ಪನ್ನು ನೀಡಲು ಪರಿಚ್ಛೇದ 11 ಅಧಿಕಾರ ನೀಡುತ್ತದೆ.

- ಅಂತಿಮ ಅಧಿಸೂಚನೆಯ ದಿನಾಂಕದಿಂದ ಎರಡು ವರ್ಷಗಳ ಅವಧಿಯೊಳಗೆ ಐತೀರ್ಪನ್ನು ನೀಡಬೇಕು ಮತ್ತು ಆ ಅವಧಿಯೊಳಗೆ ಯಾವುದೇ ಐತೀರ್ಪನ್ನು ನೀಡದಿದ್ದರೆ, ಸ್ವಾಧೀನದ ಸಂಪೂರ್ಣ ಪ್ರಕ್ರಿಯೆಯು ರದ್ದಾಗುತ್ತದೆ ಎಂದು ಪರಿಚ್ಛೇದ 11(ಎ) ನಿಗದಿಪಡಿಸುತ್ತದೆ.
- ಪರಿಚ್ಛೇದ 31ರ ಅನ್ವಯ ಐತೀರ್ಪಿನ ಪರಿಹಾರವನ್ನು ಅರ್ಹ ವ್ಯಕ್ತಿಗಳಿಗೆ ಪಾವತಿಸಬೇಕು ಅಥವಾ ವಿವಾದದ ಪ್ರಕರಣಗಳಲ್ಲಿ ನ್ಯಾಯಾಲಯದಲ್ಲಿ ಠೇವಣಿ ಇಡಬೇಕು.

ಜೆಪಿ ನಗರ 8ನೇ ಹಂತ ಬಡಾವಣೆಯ ರಚನೆಗಾಗಿ ಬೆಂಗಳೂರು ದಕ್ಷಿಣ ತಾಲೂಕಿನ ಉತ್ತರಹಳ್ಳಿ ಹೋಬಳಿಯ ಕೊತ್ತನೂರು ಗ್ರಾಮದಲ್ಲಿ ಜಮೀನು ಸ್ವಾಧೀನಪಡಿಸಿಕೊಳ್ಳಲು ಬಿಡಿಎ ಪ್ರಾಥಮಿಕ ಅಧಿಸೂಚನೆಯನ್ನು (ಮಾರ್ಚ್ 1988) ಹೊರಡಿಸಿತು. ಅಂತಿಮ ಅಧಿಸೂಚನೆಯಲ್ಲಿ (ಅಕ್ಟೋಬರ್ 1999) 92 ಎಕರೆಯ ಸ್ವಾಧೀನಕ್ಕೆ ಆದೇಶ ಹೊರಡಿಸಲಾಗಿತ್ತು, ಅದರಲ್ಲಿ 4 ಎಕರೆ 4 ಗುಂಟೆ[77] ಭೂಮಿ ಶ್ರೀ ನಂಜುಂಡಪ್ಪ ಎಂಬುವವರಿಗೆ ಸೇರಿತ್ತು. ಬಿಡಿಎ ಭೂಸ್ವಾಧೀನಾಧಿಕಾರಿಗಳು ಅಂತಿಮ ಅಧಿಸೂಚನೆಯ ಎಂಟು ವರ್ಷಗಳ ನಂತರ (ಮೇ 2008) ಮೇಲಿನ ಜಮೀನಿಗೆ ₹10.91 ಲಕ್ಷವನ್ನು ಪರಿಹಾರದ ಐತೀರ್ಪು ನೀಡಿದರು. ಪರಿಹಾರದ ಮೊತ್ತವನ್ನು ಭೂಮಾಲೀಕರಿಗೂ ಪಾವತಿಸಲಿಲ್ಲ ಅಥವಾ ಭೂಸ್ವಾಧೀನ ಕಾಯಿದೆ, 1894ರ ಪರಿಚ್ಛೇದ 31ರ ಅನ್ವಯ ನ್ಯಾಯಾಲಯದಲ್ಲಿಯೂ ಠೇವಣಿಯಾಗಿ ಇಡಲಿಲ್ಲ.

ನೊಂದ ಭೂಮಾಲೀಕರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿ (ಆಗಸ್ಟ್ 2017) ಸ್ವಾಧೀನ ಪ್ರಕ್ರಿಯೆಯನ್ನು ರದ್ದಾಗಿದೆ ಎಂದು ಘೋಷಿಸಿ ಭೂಸ್ವಾಧೀನ ಕಾಯಿದೆಯಲ್ಲಿ ನ್ಯಾಯಯುತ ಪರಿಹಾರದ ಹಕ್ಕು ಮತ್ತು ಪಾರದರ್ಶಕತೆ, 2013 (ಭೂಸ್ವಾಧೀನ ಕಾಯಿದೆ, 2013) ಅಡಿಯಲ್ಲಿ ಪರಿಹಾರವನ್ನು ಒದಗಿಸಬೇಕೆಂದು ಕೋರಿದರು. ಉಚ್ಚ ನ್ಯಾಯಾಲಯವು ರಿಟ್ ಅರ್ಜಿಯನ್ನು ಪುರಸ್ಕರಿಸಿ ಭೂಸ್ವಾಧೀನ ಕಾಯಿದೆ, 2013ರಲ್ಲಿ ಒಳಗೊಂಡಿರುವ ನಿಬಂಧನೆಗಳ ಅನ್ವಯ, ಭೂಮಿಯನ್ನು ಆ ದಿನದಂದು ಸ್ವಾಧೀನಪಡಿಸಿಕೊಂಡಿದೆ ಎಂದು ಪರಿಗಣಿಸಿ, ಮೂರು ತಿಂಗಳೊಳಗೆ ಸಮಾನ ಮೌಲ್ಯವನ್ನು ಹೊಂದಿರುವ ಸಮಾನ ಪ್ರಮಾಣದ ಭೂಮಿಯನ್ನು ಪರಿಹಾರವಾಗಿ ಅವರಿಗೆ ನೀಡುವಂತೆ (ಅಕ್ಟೋಬರ್ 2017) ಬಿಡಿಎಗೆ ನಿರ್ದೇಶನ ನೀಡಿತು. ಮೂರು ತಿಂಗಳ ಅವಧಿಯಲ್ಲಿ ಉಚ್ಚ ನ್ಯಾಯಾಲಯದ ನಿರ್ದೇಶನಗಳನ್ನು ಬಿಡಿಎ ಪಾಲಿಸದಿದ್ದರಿಂದ ಭೂ ಮಾಲೀಕರು ಬಿಡಿಎ ವಿರುದ್ಧ ನ್ಯಾಯಾಲಯ ನಿಂದನೆ ಅರ್ಜಿ ಸಲ್ಲಿಸಿದರು (ಜನವರಿ 2018).

ಇದಕ್ಕೆ ಪ್ರತಿಕ್ರಿಯೆಯಾಗಿ, ಬಿಡಿಎ (ಏಪ್ರಿಲ್ 2018) ಚಾಲ್ತಿಯಲ್ಲಿರುವ ನಿಯಮಗಳ[78] ಅನ್ವಯ, ಸ್ವಾಧೀನಪಡಿಸಿಕೊಂಡ ಪ್ರತಿ ಎಕರೆ ಭೂಮಿಗೆ 11,979 ಚದರ ಅಡಿಯಂತೆ ಅಭಿವೃದ್ಧಿಪಡಿಸಿದ ನಿವೇಶನಗಳ ರೂಪದಲ್ಲಿ ಭೂಮಾಲೀಕರಿಗೆ ಪರಿಹಾರ ನೀಡಲು ನಿರ್ಧರಿಸಿತು. ಅದರಂತೆ, ವಿವಿಧ ಬಡಾವಣೆಗಳಲ್ಲಿ ಒಟ್ಟು 48,277.51 ಚದರ ಅಡಿ ಅಭಿವೃದ್ಧಿ ಪಡಿಸಿದ ಭೂಮಿಯನ್ನು ಒಳಗೊಂಡ 23 ನಿವೇಶನಗಳನ್ನು ಬಿಡಿಎ ಹಂಚಿಕೆ (ಜುಲೈ 2018) ಮಾಡಿತು. ಆದರೆ, ಭೂಮಾಲೀಕರು ಪ್ರತಿ ಎಕರೆಗೆ 21,780 ಚದರ ಅಡಿ ಅಭಿವೃದ್ಧಿಪಡಿಸಿದ ಭೂಮಿಯನ್ನು (ಅಂದರೆ 43,560 ಚದರ ಅಡಿಯ ಶೇಕಡಾ 50ರಷ್ಟು) ಪರಿಹಾರವಾಗಿ ನೀಡಬೇಕೆಂದು ಒತ್ತಾಯಿಸಿದರು. ದೂರುದಾರರು ತಮ್ಮ ಜ್ಞಾಪಕದಲ್ಲಿ (ಸೆಪ್ಟೆಂಬರ್ 2018) ಸ್ವಾಧೀನಪಡಿಸಿಕೊಂಡ ಪ್ರತಿ ಎಕರೆ ಭೂಮಿಗೆ 21,780 ಚದರ ಅಡಿ ಅಭಿವೃದ್ಧಿ ಹೊಂದಿದ ಭೂಮಿಯನ್ನು ಹಂಚಿಕೆ ಮಾಡುವಂತೆ ಬಿಡಿಎಗೆ ನಿರ್ದೇಶನ ಮಾಡಲು ಉಚ್ಚ ನ್ಯಾಯಾಲಯವನ್ನು ವಿನಂತಿಸಿದರು. ಜ್ಞಾಪಕವನ್ನು ನ್ಯಾಯಾಲಯವು ದಾಖಲಿಸಿಕೊಂಡಿತು ಮತ್ತು ಅದನ್ನು ಅನುಸರಿಸಲು ಬಿಡಿಎಗೆ ನಿರ್ದೇಶಿಸಿತು. ಅದರಂತೆ, ಬೇರೆ ಬೇರೆ ಬಡಾವಣೆಗಳಲ್ಲಿ 50,328.27 ಚದರ ಅಡಿ ಅಳತೆಯ ಇತರೆ 20 ನಿವೇಶನಗಳನ್ನು ಬಿಡಿಎ ಹಂಚಿಕೆ ಮಾಡಿತು (ಅಕ್ಟೋಬರ್ 2018).

ಈ ಸಂಬಂಧವಾಗಿ ಲೆಕ್ಕಪರಿಶೋಧನೆಯು ಕೆಳಕಂಡ ಅಂಶಗಳನ್ನು ಗಮನಿಸಿತು:

[77] 6 ಗುಂಟೆ ಖರಾಬು ಭೂಮಿಯನ್ನು ಹೊರತುಪಡಿಸಿ.

[78] ಒಂದು ಎಕರೆ ಎಂದರೆ 43,560 ಚದರ ಅಡಿ ಮತ್ತು ಶೇಕಡಾ 55ರಷ್ಟು ಎಂದರೆ 23,958 ಚದರ ಅಡಿಯನ್ನು ಅಭಿವೃದ್ಧಿ ಪಡಿಸಿದ ಪ್ರದೇಶ ಎಂದು ಪರಿಗಣಿಸಬೇಕು ಏಕೆಂದರೆ ಉಳಿದ ಭೂಮಿಯನ್ನು ರಸ್ತೆಗಳು, ಪಾರ್ಕ್ ಮುಂತಾದ ನಾಗರೀಕ ಸೌಲಭ್ಯಗಳನ್ನು ಒದಗಿಸಲು ಬಳಸಿಕೊಳ್ಳಲಾಗುತ್ತದೆ. ನಿಯಮಾವಳಿಗಳ ಅನ್ವಯ ಬಿಡಿಎ ಅಭಿವೃದ್ಧಿಪಡಿಸಿದ ಭೂಮಿಯಲ್ಲಿ ಶೇಕಡಾ 50ರಷ್ಟನ್ನು ಅಂದರೆ, 11,979 ಚದರ ಅಡಿಯನ್ನು ಹಂಚಿಕೆ ಮಾಡುತದೆ.

- ಭೂಸ್ವಾಧೀನ ಕಾಯಿದೆ, 1894ರ ನಿಬಂಧನೆಗಳನ್ನು ಉಲ್ಲಂಘಿಸಿ ಅಂತಿಮ ಅಧಿಸೂಚನೆಯನ್ನು ಹೊರಡಿಸಿದ ನಂತರ ಪರಿಹಾರದ ಐತೀರ್ಪು ನೀಡಲು ಬಿಡಿಎ ಎಂಟು ವರ್ಷಗಳಿಗಿಂತ ಹೆಚ್ಚು ಸಮಯ ತೆಗೆದುಕೊಂಡಿತಲ್ಲದೇ ಭೂಸ್ವಾಧೀನ ಕಾಯಿದೆ, 1894ರ ನಿಬಂಧನೆಗಳನ್ನು ಉಪೇಕ್ಷಿಸಿ ಪರಿಹಾರವನ್ನು ಭೂಮಾಲೀಕರಿಗೂ ಪಾವತಿ ಮಾಡಲಿಲ್ಲ ಅಥವಾ ನ್ಯಾಯಾಲಯದಲ್ಲಿ ಠೇವಣಿಯನ್ನಾಗಿಯೂ ಇಡಲಿಲ್ಲ. ಭೂಸ್ವಾಧೀನ ಪರಿಹಾರ ರಿಜಿಸ್ಟರ್‌ನಲ್ಲಿ[79] ಅಂತಿಮ ಅಧಿಸೂಚನೆಯನ್ನು ಹೊರಡಿಸುವವರೆಗೆ ಮಾತ್ರ ನಮೂದುಗಳನ್ನು ದಾಖಲಿಸಲಾಗಿತ್ತು. ಭೂಸ್ವಾಧೀನ ಅಧಿನಿಯಮ, 1894ರಲ್ಲಿ ನಿಗದಿಪಡಿಸಿದ್ದ ಕಾರ್ಯವಿಧಾನಗಳ ಸಂಪೂರ್ಣತೆಯನ್ನು ಖಚಿತಪಡಿಸಿಕೊಳ್ಳಲು ಬಿಡಿಎಯಲ್ಲಿನ ಅನುಸರಣಾ ಕಾರ್ಯವಿಧಾನದ ಕೊರತೆಯನ್ನು ಇದು ಸೂಚಿಸುತ್ತಿತ್ತು. ಪರಿಹಾರವನ್ನು ಪಾವತಿಸದೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಬಿಡಿಎಯ ಸ್ವೇಚ್ಛಾನುಸಾರದ ಕ್ರಮವು, ಸ್ವಾಧೀನವನ್ನು ರದ್ದುಪಡಿಸುವಲ್ಲಿ ಪರಿಣಮಿಸಿತು. ನೊಂದ ಭೂಮಾಲೀಕರು ಪರಿಹಾರಕ್ಕಾಗಿ ನ್ಯಾಯಾಲಯದ ಮೊರೆ ಹೋದರು. ತತ್ಪರಿಣಾಮವಾಗಿ 2008ರಲ್ಲಿ ನೀಡಬೇಕಾದ ₹ 10.91 ಲಕ್ಷ ಪರಿಹಾರದ ಬದಲಾಗಿ 2018ರಲ್ಲಿ ₹ 44.47 ಕೋಟಿ[80] ಮೌಲ್ಯ ಮಾರಾಟದ ಸಾಮರ್ಥ್ಯವಿರುವ ಅಭಿವೃದ್ಧಿಪಡಿಸಿದ ನಿವೇಶನಗಳನ್ನು ಹಂಚಿಕೆ ಮಾಡಲಾಯಿತು.

- ನ್ಯಾಯಾಲಯ ನಿಂದನೆ ಅರ್ಜಿಯನ್ನು ಅನುಸರಿಸಲು, ಬಿಡಿಎ ₹ 34.43 ಕೋಟಿ[81] ಮೌಲ್ಯದ 89,298 ಚದರ ಅಡಿ (8,296 ಚದರ ಮೀಟರ್)[82] ಮೌಲ್ಯದ ಅಭಿವೃದ್ಧಿ ಹೊಂದಿದ ಭೂಮಿ ರೂಪದಲ್ಲಿ ಪರಿಹಾರವನ್ನು ನೀಡಲು ಒಪ್ಪಿಕೊಂಡಿತು. ಆದರೆ, ಬಿಡಿಎ ₹ 44.47 ಕೋಟಿ ಮೌಲ್ಯದ 98,605.77 ಚದರ ಅಡಿ (9,160.70 ಚದರ ಮೀಟರ್) ಅಭಿವೃದ್ಧಿಪಡಿಸಿದ ಭೂಮಿಯನ್ನು ಹಂಚಿಕೆ ಮಾಡಿತು. ಇದು ಉಚ್ಚ ನ್ಯಾಯಾಲಯವು ಪರಿಹಾರವಾಗಿ ಮಂಜೂರು ಮಾಡಲು ಆದೇಶಿಸಿದ ಭೂಮಿ ಪ್ರಮಾಣಕ್ಕಿಂತ ಅಧಿಕವಾಗಿದ್ದಿತು. 2017–18ನೇ ಸಾಲಿನ ಮಾರ್ಗದರ್ಶಿ ಮೌಲ್ಯದ ಆಧಾರದ ಮೇಲೆ ಹೆಚ್ಚುವರಿಯಾಗಿ ಮಂಜೂರು ಮಾಡಲಾದ 9,307.77 ಚದರ ಅಡಿ (864.71 ಚದರ ಮೀಟರ್) ವಿಸ್ತೀರ್ಣದ ಭೂಮಿಯು ₹ 10.04 ಕೋಟಿ[83] ಮೌಲ್ಯದ್ದಾಗಿದ್ದಿತು.

ಹೀಗೆ, ಭೂಸ್ವಾಧೀನ ಕಾಯಿದೆ, 1894ರ ಅನ್ವಯ ಐತೀರ್ಪು ನೀಡಲಾದ ಅರ್ಹ ಪರಿಹಾರದ ಪಾವತಿಯನ್ನು ಮೇಲ್ವಿಚಾರಣೆ ಮಾಡುವಲ್ಲಿನ ಮತ್ತು ಖಚಿತಪಡಿಸಿಕೊಳ್ಳುವಲ್ಲಿನ ಬಿಡಿಎ ವಿಫಲತೆಯು ಭೂಸ್ವಾಧೀನವು ರದ್ದಾಗುವಲ್ಲಿ ಹಾಗೂ ತತ್ಪರಿಣಾಮವಾಗಿ ನ್ಯಾಯಾಂಗ ಪರಿಶೀಲನೆಗೆ ಕಾರಣವಾಯಿತು. ₹ 10.91 ಲಕ್ಷ ಮೂಲ ಐತೀರ್ಪಿಗೆ ಬದಲಾಗಿ ₹ 44.47 ಕೋಟಿ ಮೌಲ್ಯದ ಅಭಿವೃದ್ಧಿಪಡಿಸಿದ ನಿವೇಶನಗಳ ರೂಪದಲ್ಲಿ ಪರಿಹಾರವನ್ನು ನೀಡಲು ಬಿಡಿಎಗೆ ಅನಿವಾರ್ಯವಾಯಿತು. ಮೇಲಿನ ನಿವೇಶನಗಳ ಹಂಚಿಕೆಯಲ್ಲಿ ಹೆಚ್ಚಿನ ಕಾರ್ಯತತ್ಪರತೆಯ ಕೊರತೆಯು ₹ 10.04 ಕೋಟಿ ಮೌಲ್ಯದ 864.71 ಚದರ ಮೀಟರ್ ಬಿಡಿಎ ಭೂಮಿಯ ಹೆಚ್ಚುವರಿ ಹಂಚಿಕೆಯಲ್ಲಿ ಪರಿಣಮಿಸಿತು.

ಈ ವಿಷಯವನ್ನು ಸರ್ಕಾರಕ್ಕೆ ಆಗಸ್ಟ್ 2021ರಲ್ಲಿ ತಿಳಿಸಲಾಯಿತು; ಅವರ ಪ್ರತಿಕ್ರಿಯೆಯನ್ನು ನಿರೀಕ್ಷಿಸಲಾಗಿದೆ (ಡಿಸೆಂಬರ್ 2021)

ಶಿಫಾರಸು

ಭೂಪರಿಹಾರದ ಪಾವತಿಯಲ್ಲಿ ಅಸಾಮಾನ್ಯ ವಿಳಂಬಕ್ಕಾಗಿ ಮತ್ತು ತತ್ಪರಿಣಾಮವಾಗಿ ಬಿಡಿಎಗೆ ಆಗಿರುವ ಆರ್ಥಿಕ ನಷ್ಟಕ್ಕಾಗಿ ಬಿಡಿಎ ಹೊಣೆಗಾರಿಕೆಯನ್ನು ನಿಗದಿಪಡಿಸಬೇಕು

[79] ಬಿಡಿಎ ಯೋಜನೆಗಳಿಗೆ ಭೂಸ್ವಾಧೀನದ ಸಂಬಂಧವಾಗಿ ಪರಿಹಾರ ಪಾವತಿಗಳನ್ನು ಮೇಲ್ವಿಚಾರಣೆ ಮಾಡಲು ನಿರ್ವಹಿಸಿರುವ ರಿಜಿಸ್ಟರ್.

[80] 2017–18ನೇ ಸಾಲಿನ ಸ್ಥಿರಾಸ್ತಿ ಮಾರ್ಗಸೂಚಿ ಮೌಲ್ಯದ ಆಧಾರದ ಮೇಲೆ–ಸಬ್‌ರಿಜಿಸ್ಟ್ರಾರ್, ಜೆಪಿ ನಗರ ವಲಯ.

[81] 2017–18ರ ಅವಧಿಯಲ್ಲಿ ಕೊತ್ತನೂರು ಗ್ರಾಮದಲ್ಲಿ ಚಾಲ್ತಿಯಲ್ಲಿದ್ದ ಪ್ರತಿ ಚದರ ಮೀಟರ್‌ಗೆ ₹ 41500/ ದರದಂತೆ ಲೆಕ್ಕ ಹಾಕಲಾಗಿದೆ.

[82] 1 ಚದರ ಮೀಟರ್ = 10.764 ಚದರ ಅಡಿ.

[83] ₹ 44.47 ಕೋಟಿ – ₹ 34.43 ಕೋಟಿ =₹ 10.04 ಕೋಟಿ.

2.9. ಶಂಕಿತ ನಕಲಿ ದಾಖಲೆಗಳ ಆಧಾರದ ಮೇಲೆ ಸಂಪೂರ್ಣ ಕ್ರಯಪತ್ರವನ್ನು ಕಾರ್ಯಗತಗೊಳಿಸುವುದು

ದಾಖಲೆಗಳ ಪ್ರಾಮಾಣಿಕತೆಯನ್ನು ಪರಿಶೀಲಿಸುವಲ್ಲಿನ ಆಂತರಿಕ ನಿಯಂತ್ರಣ ಕಾರ್ಯವಿಧಾನದ ವಿಫಲತೆಯು ಅರ್ಜಿದಾರರು ಕಾಲ್ಪನಿಕ ಮತ್ತು ಸುಳ್ಳು ದಾಖಲೆಗಳನ್ನು ಸಲ್ಲಿಸಲು ಅನುಕೂಲ ಮಾಡಿಕೊಟ್ಟಿತು ಮತ್ತು ಅದರ ಆಧಾರದ ಮೇಲೆ ಬಿಡಿಎ ₹ 10.05 ಕೋಟಿ ಮೌಲ್ಯದ ಭೂಮಿಗೆ ಸಂಪೂರ್ಣ ಕ್ರಯಪತ್ರವನ್ನು ಜಾರಿಗೊಳಿಸಿತು.

ಬೆಂಗಳೂರು ಮಹಾನಗರ ಪ್ರದೇಶದ ಅಭಿವೃದ್ಧಿಯನ್ನು ಉತ್ತೇಜಿಸಲು ಮತ್ತು ಅನುಕೂಲಿಸಲು ಬಿಡಿಎ ಕಾಯಿದೆ, 1976ರಡಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು (ಬಿಡಿಎ) ಸ್ಥಾಪಿಸಲಾಯಿತು. ಬಿಡಿಎ, ಇತರ ವಿಷಯಗಳ ನಡುವೆ, ಕೈಗೊಂಡ ಚಟುವಟಿಕೆಗಳು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದು ಮತ್ತು ಅಭಿವೃದ್ಧಿಪಡಿಸುವುದು ಹಾಗೂ ವಸತಿ, ವಾಣಿಜ್ಯ, ಇತ್ಯಾದಿ ವಿವಿಧ ಉದ್ದೇಶಗಳಿಗಾಗಿ ನಿವೇಶನಗಳನ್ನು ಹಂಚಿಕೆ ಮಾಡುವುದು ಬಿಡಿಎಯ ಕಾರ್ಯಚಟುವಟಿಕೆಗಳಾಗಿವೆ. ಬಿಡಿಎ (ನಿವೇಶನಗಳ ಹಂಚಿಕೆ) ನಿಯಮಗಳು, 1984ರ ಅನ್ವಯ ನಿವೇಶನಗಳ ಹಂಚಿಕೆ ಪ್ರಕ್ರಿಯೆಯನ್ನು ಕೆಳಗಿನ ನಕ್ಷೆಯಲ್ಲಿ ತೋರಿಸಲಾಗಿದೆ.

ನಕ್ಷೆ–2.9.1: ಬಿಡಿಎಯಿಂದ ನಿವೇಶನಗಳ ಹಂಚಿಕೆಗಾಗಿನ ಪ್ರಕ್ರಿಯೆ



10 ವರ್ಷಗಳ ತಾತ್ಕಾಲಿಕ ಹಂಚಿಕೆ ಮತ್ತು ಗುತ್ತಿಗೆ ಕ್ರಯಪತ್ರ ಷರತ್ತುಗಳನ್ನು ಪೂರೈಸಿದ ನಂತರ ಹಂಚಿಕೆದಾರರಿಗೆ ಸಂಪೂರ್ಣ ಕ್ರಯ ಪತ್ರವನ್ನು ಜಾರಿಗೊಳಿಸುವ ಅಧಿಕಾರವನ್ನು ಬಿಡಿಎ ಉಪ ಕಾರ್ಯದರ್ಶಿಗಳಿಗೆ ವಹಿಸಲಾಗಿದೆ. ಸಂಪೂರ್ಣ ಕ್ರಯಪತ್ರವನ್ನು ಜಾರಿಗೊಳಿಸುವ ಸಮಯದಲ್ಲಿ ಹಂಚಿಕೆ ಪತ್ರ, ಮೂಲ ಚಲನ್ (ನಿವೇಶನ ಮೌಲ್ಯದ ಪಾವತಿಯ ಪುರಾವೆ), ಗುತ್ತಿಗೆ ಕ್ರಯಪತ್ರ ಇತ್ಯಾದಿಗಳಂತಹ ಮೂಲ ದಾಖಲೆಗಳ ದೃಢೀಕರಣ ಮತ್ತು ನೈಜತೆಯನ್ನು ಖಚಿತಪಡಿಸಿಕೊಳ್ಳುವುದು ಅಗತ್ಯವಾಗಿತ್ತು.

2017–18ರಿಂದ 2018–19ರ ಅವಧಿಯಲ್ಲಿ ಬಿಡಿಎ ಒಟ್ಟು 12,771 ಸಂಪೂರ್ಣ ಕ್ರಯಪತ್ರಗಳನ್ನು ಜಾರಿಗೊಳಿಸಿತ್ತು. ಅವುಗಳಲ್ಲಿ ವಿವರವಾದ ಪರಿಶೀಲನೆಗಾಗಿ ಲೆಕ್ಕಪರಿಶೋಧನೆಯು 131 ಸಂಪೂರ್ಣ ಕ್ರಯಪತ್ರಗಳನ್ನು ಆಯ್ಕೆ ಮಾಡಿತು. ಆದರೆ, ಬಿಡಿಎ 19 ಸಂಪೂರ್ಣ ಕ್ರಯಪತ್ರಗಳಿಗೆ ಸಂಬಂಧಿಸಿದಂತೆ ಮಾತ್ರ ದಾಖಲೆಗಳನ್ನು ಒದಗಿಸಿತು ಮತ್ತು ಉಳಿದ 112 ಸಂಪೂರ್ಣ ಕ್ರಯಪತ್ರಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಲೆಕ್ಕಪರಿಶೋಧನೆಯ ವಿನಂತಿಯ ಹೊರತಾಗಿಯೂ ಪರಿಶೀಲನೆಗಾಗಿ ಲಭ್ಯಗೊಳಿಸಲಿಲ್ಲ. 19 ಸಂಪೂರ್ಣ ಕ್ರಯಪತ್ರಗಳಲ್ಲಿ 14ರಲ್ಲಿ ಈ ಕೆಳಗಿನ ಅಕ್ರಮಗಳನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇವುಗಳ ಮಾರಾಟ ಮೌಲ್ಯವು ಮುದ್ರಾಂಕ ಮತ್ತು ನೋಂದಣಿ ಇಲಾಖೆಯು ನಿಗದಿಪಡಿಸಿದ್ದ ಮಾರ್ಗದರ್ಶಿ ಮೌಲ್ಯದ (2018–19) ಅನ್ವಯ ₹ 13.75 ಕೋಟಿಯಾಗಿತ್ತು. ಈ 14 ಪ್ರಕರಣಗಳ ಪ್ರತಿಯೊಂದು ನಿರ್ದಿಷ್ಟ ಅವಲೋಕನಗಳನ್ನು ***ಅನುಬಂಧ–14ರಲ್ಲಿ*** ನೀಡಲಾಗಿದೆ.

ನಗದು ಘೋಷ್ವಾರೆ ರಿಜಿಸ್ಟರ್‌ನಲ್ಲಿ ಕಾಲ್ಪನಿಕ ನಮೂದುಗಳನ್ನು ದಾಖಲಿಸಿರುವುದು

2.9.1. ತಾತ್ಕಾಲಿಕ ಹಂಚಿಕೆ ಪತ್ರದ ಆಧಾರದ ಮೇಲೆ, ಅರ್ಜಿದಾರರು ನಿವೇಶನ ಮೌಲ್ಯದ ಪೂರ್ಣ ಪಾವತಿಯನ್ನು ಮಾಡಬೇಕು ಮತ್ತು ನಂತರ ಬಿಡಿಎಯೊಂದಿಗೆ ಗುತ್ತಿಗೆ ಕ್ರಯಪತ್ರವನ್ನು ಕಾರ್ಯಗತ ಗೊಳಿಸಬೇಕು. ಅರ್ಜಿದಾರರು ಮಾಡಿದ ಅಂತಹ ಪಾವತಿಗಳನ್ನು ಬಿಡಿಎಯಲ್ಲಿ ನಿರ್ವಹಿಸಲಾದ ನಗದು

ಗೋಷ್ವಾರೆ ರಿಜಿಸ್ಟರ್‌ನಲ್ಲಿ ದಾಖಲಿಸಲಾಗುತ್ತದೆ. 14ರಲ್ಲಿ ಏಳು ಪ್ರಕರಣಗಳಲ್ಲಿ (***ಅನುಬಂಧ–14ರ*** ಕ್ರಮಸಂಖ್ಯೆ 1ರಿಂದ 5, 12 ಮತ್ತು 14), ಮಾರ್ಚ್ 1983 ಮತ್ತು ಫೆಬ್ರವರಿ 1988 ರ ನಡುವಿನ ಅವಧಿಯಲ್ಲಿ ಹಂಚಿಕೆಯಾದ 13,200 ಚದರ ಅಡಿಗಳ (ವಿವಿಧ ಅಳತೆಗಳ ಏಳು ನಿವೇಶನಗಳು) ನಿವೇಶನಕ್ಕೆ ಪ್ರತಿಯಾಗಿ ಹಂಚಿಕೆದಾರರು ₹ 2,13,596 ಮೊತ್ತವನ್ನು ಪಾವತಿಸಿರುವುದಾಗಿ ನಗದು ಘೋಷ್ವಾರೆ ರಿಜಿಸ್ಟರ್‌ನಲ್ಲಿ ನಮೂದಿಸಲಾಗಿತ್ತು.



ಚಿತ್ರ ಸಂಖ್ಯೆ 2.9.1 ಕ್ರಮ ಸಂಖ್ಯೆ 16ರವರೆಗೆ ಮತ್ತು ₹ 1,91,500 ಒಟ್ಟು ಮೊತ್ತವನ್ನು ತೋರಿಸುವ ಸಿಎ ರಿಜಿಸರ್‌ನ ಸ್ಕಾನಡ್ ಪತಿ.



ಚಿತ್ರ ಸಂಖ್ಯೆ. 2.9.2 ಕ್ರಮಸಂಖ್ಯೆ 17ನ್ನು ಹಾಗೂ ₹ 2,42,500 ಒಟ್ಟು ಮೊತ್ತವನ್ನು ತಿದ್ದಿರುವ ಸಿಎ ರಿಜಿಸ್ಟರ್.

ಮೇಲಿನ ಪಾವತಿಗಳನ್ನು ಪೋಷಕ ದಾಖಲೆಗಳೊಂದಿಗೆ ಬ್ಯಾಂಕ್ ಸ್ಟೇಟ್‌ಮೆಂಟ್‌ಗಳಿಂದ ಲೆಕ್ಕಪರಿಶೋಧನೆಯು ಪತ್ತೆಹಚ್ಚಲು ಸಾಧ್ಯವಾಗಲಿಲ್ಲ, ಏಕೆಂದರೆ ಆಯಾ ಬ್ಯಾಂಕ್‌ಗಳು ದಾಖಲೆಗಳ ಧಾರಣ ಮತ್ತು ಸಂರಕ್ಷಣೆಯ ನೀತಿಯನ್ನು ಉಲ್ಲೇಖಿಸಿ ಲೆಕ್ಕಪರಿಶೋಧನೆಯೊಂದಿಗೆ ದಾಖಲೆಗಳನ್ನು ಹಂಚಿಕೊಳ್ಳಲಿಲ್ಲ. ಹಾಗಾಗಿ, ಮೇಲಿನ ಏಳು ಪ್ರಕರಣಗಳಿಗೆ ರಸೀತಿ ನಮೂದುಗಳನ್ನು (₹ 2,13,596) ದಾಖಲಿಸಿದ್ದ ಭೌತಿಕ ನಗದು ಘೋಷ್ವಾರೆ ರಿಜಿಸ್ಟರನ್ನು ಪರಿಶೀಲಿಸಲು ಲೆಕ್ಕಪರಿಶೋಧನೆಯು ಮೂಲ ನಗದು ಘೋಷ್ವಾರೆ ರಿಜಿಸ್ಟರ್‌ನ ಸ್ಕ್ಯಾನ್ ಮಾಡಿದ ಪ್ರತಿಗಳನ್ನು (2010–12ರಲ್ಲಿ ಸ್ಕ್ಯಾನ್ ಮಾಡಲಾದ ಮತ್ತು ಬಿಡಿಎಯಿಂದ ನಿರ್ವಹಿಸಲಾದ) ಅವಲಂಬಿಸಿತು. ಭೌತಿಕ ನಗದು ಘೋಷ್ವಾರೆ ರಿಜಿಸ್ಟರ್‌ನಲ್ಲಿ ದಾಖಲಿಸಲಾದ ಈ ನಮೂದುಗಳು ನಗದು ಘೋಷ್ವಾರೆ ರಿಜಿಸ್ಟರ್‌ನ ಸ್ಕ್ಯಾನ್ ಮಾಡಿದ ಪ್ರತಿಗಳ ಅನುಗುಣವಾದ ಪುಟಗಳಲ್ಲಿ ಲಭ್ಯವಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಹಂಚಿಕೆದಾರರಿಂದ ವಾಸ್ತವವಾಗಿ ಮೊತ್ತವನ್ನು ಸ್ವೀಕರಿಸದೇ ನಗದು ಘೋಷ್ವಾರೆ ರಿಜಿಸ್ಟರನ್ನು ಕಾಲ್ಪನಿಕ ನಮೂದುಗಳ ಮೂಲಕ ತಿದ್ದಲಾಗಿತ್ತು ಎಂಬುದನ್ನು ಇದು ಸೂಚಿಸುತ್ತದೆ. ನಗದು ಘೋಷ್ವಾರೆ ರಿಜಿಸ್ಟರ್‌ನ ಪುಟವಾರು ಮೊತ್ತಗಳನ್ನು ಸಹ ಕಾಲ್ಪನಿಕ ನಮೂದುಗಳಿಗೆ ಹೊಂದಿಸಲು ಬದಲಾಯಿಸಲಾಗಿತ್ತು ಎಂಬುದನ್ನು ಸಹ ಗಮನಿಸಲಾಯಿತು.

ಪಾವತಿಗಳನ್ನು ನಗರ ಘೋಷ್ವಾರೆ ರಿಜಿಸ್ಟರ್‌ನಲ್ಲಿ ನಮೂದಿಸಿರಲಿಲ್ಲ

2.9.2. ಉಳಿದ ಏಳು ಪ್ರಕರಣಗಳಲ್ಲಿ (***ಅನುಬಂಧ–14ರ ಕ್ರಮ ಸಂಖ್ಯೆ 6ರಿಂದ 11 ಮತ್ತು 13***) ಫೆಬ್ರವರಿ 1976 ಮತ್ತು ಫೆಬ್ರವರಿ 1988ರ ನಡುವಿನ ಅವಧಿಯಲ್ಲಿ ಏಳು ನಿವೇಶನಗಳ 9,700 ಚದರ ಅಡಿ ಹಂಚಿಕೆಗೆ ಸಂಬಂಧಿಸಿದಂತೆ ₹ 1,27,345 ಮೊತ್ತವನ್ನು ನಗದು ಘೋಷ್ವಾರೆ ರಿಜಿಸ್ಟರ್‌ನಲ್ಲಿ ಪತ್ತೆ ಹಚ್ಚಲಾಗಲಿಲ್ಲ. ಇದು ಮೊತ್ತವನ್ನು ಬಿಡಿಎ ಖಾತೆಗೆ ಜಮೆ ಮಾಡಿರಲಿಲ್ಲ ಎಂಬುದನ್ನು ಸೂಚಿಸುತ್ತದೆ.

ಕೃತ್ರಿಮವಾಗಿ ತಯಾರಿಸಿದ ಗುತ್ತಿಗೆ ಕ್ರಯಪತ್ರಗಳು

2.9.3 ಸಂಪೂರ್ಣ ಕ್ರಯಪತ್ರವನ್ನು ಜಾರಿಮಾಡಲು 14 ಹಂಚಿಕೆದಾರರು ಸಲ್ಲಿಸಿದ ಗುತ್ತಿಗೆ ಕ್ರಯಪತ್ರಗಳನ್ನು ಪ್ರಮಾಣೀಕೃತ ಗುತ್ತಿಗೆ ಕ್ರಯಪತ್ರಗಳೊಂದಿಗೆ ಮತ್ತು ಸಂಬಂಧಿತ ಸಬ್–ರಿಜಿಸ್ಟ್ರಾರ್

ಕಛೇರಿಯಿಂದ ಪಡೆದ ಋಣಭಾರ ಪತ್ರಗಳೊಂದಿಗೆ[84] (ಇಸಿ) ಲೆಕ್ಕಪರಿಶೋಧನೆಯು ಮತ್ತಷ್ಟು ಪರಿಶೀಲಿಸಿತು. 11[85] ಅರ್ಜಿದಾರರು ಸಲ್ಲಿಸಿದ್ದ ಗುತ್ತಿಗೆ ಕ್ರಯಪತ್ರಗಳಲ್ಲಿ ನಮೂದಾಗಿದ್ದ ವಿಶಿಷ್ಟ ದಾಖಲೆ ಸಂಖ್ಯೆಗಳು[86] ಆ ಅರ್ಜಿದಾರರ ಹೆಸರಿನಲ್ಲಿ ನೋಂದಾಯಿಸಲ್ಪಟ್ಟಿಲ್ಲದಿರುವುದನ್ನು ಮತ್ತು ಎರಡು ಪ್ರಕರಣಗಳಲ್ಲಿ (***ಅನುಬಂಧ–14ರ*** ಕ್ರಮಸಂಖ್ಯೆ 6 ಮತ್ತು 11), ವಿಶಿಷ್ಟ ದಾಖಲೆ ಸಂಖ್ಯೆಯು



ಚಿತ್ರ ಸಂಖ್ಯೆ. 2.9.3 ಸಬ್‌ರಿಜಿಸ್ಟ್ರಾರ್ ಪ್ರಮಾಣೀಕರಿಸಿದ ಶ್ರೀ ಯರಪ್ಪ ಅವರ ಹೆಸರಿನಲ್ಲಿರುವ ಎಲ್‌ಸಿಎಸ್‌ಡಿ ಸಂಖ್ಯೆ 6378



ಚಿತ್ರ ಸಂಖ್ಯೆ. 2.9.4 ಸಬ್‌ರಿಜಿಸ್ಟ್ರಾರ್ ದಾಖಲೆಗಳಲ್ಲಿ ಇರದ ಶ್ರೀಮತಿ ಶಾಂತಮ್ಮ ಹೆಸರಿನಲ್ಲಿರುವ ಎಲ್‌ಸಿಎಸ್‌ಡಿ ಸಂಖ್ಯೆ 6378

ಸಬ್‌ರಿಜಿಸ್ಟ್ರಾರ್‌ರವರ ದಾಖಲೆಗಳಲ್ಲಿ ಇಲ್ಲದಿರುವುದನ್ನು ಗಮನಿಸಲಾಯಿತು. ಉಳಿದ ಒಂದು ಪ್ರಕರಣದಲ್ಲಿ (***ಅನುಬಂಧ–14ರ*** ಕ್ರಮ ಸಂಖ್ಯೆ–12), ಗುತ್ತಿಗೆ ಕ್ರಯಪತ್ರವನ್ನು ಜಾರಿ ಮಾಡಿರುವುದನ್ನು (ಸೆಪ್ಟೆಂಬರ್ 1988) ಸಬ್‌ರಿಜಿಸ್ಟ್ರಾರ್‌ರವರು ದೃಢೀಕರಿಸಿದರೂ ಸಹ ವಹಿವಾಟನ್ನು ಇಸಿಯಲ್ಲಿ ದಾಖಲಿಸಿರಲಿಲ್ಲ. ಇದಲ್ಲದೆ, ಎಲ್ಲಾ 14 ಪ್ರಕರಣಗಳಲ್ಲಿ, ಸಬ್‌ರಿಜಿಸ್ಟ್ರಾರ್‌ರಿಂದ ಪಡೆದ ಪ್ರಮಾಣೀಕೃತ ಇಸಿಗಳು ಗುತ್ತಿಗೆ ಕ್ರಯಪತ್ರಗಳ ವಹಿವಾಟುಗಳನ್ನು ದಾಖಲಿಸಿರಲಿಲ್ಲ. ಹೀಗೆ, ಸಂಪೂರ್ಣ ಕ್ರಯಪತ್ರಗಳನ್ನು ತೀರ್ಮಾನಿಸಲು ಅರ್ಜಿದಾರರು ಸಲ್ಲಿಸಿದ ಗುತ್ತಿಗೆ ಕ್ರಯಪತ್ರಗಳು (ಫೆಬ್ರವರಿ 1976ರಿಂದ ಫೆಬ್ರವರಿ 1988ರ ಅವಧಿಯಲ್ಲಿ ಜಾರಿಗೊಳಿಸಲಾಗಿದೆ ಎಂದು ಹೇಳಲಾದ) ನಕಲಿಯಾಗಿದ್ದವು ಮತ್ತು ಈ 14 ಅರ್ಜಿದಾರರಿಗೆ ನಿವೇಶನಗಳ ಹಂಚಿಕೆಯು ಕ್ರಮಬದ್ಧವಾಗಿರಲಿಲ್ಲ.

ನಕಲಿ ಹಂಚಿಕೆಗಳು

2.9.4. ನಗದು ಘೋಷ್ವಾರೆ ರಿಜಿಸ್ಟರ್‌ನ ಋಜುಮಾರ್ಗವಲ್ಲದ ರೀತಿಯಲ್ಲಿ ತಿದ್ದಿರುವ ಮತ್ತು ನಕಲಿ ಗುತ್ತಿಗೆ ಕ್ರಯಪತ್ರಗಳ ತಯಾರಿಕೆಯ ಮೇಲಿನ ಅಂಶವನ್ನು, ಹಿಂದೆ ಹಂಚಲಾಗಿದ್ದ ನಿವೇಶನಗಳನ್ನು ಕಾಲ್ಪನಿಕ ಗುತ್ತಿಗೆ ಕ್ರಯಪತ್ರಗಳ ಆಧಾರದ ಮೇಲೆ ಇತರ ಅರ್ಜಿದಾರರಿಗೆ ಮರು–ಹಂಚಿಕೆ ಮಾಡಲಾಗಿರುವ ಈ ಕೆಳಗಿನ ಮೂರು ನಿದರ್ಶನಗಳಿಂದ (14 ಪ್ರಕರಣಗಳಲ್ಲಿ) ಮತ್ತಷ್ಟು ದೃಢಪಡಿಸಬಹುದು. ಕೆಳಗಿನ ಕೋಷ್ಟಕವು ಇಬ್ಬರು ಅರ್ಜಿದಾರರಿಗೆ ಒಂದೇ ನಿವೇಶನದ ಹಂಚಿಕೆಯನ್ನು ಸೂಚಿಸುತ್ತದೆ, ಎರಡನೇ ಹಂಚಿಕೆಯನ್ನು ನಕಲಿ ಗುತ್ತಿಗೆ ಕ್ರಯಪತ್ರದ ಆಧಾರದ ಮೇಲೆ ಮಾಡಲಾಗಿದೆ.

[84] ಆಸ್ತಿಯೊಂದಕ್ಕೆ ಸಂಬಂಧಿಸಿದ ಎಲ್ಲ ನೋಂದಾಯಿತ ವಹಿವಾಟುಗಳನ್ನು ಸಬ್–ರಿಜಿಸ್ಟ್ರಾರ್ ನೀಡುವ ಋಣಭಾರ ಪತ್ರವು ತೋರಿಸುತ್ತದೆ.

[85] ***ಅನುಬಂಧ–14ರ*** ಕ್ರಮಸಂಖ್ಯೆ 1ರಿಂದ 5, 7ರಿಂದ 10, 13 ಮತ್ತು 14.

[86] ನೋಂದಣಿ ಅಧಿನಿಯಮ, 1908ರ ಪರಿಚ್ಛೇದ 52 ಮತ್ತು 53ರ ಅನ್ವಯ ನೋಂದಣಿಗೆ ಸ್ವೀಕೃತವಾದ ಪ್ರತಿಯೊಂದು ದಾಖಲೆಯನ್ನು ಸರಣಿಯಲ್ಲಿ ಅಂಕೀಕೃತಗೊಳಿಸಲಾಗುತ್ತದೆ ಮತ್ತು ಆ ಉದ್ದೇಶಕ್ಕಾಗಿ ನಿರ್ವಹಿಸಿದ ರಿಜಿಸ್ಟರ್‌ನಲ್ಲಿ ದಾಖಲಿಸಲಾಗುತ್ತದೆ.

ಕೋಷ್ಟಕ ಸಂಖ್ಯೆ –2.9.1: ವಿಭಿನ್ನ ಅರ್ಜಿದಾರರಿಗೆ ಒಂದೇ ನಿವೇಶನವನ್ನು ಎರಡು ಬಾರಿ ಹಂಚಿಕೆ ಮಾಡಿರುವುದು

ಕ್ರಮ ಸಂಖ್ಯೆ	ಹಂಚಿಕೆ ಮಾಡಿದ ನಿವೇಶನದ ವಿವರಗಳು	ಮೂಲತ: ನಿವೇಶನವನ್ನು ಹಂಚಿಕೆ ಮಾಡಲಾಗಿದ್ದ ಅರ್ಜಿದಾರರು		ನಕಲಿ ಗುತ್ತಿಗೆ ಕ್ರಯಪತ್ರದೊಂದಿಗೆ ನಂತರ ನಿವೇಶನವನ್ನು ಹಂಚಿಕೆ ಮಾಡಲಾಗಿದ್ದ ಅರ್ಜಿದಾರರು	
		ಹಂಚಿಕೆದಾರರ ಹೆಸರು	ಸಂಪೂರ್ಣ ಕ್ರಯಪತ್ರದ ದಿನಾಂಕ	ಹಂಚಿಕೆದಾರರ ಹೆಸರು	ಸಂಪೂರ್ಣ ಕ್ರಯಪತ್ರದ ದಿನಾಂಕ
(ಎ)	(ಬಿ)	(ಸಿ)	(ಡಿ)	(ಇ)	(ಎಫ್)
1	ನಿವೇಶನ ಸಂಖ್ಯೆ:895/ಎ, ಹೆಚ್‌ಬಿಆರ್ ಬಡಾವಣೆ, 1ನೇ ಹಂತ, 4ನೇ ಬ್ಲಾಕ್ (2,400 ಚದರ ಅಡಿ)	ಶ್ರೀ ಎಮ್ ಚನ್ನಕೇಶವ ನಾಯಕ್	15.7.2004	ಶ್ರೀ ಬಿ ಹನುಮಪ್ಪ	21.12.2017
2	ನಿವೇಶನ ಸಂಖ್ಯೆ:1625, ಹೆಚ್‌ಬಿಆರ್ ಬಡಾವಣೆ, 1ನೇ ಹಂತ, 4ನೇ ಬ್ಲಾಕ್ (1,200 ಚದರ ಅಡಿ)	ಶ್ರೀ ಮುನಿರಾಜ್ ಮತ್ತು ಶ್ರೀ ಮಂಜುನಾಥ್	21.01.2016	ಶ್ರೀಮತಿ ಸಿಎಸ್ ರುಕ್ಮಿಣಿ	26.2.2016
3	ನಿವೇಶನ ಸಂಖ್ಯೆ: ಹೆಚ್‌ಬಿಆರ್ ಬಡಾವಣೆ, 1ನೇ ಹಂತ, 2ನೇ ಬ್ಲಾಕ್ (2,400 ಚದರ ಅಡಿ)	ಶ್ರೀ ಡಿಎನ್ ವಸಂತಕುಮಾರ್	03.04.2003	ಶ್ರೀಮತಿ ಶಾಂತಮ್ಮ	13.6.2018

ಈಗಾಗಲೇ ಹಂಚಿಕೆ ಮಾಡಿರುವ ನಿವೇಶನಗಳನ್ನು, ನಕಲಿ ಗುತ್ತಿಗೆ ಕ್ರಯಪತ್ರದ ಆಧಾರದ ಮೇಲೆ ಸಂಪೂರ್ಣ ಕ್ರಯಪತ್ರಗಳನ್ನು ಜಾರಿಗೊಳಿಸಿ, ಕೋಷ್ಟಕದ ಕಾಲಂ (ಇ) ನಲ್ಲಿರುವ ಅರ್ಜಿದಾರರಿಗೆ ಮರುಹಂಚಿಕೆ ಮಾಡಿರುವುದು ಮೇಲಿನ ಕೋಷ್ಟಕದಿಂದ ಸಾಬೀತಾಗುತ್ತದೆ. ಮೇಲಿನ ಮೂರು ಮೂಲ ಹಂಚಿಕೆದಾರರಲ್ಲಿ ಒಬ್ಬರು (ಕೋಷ್ಟಕದ ಕಾಲಂ (ಸಿ)) ಮರುಹಂಚಿಕೆಯನ್ನು ಪ್ರಶ್ನಿಸಿ ಬಿಡಿಎ ವಿರುದ್ಧ ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುವುದನ್ನು ಗಮನಿಸಲಾಯಿತು.

ಪರ್ಯಾಯ ನಿವೇಶನಗಳ ಹಂಚಿಕೆ

2.9.5. ಹಂಚಿಕೆಯಲ್ಲಿ ಪ್ರಾಧಿಕಾರದ ಕಡೆಯಿಂದ ತಪ್ಪಾದರೆ ಮತ್ತು/ಅಥವಾ ತಡೆಯಾಜ್ಞೆ/ವಿವಾದಗಳ ಕಾರಣ ಮೂಲತಃ ಮಂಜೂರು ಮಾಡಿದ ನಿವೇಶನಗಳ ಸ್ವಾಧೀನವನ್ನು ಹಂಚಿಕೆದಾರರಿಗೆ ನೀಡಲಾಗದಿದ್ದರೆ ಪರ್ಯಾಯ ನಿವೇಶನದ ಹಂಚಿಕೆ ಮಾಡಬಹುದು ಎಂದು ಬಿಡಿಎ (ನಿವೇಶನಗಳ ಹಂಚಿಕೆ) ನಿಯಮಗಳು, 1984 ನಿಗದಿಪಡಿಸುತ್ತದೆ. ಎರಡು ಪ್ರಕರಣಗಳಲ್ಲಿ (***ಅನುಬಂಧ–14ರ*** ಕ್ರಮ ಸಂಖ್ಯೆ. 10 ಮತ್ತು 11), ಹಂಚಿಕೆ ನಿಯಮಗಳನ್ನು ಉಲ್ಲಂಘಿಸಿ ಹಂಚಿಕೆದಾರರ ಕೋರಿಕೆಯ ಮೇಲೆ, ಹಂಚಿಕೆಯಾಗಿದ್ದ ನಿವೇಶನಕ್ಕೆ ಬದಲಾಗಿ ನಕಲಿ ಗುತ್ತಿಗೆ ಕ್ರಯಪತ್ರದ ಆಧಾರದ ಮೇಲೆ ಹಂಚಿಕೆಯಾಗಿದ್ದ ನಿವೇಶನಕ್ಕೆ ಸಂಪೂರ್ಣ ಕ್ರಯಪತ್ರವನ್ನು ಜಾರಿಗೊಳಿಸಿರುವುದನ್ನು ಗಮನಿಸಲಾಯಿತು.

ರಾಜ್ಯ ಬೊಕ್ಕಸಕ್ಕೆ ನಷ್ಟ

2.9.6. ಸಂಪೂರ್ಣ ಕ್ರಯಪತ್ರ ನೋಂದಣಿಯ ದಿನಾಂಕದಿಂದ ಎರಡರಿಂದ ಹನ್ನೆರಡು ತಿಂಗಳೊಳಗೆ 14ರಲ್ಲಿ 13 ಹಂಚಿಕೆದಾರರು ತಮ್ಮ ನಿವೇಶನಗಳನ್ನು (***ಅನುಬಂಧ–14ರ*** ಕ್ರಮಸಂಖ್ಯೆ ನಂ.10 ಹೊರತುಪಡಿಸಿ) ಮಾರಾಟ ಮಾಡಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ವಂಚನೆಯ ಮೂಲಕ ತ್ವರಿತವಾಗಿ ಹಣ ಸಂಪಾದಿಸುವುದು ಅರ್ಜಿದಾರರ ಉದ್ದೇಶವಾಗಿತ್ತು ಎಂಬುದನ್ನು ಇದು ಸೂಚಿಸುತ್ತದೆ. ನಕಲಿ ದಾಖಲೆಗಳ ಆಧಾರದ ಮೇಲೆ ನೀಡಲಾದ 11 ನಿವೇಶನಗಳನ್ನು ಬಿಡಿಎ ಕೈಬಿಡಬೇಕಾಯಿತು. ಈ 11 ನಿವೇಶನಗಳ ಮಾರ್ಗಸೂಚಿ ಮೌಲ್ಯವು (***ಅನುಬಂಧ–14ರ*** ಕ್ರಮಸಂಖ್ಯೆ 12, 13 ಮತ್ತು 14ಗಳನ್ನು ಹೊರತುಪಡಿಸಿ–ಈ ನಿವೇಶನಗಳು ಮರುಹಂಚಿಕೆಯಾಗಿದ್ದವು) ₹ 10.05 ಕೋಟಿಗಳಾಗಿದ್ದಿತು.

ಆಂತರಿಕ ನಿಯಂತ್ರಣಗಳ ಅನುಪಸ್ಥಿತಿ

2.9.7. ಆಂತರಿಕ ನಿಯಂತ್ರಣಗಳಲ್ಲಿ ಲೆಕ್ಕಪರಿಶೋಧನೆಯು ಈ ಕೆಳಗಿನ ಲೋಪಗಳನ್ನು ಗಮನಿಸಿತು:

- ಹಂಚಿಕೆ ರಿಜಿಸ್ಟರ್‌ನಲ್ಲಿ ನಿವೇಶನ ಸಂಖ್ಯೆಗಳನ್ನು ಕ್ರಮವಾಗಿ ನಮೂದು ಮಾಡಿರಲಿಲ್ಲ. ಇದು ಕಾಲ್ಪನಿಕ/ನಕಲು ನಮೂದುಗಳನ್ನು ಕೈಚಳಕದಿಂದ ಸೇರಿಸುವುದಕ್ಕೆ ಅನುಕೂಲ ಮಾಡಿಕೊಟ್ಟಿತು.

- ಸಂಪೂರ್ಣ ಕ್ರಯಪತ್ರವನ್ನು ಜಾರಿಗಳಿಸುವ ಅಧಿಕಾರವಿದ್ದ ಉಪ ಕಾರ್ಯದರ್ಶಿಗಳು ಹಂಚಿಕೆದಾರರು ಸಲ್ಲಿಸಿದ್ದ ಗುತ್ತಿಗೆ ಕ್ರಯಪತ್ರದ ನಿಖರತೆಯನ್ನು ಖಚಿತಪಡಿಸಿಕೊಳ್ಳಲು ವಿಫಲರಾದರು. ಸಬ್‌ರಿಜಿಸ್ಟ್ರಾರ್‌ಗಳು ನಿರ್ವಹಿಸಿದ್ದ ದಾಖಲೆಗಳೊಂದಿಗೆ ಗುತ್ತಿಗೆ ಕ್ರಯಪತ್ರಗಳನ್ನು ಪರಿಶೀಲಿಸಲು ಯಾವುದೇ ವ್ಯವಸ್ಥೆ ಇರಲಿಲ್ಲವಾಗಿ ಸಂಪೂರ್ಣ ಕ್ರಯಪತ್ರಗಳನ್ನು ಜಾರಿಗೊಳಿಸುವ ಸಮಯದಲ್ಲಿ ಗುತ್ತಿಗೆ ಕ್ರಯಪತ್ರಗಳ ನಿಖರತೆಯನ್ನು ಪರಿಶೀಲಿಸಲು ಯಾವುದೇ ಮಾರ್ಗಗಳು ಇರಲಿಲ್ಲ.

- ಹಂಚಿಕೆಯಾಗದ/ಒಂಟಿ ನಿವೇಶನಗಳಿಗಾಗಿ ವಾಚ್ ರಿಜಿಸ್ಟರನ್ನು ನಿರ್ವಹಿಸಿರಲಿಲ್ಲ ಮತ್ತು ಮೇಲ್ವಿಚಾರಣೆ ಮಾಡಿರಲಿಲ್ಲ. ಇದು ನಕಲಿ ಗುತ್ತಿಗೆ ಕ್ರಯಪತ್ರಗಳನ್ನು ಸೃಷ್ಟಿಸುವ ಮೂಲಕ ನಕಲಿ ಸಂಪೂರ್ಣ ಕ್ರಯಪತ್ರಗಳನ್ನು ಜಾರಿಗೊಳಿಸಲು ಅನುಕೂಲವಾಗುತ್ತದೆ.

ಈ ವಿಷಯವನ್ನು ಸರ್ಕಾರಕ್ಕೆ ಅಕ್ಟೋಬರ್ 2021ರಲ್ಲಿ ತಿಳಿಸಲಾಯಿತು; ಸರ್ಕಾರದ ಉತ್ತರವನ್ನು ನಿರೀಕ್ಷಿಸಲಾಗಿದೆ.

ನಿರ್ಣಯ

ಕಾಲ್ಪನಿಕ ನಮೂದುಗಳ ಮೂಲಕ ನಗದು ಘೋಷ್ವಾರೆ ರಿಜಿಸ್ಟರನ್ನು ಋಜುಮಾರ್ಗವಲ್ಲದ ರೀತಿಯಲ್ಲಿ ತಿದ್ದಿ ಮತ್ತು ನಕಲಿ ಗುತ್ತಿಗೆ ಪ್ರಮಾಣಪತ್ರದ ಆಧಾರದ ಮೇಲೆ ಬಿಡಿಎ 14 ಸಂಪೂರ್ಣ ಕ್ರಯಪತ್ರಗಳನ್ನು ಜಾರಿಮಾಡಿದ್ದು ಹಂಚಿಕೆದಾರರಿಗೆ ಅನಗತ್ಯ ಲಾಭಗಳನ್ನು ನೀಡಿದಂತಾಯಿತು. 11 ಪ್ರಕರಣಗಳಲ್ಲಿ ಬಿಡಿಎಗೆ ಕನಿಷ್ಠ ₹ 10.05 ಕೋಟಿ ನಷ್ಟವಾಗಿದೆ ಮತ್ತು ಉಳಿದ ಮೂರು ಪ್ರಕರಣಗಳಲ್ಲಿ ಬಿಡಿಎ ನಿವೇಶನಗಳನ್ನು ಬಹು ಫಲಾನುಭವಿಗಳಿಗೆ ಹಂಚಿಕೆ ಮಾಡಿರುವುದು ಕಾನೂನು ತೊಡಕುಗಳಿಂದ ಕೂಡಿದೆ.

ಶಿಫಾರಸು:

- **ಮೇಲೆ ಗಮನಿಸಿದ ನ್ಯೂನತೆಗಳಿಗೆ ಹೊಣೆಗಾರಿಕೆಯನ್ನು ನಿಗದಿಪಡಿಸಲು ಬಿಡಿಎ ಕ್ರಮ ವಹಿಸತಕ್ಕದ್ದು.**
- **ಹಂಚಿಕೆಗಳನ್ನು ಅಗತ್ಯವಿರುವ ನಿಯಮಾವಳಿಗಳ ಅನುಸಾರ ಮಾಡಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಬಿಡಿಎ ಆಂತರಿಕವಾಗಿ ಪರೀಕ್ಷೆಯನ್ನು ಜಾರಿಗೊಳಿಸಬೇಕು.**

2.10. ಸೇವಾ ತೆರಿಗೆ ಪಾವತಿಗೆ ಶಾಸನಬದ್ಧ ನಿಬಂಧನೆಗಳನ್ನು ಪಾಲಿಸದಿರುವ ಕಾರಣ ತಪ್ಪಿಸಬಹುದಾಗಿದ್ದ ಆರ್ಥಿಕ ಹೊರೆ

ಸೇವಾ ತೆರಿಗೆ ಪಾವತಿಯಲ್ಲಿನ ವಿಳಂಬದ ಜೊತೆಗೆ ಸಿಂಧುತ್ವದ ಸಮಯದೊಳಗೆ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಕ್ಲೈಮ್ ಮಾಡುವಲ್ಲಿನ ವಿಫಲತೆಯು ₹ 6.26 ಕೋಟಿಯ ತಪ್ಪಿಸಬಹುದಾಗಿದ್ದ ಆರ್ಥಿಕ ಹೊರೆಯಲ್ಲಿ ಪರಿಣಮಿಸಿತು.

16 ಜೂನ್ 2005ರಿಂದ ಜಾರಿಗೆ ಬರುವಂತೆ ಭಾರತ ಸರ್ಕಾರವು 'ಕಾಂಪ್ಲೆಕ್ಸ್‌ಗಳ ನಿರ್ಮಾಣ'ಕ್ಕೆ ಸಂಬಂಧಿಸಿದ ಸೇವೆಗಳನ್ನು ಸೇವಾ ತೆರಿಗೆಯ ವ್ಯಾಪ್ತಿಯಲ್ಲಿ ಸೇರಿಸಿತು. 'ಕಾಂಪ್ಲೆಕ್ಸ್‌ಗಳ ನಿರ್ಮಾಣ'ವನ್ನು ಸಕ್ಷಮ ಪ್ರಾಧಿಕಾರದಿಂದ ಪೂರ್ಣಗೊಂಡ ಪ್ರಮಾಣಪತ್ರವನ್ನು ನೀಡಿದ ನಂತರ ಸಂಪೂರ್ಣ ಕಟ್ಟಡವನ್ನು ಸ್ವೀಕರಿಸಿದ ಹೊರತು ಖರೀದಿದಾರರಿಗೆ ಸಂಪೂರ್ಣವಾಗಿ ಅಥವಾ ಭಾಗಶಃ ಮಾರಾಟ ಮಾಡಲು ಉದ್ದೇಶಿಸಿರುವ ಕಾಂಪ್ಲೆಕ್ಸ್ ಅಥವಾ ಕಟ್ಟಡದ ನಿರ್ಮಾಣಕ್ಕಾಗಿ ಒದಗಿಸಲಾದ ಯಾವುದೇ ಸೇವೆ ಎಂದು ವ್ಯಾಖ್ಯಾನಿಸಲಾಗಿದೆ.

ಇದಲ್ಲದೆ, ಹಣಕಾಸು ಕಾಯಿದೆಯ ಸೆಕ್ಷನ್ 75ರ ಅನ್ವಯ, ಸೇವಾ ತೆರಿಗೆಯನ್ನು ಪಾವತಿಸಲು ಹೊಣೆಗಾರರಾಗಿರುವ ಪ್ರತಿಯೊಬ್ಬ ವ್ಯಕ್ತಿಯು, ನಿಗದಿತ ಅವಧಿಯೊಳಗೆ ತೆರಿಗೆ ಅಥವಾ ಅದರ ಯಾವುದೇ ಭಾಗವನ್ನು ಕೇಂದ್ರ ಸರ್ಕಾರದ ಖಾತೆಗೆ ಜಮಾ ಮಾಡಲು ವಿಫಲರಾದರೆ, ವರ್ಷಕ್ಕೆ ಶೇಕಡಾ ಹತ್ತಕ್ಕಿಂತ ಕಡಿಮೆಯಿಲ್ಲದ ಮತ್ತು ಶೇಕಡಾ 36ಕ್ಕಿಂತ ಹೆಚ್ಚಿಲ್ಲದ ದರದಲ್ಲಿ ಸರಳ ಬಡ್ಡಿಯನ್ನು ಪಾವತಿಸಬೇಕು. ಸೆನ್ವೆಟ್

ಕ್ರೆಡಿಟ್ ನಿಯಮಗಳು, 2004ರ ನಿಯಮ 3, ತೆರಿಗೆಗೆ ಒಳಪಡುವ ಸೇವೆಗಳ ಪೂರೈಕೆದಾರರಿಗೆ ಔಟ್‌ಪುಟ್ ಸೇವೆಗಳನ್ನು ಒದಗಿಸುವುದಕ್ಕಾಗಿ ಸ್ವೀಕರಿಸಿದ ಯಾವುದೇ ಇನ್‌ಪುಟ್ ಸೇವೆಗಳ ಕ್ರೆಡಿಟ್ ತೆಗೆದುಕೊಳ್ಳಲು ಅವಕಾಶವಿದೆ ಎಂದು ನಿರ್ದಿಷ್ಟಪಡಿಸಲಾಗಿದೆ. ಮೇಲಿನ ಜಮೆಯನ್ನು ಪಡೆಯುವ ಸಮಯ ಮಿತಿಯನ್ನು 1 ಮಾರ್ಚ್ 2015ರಿಂದ ಜಾರಿಗೆ ಬರುವಂತೆ ಸೇವಾ ಪೂರೈಕೆದಾರರಿಂದ ಬೆಲೆಪಟ್ಟಿ ವಿತರಣೆಯ ದಿನಾಂಕದಿಂದ ಒಂದು ವರ್ಷಕ್ಕೆ ನಿಗದಿಪಡಿಸಲಾಗಿತ್ತು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಬೆಂಗಳೂರಿನಲ್ಲಿ ವಸತಿ ಘಟಕಗಳ ನಿರ್ಮಾಣವನ್ನು ಕೈಗೆತ್ತಿಕೊಳ್ಳುತ್ತದೆ ಮತ್ತು ಕಾಲಕಾಲಕ್ಕೆ ಅಧಿಸೂಚನೆಗಳನ್ನು ಹೊರಡಿಸಿದ ನಂತರ ಸಾರ್ವಜನಿಕರಿಗೆ ಹಂಚಿಕೆ ಮಾಡುತ್ತದೆ. ಪ್ರಾಧಿಕಾರವು ವಸತಿ ಘಟಕಗಳಿಗೆ ಪಾವತಿಯೊಂದಿಗೆ ಹಂಚಿಕೆದಾರರಿಂದ ಸೇವಾ ತೆರಿಗೆಯನ್ನು ಸಂಗ್ರಹಿಸುತ್ತದೆ. ಜೊತೆಗೆ, ನಾಗರೀಕ ಸೌಲಭ್ಯ ನಿವೇಶನಗಳ ಗುತ್ತಿಗೆ ಮೊತ್ತದ ಮೇಲೆ ಮತ್ತು ಆಪ್ಟಿಕ್ ಫೈಬರ್ ಕೇಬಲ್ ಹಾಕಲು ಟೆಲಿಕಾಂ ಆಪರೇಟರ್‌ಗಳಿಂದ ಸಂಗ್ರಹಿಸಲಾದ ಬಾಡಿಗೆ ಶುಲ್ಕದ ಮೇಲೆ ಬಿಡಿಎ ಸೇವಾ ತೆರಿಗೆಯನ್ನು ಸಂಗ್ರಹಿಸುತ್ತದೆ.

ಬಿಡಿಎಯಿಂದ ಸೇವಾ ತೆರಿಗೆ ಸಂಗ್ರಹ ಮತ್ತು ರವಾನೆಗೆ ಸಂಬಂಧಿಸಿದ ದಾಖಲೆಗಳ ಪರಿಶೀಲನೆಯ ಮೇಲೆ, ಮೂರು ಪ್ರಕರಣಗಳಲ್ಲಿ ಲೆಕ್ಕಪರಿಶೋಧನೆಯು ಈ ಕೆಳಗಿನ ಅವಲೋಕನಗಳನ್ನು ಮಾಡಿದೆ.

- ಬಿಡಿಎ ತಾತ್ಪೂರ್ತಿಕ ಆಧಾರದ ಮೇಲೆ ಫ್ಲಾಟ್‌ಗಳ ಮೌಲ್ಯದ ಮಜೂರಿ ಭಾಗದ ಮೇಲೆ ಶೇಕಡಾ 12.36ರ ದರದಲ್ಲಿ ಹಂಚಿಕೆದಾರರಿಂದ ಸೇವಾ ತೆರಿಗೆಯನ್ನು ಸಂಗ್ರಹಿಸುತ್ತದೆ. ಮೇಲಿನ ವಹಿವಾಟುಗಳ ಮೇಲಿನ ಸೇವಾ ತೆರಿಗೆಯ ಅನ್ವಯದ ಬಗ್ಗೆ ಸ್ಪಷ್ಟತೆ ಇಲ್ಲದ ಕಾರಣ 2011–17ರಲ್ಲಿ ಹಂಚಿಕೆದಾರರಿಂದ ಸಂಗ್ರಹಿಸಲಾದ ₹ 10.15 ಕೋಟಿ ಸೇವಾ ತೆರಿಗೆಯ ಮೊತ್ತವನ್ನು ಸರ್ಕಾರದ ಖಾತೆಗೆ ಪಾವತಿಸಿರಲಿಲ್ಲ. ಬಿಡಿಎ ಕೂಡ ಸೇವಾ ತೆರಿಗೆಯನ್ನು ಪ್ರತ್ಯೇಕವಾಗಿ ಲೆಕ್ಕ ಹಾಕಲು ವಿಫಲವಾಯಿತು ಮತ್ತು ಹಂಚಿಕೆದಾರರು ಜಮೆ ಮಾಡಿದ ಸಂಪೂರ್ಣ ಮೊತ್ತವನ್ನು ಫ್ಲಾಟ್‌ಗಳ ವೆಚ್ಚವೆಂದು ಪರಿಗಣಿಸಿತು. ಕೇಂದ್ರೀಯ ಅಬಕಾರಿ ಗುಪ್ತಚರ ಮಹಾ ನಿರ್ದೇಶನಾಲಯದಿಂದ ಬೇಡಿಕೆಯ ಆಧಾರದ ಮೇಲೆ (ಜೂನ್ 2016), ಬಿಡಿಎ (ಮಾರ್ಚ್ 2017) ಪ್ರತಿಭಟನೆಯೊಂದಿಗೆ ಇಲಾಖೆಗೆ ₹ 8.22 ಕೋಟಿ ಜಮೆ ಮಾಡಿತು ಮತ್ತು ಸ್ಥಿರಾಸ್ತಿ ಮಾರಾಟದ ವಹಿವಾಟೆಂದು ಪರಿಗಣಿಸಿ ಅದನ್ನು ಮರುಪಾವತಿಸುವಂತೆ ಇಲಾಖೆಗೆ ಮನವಿ ಮಾಡಿತು. ಬಾಕಿ ಮೊತ್ತವನ್ನೂ ಸಹ ಮೇ 2017ರಿಂದ ಡಿಸೆಂಬರ್ 2017ರ ಅವಧಿಯಲ್ಲಿ ಸರ್ಕಾರದ ಖಾತೆಗೆ ಜಮೆ ಮಾಡಲಾಯಿತು. ಸೇವಾ ತೆರಿಗೆ ಪಾವತಿಯಲ್ಲಿ ವಿಳಂಬವಾದ ಕಾರಣ, ಹಣಕಾಸು ಕಾಯಿದೆಯ 75 ಪರಿಚ್ಛೇದ ನಿಬಂಧನೆಗಳ ಅನ್ವಯ ಬಿಡಿಎ ₹ 2.62 ಕೋಟಿ (ಡಿಸೆಂಬರ್ 2017) ಬಡ್ಡಿಯನ್ನೂ ಪಾವತಿಸಬೇಕಾಯಿತು.

- ಅದೇ ರೀತಿ, ಆಪ್ಟಿಕ್ ಫೈಬರ್ ಕೇಬಲ್ ಹಾಕಲು ಮತ್ತು ನಿರ್ವಹಿಸಲು ಟೆಲಿಕಾಂ ಆಪರೇಟರ್‌ಗಳಿಗೆ ವಿಧಿಸಲಾದ ಸೇವಾ ಶುಲ್ಕದ ಮೇಲೆ ₹ 1.34 ಕೋಟಿ ಮತ್ತು ನಾಗರಿಕ ಸೌಲಭ್ಯ ನಿವೇಶನಗಳ ಗುತ್ತಿಗೆ ಬಾಡಿಗೆಯ ಮೇಲೆ ಸಂಗ್ರಹಿಸಲಾದ ₹ 2.87 ಕೋಟಿ ಮೊತ್ತದ (2013–2017) ಸೇವಾ ತೆರಿಗೆಯನ್ನು ಪಾವತಿಸಲು ಬಿಡಿಎ ವಿಳಂಬ ಮಾಡಿತ್ತು. ಸೇವಾ ತೆರಿಗೆ ಇಲಾಖೆಯ ಬೇಡಿಕೆಯ ಮೇರೆಗೆ, ಬಿಡಿಎ ಸೇವಾ ತೆರಿಗೆಯನ್ನು ವಿಳಂಬವಾಗಿ (ಸೆಪ್ಟೆಂಬರ್ 2018) ಪಾವತಿಸಿತು, ಹಾಗೂ ಇದು ₹ 2.26 ಕೋಟಿ ದಂಡದ ಬಡ್ಡಿಯನ್ನು ಆಕರ್ಷಿಸಿತ್ತು.

- 2017–18ರಲ್ಲಿ, ವಸತಿ ಯೋಜನೆಯ ಗುತ್ತಿಗೆದಾರರಿಗೆ ಮಾಡಿದ ಪಾವತಿಗಳ ಸೇವಾ ತೆರಿಗೆ ಅಂಶದ ಮೇಲೆ ಸಂಗ್ರಹವಾದ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಆಗಿ ₹ 15.40 ಕೋಟಿಯನ್ನು ಬಿಡಿಎ ಕ್ಲೈಮ್ ಮಾಡಿತು. ಇದು 2015–16 ನೇ ಸಾಲಿಗೆ ಸಂಬಂಧಿಸಿದ ₹ 1.14 ಕೋಟಿ ಮೊತ್ತವನ್ನು ಒಳಗೊಂಡಿತ್ತು, ಅದನ್ನು ಬೆಲೆಪಟ್ಟಿಯ ದಿನಾಂಕದಿಂದ ಒಂದು ವರ್ಷದ ನಂತರ ಕ್ಲೈಮ್ ಮಾಡಿದ್ದರಿಂದ ಸೆನ್‌ವಾಟ್ ಕ್ರೆಡಿಟ್ ನಿಯಮಗಳ ನಿಯಮ 4(7)ರ ನಿಬಂಧನೆಗಳ ಅನ್ವಯ ನಿರಾಕರಿಸಲಾಯಿತು. ಹೀಗೆ, ಸೆನ್‌ವಾಟ್ ಕ್ರೆಡಿಟ್ ಕ್ಲೈಮ್ ಮಾಡುವಲ್ಲಿ ಬಿಡಿಎ ಮಾಡಿದ ವಿಳಂಬವು ₹ 1.14 ಕೋಟಿ ಇನ್‌ಪುಟ್ ಕ್ರೆಡಿಟ್‌ನ ನಷ್ಟಕ್ಕೆ ಕಾರಣವಾಯಿತು, ಜೊತೆಗೆ ನಿರಾಕರಿಸಿದ ಮೊತ್ತದ ಮೇಲೆ ದಂಡದ ಬಡ್ಡಿ ₹ 0.24 ಕೋಟಿಯನ್ನು ಪಾವತಿಸುವಂತಾಯಿತು.

ಮೇಲಿನ ದೃಷ್ಟಾಂತ ಪ್ರಕರಣಗಳಲ್ಲಿ, ಹಂಚಿಕೆದಾರರಿಂದ ಸಂಗ್ರಹಿಸಲಾದ ಸೇವಾ ತೆರಿಗೆಯನ್ನು ಜಮೆ ಮಾಡುವಲ್ಲಿನ ವಿಳಂಬದ ಕಾರಣದಿಂದ ಬಿಡಿಎ ಸೇವಾ ತೆರಿಗೆ ಅಧಿಕಾರಿಗಳಿಗೆ ₹ 5.12 ಕೋಟಿ ತಪ್ಪಿಸಬಹುದಾದ ಬಡ್ಡಿಯನ್ನು ಪಾವತಿಸಿತು. ಸಂಬಂಧಿತ ನಿಬಂಧನೆಗಳ ಅನ್ವಯ ನಿಗದಿತ ಸಮಯದೊಳಗೆ ಕ್ಲೈಮ್‌ಗಳನ್ನು ಮಾಡದ ಕಾರಣ ₹ 1.14 ಕೋಟಿ ಸೇವಾ ತೆರಿಗೆ ಇನ್‌ಪುಟ್ ಕ್ರೆಡಿಟನ್ನು ಕ್ಲೈಮ್ ಮಾಡುವ ಅವಕಾಶವನ್ನೂ ಸಹ ಬಿಡಿಎ ಕಳೆದುಕೊಂಡಿತು.

ವಸತಿ ಯೋಜನೆಗಳ ಮೇಲಿನ ಸೇವಾ ತೆರಿಗೆಯ ಅನ್ವಯದ ಅಸ್ಪಷ್ಟತೆಯಿಂದಾಗಿ ಸೇವಾ ತೆರಿಗೆ ಪಾವತಿಯಲ್ಲಿ ಮತ್ತು ಇನ್‌ಪುಟ್ ತೆರಿಗೆ ಕ್ರೆಡಿಟನ್ನು ಕ್ಲೈಮ್ ಮಾಡುವಲ್ಲಿ ವಿಳಂಬವಾಯಿತು ಎಂದು ರಾಜ್ಯ ಸರ್ಕಾರವು ತಿಳಿಸಿತು (ಜೂನ್ 2021). ಕೆಳಗಿನ ಕಾರಣಗಳಿಗಾಗಿ ಉತ್ತರವನ್ನು ಒಪ್ಪಲಾಗುವುದಿಲ್ಲ:

- ಅಸ್ಪಷ್ಟತೆಯ ಹೊರತಾಗಿಯೂ ಬಿಡಿಎ ಹಂಚಿಕೆದಾರರಿಂದ ತಾತ್ಪೂರ್ತಿಕವಾಗಿ ಸೇವಾ ತೆರಿಗೆಯನ್ನು ಸಂಗ್ರಹಿಸಿತ್ತು;
- ತೆರಿಗೆ ರಾಜಸ್ವವನ್ನು ಪ್ರತ್ಯೇಕವಾಗಿ ಲೆಕ್ಕ ಹಾಕಿರಲಿಲ್ಲ ಮತ್ತು ಕಾಲಕಾಲಕ್ಕೆ ಬಿಡಿಎ ಚಟುವಟಿಕೆಗಳಿಗೆ ಬಳಸಿಕೊಳ್ಳಲಾದ ಮಾರಾಟದ ಆದಾಯದೊಂದಿಗೆ ಸಾಮಾನ್ಯ ಖಾತೆಯಲ್ಲಿ ಇರಿಸಲಾಗಿತ್ತು;
- ಫ್ಲಾಟ್‌ಗಳ ಪೂರ್ಣಗೊಳಿಸುವಿಕೆಯ ಪ್ರಮಾಣಪತ್ರವನ್ನು ಪಡೆಯುವ ಮೊದಲು ಮಾರಾಟದ ಆದಾಯವನ್ನು ಸ್ವೀಕರಿಸಲಾಗಿತ್ತು ಮತ್ತು ಇದು ನಿಬಂಧನೆಗಳ ಅನ್ವಯ ಸೇವಾ ತೆರಿಗೆಯನ್ನು ಆಕರ್ಷಿಸುತ್ತದೆ.

ಶಿಫಾರಸು

ಹಣಕಾಸು ಕಾಯಿದೆಯ ವಿವಿಧ ನಿಬಂಧನೆಗಳ ಅನುಸರಣೆಯನ್ನು ಬಿಡಿಎ ಖಚಿತಪಡಿಸಿಕೊಳ್ಳಬೇಕು ಮತ್ತು ತನ್ನ ಹಣಕಾಸಿನ ಮೇಲೆ ಗಣನೀಯವಾಗಿ ಪ್ರಭಾವ ಬೀರುವ ವಹಿವಾಟುಗಳಲ್ಲಿ ಕಾಯಿದೆಯ ನಿಬಂಧನೆಗಳ ಅನ್ವಯದ ಬಗ್ಗೆ ತಜ್ಞರ ಅಭಿಪ್ರಾಯವನ್ನು ಪಡೆಯುವ ಕಾರ್ಯವಿಧಾನವನ್ನು ಖಚಿತಪಡಿಸಿಕೊಳ್ಳಬೇಕು.

2.11. ಸೇವಾ ತೆರಿಗೆಯ ಮರುಪಾವತಿಯ ಮೇಲೆ ಗುತ್ತಿಗೆದಾರನಿಗೆ ಅನುಚಿತ ಲಾಭ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಸೇವಾ ತೆರಿಗೆ ಪಾವತಿಯಿಂದ ವಿನಾಯಿತಿ ಪಡೆದಿದ್ದ ಮೂರು ವಸತಿ ಯೋಜನೆಗಳಿಗೆ ₹ 4.34 ಕೋಟಿ ಸೇವಾ ತೆರಿಗೆ ಮೊತ್ತವನ್ನು ಮರುಪಾವತಿ ಮಾಡಿತು. ಇದು ಗುತ್ತಿಗೆದಾರರಿಗೆ ಅನುಚಿತ ಆರ್ಥಿಕ ಲಾಭದಲ್ಲಿ ಪರಿಣಮಿಸಿತು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ವಸತಿ ಯೋಜನೆಗಳನ್ನು ಒಟ್ಟು ಮೊತ್ತ ಮತ್ತು ಟರ್ನ್‌ಕೀ ಆಧಾರದ ಮೇಲೆ ತೆಗೆದುಕೊಳ್ಳಲಾಗುತ್ತದೆ. ಟೆಂಡರ್ ಅನುಮೋದಿತ ಒಟ್ಟು ಮೊತ್ತವು ಎಲ್ಲಾ ತೆರಿಗೆಗಳನ್ನು ಒಳಗೊಂಡಿರಬೇಕು ಮತ್ತು ಟೆಂಡರ್‌ದಾರನು ತನ್ನ ಬೆಲೆಗಳನ್ನು ಉಲ್ಲೇಖಿಸಿ ಟೆಂಡರ್ ಸಲ್ಲಿಸುವ ದಿನಾಂಕದಿಂದ ಒಂದು ತಿಂಗಳ ಹಿಂದೆ ಚಾಲ್ತಿಯಲ್ಲಿರುವ ತೆರಿಗೆಗಳು, ಸುಂಕಗಳು, ರಾಜಧನಗಳು ಇತ್ಯಾದಿಗಳನ್ನು ಪರಿಗಣಿಸಬಹುದು ಎಂದು ಟೆಂಡರ್ ದಾಖಲೆಗಳ ಒಪ್ಪಂದದ ವಿಶೇಷ ಷರತ್ತುಗಳ ಕಲಂ 8 ನಿಗದಿಪಡಿಸುತ್ತದೆ. ಅದಲ್ಲದೇ ರಾಜ್ಯ/ಕೇಂದ್ರ ಸರ್ಕಾರಗಳು ಮಾಡಿದ ನಂತರದ ಬದಲಾವಣೆಗಳಿಂದಾಗಿ ತೆರಿಗೆಗಳಲ್ಲಿನ ಹೆಚ್ಚಳವನ್ನು ಮರುಪಾವತಿಸಲು ಬಿಡಿಎಗೆ ಅವಕಾಶ ಒದಗಿಸುತ್ತವೆ.

ಸ್ಥಳೀಯ ಪ್ರಾಧಿಕಾರ ಅಥವಾ ಸರ್ಕಾರಿ ಪ್ರಾಧಿಕಾರಕ್ಕೆ ಒದಗಿಸುವ ನಿರ್ಮಾಣ, ಕಾರ್ಯಾರಂಭ, ಅನುಷ್ಠಾನ, ಪೂರ್ಣಗೊಳಿಸುವಿಕೆ, ಅಳವಡಿಸುವಿಕೆ, ದುರಸ್ತಿ, ನಿರ್ವಹಣೆ, ನವೀಕರಣ ಅಥವಾ ವಾಣಿಜ್ಯ, ಕೈಗಾರಿಕೆ, ವ್ಯಾಪಾರ ಅಥವಾ ವೃತ್ತಿಯನ್ನು ಹೊರತುಪಡಿಸಿದ ಬಳಕೆಗಾಗಿ ಪ್ರಧಾನವಾಗಿ ಉದ್ದೇಶಿಸಲಾದ ನಾಗರಿಕ ಸೌಲಭ್ಯದ ಮಾರ್ಪಾಡು ಅಥವಾ ಯಾವುದೇ ಇತರ ಮೂಲ ಕಾಮಗಾರಿಗಳು, ಮುಂತಾದ ಸೇವೆಗಳಿಗೆ ಭಾರತ ಸರ್ಕಾರ ಸೇವಾ ತೆರಿಗೆಯ ವಿನಾಯಿತಿ ನೀಡಿದೆ (ಜೂನ್ 2012) (ಅಧಿಸೂಚನೆ ಸಂಖ್ಯೆ.25/2012– ಕ್ರಮ ಸಂಖ್ಯೆ.12(ಎ))

1 ಏಪ್ರಿಲ್ 2015ರಿಂದ ಅನ್ವಯವಾಗುವಂತೆ ಮೇಲಿನ ವಿನಾಯಿತಿಯನ್ನು ಭಾರತ ಸರ್ಕಾರವು ಹಿಂತೆಗೆದುಕೊಂಡಿತು (ಮಾರ್ಚ್ 2015). 1 ಏಪ್ರಿಲ್ 2015ರಿಂದ ಪರಿಚ್ಛೇದ 12ರಡಿಯಲ್ಲಿ ವಿನಾಯಿತಿಗಳನ್ನು ಹಿಂತೆಗೆದುಕೊಂಡಿರುವುದನ್ನು ಉಲ್ಲೇಖಿಸಿ ಮೂರು[87] ವಸತಿ ಯೋಜನೆಗಳಲ್ಲಿ ಅನ್ವಯವಾಗುವ ಸೇವಾ ತೆರಿಗೆಯನ್ನು ಮರುಪಾವತಿಸಲು ಗುತ್ತಿಗೆದಾರರು ಬಿಡಿಎಯನ್ನು ಕೋರಿರುವುದನ್ನು (ಅಕ್ಟೋಬರ್ 2015) ಲೆಕ್ಕಪರಿಶೋಧನೆಯು ಗಮನಿಸಿತು. ಟೆಂಡರ್[88] ಸಮಯದಲ್ಲಿ ಸೇವಾ ತೆರಿಗೆ ಅನ್ವಯವಾಗುತ್ತಿರಲಿಲ್ಲ ಮತ್ತು 1 ಏಪ್ರಿಲ್ 2015ರಿಂದ ಅನ್ವಯವಾಗುತ್ತದೆ ಎಂಬುದು ಗುತ್ತಿಗೆದಾರರ ವಾದವಾಗಿತ್ತು. ಗುತ್ತಿಗೆದಾರರ ಕೋರಿಕೆಯ ಆಧಾರದ ಮೇಲೆ, ಮೇಲಿನ ಮೂರು ಯೋಜನೆಗಳ ಮೇಲೆ ಅನ್ವಯವಾಗುವ ₹ 4.34 ಕೋಟಿ[89] ಮೊತ್ತದ ಸೇವಾ ತೆರಿಗೆಯನ್ನು (ಏಪ್ರಿಲ್ 2015ರಿಂದ ಮಾರ್ಚ್ 2016ರವರೆಗೆ ಕಾರ್ಯಗತಗೊಳಿಸಿದ ಕಾಮಗಾರಿಗಳಿಗೆ) ಬಿಡಿಎ ಮರುಪಾವತಿ ಮಾಡಿತು (ಮಾರ್ಚ್ 2016ರಿಂದ ಮೇ 2016ರವರೆಗೆ). ಆ ಅವಧಿಗೆ ಕಾಮಗಾರಿಯ ಬಿಲ್ ಪಾವತಿಗಳ ಮೇಲೆ ಶೇಕಡಾವಾರು ಆಧಾರದ ಮೇಲೆ ಸೇವಾತೆರಿಗೆಯನ್ನು ಲೆಕ್ಕ ಹಾಕಲಾಗಿತ್ತು.

ಹಣಕಾಸು ಮಸೂದೆ 2016ರಲ್ಲಿ ಪರಿಚ್ಛೇದ 12(ಎ) ಅಡಿಯಲ್ಲಿ ಹಿಂತೆಗೆದುಕೊಂಡ ವಿನಾಯಿತಿಯನ್ನು 1 ಏಪ್ರಿಲ್ 2015ರಿಂದ 29 ಫೆಬ್ರವರಿ 2016ರವರೆಗೆ ಪೂರ್ವಾನ್ವಯವಾಗುವಂತೆ ಮರು-ಪರಿಚಯಿಸಿತು ಮತ್ತು ಮೇಲಿನ ಅವಧಿಯಲ್ಲಿ ಸಲ್ಲಿಸಿದ ಯಾವುದೇ ಸೇವೆಗಳಿಗೆ ಪಾವತಿಸಿದ ಸೇವಾ ತೆರಿಗೆಯನ್ನು ಸೇವಾ ತೆರಿಗೆ ಇಲಾಖೆಯಿಂದ ಮರುಪಾವತಿ ಮಾಡಲು ಅವಕಾಶ ಒದಗಿಸಿತು. 12(ಎ) ಅಡಿಯಲ್ಲಿನ ವಿನಾಯಿತಿಯನ್ನು 31 ಮಾರ್ಚ್ 2020ರವರೆಗೆ ವಿಸ್ತರಿಸಲಾಯಿತು (ಮಾರ್ಚ್ 2016) ಮತ್ತು 1 ಮಾರ್ಚ್ 2015ರ ಮೊದಲು ವಹಿಸಿದ ಗುತ್ತಿಗೆಗಳಿಗೆ ಮಾತ್ರ ಇದು ಅನ್ವಯಿಸುತ್ತಿತ್ತು.

ಮೇಲಿನ ಮೂರು ಯೋಜನೆಗಳ ಗುತ್ತಿಗೆಗಳನ್ನು 1 ಮಾರ್ಚ್ 2015ಕ್ಕೆ ಮೊದಲು ವಹಿಸಿರುವುದರಿಂದ ಆ ಯೋಜನೆಗಳಿಗೆ ಷರತ್ತು 12 (ಎ) ಅಡಿಯಲ್ಲಿ ಸೇವಾ ತೆರಿಗೆ ವಿನಾಯಿತಿ ಲಭ್ಯವಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದರ ಹೊರತಾಗಿಯೂ, ಬಿಡಿಎ ಮೇಲಿನ ಮೂರು ವಿನಾಯಿತಿ ಪಡೆದ ಯೋಜನೆಗಳಿಗೆ ಸೇವಾ ತೆರಿಗೆಯ ಮರುಪಾವತಿಯಾಗಿ ಗುತ್ತಿಗೆದಾರರಿಗೆ ₹ 4.34 ಕೋಟಿಯ ಮೊತ್ತವನ್ನು ಪರಿಹಾರ ನೀಡಿತು. ಇದು ಗುತ್ತಿಗೆದಾರರಿಗೆ ಅನುಚಿತ ಆರ್ಥಿಕ ಲಾಭದಲ್ಲಿ ಪರಿಣಮಿಸಿತು. ಮೇಲಿನ ಕಾಮಗಾರಿಗಳು ಪೂರ್ಣಗೊಂಡು ಅಂತಿಮ ಬಿಲ್ಲನ್ನು ಪಾವತಿಸಿದ್ದರೂ (ಜೂನ್ 2017) ಸಹ ಆ ಮೊತ್ತವನ್ನು ವಸೂಲಿ ಮಾಡಲು ಬಿಡಿಎ ಯಾವುದೇ ಕ್ರಮ ಕೈಗೊಂಡಿರಲಿಲ್ಲ.

ಈ ವಿಷಯವನ್ನು ಸರ್ಕಾರಕ್ಕೆ ಅಕ್ಟೋಬರ್ 2021ರಲ್ಲಿ ತಿಳಿಸಲಾಯಿತು; ಅವರ ಉತ್ತರವನ್ನು ನಿರೀಕ್ಷಿಸಲಾಗಿದೆ

ಶಿಫಾರಸು

ವಿನಾಯಿತಿ ಪಡೆದ ಯೋಜನೆಗಳಿಗೆ ಸೇವಾ ತೆರಿಗೆ ಮರುಪಾವತಿಗಾಗಿ ಮಾಡಿದ ಮೊತ್ತಗಳನ್ನು ವಸೂಲು ಮಾಡಲು ಬಿಡಿಎ ಕ್ರಮ ಕೈಗೊಳ್ಳಬೇಕು ಮತ್ತು ಮರುಪಾವತಿ ಮಾಡಲು ಕಾರಣರಾದವರ ಮೇಲೆ ಕಾರ್ಯತತ್ಪರತೆ ಕೊರತೆಯ ಹೊಣೆಗಾರಿಕೆಯನ್ನು ನಿಗದಿಪಡಿಸಬೇಕು.

2.12. ವ್ಯತ್ಯಾಸದ ಅಂಶವನ್ನು ಕಾರ್ಯಗತಗೊಳಿಸುವಿಕೆಯಿಂದ ಗುತ್ತಿಗೆದಾರನಿಗೆ ಅನಪೇಕ್ಷಿತ ಲಾಭ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಗುತ್ತಿಗೆಯ ವ್ಯಾಪ್ತಿಯಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ ಕಾಮಗಾರಿಯ ಅಂಶವನ್ನು ವ್ಯತ್ಯಯವಾಗಿ ಅನುಮೋದಿಸಿದ್ದು ಗುತ್ತಿಗೆದಾರರಿಗೆ ₹ 2.34 ಕೋಟಿಗಳಷ್ಟು ಅನಧಿಕೃತ ಲಾಭವಾಗುವಲ್ಲಿ ಪರಿಣಮಿಸಿತು.

[87] ಕಣ್ಮಿಣಿಕೆ ಹಂತ-2 ಮತ್ತು 3 ಮತ್ತು ಕೊಮ್ಮಘಟ್ಟ ಹಂತ-1 (ಸರ್ವೆ ನಂ. 30).

[88] ನಾಲ್ಕು ಯೋಜನೆಗಳಿಗೆ ಆಗಸ್ಟ್ 2013ರಿಂದ ಅಕ್ಟೋಬರ್ 2014ರವರೆಗೆ ಟೆಂಡರ್‌ಗಳನ್ನು ಸಲ್ಲಿಸಲಾಗಿತ್ತು.

[89] ಕಣ್ಮಿಣಿಕೆ ವಸತಿ ಯೋಜನೆ ಹಂತ 2–₹ 1,64,20,425, ಕಣ್ಮಿಣಿಕೆ ವಸತಿ ಯೋಜನೆ ಹಂತ 3–₹ 1,62,98,162, ಕೊಮ್ಮಘಟ್ಟ ವಸತಿ ಯೋಜನೆ ಹಂತ 1–₹ 1,07,30,267 (ಸರ್ವೆ ನಂ.30).

ಕರ್ನಾಟಕ ಲೋಕೋಪಯೋಗಿ ಸಂಹಿತೆಯ ಕಂಡಿಕೆ–152 ಮತ್ತು 159ರ ಅನ್ವಯ ಒಂದು ಒಟ್ಟುಮೊತ್ತದ ಒಪ್ಪಂದದಲ್ಲಿ, ಅನುಮೋದಿತ ವಿನ್ಯಾಸ ಮತ್ತು ವಿಶಿಷ್ಟತೆಯ ಅನ್ವಯ ನಿಗದಿತ ಸಮಯದೊಳಗೆ ನಿಗದಿತ ವೆಚ್ಚದಲ್ಲಿ ಎಲ್ಲಾ ಕಾಮಗಾರಿಗಳನ್ನು ನಿರ್ವಹಿಸಲು ಗುತ್ತಿಗೆದಾರನು ಜವಾಬ್ದಾರನಾಗಿರುತ್ತಾನೆ. ಕಾಮಗಾರಿಯನ್ನು ಪೂರ್ಣಗೊಳಿಸುವ ಹಂತಗಳಿಗೆ ಅನುಗುಣವಾಗಿ ನಿಗದಿತ ಕಂತುಗಳಲ್ಲಿ ಪಾವತಿಗಳನ್ನು ಮಾಡಬೇಕಾಗಿರುತ್ತದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ವಸತಿ ಯೋಜನೆಗಳನ್ನು ಒಟ್ಟುಮೊತ್ತ ಮತ್ತು ಟರ್ನ್‌ಕೀ ಆಧಾರದ ಮೇಲೆ ತೆಗೆದುಕೊಳ್ಳಲಾಗುತ್ತದೆ. ಬೆಂಗಳೂರು ಉತ್ತರ ಜಿಲ್ಲೆಯ ಆಲೂರ್ ಗ್ರಾಮದ ಹಂತ–II ರಲ್ಲಿ[90] ವಸತಿ ಯೋಜನೆಯ ನಿರ್ಮಾಣವನ್ನು (ಜುಲೈ 2014) ಮೆ.ಗೌರಿ ಇನ್‌ಫ್ರಾ ಇಂಜಿನಿಯರ್ ಪ್ರೈವೇಟ್ ಲಿಮಿಟೆಡ್‌ಗೆ ಒಟ್ಟುಮೊತ್ತ ಮೊತ್ತದ ಟರ್ನ್‌ಕೀ ಆಧಾರದ ಮೇಲೆ ಅವರ ಉಲ್ಲೇಖಿತ ಬೆಲೆಯಾದ ₹ 158.38 ಕೋಟಿಗೆ ವಹಿಸಲಾಯಿತು. ಕಾಮಗಾರಿಯು ಪ್ರಗತಿಯಲ್ಲಿದೆ (ಜನವರಿ 2021) ಮತ್ತು ಗುತ್ತಿಗೆದಾರರಿಗೆ ₹165.15 ಕೋಟಿ ಮೊತ್ತವನ್ನು ಪಾವತಿಸಲಾಗಿತ್ತು (ಜೂನ್ 2020). ಟೆಂಡರ್‌ನಲ್ಲಿ ಅನುಮೋದಿಸಲಾದ ವಿನ್ಯಾಸಗಳು ಮತ್ತು ವಿಶಿಷ್ಟತೆಗಳ ಅನ್ವಯ ಕಾಮಗಾರಿಯ ವ್ಯಾಪ್ತಿಯು ಪ್ರತಿ ಮನೆಗೆ ಮೂರು ಶೌಚಾಲಯಗಳಂತೆ 252 ಟೈಪ್–III ಮಾದರಿಯ ಮನೆಗಳ ನಿರ್ಮಾಣವನ್ನು ಒಳಗೊಂಡಿತ್ತು ಮತ್ತು ಗುತ್ತಿಗೆದಾರನು ಟೆಂಡರ್ ದಾಖಲೆಯೊಂದಿಗೆ ಲಗತ್ತಿಸಲಾದ ವಿನ್ಯಾಸಗಳು ಮತ್ತು ವಿಶಿಷ್ಟತೆಗಳನ್ನು ಪರಿಗಣಿಸಿ ತನ್ನ ಬೆಲೆಗಳನ್ನು ಉಲ್ಲೇಖಿಸಬೇಕಾಗಿತ್ತು.

ಮೇಲಿನ ಯೋಜನೆಗೆ ಸಂಬಂಧಿಸಿದಂತೆ ಬಿಡಿಎ ₹ 12.81 ಕೋಟಿ ಮೊತ್ತದ ವ್ಯತ್ಯಯವನ್ನು ಅನುಮೋದಿಸಿರುವುದನ್ನು (ಡಿಸೆಂಬರ್ 2018) ಲೆಕ್ಕಪರಿಶೋಧನೆಯು ಗಮನಿಸಿತು, ಅದರಲ್ಲಿ ₹ 3.91 ಕೋಟಿ ಹೆಚ್ಚುವರಿ ವೆಚ್ಚದಲ್ಲಿ ಟೈಪ್–III ಮಾದರಿಯ ಮನೆಗಳಿಗೆ ಹೆಚ್ಚುವರಿ ಶೌಚಾಲಯದ (ಮೂರನೇ ಶೌಚಾಲಯ) ನಿರ್ಮಾಣವೂ ಸೇರಿತ್ತು. ವ್ಯತ್ಯಯಗಳನ್ನು ಕಾರ್ಯಗತಗೊಳಿಸಲು ಬಿಡಿಎ ಗುತ್ತಿಗೆದಾರರೊಂದಿಗೆ ಪೂರಕ ಒಪ್ಪಂದವನ್ನು ಸಹ ಮಾಡಿಕೊಂಡಿತು (ಫೆಬ್ರವರಿ 2019). ಬಿಡಿಎ ಕಾರ್ಯಗತಗೊಳಿಸಿದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚುವರಿ ಆರ್ಥಿಕ ಪರಿಣಾಮಗಳನ್ನು ಪರಿಶೀಲಿಸಲು ರಚಿಸಲಾದ ಹೆಚ್ಚುವರಿ ಹಣಕಾಸು ಸಮಿತಿಯು[91] ಒದಗಿಸಿದ ವರದಿಯನ್ನು ಆಧರಿಸಿ ಹೆಚ್ಚುವರಿ ಶೌಚಾಲಯಕ್ಕೆ ಅನುಮೋದನೆ ನೀಡಲಾಗಿದೆ. ಆದರೆ, ಪ್ರತಿ ಮನೆಗೆ ಮೂರು ಶೌಚಾಲಯಗಳನ್ನು ಈಗಾಗಲೇ ಒದಗಿಸಿರುವ ಮೂಲ ಅಂದಾಜುಗಳು ಮತ್ತು ವಿನ್ಯಾಸಗಳನ್ನು ಪರಿಗಣಿಸದೆ ಹೆಚ್ಚುವರಿ ಶೌಚಾಲಯವನ್ನು ವ್ಯತ್ಯಾಸದ ಅಂಶದಡಿಯಲ್ಲಿ ಸೇರಿಸಿರುವುದರಿಂದ ಸಮಿತಿಯು ಸಮರ್ಪಕ ಕಾರ್ಯತತ್ಪರತೆಯನ್ನು ನಡೆಸಿರಲಿಲ್ಲ. ಬಿಡಿಎ ಅಧಿಕಾರಿಗಳೊಂದಿಗೆ ಲೆಕ್ಕಪರಿಶೋಧನೆಯು ಜಂಟಿ ಭೌತಿಕ ಪರಿಶೀಲನೆ ನಡೆಸಿತು (ಸೆಪ್ಟೆಂಬರ್ 2021) ಮತ್ತು ಪೂರ್ಣಗೊಂಡ ಮನೆಗಳಲ್ಲಿ ಕೇವಲ ಮೂರು ಶೌಚಾಲಯಗಳನ್ನು ಮಾತ್ರ ಹೊಂದಿದ್ದವು ಎಂಬುದನ್ನು ಖಚಿತಪಡಿಸಿಕೊಂಡಿತು. ವ್ಯತ್ಯಯ ಒಪ್ಪಂದದಲ್ಲಿ ಹೆಚ್ಚುವರಿ ಶೌಚಾಲಯಕ್ಕಾಗಿ ಒದಗಿಸಲಾದ ₹ 3.91 ಕೋಟಿಯಲ್ಲಿ, ಬಿಡಿಎ (ಮಾರ್ಚ್ 2019) ಗುತ್ತಿಗೆದಾರರಿಗೆ ₹ 2.34 ಕೋಟಿ ಮೊತ್ತವನ್ನು ಪಾವತಿಸಿದೆ.

ಹೀಗೆ, ಗುತ್ತಿಗೆಯ ಮೂಲ ವ್ಯಾಪ್ತಿಯಲ್ಲಿ ಈಗಾಗಲೇ ಅಸ್ತಿತ್ವದಲ್ಲಿದ್ದ ಒಂದು ಅಂಶವನ್ನು ವ್ಯತ್ಯಯ ಅಂಶವೆಂದು ವಹಿಸಿದ್ದು ಅಕ್ರಮವಾಗಿತ್ತು ಮತ್ತು ಇದು ಗುತ್ತಿಗೆದಾರರಿಗೆ ₹ 2.34 ಕೋಟಿಗಳಷ್ಟು ಅನಪೇಕ್ಷಿತ ಲಾಭದಲ್ಲಿ ಪರಿಣಮಿಸಿತು.

ಈ ವಿಷಯವನ್ನು ಸರ್ಕಾರಕ್ಕೆ ಅಕ್ಟೋಬರ್ 2021ರಲ್ಲಿ ತಿಳಿಸಲಾಯಿತು; ಉತ್ತರವನ್ನು ನಿರೀಕ್ಷಿಸಲಾಗಿದೆ.

ಶಿಫಾರಸು

ಬಿಡಿಎ ಮಾಡಿದ ಹೆಚ್ಚುವರಿ ಪಾವತಿಗಳನ್ನು ವಸೂಲು ಮಾಡಬೇಕು ಮತ್ತು ಈಗಾಗಲೇ ಒಪ್ಪಂದದ ಮೂಲ ವ್ಯಾಪ್ತಿಯಲ್ಲಿದ್ದ ಕಾಮಗಾರಿಗಳನ್ನು ವ್ಯತ್ಯಯವನ್ನು ಅನುಮೋದಿಸಿರುವುದಕ್ಕೆ ಮತ್ತು ಪಾವತಿ ಮಾಡಿರುವುದಕ್ಕೆ ಹೊಣೆಗಾರಿಕೆಯನ್ನು ನಿಗದಿಪಡಿಸಬೇಕು.

[90] 252 ಎರಡು ಬಿಹೆಚ್‌ಕೆ–ಟೈಪ್3, 96 ಎರಡು ಬಿಹೆಚ್‌ಕೆ–ಟೈಪ್ 2 ಮತ್ತು 104 ಮೂರು ಬಿಹೆಚ್‌ಕೆ–ಟೈಪ್1.

[91] ಬಿಡಿಎಯ ಇಂಜಿನಿಯರಿಂಗ್ ಸದಸ್ಯರು, ನಿವೃತ್ತರಾಗಿರುವ ಇಬ್ಬರು ಮುಖ್ಯ ಇಂಜಿನಿಯರ್‌ಗಳು ಮತ್ತು ಸಿವಿಲ್ ಇಂಜಿನಿಯರಿಂಗ್‌ನ ಓರ್ವ ನಿವೃತ್ತ ಪ್ರೊಫೆಸರ್.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

2.13. ಒಳಚರಂಡಿ ಕಾಮಗಾರಿಗಳ ಅಸಮರ್ಪಕ ಯೋಜನೆ ಮತ್ತು ಕಾರ್ಯನಿರ್ವಹಣೆ

ಸಮರ್ಪಕ ಯೋಜನೆಯ ಕೊರತೆ ಮತ್ತು ಅಸ್ತವ್ಯಸ್ತವಾದ ಒಳಚರಂಡಿ ಕಾಮಗಾರಿಗಳಿಂದ ಕಾರ್ಯಗತ ಗೊಳಿಸುವಿಕೆಯು ₹ 198.75 ಕೋಟಿ ಮೊತ್ತದ ಕಾಮಗಾರಿಗಳು ಪೂರ್ಣಗೊಳ್ಳದಿರುವುದರಲ್ಲಿ ಪರಿಣಮಿಸಿತು ಮತ್ತು ಪರಿಸರಕ್ಕೆ ಹಾನಿ ಉಂಟು ಮಾಡುವುದರ ಜೊತೆಗೆ ನಗರ ಜನತೆಗೆ ಉದ್ದೇಶಿತ ಪ್ರಯೋಜನಗಳನ್ನು ವಂಚಿತಗೊಳಿಸಿತು.

ಪರಿಚಯ

2.13.1. ಹೆಚ್ಚುತ್ತಿರುವ ನಗರೀಕರಣವು ಅಸ್ತಿತ್ವದಲ್ಲಿರುವ ನಗರ ನೀರು ಸರಬರಾಜು ಮತ್ತು ನೈರ್ಮಲ್ಯ ವ್ಯವಸ್ಥೆಗಳ ಮೇಲೆ ಹೆಚ್ಚಿನ ಒತ್ತಡವನ್ನು ಉಂಟುಮಾಡಿದ್ದು ಇದು, ಒಂದು ಕಡೆ ನೀರಿನ ಮೂಲಗಳನ್ನು ವೃದ್ಧಿಸುವ ಮತ್ತು ವಿತರಣೆಯನ್ನು ಸುಧಾರಿಸುವ ಹಾಗೂ ಇನ್ನೊಂದು ಕಡೆ ಒಳಚರಂಡಿ ವ್ಯವಸ್ಥೆಯ ವ್ಯಾಪ್ತಿಯನ್ನು ಹೆಚ್ಚಿಸಲು ಬೇಡಿಕೆಗಳು ಹೆಚ್ಚಾಗುತ್ತಿವೆ. ಕರ್ನಾಟಕ ನಗರ ಕುಡಿಯುವ ನೀರು ಮತ್ತು ನೈರ್ಮಲ್ಯ ನೀತಿ (ಯುಡಿಡಬ್ಲ್ಯುಎಸ್‌ಪಿ), 2003 ನಗರ ಸ್ಥಳೀಯ ಸಂಸ್ಥೆಗಳು (ಯುಎಲ್‌ಬಿಗಳು), ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಮಂಡಳಿ) ಮತ್ತು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ), ಇವುಗಳ ಸಹಭಾಗಿತ್ವದಲ್ಲಿ ರಾಜ್ಯದ ಎಲ್ಲಾ ನಗರ ಪ್ರದೇಶಗಳ ನಿವಾಸಿಗಳಿಗೆ ನೀರು ಮತ್ತು ನೈರ್ಮಲ್ಯ ಸೇವೆಗಳ ಸಾರ್ವತ್ರಿಕ ವ್ಯಾಪ್ತಿಯನ್ನು ಗುರಿಯಾಗಿರಿಸಿಕೊಂಡಿತ್ತು. ಎಲ್ಲಾ ನಗರ ಪ್ರದೇಶಗಳಿಗೆ ಸಮರ್ಪಕ ಮತ್ತು ಸುರಕ್ಷಿತ ನೀರು ಸರಬರಾಜು ಮತ್ತು ಸರಿಯಾದ ನೈರ್ಮಲ್ಯವನ್ನು ಒದಗಿಸಲು ಸಾಮರ್ಥ್ಯದ ಸೃಷ್ಟಿ ಮತ್ತು ಮೂಲಸೌಕರ್ಯಗಳ ವರ್ಧನೆಗೆ ಮಂಡಳಿಯು ಜವಾಬ್ದಾರಿಯುತವಾಗಿದೆ. ಮಂಡಳಿಯು ಬೆಂಗಳೂರು ನಗರವನ್ನು[92] ಹೊರತುಪಡಿಸಿ ರಾಜ್ಯದ ಎಲ್ಲಾ ನಗರ ಪ್ರದೇಶಗಳಲ್ಲಿ ಕುಡಿಯುವ ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆಗಳ ಅನುಷ್ಠಾನ ಸಂಸ್ಥೆಯಾಗಿದೆ.

ಆಗಸ್ಟ್ 2007ರಿಂದ ಮಾರ್ಚ್ 2020ರ ನಡುವೆ ಮಂಡಳಿಯು ಕೈಗೆತ್ತಿಕೊಂಡಿರುವ 51[93] ಯುಜಿಡಿ ಯೋಜನೆಗಳು ಮಾರ್ಚ್ 2020ರಲ್ಲಿದ್ದಂತೆ ಅಪೂರ್ಣವಾಗಿ ಉಳಿದಿದ್ದವು. ಪ್ರಗತಿಯಲ್ಲಿರುವ ಈ 51 ಯೋಜನೆಗಳಲ್ಲಿ, ಲೆಕ್ಕಪರಿಶೋಧನೆಯು 14 ಯೋಜನೆಗಳನ್ನು ಪರೀಕ್ಷಾ-ತನಿಖೆ ನಡೆಸಿತು (ಜನವರಿ 2021ರಿಂದ ಮಾರ್ಚ್ 2021), ನಿಗದಿತ ಪೂರ್ಣಗೊಳಿಸಬೇಕಿದ್ದ ದಿನಾಂಕಗಳಿಂದ ಎರಡು ವರ್ಷಗಳಾದರೂ (***ಅನುಬಂಧ-15***) ಅವುಗಳು ಇನ್ನೂ ಪೂರ್ಣಗೊಂಡಿರಲಿಲ್ಲ. ಈ ಯೋಜನೆಗಳಲ್ಲಿ 18 ಕೊಳಚೆನೀರು ಸಂಸ್ಕರಣಾ ಘಟಕಗಳು (ಎಸ್‌ಟಿಪಿಗಳು), 31 ಆರ್ದ್ರಭಾವಿಗಳು (ವೆಟ್ ವೆಲ್‌ಗಳು), 17 ಸೆಪ್ಟಿಕ್ ಟ್ಯಾಂಕ್‌ಗಳು, 705.18 ಕಿಮೀ ಒಳಚರಂಡಿ ಮಾರ್ಗಗಳು ಮತ್ತು 25,807 ಸಂಖ್ಯೆಯ ಮ್ಯಾನ್‌ಹೋಲ್‌ಗಳ ನಿರ್ಮಾಣಗಳು ಸೇರಿದ್ದವು. ₹ 394.97 ಕೋಟಿ ಅಂದಾಜು ವೆಚ್ಚದ ಈ ಕಾಮಗಾರಿಗಳನ್ನು ಏಪ್ರಿಲ್ 2009 ಮತ್ತು ನವೆಂಬರ್ 2018ರ ನಡುವೆ ಪೂರ್ಣಗೊಳಿಸಲು ನಿಗದಿಪಡಿಸಲಾಗಿತ್ತು. ಮಾರ್ಚ್ 2021ಲ್ಲಿದ್ದಂತೆ, ಈ 14 ಯೋಜನೆಗಳ ಮೇಲೆ ಮಂಡಳಿಯು ₹ 198.75 ಕೋಟಿಯನ್ನು ವೆಚ್ಚ ಮಾಡಿತ್ತು. ಲೆಕ್ಕಪರಿಶೋಧನೆಯು ಮಂಡಳಿಯ ಅಧಿಕಾರಿಗಳೊಂದಿಗೆ ಯೋಜನೆಗಳ ಜಂಟಿ ಭೌತಿಕ ಪರಿಶೀಲನೆಯನ್ನೂ (ಜೆಪಿವಿ) ಸಹ ನಡೆಸಿತು.

ಒಳಚರಂಡಿ ವ್ಯವಸ್ಥೆಯ ಕಾರ್ಯವೈಖರಿ

2.13.2. ಒಳಚರಂಡಿ ಎಂಬುದು ಇಳಿಜಾರಿನಲ್ಲಿ ಹಾಕಲಾದ ಸ್ವಯಂ-ಶುದ್ಧೀಕರಣ ಪೈಪ್‌ಗಳ ವ್ಯವಸ್ಥೆಯಾಗಿದ್ದು, ಇದು ಆರೋಗ್ಯ ಮತ್ತು ಸುರಕ್ಷತೆಗೆ ಯಾವುದೇ ಅಪಾಯವಿಲ್ಲದೆಯೇ ಸಾಧ್ಯವಾದಷ್ಟು ವೇಗವಾಗಿ ಮತ್ತು ಪರಿಣಾಮಕಾರಿಯಾಗಿ ಕೊಳಚೆನೀರನ್ನು ಮನೆಗಳಿಂದ ದೂರಕ್ಕೆ ತಲುಪಿಸುತ್ತದೆ. ಒಳಚರಂಡಿ ಮಾರ್ಗಗಳ ಜಾಲದ ಮೂಲಕ ಸಂಗ್ರಹಿಸಲಾದ ಕೊಳಚೆನೀರನ್ನು ಆರ್ದ್ರ ಬಾವಿಯಲ್ಲಿ ಸಂಗ್ರಹಿಸಿ ನಂತರ ಸಂಸ್ಕರಣೆಗಾಗಿ ಕೊಳಚೆನೀರಿನ ಸಂಸ್ಕರಣಾ ಘಟಕಕ್ಕೆ ಪಂಪ್ ಮಾಡಿ ಅಂತಿಮ

[92] ಬೆಂಗಳೂರು ನಗರಕ್ಕೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಜವಾಬ್ದಾರಿ ಹೊಂದಿತ್ತು.

[93] ಭಾರತ ಸರ್ಕಾರದ ಸಣ್ಣ ಮತ್ತು ಮಧ್ಯಮ ನಗರಗಳಿಗಾಗಿನ ನಗರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿಯಲ್ಲಿ ಕೈಗೆತ್ತಿಕೊಂಡ ನಾಲ್ಕು ಯೋಜನೆಗಳು ಮತ್ತು ಕರ್ನಾಟಕ ಸರ್ಕಾರದ ಯೋಜನೆಯಡಿಯಲ್ಲಿ 47 ಯೋಜನೆಗಳು.

ನೈಸರ್ಗಿಕ ಜಲಮೂಲಗಳಿಗೆ ವಿಲೇವಾರಿ ಮಾಡಲಾಗುತ್ತದೆ. ಕೊಳಚೆನೀರಿನ ಸಂಸ್ಕರಣಾ ಘಟಕ ಇಲ್ಲದಿದ್ದಲ್ಲಿ ಕೊಳಚೆ ನೀರನ್ನು ಸೆಪ್ಟಿಕ್ ಟ್ಯಾಂಕ್/ಆರ್ದ್ರ ಭಾವಿಗಳಲ್ಲಿ ಸಂಗ್ರಹಿಸಿ ನೈಸರ್ಗಿಕ ಜಲಮೂಲಗಳಿಗೆ ಹರಿಸುವುದರಿಂದ ಮಾಲಿನ್ಯ ಉಂಟಾಗುತ್ತದೆ. ಆದರ್ಶ ಒಳಚರಂಡಿ ವ್ಯವಸ್ಥೆಯಲ್ಲಿ ಒಳಗೊಂಡಿರುವ ಪ್ರಕ್ರಿಯೆಗಳನ್ನು ***ಚಿತ್ರ–2.13.1ರಲ್ಲಿ*** ತೋರಿಸಲಾಗಿದೆ.

ಚಿತ್ರ:2.13.1: ಆದರ್ಶ ಒಳಚರಂಡಿ ವ್ಯವಸ್ಥೆ



ಒಳಚರಂಡಿ ಕಾಮಗಾರಿಗಳ ನಿಗದಿತ ವಿಧಾನ

2.13.3. ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆಯ ಅನ್ವಯ ಭೂಮಿಯ ಲಭ್ಯತೆಯನ್ನು ಖಚಿತಪಡಿಸಿಕೊಳ್ಳದೇ ಯಾವುದೇ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬಾರದು ಅಥವಾ ಕಾಮಗಾರಿಗೆ ಟೆಂಡರ್ ಆಹ್ವಾನಿಸಬಾರದು. ಮಂಡಳಿಯು ಕಾರ್ಯಗತಗೊಳಿಸಿದ ಒಳಚರಂಡಿ ಕಾಮಗಾರಿಗಳು ಆರ್ದ್ರಭಾವಿಗಳು ಮತ್ತು ಎಸ್‌ಟಿಪಿಗಳ ನಿರ್ಮಾಣಕ್ಕಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದನ್ನು ಒಳಗೊಂಡಿತ್ತು. ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳದ ಕಾರಣ ಒಳಚರಂಡಿ ಯೋಜನೆಗಳಲ್ಲಿ ಎಸ್‌ಟಿಪಿ ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ವಿಳಂಬವಾಗುವುದನ್ನು ತಪ್ಪಿಸಲು ಮಂಡಳಿಯು ಸೂಚನೆಗಳನ್ನು ನೀಡಿತು (ಮೇ 2005). ಅದರ ಅನ್ವಯ ಸಂಬಂಧಪಟ್ಟ ಕಾರ್ಯನಿರ್ವಾಹಕ ಇಂಜಿನಿಯರ್‌ಗಳು (ಇಇಗಳು) ಈ ಕೆಳಗಿನ ***ಚಿತ್ರ–2.13.2ರಲ್ಲಿ*** ಸೂಚಿಸಿದ ಕಾರ್ಯವಿಧಾನವನ್ನು ಅನುಸರಿಸಬೇಕಿತ್ತು.

ಚಿತ್ರ–2.13.2: ಒಳಚರಂಡಿ ಯೋಜನೆಗಳಿಗೆ ನಿಗದಿಪಡಿಸಿದ ಕಾಮಗಾರಿಗಳ ಅನುಕ್ರಮಣಿಕೆ

1. ವಿವರವಾದ ಯೋಜನಾ ವರದಿ ಹಂತದಲ್ಲಿ ಎಸ್‌ಟಿಪಿ ಮತ್ತು ಒಳಚರಂಡಿಯಿಂದ ಕೊಳಚೆನೀರು ಬೀಳು ಸೂಕ್ತವಾದ ಭೂಮಿಯನ್ನು ಗುರುತಿಸುವುದು ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ (ಕೆಎಸ್‌ಪಿಸಿಬಿ) ಅನುಮತಿ ಪಡೆಯುವುದು.
2. ಸರ್ಕಾರದಿಂದ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ಪಡೆಯುವುದು.
3. ಇಇಗಳು ಭೂಸ್ವಾಧೀನಕ್ಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು ಮತ್ತು ಭೂಸ್ವಾಧೀನ ಪ್ರಕ್ರಿಯೆಯು ಅಂತಿಮ ಹಂತದಲ್ಲಿರುವಾಗ ಕಾಮಗಾರಿಗಳನ್ನು ಪ್ರಾರಂಭಿಸಬೇಕು.
4. ಯುಜಿಡಿ ಯೋಜನೆಗಳು ಸಮಗ್ರ ರೀತಿಯಲ್ಲಿ ಪೂರ್ಣಗೊಳ್ಳುವುದನ್ನು ಖಚಿತಪಡಿಸಿಕೊಳ್ಳಲು ಎಸ್‌ಟಿಪಿ ಕಾಮಗಾರಿ ಆರಂಭವಾದ ನಂತರ ಒಳಚರಂಡಿ ಕಾಮಗಾರಿ ಮತ್ತು ಮ್ಯಾನ್‌ಹೋಲ್ ಚೇಂಬರ್‌ಗಳ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕು.

ಲೆಕ್ಕಪರಿಶೋಧನಾ ಆವಿಷ್ಕಾರಗಳು

ಭೂಮಿಯ ಲಭ್ಯತೆಯನ್ನು ಖಚಿತಪಡಿಸಿಕೊಳ್ಳದಿರುವುದು

2.13.4. ಪರೀಕ್ಷಾ-ತನಿಖೆ ನಡೆಸಿದ 14 ಯೋಜನೆಗಳಲ್ಲಿ 18 ಎಸ್‌ಟಿಪಿಗಳು ಮತ್ತು 31 ಆರ್ದ್ರಭಾವಿಗಳ ನಿರ್ಮಾಣಕ್ಕೆ ಅಂದಾಜಿಸಲಾದ ಭೂಮಿಯ ಅಗತ್ಯತೆಯು ಒಟ್ಟು 85 ಎಕರೆ 38.50 ಗುಂಟೆಗಳಾಗಿತ್ತು. 14 ಯೋಜನೆಗಳಲ್ಲಿ ಎಂಟು ಯೋಜನೆಗಳಿಗೆ ಸಂಬಂಧಿಸಿದಂತೆ ನಗರ ಸ್ಥಳೀಯ ಸಂಸ್ಥೆಗಳು ಮಾರ್ಚ್ 2021ರಲ್ಲಿದ್ದಂತೆ 45 ಎಕರೆ ಮತ್ತು 36.50 ಗುಂಟೆ ಭೂಮಿಯನ್ನು ಮಂಡಳಿಗೆ ಹಸ್ತಾಂತರಿಸಿರುವುದನ್ನು (ಮಾರ್ಚ್ 2021) ಲೆಕ್ಕಪರಿಶೋಧನೆಯು ಗಮನಿಸಿತು. ಅಂದರೆ ಕಾಮಗಾರಿಗಳನ್ನು ಪ್ರಾರಂಭಿಸಿದ 5ರಿಂದ 14 ವರ್ಷಗಳ ನಂತರ. ಉಳಿದ ಆರು[94] ಯೋಜನೆಗಳಿಗೆ ಭೂಮಿಯನ್ನು ಇನ್ನೂ ಹಸ್ತಾಂತರಿಸಲಾಗಿಲ್ಲ (ಮಾರ್ಚ್ 2021).

ಈ ಕೆಳಕಂಡ ಕಾರಣಗಳಿಂದ ಭೂ ಸ್ವಾಧೀನಪಡಿಸಿಕೊಂಡ ಎಂಟು ಯೋಜನೆಗಳಲ್ಲಿಯೂ ಸಹ ಕಾಮಗಾರಿಗಳು ಪೂರ್ಣಗೊಂಡಿಲ್ಲದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

- ನಗರ ಸ್ಥಳೀಯ ಸಂಸ್ಥೆಗಳು ಭೂಮಿಯನ್ನು ಹಸ್ತಾಂತರಿಸಿದ ನಾಲ್ಕು[95] ಯೋಜನೆಗಳಲ್ಲಿ, ಸಾರ್ವಜನಿಕ ಪ್ರತಿಭಟನೆಗಳು/ನ್ಯಾಯಾಲಯದ ಪ್ರಕರಣಗಳಿಂದಾಗಿ ಕಾಮಗಾರಿಯು ಪ್ರಾರಂಭವಾಗಿರಲಿಲ್ಲ. ನಗರ ಸ್ಥಳೀಯ ಸಂಸ್ಥೆಗಳು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಮೊದಲು ಸಾರ್ವಜನಿಕರಿಂದ ಒಪ್ಪಿಗೆಯನ್ನು ಪಡೆದಿರಲಿಲ್ಲ ಎಂಬ ಅಂಶವನ್ನು ಇದು ಸೂಚಿಸುತ್ತದೆ;

- ಎರಡು ಯೋಜನೆಗಳಲ್ಲಿ (ಬಾಗೇಪಲ್ಲಿ ಮತ್ತು ಹಿರೇಕೆರೂರು), ಒಳಚರಂಡಿ ಜಾಲವು ಪೂರ್ಣಗೊಂಡ (ಜೂನ್ 2015 ಮತ್ತು ಮೇ 2017) ನಂತರ ಭೂಮಿಯನ್ನು ಹಸ್ತಾಂತರಿಸಲಾಗಿತ್ತು (ಮೇ 2020 ಮತ್ತು ಜನವರಿ 2018). ಎಸ್‌ಟಿಪಿ, ಆರ್ದ್ರಬಾವಿ ಮತ್ತು ಸಂಬಂಧಿತ ಕಾಮಗಾರಿಗಳ ನಿರ್ಮಾಣದ ಕಾಮಗಾರಿಗಳನ್ನು ಮೂಲ ಗುತ್ತಿಗೆಯಿಂದ ಹಿಂತೆಗೆದುಕೊಳ್ಳಲಾಯಿತು ಮತ್ತು ಕಾಮಗಾರಿಗಳನ್ನು ಸ್ಥಗಿತಗೊಳಿಸಲಾಯಿತು (ಜುಲೈ 2016 ಮತ್ತು ಜುಲೈ 2019). ಮಂಜೂರು ಮಾಡಿದ ಭೂಮಿಯಲ್ಲಿ ಎಸ್‌ಟಿಪಿ ಮತ್ತು ಆರ್ದ್ರಬಾವಿ ಕಾಮಗಾರಿ ಇನ್ನೂ (ಮಾರ್ಚ್ 2021) ಪ್ರಾರಂಭಗೊಂಡಿರಲಿಲ್ಲ;

- ಒಂದು ಯೋಜನೆಯಲ್ಲಿ (ಕುಮಟಾ), ನವೆಂಬರ್ 2010ರಲ್ಲಿಯೇ ಭೂಮಿಯನ್ನು ಹಸ್ತಾಂತರಿಸಲ್ಪಟ್ಟಿದ್ದರೂ, ಕರ್ನಾಟಕ ಕರಾವಳಿ ನಿರ್ವಹಣಾ ಪ್ರಾಧಿಕಾರ ಮತ್ತು ಕೆಎಸ್‌ಪಿಸಿಬಿಯಿಂದ ಅನುಮತಿ ದೊರಕದ ಕಾರಣ ಎಸ್‌ಟಿಪಿ ನಿರ್ಮಾಣವನ್ನು ಪ್ರಾರಂಭಿಸಿರಲಿಲ್ಲ.

- ಒಂದು ಯೋಜನೆಯಲ್ಲಿ (ನಂಜನಗೂಡು), ಒಂದು ಎಸ್‌ಟಿಪಿ ಮತ್ತು ಯೋಜಿಸಲಾದ ಮೂರು ಆರ್ದ್ರಭಾವಿಗಳಲ್ಲಿ ಎರಡನ್ನು ಪೂರ್ಣಗೊಳಿಸಲಾಗಿತ್ತು. ಉಳಿದಿರುವ ಒಂದು ಆರ್ದ್ರಬಾವಿಗೆ ಅಗತ್ಯವಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿರಲಿಲ್ಲ (ಮಾರ್ಚ್ 2021).

- ಯೋಜಿತ 31 ಆರ್ದ್ರಬಾವಿಗಳಲ್ಲಿ ನಾಲ್ಕು ಮತ್ತು ಯೋಜಿತ 17 ಎಸ್‌ಟಿಪಿಗಳಲ್ಲಿ ಒಂದನ್ನು[96] ಮಾತ್ರ ಪೂರ್ಣಗೊಳಿಸಲಾಗಿತ್ತು ಮತ್ತು ಯೋಜಿಸಲಾದ 17 ಸೆಪ್ಟಿಕ್ ಟ್ಯಾಂಕ್‌ಗಳಲ್ಲಿ ಯಾವುದನ್ನೂ ಪ್ರಾರಂಭಿಸಿರಲಿಲ್ಲ.

ಹೀಗೆ, ಮಂಡಳಿಯು ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆ ಮತ್ತು ತನ್ನದೇ ಸೂಚನೆಗಳನ್ನು ಉಲ್ಲಂಘಿಸಿ ಭೂಮಿಯ ಲಭ್ಯತೆಯನ್ನು ಖಚಿತಪಡಿಸಿಕೊಳ್ಳದೆ ಒಳಚರಂಡಿ

[94] ಅರಕಲಗೂಡು, ಬಂಟ್ವಾಳ, ಚಿಂತಾಮಣಿ, ಕಾಪು, ಕುಂದಾಪುರ ಮತ್ತು ಮಡಿಕೇರಿ.

[95] ಹೊನ್ನಾವರ, ಪಾಂಡವಪುರ, ಸೌಂದತ್ತಿ ಮತ್ತು ಉಲ್ಲಾಳ.

[96] ನಂಜನಗೂಡಿನಲ್ಲಿ.

ಕಾಮಗಾರಿಗಳನ್ನು ಕೈಗೆತ್ತಿಕೊಂಡಿತ್ತು. ಎಸ್‌ಟಿಪಿ ಕಾಮಗಾರಿಗಳಿಗೆ ಭೂಮಿಯ ಹಸ್ತಾಂತರಿಸುವಿಕೆಯನ್ನು ಖಚಿತಪಡಿಸಿಕೊಳ್ಳಲು ಸಂಬಂಧಿಸಿದ ಯುಎಲ್‌ಬಿಗಳಿಗೆ ನಿರ್ದಿಷ್ಟ ಷರತ್ತುಗಳನ್ನು 14ರ ಪೈಕಿ ನಾಲ್ಕು[97] ಯೋಜನೆಗಳ ಆಡಳಿತಾತ್ಮಕ ಅನುಮೋದನೆಗಳಲ್ಲಿ ಮಾತ್ರ ಅಳವಡಿಸಲಾಗಿತ್ತು ಎಂಬುದನ್ನು ಗಮನಿಸಿಲಾಯಿತು. ಹೀಗೆ, ಮಂಡಳಿಯು ಎಸ್‌ಟಿಪಿ ಮತ್ತು ಆರ್ದ್ರಬಾವಿಗಳಿಗೆ ಭೂಮಿಯ ಲಭ್ಯತೆಗೆ ಸಂಬಂಧಿಸಿದಂತೆ ನಗರ ಸ್ಥಳೀಯ ಸಂಸ್ಥೆಗಳಿಂದ ಭರವಸೆಯನ್ನು ಪಡೆಯದೆ ಬಹುತೇಕ ಒಳಚರಂಡಿ ಕಾಮಗಾರಿಗಳನ್ನು ಕೈಗೆತ್ತಿಕೊಂಡಿತ್ತು. ಅಲ್ಲದೆ, ಸಾರ್ವಜನಿಕ ಒಪ್ಪಿಗೆ ಹಾಗೂ ಕೆಎಸ್‌ಪಿಸಿಬಿಯಿಂದ ಅನುಮತಿ ಪಡೆಯದ ಕಾರಣ ಭೂಮಿ ಹಸ್ತಾಂತರಿಸಿದ ಪ್ರಕರಣಗಳಲ್ಲಿಯೂ ಸಹ ಕಾಮಗಾರಿಗಳನ್ನು ಪೂರ್ಣಗೊಳಿಸಲು ಮಂಡಳಿ ವಿಫಲವಾಗಿತ್ತು.

ಎಸ್‌ಟಿಪಿಗಳನ್ನು ಪೂರ್ಣಗೊಳಿಸದೆ ಒಳಚರಂಡಿ ಜಾಲವನ್ನು ಪೂರ್ಣಗೊಳಿಸಿರುವುದು

2.13.5. ಮಂಡಳಿ ಜಾರಿಗೊಳಿಸಿರುವ ಸೂಚನೆಯಂತೆ ಎಸ್‌ಟಿಪಿ ಕಾಮಗಾರಿಗಳು ಆರಂಭವಾದ ನಂತರ ಒಳಚರಂಡಿ ಕಾಮಗಾರಿ ಹಾಗೂ ಮ್ಯಾನ್‌ಹೋಲ್ ಚೇಂಬರ್‌ಗಳ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕಾಗಿರುತ್ತದೆ. ಆದರೆ, ಎಸ್‌ಟಿಪಿಗಳ ಪ್ರಾರಂಭವನ್ನು ಖಚಿತಪಡಿಸಿಕೊಳ್ಳದೆಯೇ ಮಂಡಳಿಯು ಮಾರ್ಚ್ 2021ರಲ್ಲಿದ್ದಂತೆ 705.18 ಕಿಮೀ ಒಳಚರಂಡಿ ಮಾರ್ಗಗಳಲ್ಲಿ 530.82 ಕಿಮೀಗಳನ್ನು (ಶೇಕಡಾ 75) ಮತ್ತು 25,807 ಮ್ಯಾನ್‌ಹೋಲ್‌ಗಳಲ್ಲಿ 19,875ನ್ನು (ಶೇಕಡಾ 77) ಪೂರ್ಣಗೊಳಿಸಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. 14 ಪರೀಕ್ಷಾ-ತನಿಖೆ ನಡೆಸಿದ ಯೋಜನೆಗಳಿಗೆ ಸಂಬಂಧಿಸಿದಂತೆ ಭೌತಿಕ ಪ್ರಗತಿಯನ್ನು ***ಅನುಬಂಧ-16ರಲ್ಲಿ*** ನೀಡಲಾಗಿದೆ. ಈ ಸ್ವತ್ತುಗಳನ್ನು ಅಕ್ಟೋಬರ್ 2010 ಮತ್ತು ನವೆಂಬರ್ 2018ರ ನಡುವಿನ ಅವಧಿಯಲ್ಲಿ ನಿರ್ಮಿಸಲಾಗಿತ್ತು ಮತ್ತು ಇವುಗಳ ಮೇಲೆ ₹ 198.75 ಕೋಟಿಗಳ ಗಮನಾರ್ಹ ವೆಚ್ಚವನ್ನು ಭರಿಸಲಾಗಿತ್ತು.

ಈ 14 ಯೋಜನೆಗಳಡಿಯಲ್ಲಿ ಮಂಡಳಿ ಮತ್ತು ನಗರ ಸ್ಥಳೀಯ ಸಂಸ್ಥೆಗಳು 78,094 ಮನೆಗಳಿಗೆ ಸಂಪರ್ಕವನ್ನು ಒದಗಿಸಲು ಯೋಜಿಸಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಮಾರ್ಚ್ 2021ರಲ್ಲಿದ್ದಂತೆ ಕೇವಲ 21,286 ಮನೆಗಳಿಗೆ ಮಾತ್ರ ಸಂಪರ್ಕಗಳನ್ನು (ಶೇಕಡಾ 27) ಒದಗಿಸಲಾಗಿತ್ತು. 14ರಲ್ಲಿ ಏಳು ಯೋಜನೆಗಳಲ್ಲಿ[98] ಮಂಡಳಿಯು ಮನೆಗಳಿಗೆ ಸಂಪರ್ಕ ಒದಗಿಸುವ ಅವಕಾಶ ಕಲ್ಪಿಸಿತ್ತು, ನಗರ ಸ್ಥಳೀಯ ಸಂಸ್ಥೆಗಳು ಜವಾಬ್ದಾರರಾಗಿರುವ ಉಳಿದ ಏಳು ಯೋಜನೆಗಳಲ್ಲಿ ಎರಡು[99] ನಗರ ಸ್ಥಳೀಯ ಸಂಸ್ಥೆಗಳು ಮನೆಗಳಿಗೆ ಸಂಪರ್ಕವನ್ನು ಒದಗಿಸುವ ಕಾರ್ಯಯೋಜನೆಯನ್ನೂ ಸಹ ಹೊಂದಿಲ್ಲದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಹೀಗೆ, ಮೇಲಿನ ಒಳಚರಂಡಿ ಜಾಲಕ್ಕೆ (530.82 ಕಿಮೀ) ಅನುಗುಣವಾದ ಎಸ್‌ಟಿಪಿಗಳು ಮತ್ತು ಆರ್ದ್ರಬಾವಿಗಳ ನಿರ್ಮಾಣದ ಅನುಪಸ್ಥಿತಿಯಲ್ಲಿ ಮತ್ತು ಸಮರ್ಪಕ ವಸತಿ ಸಂಪರ್ಕಗಳನ್ನು ಒದಗಿಸದ ಕಾರಣ, ಈ ಆಸ್ತಿಗಳ ರಚನೆಗೆ ಮಾಡಿದ ₹ 198.75 ಕೋಟಿ ವೆಚ್ಚವು ಫಲಪ್ರದವಾಗದೆ ಉಳಿದು, ಉದ್ದೇಶವನ್ನು ವಿಫಲಗೊಳಿಸಿತು. ಪ್ರಮುಖವಾಗಿ, ಕೆಳಗೆ ಚರ್ಚಿಸಿದಂತೆ, ಎಸ್‌ಟಿಪಿಗಳನ್ನು ಪೂರ್ಣಗೊಳಿಸದಿರುವುದು ಪರಿಸರದ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತದೆ.

ನೈಸರ್ಗಿಕ ಜಲಮೂಲಗಳನ್ನು ಮಲಿನಗೊಳಿಸಿರುವುದು

2.13.6. ಪರೀಕ್ಷಾ-ತನಿಖೆ ನಡೆಸಿದ ಸ್ಥಳೀಯ ಸಂಸ್ಥೆಗಳು ದಿನಕ್ಕೆ 53.113[100] ಮಿಲಿಯನ್ ಲೀಟರ್ (ಎಮ್‌ಎಲ್‌ಡಿ) ಸಂಸ್ಕರಿಸದ ಕೊಳಚೆ ನೀರನ್ನು ನೈಸರ್ಗಿಕ ಜಲಮೂಲಗಳಿಗೆ (ನದಿಗಳು, ಸರೋವರಗಳು, ಇತ್ಯಾದಿ) ಹರಿಬಿಡುತ್ತಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಪ್ರತಿ ಸ್ಥಳೀಯ ಸಂಸ್ಥೆಯಿಂದ ದಿನಕ್ಕೆ ಉತ್ಪತ್ತಿಯಾಗುವ ಕೊಳಚೆನೀರಿನ ವಿವರಗಳು, ಕೊಳಚೆ ನೀರನ್ನು ವಿಲೇವಾರಿ ಮಾಡುವ ವಿಧಾನ ಮತ್ತು ಕಲುಷಿತವಾಗಿರುವ ಜಲಮೂಲಗಳ ವಿವರಗಳನ್ನು ***ಅನುಬಂಧ-17ರಲ್ಲಿ*** ನೀಡಲಾಗಿದೆ. ಎಸ್‌ಟಿಪಿಗಳನ್ನು

[97] ಅರಕಲಗೂಡು, ಬಾಗೇಪಲ್ಲಿ, ಹಿರೇಕೇರೂರು, ಮಡಿಕೇರಿ.

[98] **ಯುಐಡಿಎಸ್‌ಎಸ್‌ಎಮ್‌ಟಿ ಯೋಜನೆ:** ಕುಂದಾಪುರ, ನಂಜನಗೂಡು, ಪಾಂಡವಪುರ ಮತ್ತು ಸೌಂದತ್ತಿ; **ರಾಜ್ಯ ಯೋಜನೆಗಳು:** ಬಂಟ್ವಾಳ, ಚಿಂತಾಮಣಿ ಮತ್ತು ಉಲ್ಲಾಳ.

[99] ಬಂಟ್ವಾಳ ಮತ್ತು ಉಲ್ಲಾಳ.

[100] ಎಸ್‌ಟಿಪಿಯ ನಿರ್ಮಾಣವು ಭಾಗಶ: ಪೂರ್ಣಗೊಂಡಿರುವ ನಂಜನಗೂಡು ನಗರವು ಉತ್ಪಾದಿಸುತ್ತಿರುವ 11.920 ಎಮ್‌ಎಲ್‌ಡಿ ಯನ್ನು ಹೊರತುಪಡಿಸಿ.

ಪೂರ್ಣಗೊಳಿಸದಿರುವುದು ಸಂಸ್ಕರಣೆ ಮಾಡದ ಕೊಳಚೆನೀರನ್ನು ಜಲಮೂಲಗಳಿಗೆ ಬಿಡುವ ಮೂಲಕ ಅವುಗಳನ್ನು ಮಲಿನಗೊಳಿಸುತ್ತದೆ ಮತ್ತು ಜೀವರಾಶಿಗೆ ಅಪಾಯವನ್ನುಂಟು ಮಾಡುತ್ತದೆ. ಮಂಡಳಿಯ ಅಧಿಕಾರಿಗಳೊಂದಿಗೆ ನಡೆಸಿದ ಜಂಟಿ ಭೌತಿಕ ಪರಿಶೀಲನೆಯ ಪ್ರಮುಖ ಅವಲೋಕನಗಳನ್ನು ***ಅನುಬಂಧ-18ರಲ್ಲಿ*** ನೀಡಲಾಗಿದೆ. ಎಸ್‌ಟಿಪಿಗಳ ಅನುಪಸ್ಥಿತಿಯಲ್ಲಿ, ಸಂಸ್ಕರಿಸದ ಕೊಳಚೆ ನೀರನ್ನು ನೇರವಾಗಿ ನದಿಗಳಿಗೆ ಬಿಡಲಾಗುತ್ತಿತ್ತು. ನದಿಗಳು ಕುಡಿಯುವ ನೀರಿನ ಮತ್ತು ಇತರ ಉದ್ದೇಶಗಳಿಗೆ ಆಕರವಾಗಿದ್ದರಿಂದ ಪರಿಸರ ಮತ್ತು ಮಾನವ ಜೀವಗಳಿಗೆ ಅಪಾಯವನ್ನು ಉಂಟುಮಾಡುತ್ತಿದ್ದವು.

₹ 3.68 ಕೋಟಿ ಮೌಲ್ಯದ ಪೈಪ್‌ಗಳು ನಿರುಪಯುಕ್ತವಾಗಿರುವುದು

2.13.7. ಕುಂದಾಪುರದ ಒಳಚರಂಡಿ ಕಾಮಗಾರಿಗೆ ಸಂಬಂಧಿಸಿದಂತೆ 96 ಕಿಲೋಮೀಟರ್ ಉದ್ದದ ವಿವಿಧ ವರ್ಗದ ಪೈಪ್‌ಗಳ ಖರೀದಿಗಾಗಿ ಮಂಡಳಿಯು ಗುತ್ತಿಗೆದಾರರಿಗೆ ₹ 6.63 ಕೋಟಿ ಮೊತ್ತವನ್ನು[101] ಪಾವತಿಸಿತು (ಏಪ್ರಿಲ್ 2016 ರಿಂದ ಆಗಸ್ಟ್ 2020). ಇದರಲ್ಲಿ 41 ಕಿಮೀ ಪೈಪ್‌ಗಳನ್ನು ಮಾತ್ರ ಬಳಸಾಗಿತ್ತು (ಆಗಸ್ಟ್ 2020) ಮತ್ತು ₹ 3.68 ಕೋಟಿ ಮೌಲ್ಯದ ಉಳಿದ 55 ಕಿಮೀ ಪೈಪ್‌ಗಳು ಗುತ್ತಿಗೆದಾರರ ಬಳಿ ನಾಲ್ಕು ವರ್ಷಗಳಿಂದ ಬಳಕೆಯಾಗದೆ ಉಳಿದಿವೆ ಏಕೆಂದರೆ ಎಸ್‌ಟಿಪಿ ಮತ್ತು ಆರ್ದ್ರಬಾವಿಗಳ ನಿರ್ಮಾಣಕ್ಕೆ ಸ್ಥಳವನ್ನು ಇನ್ನೂ ಅಂತಿಮಗೊಳಿಸಬೇಕಿತ್ತು.

ನಿರ್ಣಯ

1. ಏಳು ಯೋಜನೆಗಳಲ್ಲಿ ಭೂಮಿಯ ಲಭ್ಯತೆಯಿದ್ದರೂ ಸಹ ಎಸ್‌ಟಿಪಿಗಳನ್ನು ಪೂರ್ಣಗೊಳಿಸಲು ಮತ್ತು ಆರು ಯೋಜನೆಗಳಲ್ಲಿ ಭೂಮಿಯ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಮಂಡಳಿಯು ವಿಫಲವಾಯಿತು. ಎಸ್‌ಟಿಪಿಗಳ ಅನುಪಸ್ಥಿತಿಯು ಪರಿಸರ ಮತ್ತು ಮಾನವ ಜೀವನದ ಮೇಲೆ ದುಷ್ಪರಿಣಾಮ ಬೀರುತ್ತದೆ ಏಕೆಂದರೆ ಯೋಜನಾ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಕುಡಿಯುವ ನೀರಿನ ಮೂಲವಾಗಿ ಕಾರ್ಯನಿರ್ವಹಿಸುವ ಜಲಮೂಲಗಳಿಗೆ ಸಂಸ್ಕರಿಸದ ಕೊಳಚೆ ನೀರು ಬಿಡಲಾಗುತ್ತಿತ್ತು.

2. ಒಳಚರಂಡಿ ಜಾಲವನ್ನು ರಚಿಸಲು ಮಾಡಿದ ₹ 198.75 ಕೋಟಿ ವೆಚ್ಚವು ಎಸ್‌ಟಿಪಿಗಳನ್ನು ಪೂರ್ಣಗೊಳಿಸದ ಮತ್ತು ಮನೆಗಳಿಗೆ ಸಂಪರ್ಕವನ್ನು ಖಚಿತಪಡಿಸಿಕೊಳ್ಳದ ಕಾರಣ ಫಲಪ್ರದವಾಗಲಿಲ್ಲ.

3. 10 ವರ್ಷಗಳಿಗಿಂತ ಹೆಚ್ಚು ಅವಧಿಯಲ್ಲಿ ರಚಿಸಲಾದ ಒಳಚರಂಡಿ ಜಾಲವನ್ನು ಬಳಕೆ ಮಾಡದಿರುವುದು ಮತ್ತು ನಿರ್ವಹಣೆ ಮಾಡದಿರುವುದು ಆ ಸ್ವತ್ತುಗಳು ಅಪ್ರಚಲಿತವಾಗುವ ಅಪಾಯದಿಂದ ಕೂಡಿತ್ತು.

ಹೀಗೆ ಕರ್ನಾಟಕ ನಗರ ಕುಡಿಯುವ ನೀರು ಮತ್ತು ನೈರ್ಮಲ್ಯ ನೀತಿಯಲ್ಲಿ ಕಲ್ಪಿಸಿದಂತೆ ನಗರವಾಸಿಗಳಿಗೆ ಸಮರ್ಪಕ ಮತ್ತು ಸರಿಯಾದ ನೈರ್ಮಲ್ಯವನ್ನು ಒದಗಿಸಲು ಮೂಲಸೌಕರ್ಯಗಳನ್ನೂ ವೃದ್ಧಿಸುವ ಉದ್ದೇಶವನ್ನು 13 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಾಧಿಸಲಾಗಲಿಲ್ಲ.

ಈ ವಿಷಯವನ್ನು ಅಕ್ಟೋಬರ್ 2021ರಲ್ಲಿ ರಾಜ್ಯ ಸರ್ಕಾರಕ್ಕೆ ಉಲ್ಲೇಖಿಸಲಾಯಿತು ಮತ್ತು ಉತ್ತರವನ್ನು ನಿರೀಕ್ಷಿಸಲಾಗಿದೆ (ನವೆಂಬರ್ 2021).

ಶಿಫಾರಸು

ಸಾರ್ವಜನಿಕರಿಗೆ ನೈರ್ಮಲ್ಯ ಸೌಲಭ್ಯಗಳನ್ನು ಒದಗಿಸಲು ಮತ್ತು ಪರಿಸರ ಹಾನಿಯನ್ನು ತಡೆಗಟ್ಟಲು ಒಳಚರಂಡಿ ವ್ಯವಸ್ಥೆಯನ್ನು ಸಮಗ್ರವಾಗಿ ಪೂರ್ಣಗೊಳಿಸುವುದನ್ನು ಖಚಿತಪಡಿಸಿಕೊಳ್ಳಲು ಒಳಚರಂಡಿ ಕಾಮಗಾರಿಗಳನ್ನು ಕಾರ್ಯಗತಗೊಳಿಸುವ ಮೊದಲು ಎಸ್‌ಟಿಪಿಗಳು ಮತ್ತು ಆರ್ದ್ರಬಾವಿಗಳಿಗೆ ಭೂಮಿಯ ಲಭ್ಯತೆಯನ್ನು ಮಂಡಳಿಯು ಖಚಿತಪಡಿಸಿಕೊಳ್ಳಬೇಕು.

[101] ಟೆಂಡರ್ ಬೆಲೆಯ ಶೇಕಡಾ 75ರಷ್ಟು.

2.14. ಸಂಹಿತೆಯ ನಿಬಂಧನೆಗಳನ್ನು ಅನುಸರಿಸದ ಕಾರಣ ₹ 1.61 ಕೋಟಿ ನಷ್ಟ

ವ್ಯತ್ಯಯ ಕಾಮಗಾರಿಗಳ ಪಾವತಿಗಳ ಅನುಮೋದನೆ ಮತ್ತು ನಿಯಂತ್ರಣದಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆಯಲ್ಲಿ ಅನುಮೋದಿಸಲಾದ ಕಾರ್ಯವಿಧಾನವನ್ನು ಅನುಸರಿಸಲು ವಿಫಲವಾಗಿದ್ದರಿಂದ ₹ 1.61 ಕೋಟಿ ಆರ್ಥಿಕ ನಷ್ಟದಲ್ಲಿ ಪರಿಣಮಿಸಿತು.

ಅಂದಾಜುಗಳಿಗೆ ತಾಂತ್ರಿಕ ಮಂಜೂರಾತಿ ನೀಡಿದ ಅಧೀಕ್ಷಕ ಇಂಜಿನಿಯರ್ (ಎಸ್ಇ) ಅಥವಾ ಮುಖ್ಯ ಇಂಜಿನಿಯರ್ (ಸಿಇ), ಇವರುಗಳ ಅನುಮೋದನೆಯನ್ನು ಪಡೆಯದೇ ಕಾರ್ಯನಿರ್ವಾಹಕ ಇಂಜಿನಿಯರ್ (ಇಇ) ಯಾವುದೇ ಹೆಚ್ಚುವರಿ ಕಾಮಗಾರಿಯನ್ನು ಆದೇಶಿಸಬಾರದು ಎಂದು ಕರ್ನಾಟಕ ಲೋಕೋಪಯೋಗಿ ಇಲಾಖಾ (ಕೆಪಿಡಬ್ಲ್ಯುಡಿ) ಸಂಹಿತೆಯ ಕಂಡಿಕೆ 184 ನಿಗದಿಪಡಿಸುತ್ತದೆ. ಈ ಸಂಹಿತೆಯ ಉಪಸಿದ್ಧಾಂತವಾಗಿ, ತಾಂತ್ರಿಕ ಮಂಜೂರಾತಿ ಪ್ರಾಧಿಕಾರದ ಅನುಮೋದನೆ ಪಡೆಯುವವರೆಗೆ ಇಇ ಅಂತಹ ವಸ್ತುಗಳಿಗೆ ಯಾವುದೇ ನಿರ್ದಿಷ್ಟ ದರಗಳನ್ನು ಗುತ್ತಿಗೆದಾರರಿಗೆ ನೀಡಬಾರದು. ಗುತ್ತಿಗೆದಾರರು ಹಾಗೂ ಕಾಮಗಾರಿಯ ಉಸ್ತುವಾರಿ ಇಂಜಿನಿಯರ್‌ರವರು ಮೊದಲು ಸಕ್ಷಮ ಪ್ರಾಧಿಕಾರದಿಂದ ಲಿಖಿತ ಅನುಮೋದನೆಯ ನಂತರವೇ ಹೆಚ್ಚುವರಿ ಕಾಮಗಾರಿಯನ್ನು ಕಾರ್ಯಗತಗೊಳಿಸಬೇಕು.

ಕರ್ನಾಟಕ ಸರ್ಕಾರವು ₹ 25.00 ಕೋಟಿ ಅಂದಾಜು ವೆಚ್ಚದಲ್ಲಿ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ನಗರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ (ಯುಐಡಿಎಸ್ಎಸ್ಎಮ್‌ಟಿ) ನಂಜನಗೂಡು ಪಟ್ಟಣಕ್ಕೆ ಒಳಚರಂಡಿ (ಯುಜಿಡಿ) ಯೋಜನೆಯ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಿತು (ಸೆಪ್ಟೆಂಬರ್ 2012). ಮೇಲಿನ ಅಂದಾಜಿನ ಅನ್ವಯ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ (ಮಂಡಳಿ) ವ್ಯವಸ್ಥಾಪಕ ನಿರ್ದೇಶಕರು (ಎಂಡಿ) (ಮಾರ್ಚ್ 2014) "ಹಳ್ಳದಕೇರಿಯಲ್ಲಿ ಒಳಚರಂಡಿ ಜಾಲವನ್ನು ಒದಗಿಸುವುದು, ಡಿಐ ರೈಸಿಂಗ್ ಮೇನ್‌ಗಳನ್ನು ಒದಗಿಸುವುದು, ಪ್ರಾಥಮಿಕ ಸಂಸ್ಕರಣಾ ಘಟಕ, ಆರ್ದ್ರಬಾವಿಗಳು, 7 ಎಮ್ಎಲ್‌ಡಿ ಸಾಮರ್ಥ್ಯದ ಕೊಳಚೆ ನೀರು ಸಂಸ್ಕರಣಾ ಘಟಕ (ಎಸ್‌ಟಿಪಿ) ಮತ್ತು ಅದಕ್ಕೆ ಸಂಬಂಧಿಸಿದಂತೆ ₹ 8.21 ಕೋಟಿ ಮೊತ್ತದ ನಿರ್ಮಾಣದ ಕಾಮಗಾರಿಗೆ ಸವಿವರ ತಾಂತ್ರಿಕ ಮಂಜೂರಾತಿಯನ್ನು ನೀಡಿದ್ದರು. ಗುತ್ತಿಗೆದಾರರೊಬ್ಬರಿಗೆ, ಅವರ ಉಲ್ಲೇಖಿತ ದರ ₹ 10.75 ಕೋಟಿ ವೆಚ್ಚದಲ್ಲಿ ಕಾಮಗಾರಿಯನ್ನು ವಹಿಸಲಾಯಿತು (ಜೂನ್ 2015). ನಗರ ಸ್ಥಳೀಯ ಸಂಸ್ಥೆಯು ನಿವೇಶನವನ್ನು ಹಸ್ತಾಂತರಿಸದ ಕಾರಣ "ಆರ್ದ್ರ ಬಾವಿ ನಿರ್ಮಾಣ" ಹೊರತುಪಡಿಸಿ ಕಾಮಗಾರಿಯನ್ನು ಪೂರ್ಣಗೊಳಿಸಲಾಯಿತು (ಜುಲೈ 2017). ₹ 9.42 ಕೋಟಿ ವೆಚ್ಚದ ನಂತರ ಮೇಲಿನ ಘಟಕವನ್ನು ಹೊರತುಪಡಿಸಿ ಗುತ್ತಿಗೆಯನ್ನು ಮುಕ್ತಾಯಗೊಳಿಸಲಾಯಿತು (ಆಗಸ್ಟ್ 2017).

ಎಸ್‌ಟಿಪಿ ನಿವೇಶನವು ರಾಷ್ಟ್ರೀಯ ಹೆದ್ದಾರಿ, ದೇವಸ್ಥಾನ ಮತ್ತು ಕೋಳಿ ಫಾರಂಗೆ ಹತ್ತಿರವಾಗಿರುವುದರಿಂದ ನಿಯಂತ್ರಿತ ಸ್ಫೋಟದ ಮೂಲಕ ಗಟ್ಟಿಯಾದ ಬಂಡೆಯನ್ನು ತೆಗೆಯಲು ಸೆಲೆಕ್ಷನ್ ಗ್ರೇಡ್ ಎಕ್ಸಿಕ್ಯೂಟಿವ್ ಇಂಜಿನಿಯರ್, ಮೈಸೂರು ಇವರು ಸೂಚನೆಗಳನ್ನು ನೀಡಿದ್ದರು ಎಂದು ಕಾಮಗಾರಿಯ ಪರಿಶೀಲನೆಯ ಸಮಯದಲ್ಲಿ ಲೆಕ್ಕಪರಿಶೋಧನೆಯು ಗಮನಿಸಿತು (ಫೆಬ್ರವರಿ 2016). ಈ ಕಾಮಗಾರಿಗೆ, ಇದೇ ರೀತಿಯ ಕಾಮಗಾರಿಗಳಿಗೆ ಏಜೆನ್ಸಿ ಉಲ್ಲೇಖಿಸಿದ ದರಗಳಲ್ಲಿ ಪಾವತಿಗಳನ್ನು ಮಾಡಲು ಸೂಚಿಸಿದ್ದರು. ಎಸ್‌ಟಿಪಿಗಾಗಿ ನಿಯಂತ್ರಿತ ಸ್ಫೋಟದ ಮೂಲಕ ಗಟ್ಟಿಯಾದ ಬಂಡೆಯನ್ನು ತೆಗೆಯುವುದಕ್ಕೆ ದರವು ಬಿಲ್ ಆಫ್ ಕ್ವಾಂಟಿಟೀಸ್‌ನಲ್ಲಿ (ಬಿಒಕ್ಯೂ) ಲಭ್ಯವಿಲ್ಲದ ಕಾರಣ, ಬಿಒಕ್ಯೂನಲ್ಲಿ ಲಭ್ಯವಿರುವ ಆರ್ದ್ರ ಬಾವಿಗಾಗಿ ನಿಯಂತ್ರಿತ ಸ್ಫೋಟದ ಮೂಲಕ ಗಟ್ಟಿಯಾದ ಬಂಡೆ ಉತ್ಖನನದ ದರಗಳನ್ನು ಪಾವತಿಗಳನ್ನು ಮಾಡಲು ಅಳವಡಿಸಿಕೊಳ್ಳಲಾಯಿತು.

ಲೆಕ್ಕಪರಿಶೋಧನೆಯಲ್ಲಿ ಕೆಳಗಿನವುಗಳನ್ನು ಗಮನಿಸಲಾಯಿತು:

- ಬಿಒಕ್ಯೂನಲ್ಲಿ "ಎಸ್‌ಟಿಪಿಗಾಗಿ ಗಟ್ಟಿಬಂಡೆಯ ಉತ್ಖನನ" ಕ್ಕೆ ಮಾತ್ರ ಅವಕಾಶವಿದ್ದಿತು, ಆ ದರಗಳನ್ನು ಸಣ್ಣ ನೀರಾವರಿ ದರಪಟ್ಟಿಯ ದರಗಳಿಂದ ಅಳವಡಿಸಿಕೊಳ್ಳಲಾಗಿತ್ತು. "ಎಸ್‌ಟಿಪಿಗಾಗಿ ನಿಯಂತ್ರಿತ ಸ್ಫೋಟಕದ ಮೂಲಕ ಗಟ್ಟಿಯಾದ ಬಂಡೆಯಲ್ಲಿ ಉತ್ಖನನ" ಅಂಶವು ಬಿಒಕ್ಯೂನಲ್ಲಿ

ಲಭ್ಯವಿಲ್ಲದ ಕಾರಣ, ಅದನ್ನು ಹೆಚ್ಚುವರಿ ಅಂಶವೆಂದು ಪರಿಗಣಿಸಬೇಕಿತ್ತು ಮತ್ತು ಟೆಂಡರ್ ಕಲಂ 35.3ರ[102] ಅನ್ವಯ, ಅಂದರೆ ಸಣ್ಣ ನೀರಾವರಿ ದರಪಟ್ಟಿಯ ದರ + ಟೆಂಡರ್ ಪ್ರೀಮಿಯಂ ಪಾವತಿಗಳನ್ನು ಮಾಡಬೇಕಿತ್ತು. ಆದರೆ ಇಇ, ಮೈಸೂರು ಅವರು "ಆರ್ದ್ರ ಬಾವಿಗಾಗಿ ನಿಯಂತ್ರಿತ ಸ್ಫೋಟದ ಮೂಲಕ ಗಟ್ಟಿ ಬಂಡೆಯ ಉತ್ಖನನ" ಕ್ಕೆ ಅನ್ವಯಿಸುವ ದರಗಳಲ್ಲಿ ಪಾವತಿಯನ್ನು ಮಾಡಿದರು, ಮತ್ತು ಅದು ಬಿಒಕ್ಯೂನಲ್ಲಿ ವಿಭಿನ್ನ ಅಂಶವಾಗಿತ್ತು. ಇದರ ಪರಿಣಾಮವಾಗಿ ಕೆಳಗೆ ವಿವರಿಸಿದಂತೆ ಹೆಚ್ಚುವರಿ ಪಾವತಿಯಾಯಿತು:

ಕೋಷ್ಟಕ ಸಂಖ್ಯೆ–2.14.1: ಎಸ್‌ಟಿಪಿಗಾಗಿ ಗಟ್ಟಿ ಬಂಡೆಯ ಉತ್ಖನನಕ್ಕೆ ಪಾವತಿ ಮಾಡಿದ ಅಧಿಕ ದರ

ಕ್ರಮ ಸಂಖ್ಯೆ	ಆಳ (ಮೀಟರ್)	ಕಾರ್ಯಗತಗೊಳಿಸಿದ ಪರಿಮಾಣ (ಕ್ಯೂಮೀ)	ಆರ್ದ್ರಬಾವಿಗೆ ಅನ್ವಯವಾಗುವ ಪಾವತಿಗೆ ಅಳವಡಿಸಿಕೊಂಡ ದರ (ಪ್ರತಿ ಕ್ಯೂಮೀಗೆ)	ಇಐಆರ್‌ಎಲ್ ಎಂದು ಪರಿಗಣಿಸಿ ಅಳವಡಿಸಿಕೊಳ್ಳಬೇಕಿದ್ದ ದರ (ಪ್ರತಿ ಕ್ಯೂಮೀಗೆ)	ಪಾವತಿಸಿದ ಅಧಿಕ ದರ (₹)	ಅಧಿಕ ಪಾವತಿ (₹)
1	0–2 ಮಿ	12,550.28	1688.34	671	1017.34	1,27,67,901.86
2	2–4 ಮಿ	2,202.72	1782.14	671	1111.14	24,47,530.30
3	4–6 ಮಿ	735.26	1875.93	671	1204.93	8,85,936.83
	ಒಟ್ಟು					**1,61,01,369**

- ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆಯ ನಿಬಂಧನೆಗಳ ಅನ್ವಯ, ಅಂದಾಜುಗಳಿಗೆ ತಾಂತ್ರಿಕ ಮಂಜೂರಾತಿಯನ್ನು ನೀಡಿದ ಅಧಿಕಾರಿಯ ಅನುಮೋದನೆಯ ನಂತರವೇ ಬದಲಾವಣೆಯ ವ್ಯತ್ಯಯ ಅಂಶಗಳಿಗೆ ಪಾವತಿಗಳನ್ನು ಮಾಡಬೇಕು. ಈ ಷರತ್ತನ್ನು ತನ್ನ ಸುತ್ತೋಲೆಯಲ್ಲಿ 07 ಜನವರಿ 1996ರಂದು ಮಂಡಳಿಯು ಪುನರುಚ್ಚರಿಸಿತ್ತು. ಆದಾಗ್ಯೂ, ಅಂದಾಜುಗಳನ್ನು ತಾಂತ್ರಿಕವಾಗಿ ಮಂಜೂರು ಮಾಡಿದ ಮಂಡಳಿಯ ನಿರ್ವಾಹಕ ನಿರ್ದೇಶಕರ ಅನುಮೋದನೆಯಿಲ್ಲದೆ ಇಇ, ಮೈಸೂರು, ಇವರು ಮೇಲಿನ ಹೆಚ್ಚಿನ ದರಗಳಲ್ಲಿ ವ್ಯತ್ಯಯದ ಅಂಶಗಳಿಗೆ ಪಾವತಿಗಳನ್ನು ಮಾಡಿದ್ದರು. ಗುತ್ತಿಗೆದಾರರಿಗೆ (ನವೆಂಬರ್ 2016) ಪಾವತಿಗಳನ್ನು ಮಾಡಿದ ನಂತರವೇ ಅನುಮೋದನೆಗಾಗಿ ಮಂಡಳಿಗೆ ವ್ಯತ್ಯಯದ ಪ್ರಸ್ತಾವನೆಗಳನ್ನು ಇಇ ಮೈಸೂರು, ಸಲ್ಲಿಸಿದ್ದರು (ಮಾರ್ಚ್ 2018).

- ದರಪಟ್ಟಿಯ ಪ್ರಕಾರ ನಿಯಂತ್ರಿತ ಸ್ಫೋಟಕಕ್ಕೆ ಪಾವತಿಸುವ ಹಣವು ಎರಡು ಲಕ್ಷಕ್ಕಿಂತ ಹೆಚ್ಚಿದ್ದರೆ, ಮಾಡಿದ ಅಳತೆಗಳ ಯಾದೃಚ್ಛಿಕ ಪರಿಶೀಲನೆಯನ್ನು ಸಿಇರವರು ಕೈಗೊಳ್ಳಬೇಕು. ಹಣದ ಪಾವತಿಯು ಸುಮಾರು ₹ 1.61 ಕೋಟಿಯಾಗಿದ್ದರೂ ಸಹ ಸಿಇರವರು ಕಡ್ಡಾಯವಾದ ಯಾದೃಚ್ಛಿಕ ತಪಾಸಣೆಯನ್ನು ನಡೆಸಿರಲಿಲ್ಲ.

ಮಂಡಳಿಯು ಆಗಿರುವ ತಪ್ಪನ್ನು ಅರಿತುಕೊಂಡಿತು ಮತ್ತು ಲೆಕ್ಕಪರಿಶೋಧನೆಯ ಅವಲೋಕನದ ಆಧಾರದ ಮೇಲೆ, ವ್ಯತ್ಯಯದ ಮೊತ್ತವನ್ನು ಪರಿಷ್ಕರಿಸಿತು (ಜುಲೈ 2018) ಮತ್ತು ಗುತ್ತಿಗೆದಾರರಿಗೆ ಮಾಡಿದ ₹ 1,61,01,369/– ಹೆಚ್ಚುವರಿ ಪಾವತಿಯನ್ನು ವಸೂಲಿ ಮಾಡಲು ಆದೇಶಿಸಿತು. ಭದ್ರತಾ ಠೇವಣಿಯಾಗಿ ಸಲ್ಲಿಸಿದ ₹ 53,75,000 ಮೊತ್ತದ ಬ್ಯಾಂಕ್ ಗ್ಯಾರಂಟಿಯನ್ನು ಮಂಡಳಿಯು ನಗದೀಕರಿಸಿತ್ತು (ಸೆಪ್ಟೆಂಬರ್ 2019). ಆದಾಗ್ಯೂ, ₹ 1,07,26,369 ಬಾಕಿ ಮೊತ್ತವನ್ನು ಗುತ್ತಿಗೆದಾರರಿಂದ ಇನ್ನೂ ವಸೂಲಿ ಮಾಡಬೇಕಿದೆ.

ಮಂಡಳಿಯ ನಿರ್ಧಾರದಿಂದ ಬಾಧಿತರಾದ ಗುತ್ತಿಗೆದಾರರು ವ್ಯತ್ಯಯದ ಪ್ರಸ್ತಾವನೆಗೆ ಸಹಿ ಹಾಕಲು ನಿರಾಕರಿಸಿದರು ಮತ್ತು ಆರ್‌ಬಿಟ್ರೇಟರ್‌ರನ್ನು ನೇಮಿಸಲು ಉಚ್ಚ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದರು. ಇದನ್ನು ನ್ಯಾಯಾಲಯವು ಪರಿಗಣಿಸಿತು (ಫೆಬ್ರವರಿ 2020). ಆರ್‌ಬಿಟ್ರೇಟರ್ ನ್ಯಾಯಾಲಯವು ತನ್ನ ತೀರ್ಪಿನಲ್ಲಿ (ಮಾರ್ಚ್ 2021) ವಸೂಲಾತಿ ಪ್ರಕ್ರಿಯೆಗಳನ್ನು ರದ್ದುಗೊಳಿಸುವ

[102] ಟೆಂಡರ್ ಷರತ್ತು 35.3 ಬಿಒಕ್ಯೂನಲ್ಲಿ ಕಾಮಗಾರಿಯ ಹೆಚ್ಚುವರಿ/ಬದಲಿ ಅಥವಾ ಮಾರ್ಪಡಿಸಿದ ಅಂಶಕ್ಕೆ ಯಾವುದೇ ದರವಿಲ್ಲದಿದ್ದರೆ, ಬಿಒಕ್ಯೂನಲ್ಲಿ ನೀಡಲಾದ ದರಗಳನ್ನು ಅಥವಾ ಕಾಮಗಾರಿಯ ಪ್ರದೇಶಕ್ಕೆ ಅನ್ವಯವಾಗುವ ಗುತ್ತಿಗೆಯನ್ನು ವಹಿಸುವ ಸಮಯದಲ್ಲಿ ಪ್ರಚಲಿತವಿರುವ ದರಪಟ್ಟಿಯಿಂದ ಪಡೆಯಲು ಪ್ರಯತ್ನಗಳನ್ನು ಮಾಡಬೇಕು ಮತ್ತು ಕಾರ್ಯಸಾಧ್ಯವಾದಂತೆ ಕಂಡುಬಂದರೆ ಪಾವತಿಯನ್ನು ಐಟಂಗೆ ಪಡೆದ ದರ ಮತ್ತು ಗುತ್ತಿಗೆ ವಹಿಸುವ ಸಮಯದಲ್ಲಿ ಪ್ರಚಲಿತದಲ್ಲಿರುವ ಪ್ರಸ್ತುತ ದರಪಟ್ಟಿಗಿಂತ ಮೂಲ ಟೆಂಡರ್ ಮಾಡಿದ ದರಗಳ ಒಟ್ಟಾರೆ ಶೇಕಡಾವಾರು ಮೊತ್ತವನ್ನು ಪಾವತಿ ಮಾಡಬೇಕು.

ಗುತ್ತಿಗೆದಾರರ ಕೋರಿಕೆಗೆ ಸಮ್ಮತಿಸಿತು ಮತ್ತು ಈ ಕೆಳಗಿನ ಕಾರಣಗಳಿಗಾಗಿ ಶೇಕಡಾ 9ರ ದರದ ವಾರ್ಷಿಕ ಬಡ್ಡಿಯೊಂದಿಗೆ ನಗದು ಮಾಡಿದ ಬ್ಯಾಂಕ್ ಗ್ಯಾರಂಟಿಯನ್ನು ಮರುಪಾವತಿಸಲು ಆದೇಶಿಸಿತು:

- ಮಂಡಳಿಯು ಸರಿಯಾದ ಸಮಯದಲ್ಲಿ ತಪ್ಪುಗಳನ್ನು ಸರಿಪಡಿಸಬೇಕಿತ್ತು ಮತ್ತು ಗುತ್ತಿಗೆಯನ್ನು ಮುಕ್ತಾಯಗೊಳಿಸುವ ಮೊದಲು ಹೆಚ್ಚುವರಿ ಪಾವತಿಯನ್ನು ವಸೂಲು ಮಾಡಬೇಕಿತ್ತು.

- ಗುತ್ತಿಗೆಯನ್ನು ಮುಕ್ತಾಯಗೊಳಿಸಿದ ನಂತರ ಏಕಪಕ್ಷೀಯವಾಗಿ ದರಗಳನ್ನು ಪರಿಷ್ಕರಿಸಲು ಮಂಡಳಿಗೆ ಯಾವುದೇ ಅಧಿಕಾರವಿಲ್ಲ, ಏಕೆಂದರೆ ಗುತ್ತಿಗೆದಾರನು ಗುತ್ತಿಗೆಯ ಷರತ್ತುಗಳಿಂದ ಬಿಡುಗಡೆ ಹೊಂದಿರುತ್ತಾರೆ ಮತ್ತು ಹೊಸ ಹೊಣೆಗಾರಿಕೆಯನ್ನು ಅವನ ಮೇಲೆ ವಿಧಿಸಲಾಗುವುದಿಲ್ಲ.

ಹೀಗೆ, ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆಯನ್ನು ಮತ್ತು ವ್ಯತ್ಯಯದ ಪಾವತಿಗಳನ್ನು ನಿಯಂತ್ರಿಸಲು ಅದರ ಸುತ್ತೋಲೆಗಳನ್ನು ಅನುಸರಿಸುವಲ್ಲಿ ಮಂಡಳಿಯ ವಿಫಲತೆಯು ಗುತ್ತಿಗೆದಾರರಿಗೆ ಹೆಚ್ಚುವರಿ ಪಾವತಿ ಮಾಡುವಲ್ಲಿ ಪರಿಣಮಿಸಿತು. ನಿಗದಿತ ಕಾರ್ಯವಿಧಾನವನ್ನು ಅನುಸರಿಸುವಲ್ಲಿನ ಮಂಡಳಿಯ ಲೋಪಗಳು ನ್ಯಾಯಾಲಯದ ಪ್ರಕರಣದಲ್ಲಿ ಮಂಡಳಿಯ ವಾದಗಳಿಗೆ ವಿರುದ್ಧವಾಗಿ ನಿಲ್ಲುವಲ್ಲಿ ಮತ್ತು ಗುತ್ತಿಗೆದಾರರ ವಿರುದ್ಧದ ವಸೂಲಾತಿ ಹಕ್ಕನ್ನು ನಿರಾಕರಿಸಲು ಕಾರಣವಾಯಿತು ಹಾಗೂ ತತ್ಪರಿಣಾಮವಾಗಿ ಮಂಡಳಿಗೆ ₹ 1.61 ಕೋಟಿ ಆರ್ಥಿಕ ನಷ್ಟವಾಯಿತು.

ಕಾಮಗಾರಿಯ ಪ್ರಗತಿಯನ್ನು ಖಚಿತಪಡಿಸಿಕೊಳ್ಳಲು ಸಕ್ಷಮ ಪ್ರಾಧಿಕಾರದ ಅನುಮೋದನೆಯಿಲ್ಲದೆ ವ್ಯತ್ಯಯದ ಕಾಮಗಾರಿಗೆ ಹೆಚ್ಚಿನ ದರದಲ್ಲಿ ಪಾವತಿ ಮಾಡಲಾಯಿತು ಮತ್ತು ನ್ಯಾಯಾಲಯದ ತೀರ್ಪಿನ ವಿರುದ್ಧ ಮಂಡಳಿಯು ಮೇಲ್ಮನವಿ ಸಲ್ಲಿಸಿದೆ (ಜೂನ್ 2021) ಎಂದು ರಾಜ್ಯ ಸರ್ಕಾರವು ತಿಳಿಸಿತು (ಸೆಪ್ಟಂಬರ್ 2021). ವ್ಯತ್ಯಯದ ಕಾಮಗಾರಿಗೆ ಪಾವತಿಯನ್ನು ನಿಯಂತ್ರಿಸುವ ಸಂಹಿತೆಯ ನಿಬಂಧನೆಗಳನ್ನು ಅನುಸರಿಸುವಲ್ಲಿ ಮಂಡಳಿಯು ವಿಫಲವಾದ ಕಾರಣ ಉತ್ತರವನ್ನು ಒಪ್ಪಲಾಗುವುದಿಲ್ಲ. ಇದು ಗುತ್ತಿಗೆದಾರರಿಗೆ ಹೆಚ್ಚಿನ ಪಾವತಿಯಲ್ಲಿ ಮತ್ತು ನ್ಯಾಯಾಲಯದ ಪ್ರಕರಣದಲ್ಲಿ ಮಂಡಳಿಯ ವಾದಗಳನ್ನು ತಿರಸ್ಕರಿಸುವಲ್ಲಿ ಪರಿಣಮಿಸಿತು.

ಶಿಫಾರಸು
ಹಣಕಾಸಿನ ನಷ್ಟಕ್ಕೆ ಕಾರಣವಾದ ಲೋಪಗಳಿಗೆ ಮಂಡಳಿಯು ಹೊಣೆಗಾರಿಕೆಯನ್ನು ನಿಗದಿಪಡಿಸಬೇಕು ಮತ್ತು ವ್ಯತ್ಯಯದಡಿಯಲ್ಲಿ ಕಾರ್ಯಗತಗೊಳಿಸಲಾದ ಕಾಮಗಾರಿಯ ಅಂಶಗಳಿಗೆ ಪಾವತಿಗಳನ್ನು ನಿಯಂತ್ರಿಸುವ ಸಂಹಿತೆಯ ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಕ್ರಮವನ್ನು ಕೈಗೊಳ್ಳಬೇಕು.

ವಸತಿ ಇಲಾಖೆ

2.15 ಪ್ರಾರಂಭವಾಗದ ಮತ್ತು ನಿಧಾನಗತಿಯ ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ ಕ್ರೋಢೀಕರಣ ಮುಂಗಡಗಳನ್ನು ವಸೂಲಿ ಮಾಡದ ಕಾರಣ ಗುತ್ತಿಗೆದಾರರಿಗೆ ಅನಗತ್ಯ ಲಾಭ

ಯಾವುದೇ ಅಗತ್ಯ ವಿಶ್ಲೇಷಣೆಯಿಲ್ಲದೆ ಕ್ರೋಢೀಕರಣ ಮುಂಗಡಗಳನ್ನು ಪಾವತಿ ಮಾಡಿದ್ದು ಮತ್ತು ಕಾಲಮಿತಿಯಲ್ಲಿ ಮುಂಗಡಗಳನ್ನು ವಸೂಲಿ ಮಾಡದಿರುವುದು ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿಯ ಹಣವು ಗುತ್ತಿಗೆದಾರರೊಂದಿಗೆ ನಿರ್ಬಂಧಿತವಾಗುವಲ್ಲಿ ಮತ್ತು ₹ 1.73 ಕೋಟಿ ಬಡ್ಡಿಯ ನಷ್ಟದಲ್ಲಿ ಪರಿಣಮಿಸಿತು.

ನಿಗದಿತ ಬ್ಯಾಂಕ್‌ಗಳಿಂದ ಪಡೆದ ಬ್ಯಾಂಕ್ ಗ್ಯಾರಂಟಿಗೆ ಪ್ರತಿಯಾಗಿ ಕಾಮಗಾರಿ ಆದೇಶವನ್ನು ನೀಡಿದ 15 ದಿನಗಳಲ್ಲಿ ಗುತ್ತಿಗೆ ಮೊತ್ತದ ಶೇಕಡಾ 5ರಷ್ಟನ್ನು ಕ್ರೋಢೀಕರಣ ಮುಂಗಡವಾಗಿ ಪಾವತಿಸಲು ಕರ್ನಾಟಕ ಲೋಕೋಪಯೋಗಿ ಇಲಾಖಾ (ಕೆಪಿಡಬ್ಲ್ಯುಡಿ) ಸಂಹಿತೆಯ ಅನುಚ್ಛೇದ 200 ನಿರ್ದಿಷ್ಟಪಡಿಸುತ್ತದೆ. ಕೇಂದ್ರೀಯ ವಿಜಿಲೆನ್ಸ್ ಕಮಿಷನ್ (ಸಿವಿಸಿ) (ಏಪ್ರಿಲ್ 2007) ಕ್ರೋಢೀಕರಣ ಮುಂಗಡ ಪಾವತಿಯು ಅಗತ್ಯತೆಯನ್ನು ಆಧರಿಸಿರಬೇಕು ಮತ್ತು ಮುಂಗಡಗಳ ವಸೂಲಾತಿಯು ಸಮಯ ಆಧಾರಿತವಾಗಿರಬೇಕು ಮತ್ತು ಕಾಮಗಾರಿಯ ಪ್ರಗತಿಯೊಂದಿಗೆ ಸಂಬಂಧ ಹೊಂದಿರಬಾರದು.

ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ (ಮಂಡಳಿ) ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಯೋಜನೆಗಳಡಿಯಲ್ಲಿ ರಾಜ್ಯದಾದ್ಯಂತ ಅಧಿಸೂಚಿತ ಕೊಳೆಗೇರಿಗಳ ಅಭಿವೃದ್ಧಿಯನ್ನು ಕೈಗೆತ್ತಿಕೊಂಡಿತು.. ನಿಗದಿತ ಟೆಂಡರ್ ಕಾರ್ಯವಿಧಾನವನ್ನು ಅನುಸರಿಸಿ ಮತ್ತು ಪ್ರಮಾಣಿತ ಟೆಂಡರ್ ದಾಖಲೆಗಳ ಒಪ್ಪಂದದ ನಿಯಮಗಳು ಮತ್ತು ಷರತ್ತುಗಳ ಅನ್ವಯ ಆಯ್ಕೆಯಾದ ಗುತ್ತಿಗೆದಾರರ ಮೂಲಕ ಈ ಕಾಮಗಾರಿಗಳನ್ನು ಕಾರ್ಯಗತಗೊಳಿಸಲಾಯಿತು. ಒಪ್ಪಂದದ 42ನೇ ಕಲಂ ಈ ಕೆಳಗಿನ ಷರತ್ತುಗಳ ಅಡಿಯಲ್ಲಿ ಕ್ರೋಢೀಕರಣ ಮುಂಗಡಗಳ ಮಂಜೂರಾತಿ ಮತ್ತು ವಸೂಲಾತಿಯನ್ನು ನಿಯಂತ್ರಿಸುತ್ತದೆ:

- ಗುತ್ತಿಗೆದಾರನು ಮುಂಗಡವನ್ನು ಬಳಸಿಕೊಂಡಿರುವುದಕ್ಕೆ ಬೆಂಬಲಿತವಾಗಿ ಉದ್ಯೋಗದಾತರಿಗೆ ಬೆಲೆಪಟ್ಟಿಗಳು ಅಥವಾ ಇತರ ದಾಖಲೆಗಳ ಪ್ರತಿಗಳನ್ನು ಒದಗಿಸುವ ಅಗತ್ಯವಿದೆ;

- ಮುಂಗಡ ವಸೂಲಾತಿಯು ಮುಂದಿನ ಮಧ್ಯಂತರ ಪಾವತಿ ಪ್ರಮಾಣಪತ್ರದಿಂದ ಅಥವಾ ಮುಂಗಡದ ಮೊದಲ ಕಂತಿನ ಪಾವತಿಯ ದಿನಾಂಕದಿಂದ ಮೂರು ತಿಂಗಳಿನ ನಂತರ, ಯಾವುದೂ ಮೊದಲೋ; ಅಲ್ಲಿಂದ ಪ್ರಾರಂಭವಾಗಬೇಕಿತ್ತು,;

- ಮುಂಗಡಗಳನ್ನು ಮೂಲ ಅಥವಾ ಪೂರ್ಣಗೊಳ್ಳಲು ನೀಡಿದ್ದ ವಿಸ್ತರಿತ ಸಮಯದ ಅವಧಿ ಮುಗಿಯುವ ಮೊದಲು ಸಂಪೂರ್ಣವಾಗಿ ಮರುಪಾವತಿ ಮಾಡಬೇಕು.

2017–20ರ ಅವಧಿಯಲ್ಲಿ ಕೈಗೆತ್ತಿಕೊಂಡ 50 ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮಂಡಳಿಯು ಮಾಡಿದ ಕ್ರೋಢೀಕರಣ ಮುಂಗಡಗಳ ಪರಿಶೀಲನೆಯನ್ನು ಲೆಕ್ಕಪರಿಶೋಧನೆಯು ನಡೆಸಿತು (ಸೆಪ್ಟೆಂಬರ್ 2020 ರಿಂದ ನವೆಂಬರ್ 2020) ಮತ್ತು ಈ ಕೆಳಗಿನವುಗಳನ್ನು ಗಮನಿಸಲಾಯಿತು:

- 4 ಕಾಮಗಾರಿಗಳಿಗೆ ಸಂಬಂಧಿಸಿದಂತೆ (***ಅನುಬಂಧ–19ರ ಕ್ರಮಸಂಖ್ಯೆ 1ರಿಂದ 4***) ಮಂಡಳಿಯು ಕ್ರೋಢೀಕರಣ ಮುಂಗಡವಾಗಿ ₹ 9.91 ಕೋಟಿಯನ್ನು ಬಿಡುಗಡೆ ಮಾಡಿದ್ದರೂ, ಮುಂಗಡೆಯು ಬಿಡುಗಡೆಯಾದ ದಿನಾಂಕದಿಂದ ಎರಡು ಮೂರು ವರ್ಷಗಳು ಕಳೆದರೂ ಕಾಮಗಾರಿಗಳು ಪ್ರಾರಂಭವಾಗಿರಲಿಲ್ಲ. ಯೋಜನೆಯ ವ್ಯಾಪ್ತಿ ಮತ್ತು ಸ್ಥಳದಲ್ಲಿ ಬದಲಾವಣೆ, ಮಾಲೀಕತ್ವದ ವಿವಾದಗಳು ಮತ್ತು ನಿವೇಶನಗಳನ್ನು ತೆರವುಗೊಳಿಸುವಲ್ಲಿನ ವಿಳಂಬಗಳು ಕಾಮಗಾರಿಗಳು ಪ್ರಾರಂಭವಾಗದಿರಲು ಕಾರಣಗಳಾಗಿದ್ದವು. ಪ್ರಾರಂಭದ ನಿರೀಕ್ಷೆ ಕಡಿಮೆ ಇದ್ದಾಗ ಮೇಲಿನ ಕಾಮಗಾರಿಗಳಿಗೆ ಬಡ್ಡಿ ರಹಿತ ಕ್ರೋಢೀಕರಣ ಮುಂಗಡಗಳನ್ನು ಮಂಜೂರು ಮಾಡಿರುವುದಕ್ಕೆ ಸಮರ್ಥನೆ ಇರಲಿಲ್ಲ. ಒಪ್ಪಂದವನ್ನು ರದ್ದುಗೊಳಿಸುವ ಮೂಲಕ ಅಥವಾ ಪಾವತಿಯ ದಿನಾಂಕದಿಂದ ಮೂರು ತಿಂಗಳ ನಂತರ ಮುಂಗಡಗಳನ್ನು ಹಿಂಪಡೆಯುವ ಅವಕಾಶವನ್ನು ಒದಗಿಸಿದ್ದ ಒಪ್ಪಂದದ ಷರತ್ತುಗಳನ್ನು ನಿರ್ವಹಿಸುವ ಮೂಲಕ ಬಳಕೆಯಾಗದ ಮುಂಗಡಗಳನ್ನು ಮರುಪಡೆಯಲು ಮಂಡಳಿಯು ಕ್ರಮವನ್ನು ಕೈಗೊಂಡಿರಲಿಲ್ಲ.

- ಗುತ್ತಿಗೆದಾರರು ಬಳಕೆಯ ಪುರಾವೆಯಾಗಿ ಕೇವಲ ಪ್ರೋಫಾರ್ಮಾ ಬೆಲೆಪಟ್ಟಿಗಳನ್ನು ಸಲ್ಲಿಸಿದ ಕಾರಣ ಕಾಮಗಾರಿಗಳ ಅನುಷ್ಠಾನಕ್ಕೆ ಸಂಬಂಧಿಸಿದ ಸಾಮಗ್ರಿಗಳ ವಾಸ್ತವಿಕ ಖರೀದಿಗಾಗಿ ಮುಂಗಡಗಳನ್ನು ಬಳಸಲಾಗಿದೆ ಎಂಬುದನ್ನು ಮಂಡಳಿಯು ಖಚಿತಪಡಿಸಿಕೊಳ್ಳಲಿಲ್ಲ.

- ಮಂಡಳಿಯು 'ಮಲ್ಲೇಶ್ವರಂನ ಎಮ್ಆರ್ ಜಯನಗರ ಕೊಳೆಗೇರಿಯಲ್ಲಿ (***ಅನುಬಂಧ–19ರ ಕ್ರಮ ಸಂಖ್ಯೆ.1***) 252 ವಸತಿ ಘಟಕಗಳ ನಿರ್ಮಾಣ'ದ ಕಾಮಗಾರಿಗೆ ಕೆಪಿಡಬ್ಲ್ಯುಡಿ ಸಂಹಿತೆಯಲ್ಲಿ ನಿಗದಿಪಡಿಸಿರುವ ಶೇಕಡಾ 5ಕ್ಕೆ ಪ್ರತಿಯಾಗಿ ಟೆಂಡರ್ ವೆಚ್ಚದ ಶೇಕಡಾ 10ರಷ್ಟು ಮುಂಗಡವನ್ನು ಒದಗಿಸಿತ್ತು.

- ಐದು ಕಾಮಗಾರಿಗಳಿಗೆ ಸಂಬಂಧಿಸಿದಂತೆ (***ಅನುಬಂಧ–19ರ ಸಂ.5 ರಿಂದ 9***) ನಿಗದಿತ ದಿನಾಂಕಕ್ಕಿಂತ ವಿಳಂಬವಾಗಿದ್ದರೂ ಸಹ ಮಂಡಳಿಯು ಸಮಯವನ್ನು ವಿಸ್ತರಿಸಲು ಕ್ರಮ ಕೈಗೊಂಡಿರಲಿಲ್ಲವೆಂದು ಲೆಕ್ಕಪರಿಶೋಧನೆಯು ಗಮನಿಸಿತು. ಈ ಕಾಮಗಾರಿಗಳಿಗೆ ಕ್ರೋಢೀಕರಣ ಮುಂಗಡವಾಗಿ ಬಿಡುಗಡೆ ಮಾಡಲಾದ ಒಟ್ಟು ₹ 16.51 ಕೋಟಿಗೆ ಪ್ರತಿಯಾಗಿ, 31 ಮಾರ್ಚ್ 2021ರಲ್ಲಿದ್ದಂತೆ ₹ 12.54 ಕೋಟಿ (ಶೇಕಡಾ 76) ವಸೂಲಾತಿ ಬಾಕಿ ಉಳಿದಿದೆ. ನಿಗದಿಪಡಿಸಿದ ಮೂಲ ಅಥವಾ ಪೂರ್ಣಗೊಳಿಸಲು ನೀಡಿದ್ದ ವಿಸ್ತೃತ ಸಮಯವು

ಮುಕ್ತಾಯಗೊಳ್ಳುವ ಮೊದಲು ಒಪ್ಪಂದದ ಷರತ್ತಿನ ಅನ್ವಯ ಬಳಕೆಯಾಗದ ಮುಂಗಡಗಳನ್ನು ಮರುಪಡೆಯಲು ಮಂಡಳಿಯು ವಿಫಲವಾಗಿತ್ತು.

ಲೆಕ್ಕಪರಿಶೋಧನೆಯು ಮುಂಗಡಗಳ ವಿಳಂಬ ವಸೂಲಾತಿಯಿಂದಾಗಿ ಮಂಡಳಿಗೆ ಆದ ಬಡ್ಡಿಯ ನಷ್ಟವನ್ನು[103] ₹ 1.73 ಕೋಟಿಗಳೆಂದು ಲೆಕ್ಕ ಹಾಕಿತು. ಮುಂಗಡ ಪಾವತಿಗಳನ್ನು ಮಾಡುವಾಗ ಮಂಡಳಿಯಿಂದ ಸರಿಯಾದ ಕಾರ್ಯತತ್ಪರತೆ ಕೊರತೆ ಮತ್ತು ಕ್ರೋಢೀಕರಣ ಮುಂಗಡಗಳ ಸಮಯಾಧಾರಿತ ಹಿಂಪಡೆಯುವಿಕೆಗೆ ಸಂಬಂಧಿಸಿದ ಗುತ್ತಿಗೆ ಷರತ್ತುಗಳನ್ನು ನಿರ್ವಹಿಸುವಲ್ಲಿನ ವಿಫಲತೆಯು ಗುತ್ತಿಗೆದಾರರಿಗೆ ಅನಗತ್ಯ ಹಣಕಾಸಿನ ಲಾಭದಲ್ಲಿ ಪರಿಣಮಿಸಿತು ಮತ್ತು ಮಂಡಳಿಗೆ ಬಡ್ಡಿ ಆದಾಯದ ನಷ್ಟ ಉಂಟಾಯಿತು.

ಈ ವಿಷಯವನ್ನು ಸರ್ಕಾರಕ್ಕೆ ಸೆಪ್ಟಂಬರ್ 2021ರಲ್ಲಿ ತಿಳಿಸಲಾಯಿತು ಮತ್ತು ಅವರ ಪ್ರತಿಕ್ರಿಯೆಯನ್ನು ನಿರೀಕ್ಷಿಸಲಾಗಿದೆ.

ಶಿಫಾರಸು
ಪ್ರಾರಂಭವಾಗದ ಅಥವಾ ಕಳಪೆ ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮೊಬಿಲೈಸೇಶನ್ ಮುಂಗಡಗಳ ಸಮಯಾಧಾರಿತ ವಸೂಲಾತಿಗೆ ಸಂಬಂಧಿಸಿದ ಟೆಂಡರ್ ಒಪ್ಪಂದದ ಷರತ್ತುಗಳನ್ನು ಜಾರಿಗೊಳಿಸಲು ಮಂಡಳಿಯು ಕ್ರಮ ಕೈಗೊಳ್ಳಬೇಕು.

ಗೃಹ ಇಲಾಖೆ

2.16. ಸರ್ಕಾರಿ ಹಣದ ದುರುಪಯೋಗ

ನಿರ್ಲಕ್ಷ್ಯದ ಮೇಲ್ವಿಚಾರಣೆ ಮತ್ತು ಆಂತರಿಕ ನಿಯಂತ್ರಣ ಕಾರ್ಯವಿಧಾನದ ಕೊರತೆಯು ತುಮಕೂರು ಪೊಲೀಸ್ ಅಧೀಕ್ಷಕರ ಕಛೇರಿಯಲ್ಲಿ ₹ 4.68 ಲಕ್ಷ ದುರುಪಯೋಗವಾಗುವುದರಲ್ಲಿ ಪರಿಣಮಿಸಿತು.

ಕರ್ನಾಟಕ ಹಣಕಾಸು ಸಂಹಿತೆಯ 328ನೇ ಪರಿಚ್ಛೇದವು ಸರ್ಕಾರಿ ನೌಕರನು ತನ್ನ ಅಧಿಕೃತ ಸಾಮರ್ಥ್ಯದಲ್ಲಿ ಸ್ವೀಕರಿಸುವ ಎಲ್ಲಾ ಮೊತ್ತದ ಹಣವನ್ನು ತಕ್ಷಣವೇ ಹತ್ತಿರದ ಖಜಾನೆ/ಬ್ಯಾಂಕ್‌ಗೆ ಪೂರ್ಣವಾಗಿ ಜಮೆ ಮಾಡಬೇಕು ಎಂದು ಸೂಚಿಸುತ್ತದೆ. ಜೊತೆಗೆ, ಕರ್ನಾಟಕ ಹಣಕಾಸು ಸಂಹಿತೆಯ ಪರಿಚ್ಛೇದ 329(v), ಸರ್ಕಾರಿ ಅಧಿಕಾರಿಯ ವಶದಲ್ಲಿರುವ ಸರ್ಕಾರಿ ಹಣವನ್ನು ಖಜಾನೆ ಅಥವಾ ಬ್ಯಾಂಕ್‌ಗೆ ಪಾವತಿಸಿದಾಗ, ಡಿಡಿಒ/ಕಛೇರಿ ಮುಖ್ಯಸ್ಥರು ನಗದು ಪುಸ್ತಕದಲ್ಲಿನ ನಮೂದನ್ನು ಖಜಾನೆ/ ಬ್ಯಾಂಕ್‌ನ ದಾಖಲೆಗಳೊಂದಿಗೆ ಹೋಲಿಸಬೇಕು ಮತ್ತು ಮೊತ್ತವನ್ನು ಖಜಾನೆ ಅಥವಾ ಬ್ಯಾಂಕ್‌ಗೆ ವಾಸ್ತವವಾಗಿ ಜಮಾ ಮಾಡಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಖಜಾನೆಯಿಂದ ಪಡೆದ ರವಾನೆಗಳ ಸಮಗ್ರ ಅನುಸೂಚಿಯೊಂದಿಗೆ ಎಲ್ಲಾ ರವಾನೆಗಳ ಮಾಸಿಕ ಹೊಂದಾಣಿಕೆಯನ್ನು ಮಾಡಬೇಕೆಂದು ಕೂಡ ಸಂಹಿತೆಯು ಸೂಚಿಸುತ್ತದೆ.

ಏಪ್ರಿಲ್ 2018ರಿಂದ ಮಾರ್ಚ್ 2020ರ ಅವಧಿಯಲ್ಲಿ ಹರಾಜಿನ ಸ್ವೀಕೃತಿಗಳು, ಆರ್‌ಟಿಐ ಶುಲ್ಕಗಳು, ಶಸ್ತ್ರಾಸ್ತ್ರ ತರಬೇತಿ ಮುಂತಾದವುಗಳಿಂದ ಇಲಾಖೆಯು ₹ 22.88 ಲಕ್ಷ ಮೊತ್ತವನ್ನು ಸ್ವೀಕರಿಸಿದ್ದು ಸರ್ಕಾರದ ಖಾತೆಗೆ ಜಮೆ ಮಾಡಿದಂತೆ ತೋರಿಸಿರುವುದನ್ನು ತುಮಕೂರಿನ ಪೊಲೀಸ್ ಅಧೀಕ್ಷಕರ ನಗದು ಪುಸ್ತಕ ಮತ್ತು ರವಾನೆ ರಿಜಿಸ್ಟರ್‌ನ ಲೆಕ್ಕಪರಿಶೋಧನಾ ಪರಿಶೀಲನೆಯು ತಿಳಿಯಪಡಿಸಿತು (ಜನವರಿ 2021). ಏಪ್ರಿಲ್ 2018ರಿಂದ ಏಪ್ರಿಲ್ 2019ರ ಅವಧಿಯಲ್ಲಿ ರವಾನೆಗಳ ನಿಖರತೆಯನ್ನು ಖಜಾನೆ ದಾಖಲೆಗಳೊಂದಿಗೆ ಲೆಕ್ಕಪರಿಶೋಧನೆಯು ಪರಿಶೀಲಿಸಿದಾಗ ₹ 4,68,412 ಮೊತ್ತದ 17 ಜಮೆಗಳ ಸ್ವೀಕೃತಿಗಳು ಖಜಾನೆಯ ಕೆಟಿಸಿ–25[104] ದಾಖಲೆಯಲ್ಲಿ ಪ್ರತಿಬಿಂಬಿಸಿಲ್ಲದಿರುವುದು ಕಂಡುಬಂದಿತು. ಎಸ್‌ಬಿಐ, ಖಜಾನೆ ಶಾಖೆ, ತುಮಕೂರಿನ ಬ್ಯಾಂಕ್ ಸ್ಕ್ರಾಲ್‌ಗಳನ್ನು ಲೆಕ್ಕಪರಿಶೋಧನೆಯು ಪರಿಶೀಲಿಸಿದಾಗ ಈ ವಹಿವಾಟುಗಳು ಬ್ಯಾಂಕ್ ಸ್ಟೇಟ್‌ಮೆಂಟ್‌ಗಳಲ್ಲಿ ಇರಲಿಲ್ಲವೆಂಬುದು ದೃಢಪಟ್ಟಿತು. ಬ್ಯಾಂಕಿನ ಮುಖ್ಯ

---

[103] ಸಂಪ್ರದಾಯವಾದಿ ಆಧಾರದ ಮೇಲೆ ವಾರ್ಷಿಕ ಶೇಕಡಾ ಮೂರು ಸರಳ ಬಡ್ಡಿಯಲ್ಲಿ ದರದಲ್ಲಿ ಬಡ್ಡಿ ನಷ್ಟವನ್ನು ಲೆಕ್ಕಪರಿಶೋಧನೆಯು ಲೆಕ್ಕ ಹಾಕಲಾಗಿದೆ.

[104] ಕೆಟಿಸಿ 25 ಎಂಬುದು ಖಜಾನೆಯಲ್ಲಿ ನಿರ್ವಹಿಸಲಾದ ಡಿಡಿಒ–ವಾರು ರಸೀದಿಗಳ ಏಕೀಕೃತ ಅನುಸೂಚಿಯಾಗಿದೆ.

ವ್ಯವಸ್ಥಾಪಕರು ಈ ಮೊತ್ತವನ್ನು ಬ್ಯಾಂಕಿನಲ್ಲಿ ಸ್ವೀಕರಿಸದಿರುವುದನ್ನು ಸಹ ದೃಢೀಕರಿಸಿದರು. ಮೇಲಿನ ಎಲ್ಲಾ ಸಂಗತಿಗಳೂ ₹ 4.68 ಲಕ್ಷ ಮೊತ್ತವನ್ನು ಸರ್ಕಾರಿ ಖಾತೆಗೆ ಜಮೆ ಮಾಡಿಲ್ಲದಿರುವುದನ್ನು ಮತ್ತು ದುರುಪಯೋಗ ಪಡಿಸಿಕೊಂಡಿರುವುದನ್ನು ನಿರ್ಣಾಯಕವಾಗಿ ಸಾಬೀತು ಮಾಡುತ್ತವೆ.

ಬ್ಯಾಂಕ್‌ನಲ್ಲಿ ಬಳಸಲಾದ ಸೀಲ್‌ಗಳು
ರೌಂಡ್ ಸೀಲ್: ಸಾಮಾನ್ಯ ದಾಖಲೆಗಳು ಅಥವಾ ಗ್ರಾಹಕರಿಂದ ಸ್ವೀಕರಿಸಿದ ಪತ್ರಗಳಿಗೆ ಸ್ವೀಕೃತಿಯಾಗಿ ಬಳಸಲಾಗುತ್ತದೆ ಮತ್ತು ಹಣಕಾಸಿನ ವಹಿವಾಟುಗಳಿಗೆ ಬಳಸುವುದಿಲ್ಲ.
ಆಯತಾಕಾರದ ಸೀಲ್: ಹಣಕಾಸಿನ ವಹಿವಾಟುಗಳಲ್ಲಿ ಬಳಸಲಾಗುತ್ತದೆ ಮತ್ತು ವಹಿವಾಟನ್ನು ಕಾರ್ಯಗತಗೊಳಿಸುವರ ವಿವರಗಳು, ವಹಿವಾಟಿನ ದಿನಾಂಕ, ಶಾಖೆಯ ಕೋಡ್ ಇತ್ಯಾದಿಗಳನ್ನು ಒಳಗೊಂಡಿರುತ್ತದೆ

ತುಮಕೂರಿನ ಪೊಲೀಸ್ ಅಧೀಕ್ಷಕರ ಮೌಖಿಕ ಸೂಚನೆಯ ಮೇರೆಗೆ ಹಣ ರವಾನೆಗೆ ಸಂಬಂಧಿಸಿದ ಕೆಲಸವನ್ನು ಓರ್ವ ಪೊಲೀಸ್ ಪೇದೆಗೆ ವಹಿಸಲಾಗಿರುವುದನ್ನು ಹೆಚ್ಚಿನ ಪರಿಶೀಲನೆಯಲ್ಲಿ, ಲೆಕ್ಕಪರಿಶೋಧನೆಯು ಗಮನಿಸಿತು. ಕಛೇರಿಯ ಕ್ಯಾಷಿಯರ್ ಅವರು ಇಲಾಖೆಯ ಹಣವನ್ನು ಸ್ವೀಕರಿಸಿ ಖಜಾನೆ-2[105] ತಂತ್ರಾಂಶದಡಿಯಲ್ಲಿ ಚಲನ್‌ಗಳನ್ನು ರಚಿಸಿ ಬ್ಯಾಂಕ್‌ಗೆ ರವಾನೆ ಮಾಡಲು ಪೇದೆಗೆ ರಚನೆ ಮಾಡಿದ ಚಲನ್‌ನೊಂದಿಗೆ ಮೊತ್ತವನ್ನು ಹಸ್ತಾಂತರಿಸಿದರು. ಆದರೆ, ಆ ಪೇದೆಯವರು ಹಣವನ್ನು ಬ್ಯಾಂಕ್‌ನಲ್ಲಿ ಜಮೆ ಮಾಡುವ ಬದಲು, ಹಣಕಾಸಿನ ವಹಿವಾಟಿಗೆ ಬಳಸುವ ಆಯತಾಕಾರದ ಸೀಲ್ ಬದಲಿಗೆ ಬ್ಯಾಂಕಿನ ರೌಂಡ್ ಸೀಲನ್ನು ಲಗತ್ತಿಸಿ ಚಲನ್‌ಗಳನ್ನು ತಿದ್ದಿದ್ದರು. ಹೀಗೆ ತಿದ್ದಿದ ಚಲನ್‌ಗಳನ್ನು ಜಮೆ ಮಾಡಿರುವುದರ ಪುರಾವೆಯಾಗಿ ಇಲಾಖೆಗೆ ಸಲ್ಲಿಸಲಾಯಿತು ಮತ್ತು ನಗದು ಪುಸ್ತಕ ಮತ್ತು ರವಾನೆ ರಿಜಿಸ್ಟರ್‌ಗೆ ತೆಗೆದುಕೊಳ್ಳಲಾಯಿತು.

ಕರ್ನಾಟಕ ಹಣಕಾಸು ಸಂಹಿತೆಯ ಪರಿಚ್ಛೇದ 329(v) ಅಡಿಯಲ್ಲಿ ಸೂಚಿಸಲಾದ ಕೆಳಗಿನ ನಿಯಂತ್ರಣ ಕಾರ್ಯವಿಧಾನಗಳನ್ನು ಕಛೇರಿಯಲ್ಲಿ ಅನುಸರಿಸದ ಕಾರಣ ಸಿಬ್ಬಂದಿಯು ಮಾಡುತ್ತಿದ್ದ ದುರುಪಯೋಗವು ಪತ್ತೆಯಾಗದೇ ಉಳಿದಿತ್ತು:

- ವಹಿವಾಟಿನ ನಿಖರತೆಯನ್ನು ಪರಿಶೀಲಿಸಲು ಖಜಾನೆ/ಬ್ಯಾಂಕ್ ದಾಖಲೆಗಳೊಂದಿಗೆ ಹಣ ರವಾನೆಗೆ ಸಂಬಂಧಿಸಿದ ನಗದು ಪುಸ್ತಕದಲ್ಲಿನ ನಮೂದುಗಳ ಹೋಲಿಕೆ.
- ಖಜಾನೆಯಿಂದ ಪಡೆದ ರಸೀದಿಗಳ ಏಕೀಕೃತ ಅನುಸೂಚಿಯೊಂದಿಗೆ (ಕೆಟಿಸಿ 25) ಇಲಾಖೆಯ ರವಾನೆಗಳ ಮಾಸಿಕ ಹೊಂದಾಣಿಕೆ.

ಕರ್ನಾಟಕ ಹಣಕಾಸು ಸಂಹಿತೆಯಲ್ಲಿ ಸೂಚಿಸಲಾದ ಮೇಲಿನ ನಿಯಂತ್ರಣ ಕಾರ್ಯವಿಧಾನಗಳನ್ನು ನಿರ್ವಹಿಸುವಲ್ಲಿ ವಿಫಲತೆ ಮತ್ತು ಸುಪ್ತ ಮೇಲ್ವಿಚಾರಣೆಯು ₹ 4.68 ಲಕ್ಷ ಸರ್ಕಾರದ ಹಣವನ್ನು ದುರುಪಯೋಗ ಪಡಿಸಿಕೊಳ್ಳುವುದರಲ್ಲಿ ಪರಿಣಮಿಸಿತು. ಲೆಕ್ಕಪರಿಶೋಧನಾ ಅವಲೋಕನದ ಆಧಾರದ ಮೇಲೆ, ತುಮಕೂರು ಪೊಲೀಸ್ ಅಧೀಕ್ಷಕರು ಅಪರಾಧ ಎಸಗಿದ ಸಿಬ್ಬಂದಿಯಿಂದ ವಿವರಣೆಯನ್ನು ಕೇಳಿದರು. ಅಪರಾಧಿಯು ದುರುಪಯೋಗದ ಕೃತ್ಯವನ್ನು ಒಪ್ಪಿಕೊಂಡು ₹ 4,68,412 ಅನ್ನು ಸರ್ಕಾರದ ಖಾತೆಗೆ ಜಮಾ ಮಾಡಿದರು (ಜನವರಿ 2021).

ರಾಜ್ಯ ಸರ್ಕಾರವು ಲೆಕ್ಕಪರಿಶೋಧನಾ ವೀಕ್ಷಣೆಯನ್ನು ಒಪ್ಪಿಕೊಂಡಿತು ಮತ್ತು ಸರ್ಕಾರಿ ಹಣವನ್ನು ದುರುಪಯೋಗಪಡಿಸಿಕೊಂಡ ಪೊಲೀಸ್ ಪೇದೆಯನ್ನು ಅಮಾನತುಗೊಳಿಸಲಾಗಿದೆ ಮತ್ತು ಅವರ ವಿರುದ್ಧ ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ ಎಂದು ತಿಳಿಸಿತು (ಜೂನ್ 2021). ಖಜಾನೆ ದಾಖಲೆಗಳೊಂದಿಗೆ ಇಲಾಖಾ ರಸೀದಿಗಳನ್ನು ಮಾಸಿಕ ಹೊಂದಾಣಿಕೆ ಮಾಡುವಂತೆ ಎಲ್ಲಾ ಕಛೇರಿಗಳಿಗೆ ಸೂಚಿಸಲಾಗಿದೆ ಎಂದೂ ಸಹ ತಿಳಿಸಲಾಯಿತು. ಆದರೆ, ಇಲಾಖೆಯಲ್ಲಿನ ಆಂತರಿಕ ನಿಯಂತ್ರಣ ಲೋಪಗಳಿಗೆ ಕಾರಣರಾದ ಇತರ ಅಧಿಕಾರಿಗಳ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿರಲಿಲ್ಲ (ನವೆಂಬರ್ 2021).

ಶಿಫಾರಸು

ಸರ್ಕಾರದ ಹಣದ ದುರುಪಯೋಗವನ್ನು ತಡೆಗಟ್ಟಲು ಎಲ್ಲಾ ಕಛೇರಿಗಳು ಮೂಲ ದಾಖಲೆಗಳೊಂದಿಗೆ ಖಜಾನೆ ರವಾನೆಗಳ ಪರಿಶೀಲನೆ ಮತ್ತು ಖಜಾನೆಯ ಅನುಸೂಚಿಗಳೊಂದಿಗೆ ರಸೀದಿಗಳ ಮಾಸಿಕ ಹೊಂದಾಣಿಕೆಯಂತಹ ನಿಗದಿತ ಆಂತರಿಕ ನಿಯಂತ್ರಣ ಕಾರ್ಯವಿಧಾನಗಳನ್ನು ಕೈಗೊಳ್ಳುವುದನ್ನು ಇಲಾಖೆ ಖಚಿತಪಡಿಸಿಕೊಳ್ಳಬೇಕು.

[105] ಖಜಾನೆ-2 ಕರ್ನಾಟಕ ಸರ್ಕಾರದ ಸಮಗ್ರ ಹಣಕಾಸು ನಿರ್ವಹಣಾ ವ್ಯವಸ್ಥೆಯಾಗಿದೆ.